www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಈಗ ಸಣ್ಣ ಸಣ್ಣ ಆರೋಗ್ಯಸಮಸ್ಯೆಗಳಿಗೂ ದೊಡ್ಡ ದೊಡ್ಡ ಆಸ್ಪತ್ರೆಗಳಿಗೆ ಅಲೆಯುವಂತಾಗಿದೆ. ಈ ಅನಗತ್ಯ ಪದ್ಧತಿಯ ಬಗ್ಗೆ ಚಿಂತನೆ ನಡೆಯಬೇಕಾಗಿದೆ.



ಆಳ–ಅಗಲ

ಎಚ್‌ಎಂಪಿವಿ: ಸಾಮಾನ್ಯ ಸೋಂಕು, ಅಪಾಯಕಾರಿ ಅಲ್ಲ

‘ಕೆಎಸ್‌ಆರ್‌ಟಿಸಿ ಆರೋಗ್ಯ’ಕ್ಕೆ ಚಾಲನೆ 8

ಕೆನಡಾ ಪ್ರಧಾನಿ ಟ್ರುಡೊ ರಾಜೀನಾಮೆ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
77,964	23,616	₹81,100 (ಬೆಂಗಳೂರು)	₹93,200 (ಬೆಂಗಳೂರು)	85.68

ರಾಜ್ಯದಲ್ಲಿ ಮಾನವ ಹಕ್ಕು ಉಲ್ಲಂಘನೆ: ನಾಲ್ಕು ವರ್ಷದಲ್ಲಿ 23,566 ಪ್ರಕರಣ ದಾಖಲು

• ಖಲೀಲಅಹ್ಮದ ಶೇಖ

ಬೆಂಗಳೂರು: ರಾಜ್ಯದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಏರುಗತಿಯಲ್ಲಿ ಸಾಗಿವೆ. ಕಳೆದ ನಾಲ್ಕು ವರ್ಷಗಳಲ್ಲಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿ 23,566 ಪ್ರಕರಣಗಳು ದಾಖಲಾಗಿವೆ.

2021ರಿಂದ 2024ರ ನವೆಂಬರ್ ಅವಧಿಯಲ್ಲಿ ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ, ಗ್ರಾಮೀಣ ಪ್ರದೇಶಗಳಲ್ಲಿ ಮೂಲಸೌಕರ್ಯಕ್ಕೆ ಸಂಬಂಧಿಸಿದ ದೂರುಗಳು ಹೆಚ್ಚು ಬಂದಿವೆ. ಆಯೋಗದಲ್ಲಿ ನೋಂದಾಯಿಸಲಾಗಿದ್ದ 23,566 ಪ್ರಕರಣಗಳಲ್ಲಿ 11,514 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದ್ದು, 12,045 ಪ್ರಕರಣಗಳು ವಿಚಾರಣಾ ಹಂತದಲ್ಲಿವೆ ಎಂದು ಆಯೋಗ ತಿಳಿಸಿದೆ.



ಟಿ.ಶಾಮ್ ಭಟ್


2024ರಲ್ಲಿ ಬೆಂಗಳೂರು ನಗರ (1,791), ತುಮಕೂರು (268), ಮೈಸೂರಿನಲ್ಲಿ (238), ಬೆಳಗಾವಿ (175) ಕಲಬುರಗಿ (140) ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳು ದಾಖಲಾಗಿದ್ದರೆ, ಕೊಡಗು ಜಿಲ್ಲೆಯಲ್ಲಿ 27 ಪ್ರಕರಣಗಳು ದಾಖಲಾಗಿವೆ.

9ನೇ ಪುಟ ನೋಡಿ

ಆನ್‌ಲೈನ್ ಮೂಲಕ ದೂರಿಗೆ ವ್ಯವಸ್ಥೆ

ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ದೂರುಗಳನ್ನು www.hrcnet.nic.in ವೆಬ್‌ಸೈಟ್ ಅಥವಾ ಮಾನವ ಹಕ್ಕುಗಳ ರಕ್ಷಣೆ ಎಂಬ ಮೊಬೈಲ್ ಆ್ಯಪ್ ಮೂಲಕ ನೀಡಬಹುದು. ಸಹಾಯವಾಣಿ: 1800-4252-3333ಗೂ ಸಂಪರ್ಕಿಸಬಹುದು.

ವರ್ಷವಾರು ಮಾನವ ಹಕ್ಕು ಉಲ್ಲಂಘನೆ ಪ್ರಕರಣಗಳು



‘₹2.40 ಕೋಟಿ ಪರಿಹಾರ ನೀಡುವಂತೆ ಶಿಫಾರಸು’

‘2023ರ ನವೆಂಬರ್‌ನಿಂದ ಈವರೆಗೆ 7,585 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ. ಈ ಪೈಕಿ ಮಾನವ ಹಕ್ಕು ಉಲ್ಲಂಘನೆ ಸಾಬೀತಾದ 30 ಪ್ರಕರಣಗಳಲ್ಲಿ ಸಂತ್ರಸ್ತರಿಗೆ ₹2.40 ಕೋಟಿ ಪರಿಹಾರ ನೀಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ’ ಎಂದು ಆಯೋಗದ ಹಂಗಾಮಿ ಅಧ್ಯಕ್ಷ ಟಿ. ಶಾಮ್ ಭಟ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು. ‘29 ಪ್ರಕರಣಗಳಲ್ಲಿ ಗೃಹ ಇಲಾಖೆಯಿಂದ ₹2.10 ಕೋಟಿ ಮತ್ತು ಒಂದು ಪ್ರಕರಣದಲ್ಲಿ ಬೆಂಗಳೂರು ಜಲಮಂಡಳಿಯಿಂದ ₹30 ಲಕ್ಷ ಪರಿಹಾರ ವಿತರಣೆಗೆ ಶಿಫಾರಸು ಮಾಡಲಾಗಿದೆ’ ಎಂದರು.

ಯಾವುದೇ ಕಠಿಣ ಕ್ರಮದ ಅಗತ್ಯ ಇಲ್ಲ– ಆರೋಗ್ಯ ಇಲಾಖೆ ಪ್ರತಿಪಾದನೆ

ಎಚ್‌ಎಂಪಿವಿ: ಭಯ ಬೇಕಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹ್ಯೂಮನ್ ಮೆಟಾನ್ಯುಮೋ ವೈರಾಣು (ಎಚ್‌ಎಂಪಿವಿ) ಸೋಂಕಿನ ಎರಡು ಪ್ರಕರಣಗಳು ಪತ್ತೆಯಾಗಿವೆ. ಈ ವೈರಾಣುವಿನಿಂದ ಯಾವುದೇ ಅಪಾಯವಿಲ್ಲ. ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಆರೋಗ್ಯ ಇಲಾಖೆ ಪ್ರತಿಪಾದಿಸಿದೆ.

‘ನಗರದ ಆಸ್ಪತ್ರೆಯೊಂದರಲ್ಲಿ ದಾಖಲಾಗಿದ್ದ ಮೂರು ಮತ್ತು ಎಂಟು ತಿಂಗಳ ಎರಡು ಮಕ್ಕಳಲ್ಲಿ ಎಚ್‌ಎಂಪಿವಿ ಸೋಂಕು ಪತ್ತೆಯಾಗಿದೆ. ಒಂದು ಮಗು ಚಿಕಿತ್ಸೆ ಪಡೆದು ಆಸ್ಪತ್ರೆಯಿಂದ ಮನೆಗೆ ಮರಳಿದೆ. ಇನ್ನೊಂದು ಮಗು ಚೇತರಿಸಿಕೊಳ್ಳುತ್ತಿದ್ದು, ಶೀಘ್ರದಲ್ಲೇ ಮನೆಗೆ ತೆರಳಲಿದೆ. ಎರಡೂ ಮಕ್ಕಳು ಬ್ರ್ಯಾಂಕೊ ನ್ಯುಮೋನಿಯಾ ಸಮಸ್ಯೆಗೆ ಚಿಕಿತ್ಸೆ ಪಡೆಯಲು ದಾಖಲಾಗಿದ್ದರು’ ಎಂದು ಇಲಾಖೆ ಮಾಹಿತಿ ನೀಡಿದೆ.



ದಿನೇಶ್ ಗುಂಡೂರಾವ್

‘ಚೀನಾದಲ್ಲಿ ಪತ್ತೆಯಾಗಿರುವ ವೈರಸ್ ಬಗ್ಗೆ ಮಾಹಿತಿ ಇಲ್ಲ. ಆದರೆ, ರಾಜ್ಯದಲ್ಲಿ ಪತ್ತೆಯಾಗಿರುವ ಎಚ್‌ಎಂಪಿವಿ ಹೊಸದಲ್ಲ. ಬಹಳ ಹಿಂದಿನಿಂದಲೂ ನಮ್ಮ ದೇಶದಲ್ಲಿದೆ. ಸಾಮಾನ್ಯವಾಗಿ ಶೀತ ಜ್ವರ ಮಾದರಿ ಅನಾರೋಗ್ಯ ಸಮಸ್ಯೆ (ಐಎಲ್‌ಐ) ಮತ್ತು ತೀವ್ರ ಉಸಿರಾಟದ ಸಮಸ್ಯೆ (ಸಾರಿ) ಇರುವ ಶೇಕಡ 1ರಷ್ಟು ಜನರಲ್ಲಿ ಈ ವೈರಾಣು ಕಂಡು ಬರುತ್ತದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು. ಎಚ್‌ಎಂಪಿವಿ ಪತ್ತೆಯಾದ ಕಾರಣದಿಂದ ಆರೋಗ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿದರು.

8ನೇ ಪುಟ ನೋಡಿ

ಎಚ್‌ಎಂಪಿವಿ ಎಂದರೇನು ?



ಹ್ಯೂಮನ್ ಮೆಟಾನ್ಯುಮೊ ವೈರಸ್– ಎಚ್‌ಎಂಪಿವಿಯ ವಿಸ್ತೃತ ರೂಪ. ಇದು ಉಸಿರಾಟದ ಸೋಂಕಿಗೆ ಕಾರಣವಾಗುವ ವೈರಾಣು. ಕಡಿಮೆ ರೋಗ ನಿರೋಧಕ ಶಕ್ತಿ ಹೊಂದಿರುವವರಿಗೆ, ಮಕ್ಕಳು ಮತ್ತು ವೃದ್ಧರಿಗೆ ಹೆಚ್ಚಾಗಿ ಈ ವೈರಾಣು ಹರಡುತ್ತದೆ. 2001ರಲ್ಲಿ ನೆದರ್ಲೆಂಡ್ಸ್‌ನಲ್ಲಿ ಪತ್ತೆಯಾಯಿತು.

ರೋಗ ಲಕ್ಷಣಗಳು: ಸಾಮಾನ್ಯವಾದ ಶೀತ, ಕೆಮ್ಮು, ಜ್ವರ, ಮೂಗು ಕಟ್ಟುವುದು, ಸೀನುವಿಕೆ, ತಲೆ ನೋವಿನಂತಹ ಲಕ್ಷಣ ಹೊಂದಿರುತ್ತದೆ. ಜತೆಗೆ ಉಸಿರಾಟದ ಸಮಸ್ಯೆಯೂ ಕಾಣಿಸಿಕೊಳ್ಳುತ್ತದೆ. ಕೆಮ್ಮಿದಾಗ, ಸೀನಿದಾಗ ಹೊಮ್ಮುವ ಹನಿಗಳಿಂದ ವೈರಾಣುಗಳು ಹರಡುತ್ತವೆ.

ಚಿಕಿತ್ಸಾ ಕ್ರಮಗಳು: ಎಚ್‌ಎಂಪಿವಿ ಸೋಂಕಿಗೆ ನಿಗದಿತವಾದ ಚಿಕಿತ್ಸೆ ಅಥವಾ ಲಸಿಕೆ ಇಲ್ಲ. ಜ್ವರ, ಮೈಕೈ ನೋವು ಮತ್ತು ಉಸಿರಾಟದ ತೊಂದರೆಯಂತಹ ಲಕ್ಷಣಗಳು ಕಂಡು ಬಂದಲ್ಲಿ, ಚಿಕಿತ್ಸೆ ಪಡೆಯಬೇಕು. ದೇಹ ನಿರ್ಜಲೀಕರಣ ಆಗದಂತೆ ಎಚ್ಚರವಹಿಸಬೇಕು. ಗಂಭೀರ ಪ್ರಕರಣಗಳಾದರೆ ಆಸ್ಪತ್ರೆಗೆ ದಾಖಲಾಗಿ, ಆಮ್ಲಜನಕ ಪೂರೈಕೆಯ ನೆರವು ಪಡೆಯಬೇಕಾಗಬಹುದು. (ಮಾಹಿತಿ: ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ)

ರಾಜ್ಯದಲ್ಲಿ ಎಚ್‌ಎಂಪಿವಿ ವೈರಾಣು ಸೋಂಕು ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಗಳು ತೆಗೆದುಕೊಳ್ಳಲಿವೆ. ಈ ಬಗ್ಗೆ ಸೂಚನೆ ನೀಡಲಾಗಿದೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಸರ್ಕಾರ ಕೇವಲ ಕಾಟಾಚಾರಕ್ಕೆ ಸಭೆಗಳನ್ನು ಮಾಡಿ, ಮಾರ್ಗಸೂಚಿ ಬಿಡುಗಡೆ ಮಾಡಿದರೆ ಸಾಲದು. ಈ ಕೂಡಲೇ ಸಮರ್ಥ ಸಚಿವರನ್ನು ಒಳಗೊಂಡ ಕಾರ್ಯಪಡೆ ಹಾಗೂ ತಜ್ಞ ವೈದ್ಯರ ಸಮಿತಿ ರಚಿಸಲಿ

ಆರ್.ಅಶೋಕ, ವಿರೋಧ ಪಕ್ಷದ ನಾಯಕ

ಚೆನ್ನೈ, ಅಹಮದಾಬಾದ್‌ನಲ್ಲೂ ಪತ್ತೆ

ಚೆನ್ನೈ/ಅಹಮದಾಬಾದ್ (ಪಿಟಿಐ): ಚೆನ್ನೈನಲ್ಲಿ ಎರಡು ಮತ್ತು ಅಹಮದಾಬಾದ್‌ನಲ್ಲಿ ಒಂದು ಹ್ಯೂಮನ್ ಮೆಟಾನ್ಯುಮೋವೈರಸ್ (ಎಚ್‌ಎಂಪಿವಿ) ಸೋಂಕು ಪ್ರಕರಣಗಳು ಪತ್ತೆಯಾಗಿವೆ. ಅಹಮದಾಬಾದ್‌ನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಎರಡು ತಿಂಗಳ ಮಗುವಿನಲ್ಲಿ ಎಚ್‌ಎಂಪಿವಿ ಪತ್ತೆಯಾಗಿದೆ. ರಾಜಸ್ಥಾನದ ಡುಂಗರ್‌ಪುರದ ಮಗುವಿನಲ್ಲಿ ಉಸಿರಾಟದ ಸಮಸ್ಯೆ ಕಾಣಿಸಿಕೊಂಡದ್ದರಿಂದ ಇಲ್ಲಿನ ಚಾಂದ್‌ಖೇಡಾ ಪ್ರದೇಶದಲ್ಲಿರುವ ಆಸ್ಪತ್ರೆಗೆ ದಾಖಲಿಸಲಾಗಿತ್ತು.

‘ಮಗುವನ್ನು ಪರೀಕ್ಷೆಗೆ ಒಳಪಡಿಸಿದಾಗ ಎಚ್‌ಎಂಪಿವಿ ಇರುವುದು ಪತ್ತೆಯಾಗಿದೆ. ಎಚ್‌ಎಂಪಿವಿ ಇರುವುದು ಡಿ.26ರಂದೇ ಪತ್ತೆಯಾಗಿದ್ದರೂ, ಆಸ್ಪತ್ರೆಯವರು ನಮಗೆ ತಡವಾಗಿ ಮಾಹಿತಿ ನೀಡಿದ್ದಾರೆ’ ಎಂದು ಅಹಮದಾಬಾದ್ ನಗರ ಪಾಲಿಕೆಯ ವೈದ್ಯಾಧಿಕಾರಿ ಭವಿನ್ ಸೋಳಂಕಿ ತಿಳಿಸಿದ್ದಾರೆ.

8ನೇ ಪುಟ ನೋಡಿ

ಆರೋಗ್ಯ ಇಲಾಖೆ ಮಾರ್ಗ ಸೂಚಿ

ಎಚ್‌ಎಂಪಿವಿ ಕಾಣಿಸಿಕೊಂಡಿರುವ ಕಾರಣದಿಂದ ಸುರಕ್ಷತೆ ದೃಷ್ಟಿಯಿಂದ ಆರೋಗ್ಯ ಇಲಾಖೆ ಈ ಕೆಳಕಂಡ ಮಾರ್ಗಸೂಚಿಗಳನ್ನು ಹೊರಡಿಸಿದೆ.

ಏನು ಮಾಡಬೇಕು?

- ಕೆಮ್ಮುವಾಗ, ಸೀನುವಾಗ ಬಾಯಿ ಮತ್ತು ಮೂಗನ್ನು ಕರವಸ್ತ್ರ ಅಥವಾ ಟಿಶ್ಯೂ ಪೇಪರ್‌ನಿಂದ ಮುಚ್ಚಿಕೊಳ್ಳಿ
- ಆಗಾಗ ಸಾಬೂನು ಅಥವಾ ಸ್ಯಾನಿಟೈಸರ್‌ನಿಂದ ಕೈಗಳನ್ನು ತೊಳೆದುಕೊಳ್ಳಿ
- ಜನಸಂದಣಿ ಇರುವ ಸ್ಥಳಗಳಿಗೆ ಹೋಗುವುದನ್ನು ತಪ್ಪಿಸಿ
- ಜ್ವರ, ನೆಗಡಿ, ಕೆಮ್ಮು ಇದ್ದಲ್ಲಿ ಸಾರ್ವಜನಿಕ ಸ್ಥಳಗಳಿಂದ ದೂರವಿರಿ
- ಅನಾರೋಗ್ಯದ ಲಕ್ಷಣಗಳಿದ್ದವರು ಸಭೆ–ಸಮಾರಂಭಗಳಲ್ಲಿ ಭಾಗವಹಿಸುವುದನ್ನು ತಪ್ಪಿಸಿ
- ಹೆಚ್ಚು ನೀರು ಕುಡಿಯಿರಿ ಮತ್ತು ಪೌಷ್ಟಿಕ ಆಹಾರ ಸೇವಿಸಿ

ಏನು ಮಾಡಬಾರದು?

- ಬಳಸಿದ ಟಿಶ್ಯೂ, ಕರವಸ್ತ್ರವನ್ನು ಪುನರ್ ಬಳಕೆ ಮಾಡಬಾರದು
- ಕೆಮ್ಮು, ಜ್ವರದಂತಹ ಲಕ್ಷಣಗಳಿರುವವರೊಂದಿಗೆ ನಿಕಟ ಸಂಪರ್ಕ ಹಾಗೂ ಟವೆಲ್, ಬಟ್ಟೆ ಹಂಚಿಕೊಳ್ಳಬಾರದು
- ನಿಮ್ಮ ಕಣ್ಣುಗಳು, ಮೂಗು, ಬಾಯಿಯನ್ನು ಆಗಿಂದಾಗ್ಗೆ ಸ್ಪರ್ಶಿಸಬಾರದು
- ಸಾರ್ವಜನಿಕ ಸ್ಥಳಗಳಲ್ಲಿ ಉಗುಳಬಾರದು
- ವೈದ್ಯರನ್ನು ಸಂಪರ್ಕಿಸದೆ ಔಷಧ ಸೇವಿಸಬಾರದು



ಕಂಸಾಳೆ ದಾವಣಗೆರೆಯ ಬಿಐಇಟಿ ಕಾಲೇಜು ಸಭಾಂಗಣದಲ್ಲಿ ಸೋಮವಾರ ನಡೆದ ರಾಜ್ಯ ಮಟ್ಟದ ಯುವಜನೋತ್ಸವ ಸಮಾರಂಭದಲ್ಲಿ ಕಲಾವಿದರು ಕಂಸಾಳೆ ನೃತ್ಯ ಪ್ರದರ್ಶಿಸಿದರು ಪ್ರಜಾವಾಣಿ ಚಿತ್ರ : ಸತೀಶ್ ಬಡಿಗೇರ

ನಕ್ಸಲರ ದಾಳಿ: ಪೊಲೀಸರು ಸೇರಿ 9 ಮಂದಿ ಹುತಾತ್ಮ

ಬಿಜಾಪುರ್ (ಛತ್ತೀಸಗಢ) (ಪಿಟಿಐ): ದಂತೇವಾಡಾ ಜಿಲ್ಲೆಯಿಂದ ನಕ್ಸಲ್ ನಿಗ್ರಹ ಕಾರ್ಯಾಚರಣೆ ಮುಗಿಸಿ ಮರಳುತ್ತಿದ್ದ ಜಿಲ್ಲಾ ಮೀಸಲು ಪಡೆಯ (ಡಿಆರ್‌ಜಿ) ಅಧಿಕಾರಿಗಳಿದ್ದ ಕಾರನ್ನು ಕಚ್ಚಾ ಬಾಂಬ್ ಬಳಸಿ ನಕ್ಸರು ಸೋಮವಾರ ಸ್ಫೋಟಿಸಿದ್ದಾರೆ. ಘಟನೆಯಲ್ಲಿ 8 ಪೊಲೀಸರು ಹಾಗೂ ಕಾರಿನ ಚಾಲಕ ಹುತಾತ್ಮರಾಗಿದ್ದಾರೆ.

ಸೋಮವಾರ ಮಧ್ಯಾಹ್ನ 2.15ಕ್ಕೆ ಬಿಜಾಪುರ್ ಜಿಲ್ಲೆಯ ಬೆದರೆ–ಕುಟರೂ ರಸ್ತೆಯಲ್ಲಿ ಇದು ನಡೆದಿದೆ. ಕಳೆದ ಎರಡು ವರ್ಷಗಳಲ್ಲಿ ಪೊಲೀಸರ ವಿರುದ್ಧ ನಕ್ಸಲರು ಛತ್ತೀಸಗಢದಲ್ಲಿ ನಡೆಸಿದ ದೊಡ್ಡ ದಾಳಿ ಇದಾಗಿದೆ.

ಬಲಿದಾನ ವ್ಯರ್ಥವಾಗಲು ಬಿಡುವುದಿಲ್ಲ. 2026ರ ಮಾರ್ಚ್ ಒಳಗಾಗಿ ಭಾರತದಿಂದ ನಕ್ಸಲ್ ಚಟುವಟಿಕೆಯನ್ನು ಅಂತ್ಯಗೊಳಿಸಲಾಗುವುದು

ಅಮಿತ್ ಶಾ, ಕೇಂದ್ರ ಗೃಹ ಸಚಿವ

ಸ್ಫೋಟದ ಪರಿಣಾಮ ರಸ್ತೆಯಲ್ಲಿ 10 ಅಡಿ ಆಳದ ಗುಂಡಿ ಸೃಷ್ಟಿಯಾಗಿತ್ತು. ರಸ್ತೆಯು ಇಬ್ಭಾಗವಾಗಿತ್ತು.ಪೊಲೀಸರು ಪ್ರಯಾಣಿಸುತ್ತಿದ್ದ ಸ್ಕಾರ್ಪಿಯೊ ಚೆಲ್ಲಾಪಿಲ್ಲಿ ಆಗಿ ಬಿದ್ದಿತ್ತು. ಅದರ ಒಂದು ಭಾಗವು ರಸ್ತೆಯ ಪಕ್ಕದಲ್ಲಿದ್ದ ಮರದಲ್ಲಿ ನೇತಾಡುತ್ತಿತ್ತು. ಛಿದ್ರಗೊಂಡಿದ್ದ ಪೊಲೀಸರ ಮೃತದೇಹಗಳನ್ನು ಪ್ಲಾಸ್ಟಿಕ್ ಶೀಟಿನ ಮೇಲಿರಿಸಲಾಗಿತ್ತು. ದಂತೇವಾಡಾ, ಬಿಜಾಪುರ್ ಹಾಗೂ ನಾರಾಯಣಪುರ ಜಿಲ್ಲೆಗಳಲ್ಲಿ ಕಳೆದ 3 ದಿನಗಳಿಂದ ಕಾರ್ಯಾಚರಣೆ ನಡೆದಿತ್ತು.

9ನೇ ಪುಟ ನೋಡಿ

ಬಿಧೂಡಿ ಹೇಳಿಕೆ: ಕಣ್ಣೀರಿಟ್ಟ ಸಿ.ಎಂ ಆತಿಶಿ 9

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಫೆ.10ರಿಂದ ಏರೋ ಇಂಡಿಯಾ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶತಕೋಟಿ ಅವಕಾಶಗಳ ಪಥ’ (ದಿ ರನ್‌ವೇ ಟು ಎ ಬಿಲಿಯನ್ ಆಪರ್ಚುನಿಟೀಸ್) ಎಂಬ ವಿಶಾಲ ಧ್ಯೇಯದೊಂದಿಗೆ ಯಲಹಂಕದ ವಾಯುನೆಲೆಯಲ್ಲಿ ಫೆಬ್ರುವರಿ 10ರಿಂದ 14ರವರೆಗೆ ಏರೋ ಇಂಡಿಯಾ ವೈಮಾನಿಕ ಪ್ರದರ್ಶನ ಆಯೋಜಿಸಲಾಗಿದೆ.

ಕಾರ್ಯಕ್ರಮದ ಫೆ.10ರಿಂದ ಮೊದಲ ಮೂರು ದಿನಗಳು ವ್ಯವಹಾರದ ದಿನಗಳಾಗಿರುತ್ತವೆ. ಫೆ. 13 ಮತ್ತು 14ರಂದು ಸಾರ್ವಜನಿಕ ವೀಕ್ಷಣೆಗೆ ಅವಕಾಶ ನೀಡಲಾಗಿದೆ. ಈ ಕಾರ್ಯಕ್ರಮದಲ್ಲಿ ಏರೋಸ್ಪೇಸ್ ವಲಯದಿಂದ ಉನ್ನತ ಶ್ರೇಣಿಯ ಮಿಲಿಟರಿ ವಾಯು ಪ್ರದರ್ಶನ ಮತ್ತು ವಸ್ತು ಪ್ರದರ್ಶನ ಇರಲಿವೆ ಎಂದು ರಕ್ಷಣಾ ಇಲಾಖೆಯ ಮಾಧ್ಯಮ ಮಾಹಿತಿ ಬ್ಯೂರೊ ತಿಳಿಸಿದೆ.



ಮೈ ನವಿರೇಳಿಸುವ ವೈಮಾನಿಕ ಪ್ರದರ್ಶನ ಆಕರ್ಷಣೆಯ ಕೇಂದ್ರವಾಗಿದ್ದರೂ ಅದರ ನೇಪಥ್ಯದಲ್ಲಿ ಹಲವು ಕಾರ್ಯಕ್ರಮಗಳು ನಡೆಯಲಿವೆ. ಮಿತ್ರರಾಷ್ಟ್ರಗಳೊಂದಿಗೆ ರಕ್ಷಣಾ ಸಹಭಾಗಿತ್ವದ ಮಾತುಕತೆಯನ್ನು ಸುಲಭಗೊಳಿಸಲು ರಕ್ಷಣಾ ಸಚಿವರ ಸಮಾವೇಶವೂ ನಡೆಯಲಿದೆ.

ಸಿಇಒಗಳ ದುಂಡುಮೇಜಿನ ಸಭೆಯು ವಿದೇಶಗಳ ಸಲಕರಣೆ ತಯಾರಕರಿಗೆ (ಒಇಎಂಗಳು) ಭಾರತದಲ್ಲಿ ತಯಾರಿಕೆಗೆ ಅನುಕೂಲಕರ ವೇದಿಕೆಯನ್ನು ಒದಗಿಸುವ ನಿರೀಕ್ಷೆಯಿದೆ. ವಿದೇಶಿ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ದೇಶೀಯ ಸಾರ್ವಜನಿಕ ವಲಯದ ಉದ್ದಿಮೆಗಳ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಭಾರತದ ಖಾಸಗಿ ರಕ್ಷಣಾ ಮತ್ತು ವೈಮಾನಿಕ ತಯಾರಿಕಾ ಕಂಪನಿಗಳ ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ರಕ್ಷಣಾ ಇಲಾಖೆ ತಿಳಿಸಿದೆ.

ಮಂಥನ್ ಸ್ಟಾರ್ಟ್-ಅಪ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಭಾರತೀಯ ನವೋದ್ಯಮಗಳ ಪ್ರಚಾರವೇ ಏರೊ ಇಂಡಿಯಾ–2025ರ ಮುಖ್ಯ ಉದ್ದೇಶವಾಗಿದೆ. ನವೋದ್ಯಮಗಳು ಅಭಿವೃದ್ಧಿಪಡಿಸಿರುವ ಅತ್ಯಾಧುನಿಕ ತಂತ್ರಜ್ಞಾನ/ಉತ್ಪನ್ನಗಳನ್ನು ವಿಶೇಷ ಐಡೆಕ್ಸ್ ಪೆವಿಲಿಯನ್‌ನಲ್ಲಿ ಪ್ರದರ್ಶಿಸಲಾಗುತ್ತದೆ.

ಔತಣ ಸುತ್ತ ‘ಕಾಂಗ್ರೆಸ್’ ರಾಜಕಾರಣ

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿದೇಶ ಪ್ರವಾಸದಲ್ಲಿದ್ದಾಗ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ನಿವಾಸದಲ್ಲಿ ಗುರುವಾರ (ಜ. 2) ನಡೆದ ಔತಣಕೂಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಲವು ಸಚಿವರು, ಶಾಸಕರು ಭಾಗಿಯಾಗಿ ಮಾತುಕತೆ ನಡೆಸಿರುವುದು ನಾನಾ ಚರ್ಚೆಗಳನ್ನು ಹುಟ್ಟು ಹಾಕಿದೆ

ರಾಜಕೀಯ ಮಾತನಾಡಿಲ್ಲ



ಬೆಂಗಳೂರು: ‘ಸಚಿವ ಸತೀಶ ಜಾರಕಿಹೊಳಿ ಮನೆಯಲ್ಲಿ ಇತ್ತೀಚೆಗೆ ನಡೆದ ಔತಣಕೂಟದಲ್ಲಿ ರಾಜಕೀಯ ವಿಚಾರ ಮಾತನಾಡಿಲ್ಲ. ಪಕ್ಷ ಸಂಘಟನೆ ಬಲಪಡಿಸುವ ಕುರಿತು ಚರ್ಚಿಸಿದ್ದೇವೆ. ಮಾಧ್ಯಮಗಳಲ್ಲಿ ಪ್ರಕಟ ಆಗಿರುವುದೆಲ್ಲ ಊಹಾಪೋಹ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

5ನೇ ಪುಟ ನೋಡಿ

ಊಟಕ್ಕೆ ಸೇರಿದರೆ ತಪ್ಪೇನು?



ನವದೆಹಲಿ: ‘ರಾಜಕಾರಣದಲ್ಲಿ ಔತಣಕೂಟ ಸರ್ವೇಸಾಮಾನ್ಯ. ಎಲ್ಲರೂ ಊಟಕ್ಕೆ ಸೇರಿದರೆ ತಪ್ಪೇನು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸೋಮವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಔತಣಕೂಟಕ್ಕೆ ಸೇರಿದರೆ ರಾಜಕೀಯ ಯಾಕೆ ಬೆರೆಸುತ್ತೀರಿ’ ಎಂದು ಕೇಳಿದರು.

5ನೇ ಪುಟ ನೋಡಿ

‘2028ರಲ್ಲಿ ಸಿ.ಎಂ ಸ್ಥಾನಕ್ಕೆ ಯತ್ನ’



ರಾಯಚೂರು: ‘ರಾಜ್ಯದಲ್ಲಿ ಮುಖ್ಯಮಂತ್ರಿ ಇದ್ದಾರೆ. ಈಗ ಮುಖ್ಯಮಂತ್ರಿ ಆಗುವ ಪ್ರಶ್ನೆ ಇಲ್ಲ. ಆದರೆ, 2028ರಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಪ್ರಯತ್ನ ಮಾಡುತ್ತೇನೆ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು. ‘ಕೆಪಿಸಿಸಿ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ವಿಚಾರದಲ್ಲಿ ಹೈಕಮಾಂಡ್ ನಿರ್ಧಾರ ಅಂತಿಮ’ ಎಂದರು.

5ನೇ ಪುಟ ನೋಡಿ

ಅಧಿಕಾರಿಗಳೆಂದು ಮನೆಗೆ ಭೇಟಿ: ಸೈಬರ್ ವಂಚಕರ ಹೊಸ ವಿಧಾನ

ನಕಲಿ ವಾರಂಟ್ ನೀಡಿ ಹಣ ಸುಲಿಗೆ

• ಕೆ.ಎಸ್.ಸುನಿಲ್

ಬೆಂಗಳೂರು: ಈವರೆಗೆ ‘ಡಿಜಿಟಲ್ ಅರೆಸ್ಟ್’ ಹೆಸರಲ್ಲಿ ಕೋಟ್ಯಂತರ ರೂಪಾಯಿ ಸುಲಿಗೆ ಮಾಡುತ್ತಿದ್ದ ವಂಚಕರು, ಈಗ ಮನೆಗಳು ಹಾಗೂ ಅಪಾರ್ಟ್‌ಮೆಂಟ್‌ಗಳಿಗೆ ಪೊಲೀಸ್ ಹಾಗೂ ನ್ಯಾಯಾಲಯದ ಅಧಿಕಾರಿಗಳ ಸೋಗಿನಲ್ಲಿ ಬಂದು ‘ನಕಲಿ ಬಂಧನ ವಾರಂಟ್’ ಹೆಸರಲ್ಲಿ ಹಣ ನೀಡುವಂತೆ ಬೆದರಿಸುವ ಹೊಸ ವಿಧಾನವನ್ನು ಕಂಡುಕೊಂಡಿದ್ದಾರೆ.

ಪೊಲೀಸ್ ಅಥವಾ ನ್ಯಾಯಾಲಯದ ಅಧಿಕಾರಿಗಳೆಂದು ಹೇಳಿಕೊಳ್ಳುವ ವಂಚಕರು, ಮನೆಗಳು ಹಾಗೂ ಅಪಾರ್ಟ್‌ಮೆಂಟ್‌ಗಳಿಗೆ ತೆರಳಿ ಬಂಧನದ ವಾರಂಟ್ ನೀಡುತ್ತಾರೆ. ಬಳಿಕ ಹಣ ನೀಡುವಂತೆ ಬೆದರಿಸಿದ ಪ್ರಕರಣಗಳ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಮಾಹಿತಿ ಹರಿದಾಡುತ್ತಿದೆ.

ಬೆಂಗಳೂರು ಸೇರಿದಂತೆ ರಾಜ್ಯದ ಇತರೆ ನಗರಗಳ ಹಲವು ಅಪಾರ್ಟ್‌ಮೆಂಟ್ ಮಾಲೀಕರ ಸಂಘಗಳ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಈ ಬಗ್ಗೆ ಸಂದೇಶಗಳು ಹರಿದಾಡುತ್ತಿದ್ದು, ಸೈಬರ್ ವಂಚಕರ ಬಗ್ಗೆ ಎಚ್ಚರದಿಂದ ಇರುವಂತೆ ನಿವಾಸಿಗಳಿಗೆ ಸೂಚನೆ ನೀಡಲಾಗಿದೆ

ವಾಟ್ಸ್‌ಆ್ಯಪ್‌ನಲ್ಲಿ ನೀಡಲಾದ ಸೂಚನೆ ಹೀಗಿದೆ: ‘ನ್ಯಾಯಾಲಯದ ಅಧಿಕಾರಿಯ ಸೋಗಿನಲ್ಲಿ ಬಂಧನ ವಾರಂಟ್‌ನೊಂದಿಗೆ ಅಪಾರ್ಟ್‌ಮೆಂಟ್ ಪ್ರವೇಶಿಸಲು ಪ್ರಯತ್ನಿಸಿದ ವ್ಯಕ್ತಿಯನ್ನು ಭದ್ರತಾ ಸಿಬ್ಬಂದಿ ತಡೆದಿದ್ದಾರೆ. ಆತ ಅಲ್ಲಿಂದ ತೆರಳಿ, ತನ್ನ ಸಹಚರರನ್ನು ಪೊಲೀಸ್ ಸಮವಸ್ತ್ರದಲ್ಲಿ ಕರೆತಂದಿದ್ದಾನೆ. ಭದ್ರತಾ ಸಿಬ್ಬಂದಿ ಒಳಗೆ ಹೋಗಲು ಅವಕಾಶ ನೀಡದಿದ್ದಾಗ, ಸರ್ಕಾರಿ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸಿದರೆ ಕಾನೂನು ಕ್ರಮ ಜರುಗಿಸುವ ಬಗ್ಗೆ ಎಚ್ಚರಿಕೆ ನೀಡಿದ್ದಾನೆ. ‘ಬಳಿಕ ಭದ್ರತಾ ಸಿಬ್ಬಂದಿ ಅವರಿಗೆ ಅಪಾರ್ಟ್‌ಮೆಂಟ್ ಒಳಗೆ ಹೋಗಲು ಅವಕಾಶ ನೀಡಿದ್ದಾರೆ. ವಂಚಕರು ಮನೆಯೊಂದರ ಬಾಗಿಲು ಬಡಿದು, ವಾರಂಟ್ ಜಾರಿ ಮಾಡುವುದಾಗಿ ತಿಳಿಸಿದ್ದಾರೆ. ಆದರೆ, ಆ ಮನೆಯವರು ಬಾಗಿಲು ತೆರೆಯದ ಕಾರಣ ವಂಚಕರ ತಂಡ ಹಿಂತಿರುಗಿದೆ’.

ನಕಲಿ ಬಂಧನ ವಾರಂಟ್ ನೀಡಿ ಹಣ ದೋಚಲು ಯತ್ನಿಸಿರುವ ಸಂಬಂಧ ನಗರದಲ್ಲಿ ಯಾವುದೇ ದೂರು ಬಂದಿಲ್ಲ. ಆದರೂ ಈ ಬಗ್ಗೆ ಪರಿಶೀಲಿಸಲಾಗುವುದು. ಸೈಬರ್ ವಂಚಕರ ಬಗ್ಗೆ ಎಚ್ಚರದಿಂದ ಇರಬೇಕು’ ಎಂದು ಪೊಲೀಸರು ತಿಳಿಸಿದ್ದಾರೆ.

9ನೇ ಪುಟ ನೋಡಿ

ಎಪಿಕೆ ಫೈಲ್ ಕಳುಹಿಸಿ ವಂಚನೆಗೆ ಯತ್ನ

ವಾಟ್ಸ್‌ಆ್ಯಪ್ ಗುಂಪುಗಳಿಗೆ ಜ್ಞಾನಭಾರತಿ, ಗಿರಿನಗರ, ಬಸವನಗುಡಿ ಹಾಗೂ ರಾಜರಾಜೇಶ್ವರಿ ನಗರ ಠಾಣೆ ಸೇರಿದಂತೆ ಕೆಲ ಠಾಣೆಗಳ ಇನ್‌ಸ್ಪೆಕ್ಟರ್‌ಗಳ ಹೆಸರಿನಲ್ಲಿ ಎಪಿಕೆ ಫೈಲ್‌ಗಳನ್ನು ಕಳುಹಿಸಿ ಹಣ ದೋಚುವ ಸಂಚು ಬಯಲಾಗಿದೆ.

ನಗರದಲ್ಲಿ ಐಪಿಎಸ್ ಅಧಿಕಾರಿಗಳು ಸೇರಿದಂತೆ ಪೊಲೀಸರು ಇರುವ ವಾಟ್ಸ್‌ಆ್ಯಪ್ ಗುಂಪುಗಳನ್ನು ಹ್ಯಾಕ್ ಮಾಡಿದ್ದ ಸೈಬರ್ ವಂಚಕರು, ಕೆಲ ಪೊಲೀಸ್ ಅಧಿಕಾರಿಗಳ ಮೊಬೈಲ್ ನಂಬರ್‌ಗಳಿಂದ ಎಪಿಕೆ ಫೈಲ್ ಕಳುಹಿಸಿದ್ದಾರೆ. ಗುಂಪಿನ ಸದಸ್ಯರ ಮೊಬೈಲ್ ಹ್ಯಾಕ್ ಮಾಡಿ ಬ್ಯಾಂಕ್ ಖಾತೆಯಲ್ಲಿ ಹಣ ದೋಚಲು ಯತ್ನಿಸಿದ್ದಾರೆ. ಈ ಮಾಹಿತಿ ತಿಳಿದ ಅಧಿಕಾರಿಗಳು, ಪೊಲೀಸರ ಹೆಸರಿನಲ್ಲಿ ಬರುವ ಸಂದೇಶಗಳಿಗೆ ಪ್ರತಿಕ್ರಿಯಿಸದಂತೆ ಮನವಿ ಮಾಡಿದ್ದಾರೆ.



ಕಂದಾಯ ಬಡಾವಣೆಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇನ್ನುಮುಂದೆ ಕಂದಾಯ ಜಮೀನಿನಲ್ಲಿ ಬಡಾವಣೆ ನಿರ್ಮಾಣಕ್ಕೆ ಅವಕಾಶ ನೀಡುವುದಿಲ್ಲ. ಇದನ್ನು ತಡೆಯಲು ಕ್ರಮ ಕೈಗೊಳ್ಳುವುದು ಮಾತ್ರವಲ್ಲದೇ, ಈಗಾಗಲೇ ಇರುವ ಬಡಾವಣೆಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಕಂದಾಯ ಇಲಾಖೆ ಸಭೆಯನ್ನು ಸೋಮವಾರ ನಡೆಸಿದ ಅವರು, ಈ ನಿರ್ದೇಶನ ನೀಡಿದರು.

ಕಂದಾಯ ಇಲಾಖೆಯಲ್ಲಿ ಯಾವ ಯಾವ ಸರ್ವೆ ನಂಬರ್‌ಗಳಲ್ಲಿ ನಿರ್ಮಿಸಿದ ಅನಧಿಕೃತ ಬಡಾವಣೆಗಳು, ನಿವೇಶನಗಳ ದತ್ತಾಂಶ ಇದೆ. ಈ ಮಾಹಿತಿ ಆಧರಿಸಿ ಒಂದೇ ಯೋಜನೆಯಲ್ಲಿ ಅಂತಹ ಸ್ವತ್ತುಗಳಿಗೆ ಖಾತಾ ದಾಖಲೆಗಳನ್ನು ನೀಡುವ ಪ್ರಕ್ರಿಯೆಗೆ ಚಾಲನೆ ನೀಡಬೇಕು ಎಂದು ಹೇಳಿದರು.

ಸ್ಥಳೀಯ ಸಂಸ್ಥೆಗಳಲ್ಲಿ ಸುಮಾರು 30 ಲಕ್ಷ ಆಸ್ತಿಗಳಿಗೆ ಖಾತೆಗಳು ಇಲ್ಲ. ಗ್ರಾಮ ಪಂಚಾಯತಿಗಳಲ್ಲಿ ಅಂದಾಜು 90 ಲಕ್ಷ ಆಸ್ತಿಗಳು ಖಾತಾ ದಾಖಲೆಗಳನ್ನು ಹೊಂದಿಲ್ಲ. ಖಾತೆ ಇಲ್ಲದೇ, ನಕಲಿ ದಾಖಲೆಗಳನ್ನು ಸೃಷ್ಟಿಸಿ ನೋಂದಣಿ ಮಾಡುವ ಪ್ರಕ್ರಿಯೆಗೆ ಕಡಿವಾಣ ಹಾಕಲೇಬೇಕು. ಇದಕ್ಕಾಗಿ ಸ್ಥಳೀಯ ಸಂಸ್ಥೆಗಳು ಮತ್ತು ನೋಂದಣಿ ಇಲಾಖೆಯ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸಿದ್ದರಾಮಯ್ಯ ಸೂಚಿಸಿದರು.

ಸಭೆಯ ಪ್ರಮುಖ ಅಂಶಗಳು

- ಬಿಬಿಎಂಪಿ, ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅಭಿಯಾನದ ಮಾದರಿಯಲ್ಲಿ ಖಾತಾ ನೀಡುವ ಪ್ರಕ್ರಿಯೆ ನಡೆಸಬೇಕು. ಫೆಬ್ರುವರಿ 10ರ ಒಳಗೆ ನಿಗದಿತ ಅವಧಿಯಲ್ಲಿ ಖಾತಾ ನೀಡುವ ಪ್ರಕ್ರಿಯೆ ಪೂರ್ಣಗೊಳಿಸಬೇಕು
- ನಗರ ಪ್ರದೇಶಗಳಲ್ಲಿ ಆಸ್ತಿಗಳ ಅಕ್ರಮ ನೋಂದಣಿ ತಡೆಗಟ್ಟಲು ಹಾಗೂ ಆಸ್ತಿ ನೋಂದಣಿ ಮತ್ತು ಖಾತಾ ನಮೂದನ್ನು ಇನ್ನಷ್ಟು ಸರಳೀಕರಣಗೊಳಿಸಲು ಕಾವೇರಿ ಮತ್ತು ಇ-ಆಸ್ತಿ ತಂತ್ರಾಂಶಗಳ ಸಂಯೋಜನೆಯನ್ನು ಕಡ್ಡಾಯಗೊಳಿಸಲಾಗಿದೆ
- ಈ ವರ್ಷ ಡಿಸೆಂಬರ್ ಕೊನೆಗೆ ₹16,993 ಕೋಟಿ ರಾಜಸ್ವ ಸಂಗ್ರಹಿಸಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 17ರಷ್ಟು ಹೆಚ್ಚುವರಿ ಪ್ರಗತಿ ಸಾಧಿಸಲಾಗಿದೆ
- ಗ್ರಾಮ ಪಂಚಾಯಿತಿಗಳಲ್ಲಿ 44 ಲಕ್ಷ ಆಸ್ತಿಗಳಿಗೆ ಮಾತ್ರ ಖಾತೆಯಿದೆ. ಇದರಿಂದ ₹800 ಕೋಟಿ ಆದಾಯ ಪ್ರತಿ ವರ್ಷ ಬರುತ್ತಿದೆ. ಆದರೆ, ಸುಮಾರು 90 ಲಕ್ಷ ಆಸ್ತಿಗಳಿಗೆ ಇನ್ನೂ ಖಾತಾ ಇಲ್ಲ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಖಾತೆ ನೋಂದಣಿ ಪ್ರಕ್ರಿಯೆ ಸರಳಗೊಳಿಸುವ ಕುರಿತು ಕ್ರಮ ತೆಗೆದುಕೊಳ್ಳುವುದು
- ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಕ್ರಮಬದ್ಧವಲ್ಲದ ಸ್ವತ್ತುಗಳ ನಕಲಿ ಖಾತೆಗಳನ್ನು ಸೃಜಿಸಿ ವಂಚನೆಯಿಂದ ಹೆಚ್ಚು ದಸ್ತಾವೇಜುಗಳ ನೋಂದಣಿ ಮಾಡುವ ಪ್ರಕ್ರಿಯೆಗೆ ಸಂಪೂರ್ಣ ಕಡಿವಾಣ ಹಾಕಬೇಕು

ಶಾಂತಿನಗರ: ಉದ್ಯೋಗ ಮೇಳ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ಹಾಗೂ ಎನ್.ಎ. ಹ್ಯಾರಿಸ್ ಫೌಂಡೇಶನ್ ಸಹಯೋಗದಲ್ಲಿ ಜನವರಿ 7 ಮತ್ತು 8ರಂದು ಶಾಂತಿನಗರ ವಿಧಾನಸಭೆ ಕ್ಷೇತ್ರದ ಆಸ್ಟಿನ್ ಟೌನ್‌ನಲ್ಲಿರುವ ನಂದನ್ ಫುಟ್‌ಬಾಲ್ ಮೈದಾನದಲ್ಲಿ 'ಶಾಂತಿನಗರ ಉದ್ಯೋಗ ಮೇಳ' ಆಯೋಜಿಸಲಾಗಿದೆ ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧ್ಯಕ್ಷರೂ ಆಗಿರುವ ಸ್ಥಳೀಯ ಶಾಸಕ ಎನ್.ಎ. ಹ್ಯಾರಿಸ್ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎನ್.ಎ. ಹ್ಯಾರಿಸ್ ಫೌಂಡೇಶನ್ ವತಿಯಿಂದ ಮಾನವೀಯತೆಯ ಹಬ್ಬದ ಅಂಗವಾಗಿ ಇದೇ 7ರಿಂದ 8ರವರೆಗೆ ಎರಡು ದಿನಗಳ ಉದ್ಯೋಗ ಮೇಳ ನಡೆಯಲಿದೆ. ಈ ಮೇಳದಲ್ಲಿ 116 ಪ್ರತಿಷ್ಠಿತ ಕಂಪನಿಗಳು ಪಾಲ್ಗೊಳ್ಳಲಿದ್ದು, 26,624 ಉದ್ಯೋಗಾವಕಾಶಗಳು ಇವೆ. ಈಗಾಗಲೇ ಉದ್ಯೋಗ ಮೇಳ ಪೋರ್ಟಲ್ ಮೂಲಕ 1,672ಜನ ಉದ್ಯೋಗಾಂಕ್ಷಿಗಳು ನೋಂದಣಿ ಮಾಡಿಕೊಂಡಿದ್ದಾರೆ. ನಾಲ್ಕು ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸುವ ನಿರೀಕ್ಷೆ ಇದೆ' ಎಂದು ಮಾಹಿತಿ ನೀಡಿದರು.

'ಮೇಳದಲ್ಲಿ ಭಾಗವಹಿಸಲು ಯಾವುದೇ ರೀತಿಯ ಶುಲ್ಕವಿಲ್ಲ. ಇದಕ್ಕಾಗಿಯೇ 120 ಮಳಿಗೆಗಳನ್ನು ಸಿದ್ಧಪಡಿಸಲಾಗಿದ್ದು, ಅಭ್ಯರ್ಥಿಗಳ ನೋಂದಣಿಗೆ 15 ಮಳಿಗೆಗಳನ್ನು ಮೀಸಲಿಡಲಾಗಿದೆ. ಮೇಳದಲ್ಲಿ ಭಾಗವಹಿಸುವ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲಾಗಿದೆ' ಎಂದರು.

ಉದ್ಯೋಗ ಮೇಳಕ್ಕೆ ನೋಂದಣಿ ಮಾಡಿಕೊಳ್ಳುವವರು ಹೆಚ್ಚಿನ ಮಾಹಿತಿಗೆ udyogamela.skillconnect.kaushalkar.com ಗೆ ಭೇಟಿ ನೀಡಬಹುದು ಅಥವಾ 1800 599 9918 ಸಂಪರ್ಕಿಸಬಹುದು.

ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಕಾಂತಾ ನಾಯಕ್ ಸುದ್ದಿಗೋಷ್ಠಿಯಲ್ಲಿದ್ದರು.

ಹಳದಿ ಮಾರ್ಗ: ಫೆಬ್ರುವರಿಯಲ್ಲಿ ಬೊಮ್ಮಸಂದ್ರ–ಆರ್‌ವಿ ರಸ್ತೆ ನಡುವೆ ಮೆಟ್ರೊ ಸಂಚಾರ ಸಾಧ್ಯತೆ

ಕೋಲ್ಕತ್ತದಿಂದ 15 ದಿನದಲ್ಲಿ ರೈಲು ಪೂರೈಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೊಮ್ಮಸಂದ್ರ–ಆರ್‌ವಿ ರಸ್ತೆ ನಡುವಿನ ನಮ್ಮ ಮೆಟ್ರೊ ಹಳದಿ ಮಾರ್ಗಕ್ಕೆ ಬರಲಿರುವ ಪ್ರೊಟೊಟೈಪ್ (ಮೂಲ ಮಾದರಿ) ರೈಲನ್ನು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಮನೋಹರ್ ಲಾಲ್ ಸೋಮವಾರ ಕೋಲ್ಕತ್ತದ ಟಿಟಾಗಢದಲ್ಲಿ ಅನಾವರಣ ಮಾಡಿದರು. ಮೆಟ್ರೊ ಹೆಬ್ಬಗೋಡಿ ಡಿಪೊಗೆ 15 ದಿನಗಳಲ್ಲಿ ತಲುಪಲಿದೆ.

ಟಿಟಾಗಢ ರೈಲ್ ಸಿಸ್ಟಂ ಲಿಮಿಟೆಡ್ (ಟಿಆರ್‌ಎಸ್‌ಎಲ್) ಕಾರ್ಯಾಗಾರದಲ್ಲಿ 'ಮೇಕ್ ಇನ್ ಇಂಡಿಯಾ' ಅಡಿಯಲ್ಲಿ 36 ರೈಲುಗಳನ್ನು ತಯಾರಿಸಲಾಗುತ್ತಿದೆ. ಅದರಲ್ಲಿ 34 ರೈಲುಗಳು ಬಿಎಂಆರ್‌ಸಿಎಲ್‌ಗೆ ಬರಲಿವೆ. 14 ರೈಲುಗಳು ಹಳದಿ ಮಾರ್ಗಕ್ಕೆ ಬಳಕೆಯಾಗಲಿವೆ. ಹಸಿರು ಮತ್ತು ನೇರಳೆ ಮಾರ್ಗದಲ್ಲಿರುವ ರೈಲುಗಳ ಕೊರತೆಯನ್ನು ಉಳಿದವುಗಳು ನೀಗಿಸಲಿವೆ.

ಹಳದಿ ಮಾರ್ಗದಲ್ಲಿ ಚಾಲಕರಹಿತ ಚಾಲನಾ ಎಂಜಿನ್ ಹೊಂದಿರುವ ಮೆಟ್ರೊ ಸಂಚರಿಸಲಿದ್ದು, ಮೊದಲ ರೈಲನ್ನು ಚೀನಾ ರೈಲ್ವೆ ರೋಲಿಂಗ್ ಸ್ಟಾಕ್ ಕಾರ್ಪೊರೇಷನ್ (ಸಿಆರ್‌ಆರ್‌ಸಿ) ಪೂರೈಸಿತ್ತು. ಉಳಿದವುಗಳನ್ನು ಟಿಆರ್‌ಎಸ್‌ಎಲ್ ಪೂರೈಕೆ ಮಾಡಲಿದ್ದು, ಅವುಗಳಲ್ಲಿ ಒಂದು ರೈಲು ತಯಾರಾಗಿದೆ.

ಎರಡು ಎಂಜಿನ್ ಬೋಗಿಗಳು ಮತ್ತು ನಾಲ್ಕು ಸಾಮಾನ್ಯ ಬೋಗಿಗಳಿರುವ ಸೆಟ್ (ಒಂದು ಕೋಚ್) ರೈಲು ಸಂಚಾರಕ್ಕೆ ಸರಿಯಾಗಿ 'ನಮ್ಮ ಮೆಟ್ರೊ' ನಿಲ್ದಾಣಗಳಿವೆ. ದೆಹಲಿಯಲ್ಲಿ ಮಾತ್ರ ಒಟ್ಟು 12 ಬೋಗಿಗಳ ರೈಲು ಹತ್ತಿಳಿಯಲು ಅವಕಾಶವಿರುವ ನಿಲ್ದಾಣಗಳಿವೆ.

ಮೂರು ಕೋಚ್‌ಗಳು ತಲುಪಿದ ನಂತರ ಹಳದಿ ಮಾರ್ಗದಲ್ಲಿ ಸಂಚಾರ ಆರಂಭಗೊಳ್ಳಲಿದೆ. ಪ್ರತಿ ಅರ್ಧ ಗಂಟೆಗೆ ಒಂದು ಟ್ರಿಪ್ ಇರಲಿದೆ. ಆನಂತರ ರೈಲುಗಳು ಸೇರ್ಪಡೆಯಾಗುತ್ತಿದ್ದಂತೆ ಟ್ರಿಪ್ ಅವಧಿ ಕಡಿಮೆ ಮಾಡಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಬೊಮ್ಮಸಂದ್ರ, ಹೆಬ್ಬಗೋಡಿ, ಹುಸ್ಕೂರು ರಸ್ತೆ, ಇನ್ಫೊಸಿಸ್ ಫೌಂಡೇಶನ್ (ಕೋನಪ್ಪನ ಅಗ್ರಹಾರ), ಎಲೆಕ್ಟ್ರಾನಿಕ್ ಸಿಟಿ, ಬೆರಟೇನ ಅಗ್ರಹಾರ, ಹೊಸ ರಸ್ತೆ, ಸಿಂಗಸಂದ್ರ, ಕೂಡ್ಲು ಗೇಟ್, ಹೊಂಗಸಂದ್ರ, ಬೊಮ್ಮನಹಳ್ಳಿ, ಸೆಂಟ್ರಲ್ ಸಿಲ್ಕ್ ಬೋರ್ಡ್, ಬಿಟಿಎಂ ಲೇಔಟ್, ಜಯದೇವ ಆಸ್ಪತ್ರೆ, ರಾಗಿಗುಡ್ಡ, ಆರ್.ವಿ. ರಸ್ತೆ ನಿಲ್ದಾಣಗಳಿರುವ ಹಳದಿ ಮಾರ್ಗದಲ್ಲಿ 2025ರ ಫೆಬ್ರುವರಿ ಅಂತ್ಯಕ್ಕೆ ರೈಲು ಸಂಚಾರ ಶುರು ಮಾಡುವ ನಿರೀಕ್ಷೆಯನ್ನು ಬಿಎಂಆರ್‌ಸಿಎಲ್ ಇಟ್ಟುಕೊಂಡಿದೆ.



ಬೊಮ್ಮಸಂದ್ರ–ಆರ್‌ವಿ ರಸ್ತೆ ನಡುವಿನ ನಮ್ಮ ಮೆಟ್ರೊ ಹಳದಿ ಮಾರ್ಗಕ್ಕೆ ಪೂರೈಕೆಯಾಗಲಿರುವ ರೈಲಿನ ಅನಾವರಣ ಕಾರ್ಯಕ್ರಮ ಕೋಲ್ಕತ್ತದ ಟಿಟಾಗಢದಲ್ಲಿ ಸೋಮವಾರ ನಡೆದಿದ್ದು, ಸಂಸದ ತೇಜಸ್ವಿ ಸೂರ್ಯ ಭಾಗವಹಿಸಿದ್ದರು

'ಪ್ರತಿ ತಿಂಗಳು ಬರಲಿವೆ ರೈಲು'

ಟಿಆರ್‌ಎಸ್‌ಎಲ್‌ನಿಂದ ಕೋಚ್ ಪೂರೈಕೆ ಆರಂಭವಾಗಿದೆ. ಸದ್ಯ ತಿಂಗಳಿಗೆ ಒಂದು ರೈಲಿನಂತೆ ಪೂರೈಕೆಯಾಗಲಿದೆ. ಎರಡು ಮೂರು ತಿಂಗಳ ಬಳಿಕ ತಿಂಗಳಿಗೆ 2 ರೈಲುಗಳಂತೆ ಪೂರೈಕೆಯಾಗಲಿದೆ ಎಂದು ಸಂಸದ ತೇಜಸ್ವಿ ಸೂರ್ಯ ತಿಳಿಸಿದರು.

ಕೋಲ್ಕತ್ತದ ಟಿಟಾಗಢದಲ್ಲಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬೆಂಗಳೂರಿನ ಸಂಚಾರ ದಟ್ಟಣೆ ನಿಯಂತ್ರಣದಲ್ಲಿ ಮುಖ್ಯ ಪಾತ್ರ ವಹಿಸಲಿರುವ ಹಳದಿ ಮಾರ್ಗದ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಇಂದು ಮಹತ್ವದ ದಿನ ಎಂದು ಹೇಳಿದರು.

ಮೆಟ್ರೊ ದರ ಏರಿಕೆ ಬೇಡ: ಸಂಸದ ಪಿ.ಸಿ. ಮೋಹನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ರೈಲು ಟಿಕೆಟ್ ದರ ಏರಿಕೆ ಮಾಡಿದರೆ ಮಧ್ಯಮ ವರ್ಗ, ಕೆಳ ಮಧ್ಯಮ ವರ್ಗದ ಪ್ರಯಾಣಿಕರಿಗೆ ಭಾರಿ ಹೊರೆಯಾಗಲಿದೆ. ಹಾಗಾಗಿ ದರ ಏರಿಸುವ ಪ್ರಸ್ತಾವದ ಬಗ್ಗೆ ಮರು ಚಿಂತನೆ ನಡೆಸಬೇಕು ಎಂದು ಸಂಸದ ಪಿ.ಸಿ. ಮೋಹನ್ ಅವರು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

ಏಷ್ಯಾದಲ್ಲಿಯೇ ಬೆಂಗಳೂರು ಅತಿ ವಾಹನ ದಟ್ಟಣೆಯನ್ನು ಹೊಂದಿರುವ ನಗರ. ಜನರು ಸಂಚಾರಕ್ಕೆ ಸಾರ್ವಜನಿಕ ಸಾರಿಗೆಯನ್ನು ಬಳಸುವಂತೆ ಮಾಡುವುದು ಅಗತ್ಯ. ಇತ್ತೀಚೆಗೆ ಬಸ್ ಟಿಕೆಟ್ ದರ ಏರಿಸಲಾಗಿದೆ. ಇದೀಗ ಮೆಟ್ರೊ ಕೂಡ ದರ ಏರಿಕೆ ಮಾಡಲು ಮುಂದಾಗಿರುವುದು ಪ್ರಯಾಣಿಕರಿಗೆ ಎರಡೆರಡು ಹೊಡೆತ ನೀಡಿದಂತಾಗುತ್ತದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಬಿಎಂಆರ್‌ಸಿಎಲ್ ಪ್ರಯಾಣೇತರ ವರಮಾನ ಹೆಚ್ಚಿಸಿಕೊಳ್ಳುವತ್ತ ಗಮನ ಹರಿಸಬೇಕು ಎಂದು ಸಲಹೆ ನೀಡಿದ್ದಾರೆ.

ಏರೋ ಇಂಡಿಯಾ: ಹೊಸ ಮೈಲಿಗಲ್ಲಾಗಲಿದೆ 15ನೇ ಆವೃತ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನಲ್ಲಿ 1996ರಿಂದ ಪ್ರತಿ ಎರಡು ವರ್ಷಗಳಿಗೊಮ್ಮೆ ವೈಮಾನಿಕ ಪ್ರದರ್ಶನ ಆಯೋಜಿಸಲಾಗುತ್ತಿದೆ.

ಹಿಂದಿನ ಆವೃತ್ತಿಗಳು 7 ಲಕ್ಷಕ್ಕೂ ಹೆಚ್ಚು ವೀಕ್ಷಕಕರು, 98 ದೇಶಗಳ ಗಣ್ಯರು ಮತ್ತು ಉದ್ಯಮಿಗಳು, ಸ್ಟಾರ್ಟ್-ಅಪ್‌ಗಳು ಮತ್ತು ಎಂಎಸ್‌ಎಂಇಗಳು ಸೇರಿ 809ಕ್ಕೂ ಅಧಿಕ ಪ್ರದರ್ಶಕರನ್ನು ಆಕರ್ಷಿಸಿದ್ದವು. ₹75 ಸಾವಿರ ಕೋಟಿಗೂ ಅಧಿಕ ಮೌಲ್ಯದ ತಂತ್ರಜ್ಞಾನ ವರ್ಗಾವಣೆಗಳು ನಡೆದಿದ್ದವು. 250 ಪಾಲುದಾರಿಕೆಗಳಿಗೆ ಸಾಕ್ಷಿಯಾಗಿದ್ದವು.

15ನೇ ಆವೃತ್ತಿಯು ಇದನ್ನು ಮೀರಿ ಹೊಸ ಮೈಲಿಗಲ್ಲು ಸ್ಥಾಪಿಸಲಿದೆ. ವೈಮಾನಿಕ ಪ್ರದರ್ಶನದ ವ್ಯಾಪ್ತಿ ಮತ್ತು ವೈಭವ ಮತ್ತಷ್ಟು ಹೆಚ್ಚಾಗಲಿದೆ ಎಂದು ಮಾಧ್ಯಮ ಮಾಹಿತಿ ಬ್ಯೂರೊ (ಡಿಫೆನ್ಸ್ ವಿಂಗ್) ವಿಶ್ವಾಸ ವ್ಯಕ್ತಪಡಿಸಿದೆ.

ಅಪಘಾತ: ಬಾಲಕ ಆಸ್ಪತ್ರೆಗೆ ದಾಖಲು

ಗೌರಿಬಿದನೂರು: ತಾಲ್ಲೂಕಿನಲ್ಲಿ ಸೋಮವಾರ ನಡೆದ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡ ಬಾಲಕನೊಬ್ಬನನ್ನು ಬೆಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ.

ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು ರೊಪ್ಪ ಗ್ರಾಮದ ಪವನ್ ಹಾಗೂ ಮಮತಾ ದಂಪತಿ ಮಕ್ಕಳಾದ ವಿಶ್ವಾಸ್, ಶುಭ್ರತ್ ಜೊತೆ ಪುದುಚೇರಿ ಪ್ರವಾಸ ಮುಗಿಸಿಕೊಂಡು ಕಾರಿನಲ್ಲಿ ಸ್ವಗ್ರಾಮಕ್ಕೆ ತೆರಳುತ್ತಿದ್ದರು.

ತಾಲ್ಲೂಕಿನ ತೊಂಡೇಭಾವಿ ಸಮೀಪ ಚಾಲಕನ ನಿಯಂತ್ರಣ ತಪ್ಪಿದ ಅವರ ಕಾರು ನಿಂತಿದ್ದ ಲಾರಿಗೆ ಡಿಕ್ಕಿ ಹೊಡೆಯಿತು. ಕಾರಿನಲ್ಲಿದ್ದ ದಂಪತಿ ಹಾಗೂ ಇಬ್ಬರು ಮಕ್ಕಳು ಗಾಯಗೊಂಡಿದ್ದು, ಗಂಭೀರವಾಗಿ ಗಾಯಗೊಂಡ ಒಬ್ಬ ಮಗನನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ನಿಧನ ವಾರ್ತೆ

ಅಶ್ವತ್ಥಮ್ಮ ಕೃಷ್ಣೇಗೌಡ



ನೆಲಮಂಗಲ: ಪಟ್ಟಣದ ವಿಶಾಲ್ ಶಾಲೆಯ ಸಂಸ್ಥಾಪಕ ಟಿ.ಕೆ.ನರಸೇಗೌಡ ಅವರ ತಾಯಿ ಅಶ್ವತ್ಥಮ್ಮ ಕೃಷ್ಣೇಗೌಡ (85) ಅವರು ವಯೋಸಹಜ ಅನಾರೋಗ್ಯದಿಂದ ಸೋಮವಾರ ಸ್ವಗೃಹದಲ್ಲಿ ನಿಧನರಾದರು.

ಮೃತರಿಗೆ ಮೂವರು ಪುತ್ರರು, ಇಬ್ಬರು ಪುತ್ರಿಯರಿದ್ದಾರೆ.

ತಾಲ್ಲೂಕಿನ ತಡಶೀಘಟ್ಟದಲ್ಲಿ ಮಂಗಳವಾರ ಮಧ್ಯಾಹ್ನ 1ಕ್ಕೆ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

ಸಿದ್ಧಾರೂಢ ಸ್ವಾಮೀಜಿ ಅವರ 190ನೇ ಜಯಂತಿ, ಗುರುನಾಥಾರೂಢ ಸ್ವಾಮೀಜಿ ಅವರ 115ನೇ ಜಯಂತಿ: 'ಸಿದ್ಧಾರೂಢ ಜ್ಯೋತಿ ಯಾತ್ರೆಗೆ ಚಾಲನೆ, ಆಯೋಜನೆ: ಸಿದ್ಧಾರೂಢ ಮಿಷನ್, ಸ್ಥಳ: ಸಿದ್ಧಾರೂಢ ಮಿಷನ್ ರಾಮೋಹಳ್ಳಿಯಿಂದ ಪ್ರಾರಂಭವಾಗಿ ಕುರುಬರಹಳ್ಳಿ ಸಿದ್ಧಾರೂಢ ಉದ್ಯಾನದವರೆಗೆ, ಬೆಳಿಗ್ಗೆ 9ರಿಂದ

12ನೇ ಏಕತಾರಿ ಜಾನಪದ ಸಂಭ್ರಮ–2025: ಉದ್ಘಾಟನೆ: ಎಸ್. ಟಿ. ಸೋಮಶೇಖರ್, ಅಧ್ಯಕ್ಷತೆ: ಗುರುರಾಜ ಹೊಸಕೋಟೆ, ಅತಿಥಿ: ಬಿ.ಕೆ. ಭಾರತಿ ಅಕ್ಕ, ಉಪಸ್ಥಿತಿ: ಅಶೋಕ್ ಛಲವಾದಿ, ರವಿ ಯು.ಎಂ., ರ. ನರಸಿಂಹಮೂರ್ತಿ, ಚಂದ್ರಶೇಖರ್, ಆಯೋಜನೆ: ಮಲೈಮಹದೇಶ್ವರ ಸಾಂಸ್ಕೃತಿಕ ಜಾನಪದ ಕಲಾ ಟ್ರಸ್ಟ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಬೆಳಿಗ್ಗೆ 10ರಿಂದ

ಎಂಟನೆಯ ಸಾಹಿತ್ಯ ಸಮ್ಮೇಳನ ಮತ್ತು ಸಾಂಸ್ಕೃತಿಕ ಸಂಭ್ರಮದ ಉದ್ಘಾಟನೆ, ಸಮ್ಮೇಳನಾಧ್ಯಕ್ಷತೆ: ಕಿರಣ್ ಪ್ರಸಾದ್ ರಾಜನಹಳ್ಳಿ, ಅತಿಥಿಗಳು: ಗೌರಿ ಶ್ರೀನಿವಾಸ್, ಶಾರದಾ ಜಾಜಿ, ಸವಿತಾ ಗಿರಿಧರ್, ಹೇಮಾ ನಾಗರಾಜ್, ವಸಂತ, ವರಲಕ್ಷ್ಮಿ, ಅಶೋಕಕುಮಾರ್, ಅಧ್ಯಕ್ಷತೆ: ರಮ್ಯ ಸೂರಜ್, ಆಯೋಜನೆ: ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10ರಿಂದ

'ಪ್ರಾಕೃತಿಕ ಔಷಧಾಲಯದ ಅನ್ವೇಷಣೆ–ಔಷಧ ಮತ್ತು ಸುಗಂಧೀಯ ಸಸ್ಯಗಳ ಸಾಮರ್ಥ್ಯ ಮತ್ತು ಅವುಗಳ ಸಂರಕ್ಷಣೆ' ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನದ ಉದ್ಘಾಟನೆ: ಎನ್.ಎಸ್. ಬೋಸರಾಜು, ಅತಿಥಿಗಳು: ದಿನೇಶ್ ಗುಂಡೂರಾವ್, ಏಕರೂಪ್ ಕೌರ್, ಸದಾಶಿವ ಪ್ರಭು ಬಿ., ಡಾ.ಎಸ್. ವೆಂಕಟೇಸನ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಪ್ರೊ.ಯು.ಆರ್. ರಾವ್ ವಿಜ್ಞಾನ ಭವನ, ತೋಟಗಾರಿಕೆ ವಿಜ್ಞಾನಗಳ ಕಾಲೇಜು ಮಹಾದ್ವಾರದ ಪಕ್ಕ, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ ಬಡಾವಣೆ, ಬೆಳಿಗ್ಗೆ 10.30



ದಿನೇಶ್ ಗುಂಡೂರಾವ್

ಕೆ. ಸದಾಶಿವ ಶೆಣೈ ಅವರ 'ಲವ್ಲಿ ಬಟ್ ಲೋನ್ಲಿ' ಅಭಿನಯ ಶಾರದೆಯ ಜೀವನಗಾಥೆ ಪುಸ್ತಕ ಬಿಡುಗಡೆ: ಸಿದ್ದರಾಮಯ್ಯ, ಅತಿಥಿಗಳು: ರಮೇಶ್ ಅರವಿಂದ್, ಕೆ.ವಿ. ಪ್ರಭಾಕರ್, ಡಾಲಿ ಧನಂಜಯ್, ಇಂದ್ರಜಿತ್ ಲಂಕೇಶ್, ಕವಿತಾ ಲಂಕೇಶ್, ರಾಕ್‌ಲೈನ್ ವೆಂಕಟೇಶ್, ಜೋಗಿ, ಬೆಲಗೂರು ಸಮೀವುಲ್ಲಾ, ಕೃಷ್ಣಕುಮಾರ್, ಪ್ರೇಮಾ, ಭಾವನಾ, ಪೂಜಾ ಗಾಂಧಿ, ಅಧ್ಯಕ್ಷತೆ: ಶ್ರೀನಾಥ್, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಸಂಜೆ 4.30



ರಮೇಶ್ ಅರವಿಂದ್

ಧನುರ್ಮಾಸದ ಸಂಗೀತ ರುದ್ರ ಸಹಿತ ಇಷ್ಟಲಿಂಗ ಮಹಾಶಿವ ಪೂಜೆ, ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಪ್ರವಚನ: ಸಾನ್ನಿಧ್ಯ: ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು, ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಅವರ 'ವೀರಶೈವಪಂಚಸೂತ್ರಾಣಿ' ಗ್ರಂಥ ಬಿಡುಗಡೆ, ಆಯೋಜನೆ: ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ, ಸ್ಥಳ: ಜಗಜ್ಯೋತಿ ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಸಂಜೆ 6ರಿಂದ

ವಾರ್ಷಿಕೋತ್ಸವ: 'ಏಕವ್ಯಕ್ತಿ ತಾಳಮದ್ದಳೆ' ಆಖ್ಯಾನ: ಕನಕ ಜಾನಕಿ: ಪ್ರಸ್ತುತಿ: ದಿವಾಕರ ಹೆಗಡೆ, ಹಿನ್ನೆಲೆಯಲ್ಲಿ ಭಾಗವತಿಕೆ: ಅನಂತ ಹೆಗಡೆ ದಂತಳಿಗೆ, ಮದ್ದಳೆ: ಅನಂತ ಪದ್ಮನಾಭ ಫಾಠಕ್, ಆಯೋಜನೆ ಮತ್ತು ಸ್ಥಳ: ರಾಮಕೃಷ್ಣ ಮಠ, ಬಸವನಗುಡಿ, ಸಂಜೆ 5ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಬ್ಯಾಡರಹಳ್ಳಿ ಪಿಎಸ್‌ಐ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನ್ಮ ದಿನಾಂಕ ಸಂಬಂಧ ನಕಲಿ ದಾಖಲೆ ನೀಡಿ ಹುದ್ದೆ ಗಿಟ್ಟಿಸಿಕೊಂಡಿರುವ ಆರೋಪ ಎದುರಿಸುತ್ತಿರುವ ಬ್ಯಾಡರಹಳ್ಳಿ ಪೊಲೀಸ್ ಠಾಣೆ ಪಿಎಸ್‌ಐ ಕಾಶಿಲಿಂಗೇಗೌಡ ಅವರನ್ನು ಅಮಾನತುಗೊಳಿಸಿ ಡಿಸಿಪಿ ಗಿರೀಶ್ ಆದೇಶ ಹೊರಡಿಸಿದ್ದಾರೆ.

ಪೊಲೀಸ್ ಇಲಾಖೆಯ ಆಡಳಿತ ವಿಭಾಗದ ಅಧಿಕಾರಿ ಎಸ್. ಟಿ. ಚಂದ್ರಶೇಖರ್ ನೀಡಿರುವ ದೂರಿನ ಮೇರೆಗೆ ಪಿಎಸ್‌ಐ ಕಾಶಿಲಿಂಗೇಗೌಡ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಇದೇ ಪ್ರಕರಣದಲ್ಲಿ ಕಾಶಿಲಿಂಗೇಗೌಡ ಅವರು ಜಾಮೀನು ಪಡೆದುಕೊಂಡು, ಕರ್ತವ್ಯಕ್ಕೆ ಹಾಜರಾಗಿದ್ದರು.

'2017-18ರಲ್ಲಿ ಪಿಎಸ್‌ಐ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿತ್ತು. ಗರಿಷ್ಠ ವಯೋಮಿತಿಯು 2018ರ ಮಾರ್ಚ್ 12ಕ್ಕೆ 30 ವರ್ಷ ಮೀರಿರಬಾರದು ಎಂಬುದಾಗಿ ಅಧಿಸೂಚನೆಯಲ್ಲಿ ತಿಳಿಸಲಾಗಿತ್ತು. ಕಾಶಿಲಿಂಗೇಗೌಡ ಅವರ ಜನ್ಮ ದಿನಾಂಕ 1987ರ ಏಪ್ರಿಲ್ 15 ಆಗಿತ್ತು. ವಯೋಮಿತಿಯ ಅನ್ವಯ ಪಿಎಸ್‌ಐ ಹುದ್ದೆಗೆ ಅರ್ಜಿ ಸಲ್ಲಿಸಲು ಅರ್ಹರಲ್ಲದಿದ್ದರೂ ಸಣಬ ಗ್ರಾಮದ ಅಂಗನವಾಡಿ ಕೇಂದ್ರದ 1987-88 ಮತ್ತು 1988-89ನೇ ಸಾಲಿನ ಚುಚ್ಚುಮದ್ದಿನ ರಿಜಿಸ್ಟರ್‌ನಲ್ಲಿನ ಕೆಲ ಮಾಹಿತಿಯನ್ನು ಅದಲು ಬದಲು ಮಾಡಿದ್ದರು' ಎಂದು ದೂರಿನಲ್ಲಿ ಆರೋಪಿಸಲಾಗಿತ್ತು.

ಉತ್ತರ ಪ್ರದೇಶ ಮೂಲದ ಕುಟುಂಬ • ಮಗಳಿಗೆ ಆರೋಗ್ಯ ಸಮಸ್ಯೆ, ಆರ್ಥಿಕ ಸಂಕಷ್ಟ: ಶಂಕೆ

ಇಬ್ಬರು ಮಕ್ಕಳ ಕೊಂದು ದಂಪತಿ ಆತ್ಮಹತ್ಯೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಬ್ಬರು ಮಕ್ಕಳನ್ನು ಕೊಂದ ಬಳಿಕ ದಂಪತಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಆರ್‌ಎಂವಿ ಎರಡನೇ ಹಂತದಲ್ಲಿರುವ ಮನೆಯೊಂದರಲ್ಲಿ ನಡೆದಿದೆ.

ಮೃತರನ್ನು ಅನೂಪ್ (38), ಅವರ ಪತ್ನಿ ರಾಖಿ (35), ಮತ್ತು ಐದು ಹಾಗೂ ಎರಡು ವರ್ಷ ವಯಸ್ಸಿನ ಇಬ್ಬರು ಮಕ್ಕಳು ಎಂದು ಗುರುತಿಸಲಾಗಿದೆ. ಮಕ್ಕಳಿಬ್ಬರಿಗೂ ವಿಷ ನೀಡಿ ಕೊಂದ ಬಳಿಕ ದಂಪತಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ ಎಂದು ಸದಾಶಿವ ನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಉತ್ತರ ಪ್ರದೇಶದ ಅಲಹಾಬಾದ್‌ನ ಅನೂಪ್, ಪತ್ನಿ ಹಾಗೂ ಇಬ್ಬರು ಮಕ್ಕಳೊಂದಿಗೆ ಕೆಲ ವರ್ಷಗಳಿಂದ ನಗರದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಅನೂಪ್ ಖಾಸಗಿ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಕನ್ಸಲ್ಟೆಂಟ್ ಆಗಿದ್ದರು. ಆರ್ಥಿಕ ನಷ್ಟದಿಂದ ಬೇಸತ್ತು ದಂಪತಿ ಆತ್ಮಹತ್ಯೆಗೆ ನಿರ್ಧರಿಸಿರಬಹುದು ಎಂದು ಪೊಲೀಸರು ಶಂಕೆ ವ್ಯಕ್ತ ಪಡಿಸಿದ್ದಾರೆ.

‘ಬೆಳಿಗ್ಗೆ ಮನೆಗೆಲಸದಾಕೆ ಬಂದಾಗ ಘಟನೆ ಬಗ್ಗೆ ಗೊತ್ತಾಗಿದೆ. ಮೃತರ ಕುಟುಂಬಸ್ಥರಿಗೆ ಮಾಹಿತಿ ನೀಡಲಾಗಿದ್ದು, ಅವರು ನಗರಕ್ಕೆ ಬಂದ ಬಳಿಕ ನಿಖರ ಕಾರಣ ಗೊತ್ತಾಗಲಿದೆ. ಘಟನಾ ಸ್ಥಳದಲ್ಲಿ ಮರಣಪತ್ರ ಪತ್ತೆಯಾಗಿಲ್ಲ’ ಎಂದು ಕೇಂದ್ರ ವಿಭಾಗದ ಡಿಸಿಪಿ ಎಚ್‌.ಟಿ. ಶೇಖರ್ ಮಾಹಿತಿ ನೀಡಿದ್ದಾರೆ.



ಅನೂಪ್ ಮತ್ತು ರಾಖಿ

ಅಪರಾಧ ಸುದ್ದಿ

ಅನೂಪ್ ಅವರ ಮನೆಯಲ್ಲಿ ಮೂರು ಜನ ಕೆಲಸ ಮಾಡುತ್ತಿದ್ದರು. ಮಗಳು ಅನುಪ್ರಿಯಾಗೆ ಆರೋಗ್ಯ ಸಮಸ್ಯೆ ಇತ್ತು. ಈ ವಿಚಾರಕ್ಕೆ ದಂಪತಿ ಬಹಳ ಬೇಸರದಲ್ಲಿದ್ದು, ಖಿನ್ನತೆಗೆ ಒಳಗಾಗಿದ್ದರು. ಬೆಳಿಗ್ಗೆ 11 ಗಂಟೆಗೆ ಪುದುಚ್ಚೇರಿಗೆ ಹೋಗುತ್ತಿದ್ದು, ಬೇಗ ಮನೆಗೆ ಬರುವಂತೆ ಕೆಲಸದವರಿಗೆ ಹೇಳಿದ್ದರು. ಹೀಗಾಗಿ ಕೆಲಸದವರು ಮನೆಗೆ ಬಂದಿದ್ದಾರೆ. ಭಾನುವಾರ ಸಹ ಪ್ಯಾಕಿಂಗ್ ಮಾಡಲು ಕೆಲಸದವರನ್ನು ಕರೆಸಿಕೊಂಡಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಮೂವರು ಕೆಲಸಗಾರರ ಪೈಕಿ ಇಬ್ಬರು ಅಡುಗೆಗೆ ನಿಯೋಜನೆಗೊಂಡಿದ್ದರೆ, ಒಬ್ಬರು ಮಗು ನೋಡಿಕೊಳ್ಳುತ್ತಿದ್ದರು. ಮೂವರಿಗೂ ತಿಂಗಳಿಗೆ ತಲಾ ₹15 ಸಾವಿರ ಸಂಬಳ ನೀಡುತ್ತಿದ್ದರು.

‘ಮೊದಲ ಮಗುವಿಗೆ ಮಾನಸಿಕ ತೊಂದರೆ ಇದ್ದ ಕಾರಣ ದಂಪತಿ ಬಹಳ ಕುಗ್ಗಿ ಹೋಗಿದ್ದರು. ಭಾನುವಾರ ರಾತ್ರಿ 10 ಗಂಟೆಯವರೆಗೂ ದಂಪತಿ ಎಂದಿನಂತೆಯೇ ಇದ್ದರು’ ಎಂದು ಕೆಲಸದವರು ತಿಳಿಸಿದ್ದಾರೆ.

ಮೃತದೇಹಗಳನ್ನು ರಾಮಯ್ಯ ಆಸ್ಪತ್ರೆಗೆ ರವಾನಿಸಲಾಗಿದ್ದು, ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಲಾಗುತ್ತದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಹೋದರನಿಗೆ ಇ–ಮೇಲ್

ಆತ್ಮಹತ್ಯೆಗೂ ಮುನ್ನ ಅನೂಪ್ ಅವರು ತನ್ನ ತಮ್ಮನಿಗೆ ಇ-ಮೇಲ್ ಮಾಡಿದ್ದಾರೆ ಎಂಬುದು ಗೊತ್ತಾಗಿದೆ.

‘ಮಗಳಿಗೆ ಆರೋಗ್ಯ ಸಮಸ್ಯೆ ಇದ್ದು, ಚಿಕಿತ್ಸೆ ಕೊಡಿಸುತ್ತಿದ್ದೇವೆ. ಆಸ್ತಿ ಕೇಳುತ್ತೇವೆ ಎಂಬ ಕಾರಣಕ್ಕೆ ತಂದೆ ಸಹ ನಮ್ಮನ್ನು ಮಾತ ನಾಡಿಸುತ್ತಿಲ್ಲ. ಸಂಬಂಧಿ ರಾಕೇಶ್‌ಗೆ ಹಣ ನೀಡಲಾಗಿತ್ತು. ಅವರು ವಂಚನೆ ಮಾಡಿದ್ದಾರೆ. ಹಲವು ಕಾರಣಗಳಿಂದ ಖಿನ್ನತೆಗೆ ಒಳಗಾಗಿದ್ದೇವೆ’ ಎಂದು ಇ-ಮೇಲ್ ನಲ್ಲಿ ತಿಳಿಸಿದ್ದಾರೆ ಎಂಬುದು ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರತ್ಯೇಕ ಅಪಘಾತ: ಮೂವರ ಸಾವು



ಬೆಂಗಳೂರು: ಪತ್ಯೇಕ ರಸ್ತೆ ಅಪಘಾತದಲ್ಲಿ ಬಾಲಕ ಸೇರಿದಂತೆ ಮೂವರು ಮೃತಪಟ್ಟಿರುವ ಘಟನೆ ನಗರದಲ್ಲಿ ನಡೆದಿದೆ.

ನೆಲಮಂಗಲ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಜಾಸ್ ಟೋಲ್ ಬಳಿಯ ಸರ್ವಿಸ್ ರಸ್ತೆಯಲ್ಲಿ ಟಿಪ್ಪರ್ ಲಾರಿ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಬಾಬು (23) ಮೃತಪಟ್ಟಿದ್ದಾರೆ.

ರಾತ್ರಿ 10.30ರ ಸುಮಾರಿಗೆ ಕೆಲಸ ಮುಗಿಸಿ ಮನೆಗೆ ಹೋಗುವ ವೇಳೆ ಚಾಲಕ ಟಿಪ್ಪರ್ ಅನ್ನು ಹಿಂಬದಿ ಚಲಾಯಿಸಿದ್ದಾರೆ. ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಬಾಬು ಅವರ ತಲೆ ಮೇಲೆ ವಾಹನದ ಚಕ್ರ ಹರಿದಿದೆ. ತೀವ್ರ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟರು. ಪೊಲೀಸರು ಟಿಪ್ಪರ್ ಚಾಲಕನನ್ನು ಬಂಧಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಟ್ರ್ಯಾಕ್ಟರ್ ಡಿಕ್ಕಿ : ತಂದೆಯ ಜತೆ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ ವೇಳೆ ಟ್ರ್ಯಾಕ್ಟರ್ ಡಿಕ್ಕಿ ಹೊಡೆದ ಪರಿಣಾಮ ಬಾಲಕ ಗಜೇಂದ್ರ (10) ಮೃತಪಟ್ಟಿರುವ ಘಟನೆ ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಠಾಣಾ ವ್ಯಾಪ್ತಿಯ ಹಗದೂರಿನ ಮುಖ್ಯ ರಸ್ತೆಯಲ್ಲಿ ಬೆಳಿಗ್ಗೆ ಶಾಲೆಗೆ ತಂದೆ ಜತೆ ದ್ವಿಚಕ್ರ ವಾಹನದಲ್ಲಿ ಹೋಗುವ ವೇಳೆ ವಾಟರ್ ಟ್ಯಾಂಕರ್ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡು ಗಜೇಂದ್ರ ಮೃತಪಟ್ಟಿದ್ದು, ತಂದೆಗೆ ಸಣ್ಣ ಪುಟ್ಟ ಗಾಯಗಳಾಗಿವೆ. ತಂದೆಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಬೈಕ್‌ನಿಂದ ಬಿದ್ದ ಉದ್ಯೋಗಿ: ಆಯತಪ್ಪಿ ಕೆಳಗೆ ಬಿದ್ದು ಖಾಸಗಿ ಕಂಪನಿ ಉದ್ಯೋಗಿಯೊಬ್ಬರು ಮೃತಪಟ್ಟಿರುವ ಘಟನೆ ಜ್ಞಾನಭಾರತಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ವಿಶ್ವೇಶ್ವರಯ್ಯ ಲೇಔಟ್ ನಿವಾಸಿ ಅಶೀಶ್ (30) ಮೃತ ವ್ಯಕ್ತಿ. ಜನವರಿ 4ರ ತಡರಾತ್ರಿ 1 ಗಂಟೆ ಸುಮಾರಿಗೆ ಬೈಕ್‌ನಲ್ಲಿ ಜ್ಞಾನಭಾರತಿ ಮೆಟ್ರೊ ನಿಲ್ದಾಣದ ಕಡೆಯಿಂದ ವಿಶ್ವವಿದ್ಯಾಲಯ ಕ್ಯಾಂಪಸ್ ಕಡೆ ಹೋಗುತ್ತಿದ್ದರು. ಈ ವೇಳೆ ನಿಯಂತ್ರಣ ತಪ್ಪಿ ಕೆಳಗೆ ಬಿದ್ದು ಗಾಯಗೊಂಡಿದ್ದರು. ಅವರನ್ನು ಗಮನಿಸಿದ ಸ್ಥಳೀಯರು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ.

ವಿದ್ಯಾರ್ಥಿನಿ ಸಾವು: ಪತ್ತೆಯಾಗದ ಕಟ್ಟಡದ ಮಾಲೀಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರ್ಮಾಣ ಹಂತದ ಕಟ್ಟಡದ ಸೆಂಟ್ರಿಂಗ್‌ಗೆ ಅಳವಡಿಸಿದ್ದ ಮರದ ಕಂಬಗಳು ಬಿದ್ದು ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿ ತೇಜಸ್ವಿನಿ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ತಲೆಮರೆಸಿಕೊಂಡಿರುವ ಕಟ್ಟಡದ ಮಾಲೀಕ, ಗುತ್ತಿಗೆದಾರ ಮತ್ತು ಕಾರ್ಮಿಕರ ಪತ್ತೆ ಕಾರ್ಯವನ್ನು ವಿ.ವಿ.ಪುರ ಠಾಣೆ ಪೊಲೀಸರು ಮುಂದುವರಿಸಿದ್ದಾರೆ.

ಮೃತ ವಿದ್ಯಾರ್ಥಿನಿ ಅವರ ತಂದೆ ಸುಧಾಕರ್ ರಾವ್ ನೀಡಿದ ದೂರಿನ ಮೇರೆಗೆ ಕಟ್ಟಡ ಮಾಲೀಕ ಹರ್ಷ, ಗುತ್ತಿಗೆದಾರ ಚಂದ್ರಶೇಖರ್, ಎಂಜಿನಿಯರ್, ಬಿಬಿಎಂಪಿ ಅಧಿಕಾರಿಗಳ ವಿರುದ್ಧ ನಿರ್ಲಕ್ಷ್ಯ ಆರೋಪದಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಿದ್ದ ಪಾಲಿಕೆ ಅಧಿಕಾರಿಗಳು ಸುರಕ್ಷತಾ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಿರಲಿಲ್ಲ. ಹಾಗಾಗಿ ಅಧಿಕಾರಿಗಳ ನಿರ್ಲಕ್ಷ್ಯವೂ ಇದೆ. ಬಿಬಿಎಂಪಿ ಕಚೇರಿಗೆ ತೆರಳಿ ಮಾಹಿತಿ ಕಲೆ ಹಾಕಲಾಗಿದೆ ಎಂದು ಪೊಲೀಸರು ತಿಳಿಸಿದರು.

ಭಾನುವಾರ ರಾತ್ರಿ ಗುತ್ತಿಗೆದಾರ ಚಂದ್ರಶೇಖರ್ ಅವರನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸಲಾಯಿತು. ಬಳಿಕ ಜಾಮೀನಿನ ಮೇಲೆ ಬಿಡುಗಡೆಗೊಳಿಸಲಾಗಿದೆ ಎಂದರು.

ಕಟ್ಟಡದ ಮಾಲೀಕ ಹರ್ಷ ಸೇರಿದಂತೆ ಇತರರಿಗೆ ವಿಚಾರಣೆಗೆ ಹಾಜರಾಗುವಂತೆ ಪೊಲೀಸರು ನೋಟಿಸ್ ಜಾರಿಗೊಳಿಸಿದ್ದಾರೆ. ಆದರೂ ವಿಚಾರಣೆಗೆ ಗೈರಾಗಿದ್ದಾರೆ.

ಕಟ್ಟಡದಿಂದ ಬಿದ್ದು ವಿದ್ಯಾರ್ಥಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸ್ಟೆಲ್ ಕಟ್ಟಡದ ಮೂರನೇ ಮಹಡಿಯಿಂದ ಆಕಸ್ಮಿಕವಾಗಿ ಬಿದ್ದು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂ) ಸ್ನಾತಕೋತ್ತರ ವಿದ್ಯಾರ್ಥಿಯೊಬ್ಬ ಮೃತಪಟ್ಟಿರುವ ಘಟನೆ ಬನ್ನೇರುಘಟ್ಟ ರಸ್ತೆಯಲ್ಲಿ ನಡೆದಿದೆ.

ಎಂಬಿಎ ದ್ವಿತೀಯ ವರ್ಷದ ವಿದ್ಯಾರ್ಥಿಯಾಗಿದ್ದ ಗುಜರಾತ್‌ನ ನಿಲಯ್ ಕೈಲಾಶ್‌ಭಾಯ್ ಪಟೇಲ್ (28) ಮೃತ ದುರ್ದೈವಿ.

ನಿಲಯ್ ತನ್ನ ಜನ್ಮದಿನವಿದ್ದ ಕಾರಣ ಶನಿವಾರ ಸ್ನೇಹಿತರೊಂದಿಗೆ ಹೊರಗಡೆ ತೆರಳಿದ್ದ. ಬಳಿಕ ಹಾಸ್ಟೆಲ್‌ನಲ್ಲಿರುವ ಸ್ನೇಹಿತನ ಕೊಠಡಿಯಲ್ಲಿ ನಿಲಯ್ ಜನ್ಮದಿನದ ಸಂಭ್ರಮಾಚರಣೆ ನಡೆಸಲಾಗಿತ್ತು. ತನ್ನ ಕೋಣೆಗೆ ಹಿಂತಿರುಗುತ್ತಿದ್ದ ವೇಳೆ ಅವಘಡ ಸಂಭವಿಸಿದೆ. ಭಾನುವಾರ ಮೃತದೇಹ ನೋಡಿದ ಭದ್ರತಾ ಸಿಬ್ಬಂದಿ, ಪೊಲೀಸರ ಗಮನಕ್ಕೆ ತಂದಿದ್ದಾರೆ.



ನಿಲಯ್ ಕೈಲಾಶ್‌ಭಾಯ್ ಪಟೇಲ್

‘ಸ್ನೇಹಿತರ ಕೊಠಡಿಯಲ್ಲಿ ಜನ್ಮದಿನ ಆಚರಿಸಿದ ಬಳಿಕ ರಾತ್ರಿ 11.30ರ ಸುಮಾರಿಗೆ ಅಲ್ಲಿಂದ ಹೊರಟು ‘ಎಫ್’ ಬ್ಲಾಕ್‌ನಲ್ಲಿರುವ ತನ್ನ ಕೋಣೆಗೆ ವಾಪಸಾಗುವಾಗ ಘಟನೆ ಸಂಭವಿಸಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ದೃಢಪಟ್ಟಿದೆ. ಹಾಸ್ಟೆಲ್‌ನ ಸಿ.ಸಿ.ಟಿ.ವಿ. ಕ್ಯಾಮೆರಾಗಳ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ನಿಲಯ್ ಪೋಷಕರು ನೀಡಿದ ದೂರಿನ ಮೇರೆಗೆ ಮೈಕೋ ಲೇಔಟ್ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ.

ಲಿಡ್ಕರ್ ಕಚೇರಿ ಅಧಿಕಾರಿಗೆ ಜೀವ ಬೆದರಿಕೆ ಆರೋಪ

ನಾಲ್ವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಡ್ಕರ್ ಕಚೇರಿಯ ಉಪ ಪ್ರಧಾನ ವ್ಯವಸ್ಥಾಪಕ ಮೋನಪ್ಪ ಕಟ್ಟಿಮನಿ ಹಾಗೂ ಇತರೆ ಅಧಿಕಾರಿಗಳನ್ನು ನಿಂದಿಸಿ, ಪ್ರಾಣ ಬೆದರಿಕೆ ಹಾಕಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಕೆ.ಆರ್. ದೇವರಾಜು ಸೇರಿ ನಾಲ್ವರ ವಿರುದ್ಧ ಹೈಗ್ರೌಂಡ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.



ಮೋನಪ್ಪ ಕಟ್ಟಿಮನಿ ಅವರು ನೀಡಿರುವ ದೂರಿನ ಮೇರೆಗೆ ಡಾ.ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ವಿವಿಧೋದ್ದೇಶಗಳ ಅಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಆರ್. ದೇವರಾಜು, ಲಿಂಗರಾಜು, ವಿಲಾಸ್ ಕೆರೆಹೊಲ ಮತ್ತು ಎಸ್.ಡಿ. ಬಾಲರಾಜ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಡಿಯೊ ಸಮೇತ ದೂರು: ‘ಜನವರಿ 3ರಂದು ಮಧ್ಯಾಹ್ನ 12.30 ರ ಸಮಯದಲ್ಲಿ ವಸಂತನಗರದಲ್ಲಿರುವ ಲಿಡ್ಕರ್ ಪ್ರಧಾನ ಕಚೇರಿಗೆ ದೇವರಾಜು ಮತ್ತು ಇತರೆ ನಾಲ್ವರು ಪರಿಶಿಷ್ಟ ಸಮುದಾಯದ ಹೆಸರು ಹೇಳಿಕೊಂಡು ಬಂದರು. ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಅಡ್ಡಿಯಾಗುವಂತೆ ನನ್ನನ್ನು ಹಾಗೂ ಇಲಾಖೆಯ ಸಚಿವರನ್ನು ನಿಂದಿಸಿ, ನಿಮ್ಮನ್ನು ಮುಗಿಸುವುದಾಗಿ ಬೆದರಿಕೆ ಹಾಕಿದರು’ ಎಂದು ಮೋನಪ್ಪ ದೂರಿನಲ್ಲಿ ಆರೋಪಿಸಿದ್ದಾರೆ.

‘ಈ ಹಿಂದೆಯೂ ಇದೇ ರೀತಿ ಅಡ್ಡಿ ಮಾಡಿದ್ದರು. ಇದರಿಂದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಮಾನಸಿಕ ಕಿರುಕುಳವಾಗುತ್ತಿದ್ದು, ಕರ್ತವ್ಯ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಕರ್ತವ್ಯಕ್ಕೆ ಅಡ್ಡಿಪಡಿಸಿ, ಅವಾಚ್ಯ ಶಬ್ಧಗಳಿಂದ ನಿಂದಿಸಿ, ಜೀವ ಬೆದರಿಕೆ ಹಾಕಿದ್ದಾರೆ’ ಎಂದು ದೂರಿನಲ್ಲಿ ಉಲ್ಲೇಖಿಸಿರುವ ಮೋನಪ್ಪ, ಘಟನೆಯ ವಿಡಿಯೊವನ್ನು ಲಗತ್ತಿಸಿ, ಆರೋಪಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಕೋರಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಿಗೆ ನೋಟಿಸ್ ನೀಡಿ, ಸದ್ಯದಲ್ಲಿಯೇ ವಿಚಾರಣೆ ನಡೆಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಹೊಯ್ಸಳ ವೃತ್ತದ ಬಳಿ ಬಿಬಿಎಂಪಿ ಕಾರ್ಯಾಚರಣೆ

ಪಾದಚಾರಿ ಮಾರ್ಗ ತೆರವು

ಪ್ರಜಾವಾಣಿ ವಾರ್ತೆ

ಕೆಂಗೇರಿ: ಹೊಯ್ಸಳ ವೃತ್ತದ ಬಳಿ ಕಾರ್ಯಾಚರಣೆ ನಡೆಸಿದ ಬಿಬಿಎಂಪಿ ಅಧಿಕಾರಿಗಳು ವ್ಯಾಪಾರಸ್ಥರಿಂದ ಒತ್ತುವರಿಯಾಗಿದ್ದ ಪಾದಚಾರಿ ಮಾರ್ಗವನ್ನು ತೆರವುಗೊಳಿಸಿದರು.

ಹೊಯ್ಸಳ ವೃತ್ತದ ಬಳಿಯ 80 ಅಡಿ ರಸ್ತೆ ಪಾದಚಾರಿ ಮಾರ್ಗದಲ್ಲಿ ಚಾವಣಿ, ಮೆಟ್ಟಿಲು ಮತ್ತು ನೆಲಹಾಸು ಗಳಲ್ಲಿ ಕಟ್ಟೆಗಳನ್ನು ನಿರ್ಮಿಸಿಕೊಂಡು ವ್ಯಾಪಾರ ನಡೆಸುತ್ತಿದ್ದರು. ಇದರಿಂದ ನಾಗರಿಕರು ರಸ್ತೆಯಲ್ಲೇ ಸಂಚರಿಸುವ ಸ್ಥಿತಿ ನಿರ್ಮಾಣವಾಗಿತ್ತು. ಕೆಲವು ತಿಂಗಳ ಹಿಂದೆಯೂ ಕಾರ್ಯಾಚರಣೆ ನಡೆಸಿದ್ದ ಬಿಬಿಎಂಪಿ ಅಧಿಕಾರಿಗಳು ಒತ್ತುವರಿ ಯಾಗಿದ್ದ ಕೆಲ ಜಾಗಗಳನ್ನು ತೆರವುಗೊಳಿಸಿ ವ್ಯಾಪಾರಿಗಳಿಗೆ ಎಚ್ಚರಿಕೆ ನೀಡಿದ್ದರು.

ಇದಾದ ನಂತರವೂ ಹೊಯ್ಸಳ ವೃತ್ತ ಸೇರಿದಂತೆ ಕೆಂಗೇರಿ ಉಪ ನಗರದ ಬಹುತೇಕ ಮುಖ್ಯರಸ್ತೆಗಳಲ್ಲಿ ಇದೇ ಪರಿಸ್ಥಿತಿ ಮುಂದುವರೆದಿತ್ತು. ಶನಿವಾರ ಎಇಇ ಚಾಮರಾಜ್ ನೇತೃತ್ವದಲ್ಲಿ ಜೆಸಿಬಿಯೊಂದಿಗೆ ಕಾರ್ಯಾಚರಣೆ ನಡೆಸಿದ ಬಿಬಿಎಂಪಿ ಸಿಬ್ಬಂದಿ 80 ಅಡಿ ರಸ್ತೆಯಲ್ಲಿದ್ದ ಒತ್ತುವರಿಯನ್ನು ತೆರವು ಗೊಳಿಸಿದರು.



ಹೊಯ್ಸಳ ವೃತ್ತದ ಬಳಿಯ 80 ಅಡಿ ರಸ್ತೆ ಪಾದಚಾರಿ ಮಾರ್ಗವನ್ನು ತೆರವುಗೊಳಿಸಲಾಯಿತು

ಬಿಬಿಎಂಪಿ ಸುದ್ದಿ

ವ್ಯಾಪಾರಿಗಳ ಆಕ್ರೋಶ: ‘ಬೀದಿ ಬದಿ ವ್ಯಾಪಾರಿಗಳಿಗೆ ಸಹಕಾರ ನೀಡುವ ಅಧಿಕಾರಿಗಳು ಬಾಡಿಗೆ, ತೆರಿಗೆ ಮತ್ತು ಆದಾಯ ತೆರಿಗೆ ಪಾವತಿಸುವ ವ್ಯಾಪಾರಿಗಳಿಗೆ ಅನಗತ್ಯವಾಗಿ ತೊಂದರೆ ನೀಡುತ್ತಿದ್ದಾರೆ ಎಂದು ವ್ಯಾಪಾರಿಗಳು ಆಕ್ರೋಶ ವ್ಯಕ್ತಪಡಿಸಿದರು.

ಮಳೆ ನೀರು ತಡೆಗಟ್ಟಲು ಚಾವಣಿ ನಿರ್ಮಿಸಲಾಗಿತ್ತು. ಈ ಸೌಕರ್ಯವನ್ನು ತೆರವುಗೊಳಿಸಿದರೆ ವ್ಯಾಪಾರ ನಡೆಸುವುದಾದರೂ ಹೇಗೆ’ ಎಂದು ವ್ಯಾಪಾರಿಗಳು ಪ್ರಶ್ನಿಸಿದರು.

ನ್ಯಾಯಮೂರ್ತಿ ಹೆಸರು ದುರ್ಬಳಕೆ: ಮಹಿಳೆ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪರಾಧ ಪ್ರಕರಣವೊಂದರಲ್ಲಿ ಆರೋಪಿಗೆ ಜಾಮೀನು ಮಂಜೂರು ಮಾಡುವ ಸಂಬಂಧ ಹೈಕೋರ್ಟ್ ನ್ಯಾಯಮೂರ್ತಿಯೊಬ್ಬರ ಹೆಸರನ್ನು ದುರ್ಬಳಕೆ ಮಾಡಿಕೊಂಡ ಆರೋಪದಡಿ ಆರತಿ ಅವರನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿ ಆರತಿ ಪ್ರಕರಣವೊಂದರ ಆರೋಪಿಗೆ ಜಾಮೀನು ಕೊಡಿಸುವುದಾಗಿ ನ್ಯಾಯಮೂರ್ತಿಯೊಬ್ಬರ ಹೆಸರು ದುರ್ಬಳಕೆ ಮಾಡಿಕೊಂಡು ಆರೋಪಿಯ ತಾಯಿಯಿಂದ ಹಣ ಪಡೆದಿದ್ದರು ಎಂಬ ಆರೋಪ ಇತ್ತು. ಸದ್ಯ ಆಕೆಯ ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಪ್ರಕರಣ ಸಂಬಂಧ ಹೈಕೋರ್ಟ್‌ನ ಕಾನೂನು ವಿಭಾಗದ ಜಂಟಿ ರಿಜಿಸ್ಟ್ರಾರ್ ಎಂ.ರಾಜೇಶ್ವರಿ ಅವರು ನೀಡಿದ ದೂರಿನ ಮೇರೆಗೆ ಹೈಕೋರ್ಟ್ ವಕೀಲೆ ದಯೀನಾಬಾನು ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಸೆಕ್ಷನ್ 318 (4) (ವಂಚನೆ) ವಿಧಾನಸೌಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

ಡಾ.ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದ ಘಟಿಕೋತ್ಸವ

277 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಮಲ್ಲತ್ತಹಳ್ಳಿಯ ಡಾ.ಅಂಬೇಡ್ಕರ್ ತಾಂತ್ರಿಕ ಮಹಾ ವಿದ್ಯಾಲಯದ 11ನೇ ಘಟಿಕೋತ್ಸವದಲ್ಲಿ 277 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಕಂಪ್ಯೂಟರ್ ಅಪ್ಲಿಕೇಷನ್ ವಿಭಾಗದಲ್ಲಿ ಮೊದಲ ರ್‍ಯಾಂಕ್ ಗಳಿಸಿದ ಮಧುಶ್ರೀ, ಬಿಸಿನೆಸ್ ಅಡ್ಮಿನಿಸ್ಟ್ರೇಷನ್ ವಿಭಾಗದ ಶರಣ್ಯ ಹಾಗೂ ಸ್ಟ್ರಕ್ಚರಲ್ ಎಂಜಿನಿಯರಿಂಗ್ ವಿಭಾಗದ ಲೋಹಿತ್ ಕೆ.ಎಸ್ ಅವರಿಗೆ ಪ್ರಶಸ್ತಿ ಫಲಕ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿ ಭಾರತೀಯ ಸಾಂಖ್ಯಿಕ ಸಂಸ್ಥೆಯ ಬೆಂಗಳೂರು ಕೇಂದ್ರದ ಮುಖ್ಯಸ್ಥ ಪ್ರೊ.ಬಿ.ಎಸ್.ದಯಾ ಸಾಗರ್ ಮಾತನಾಡಿ, ‘ಶಿಕ್ಷಣವು ಉದ್ಯೋಗ ಗಳಿಕೆಯ ಸಾಧನವಾಗಬಾರದು. ನಮ್ಮ ಸಾಮಾಜಿಕ ಹೊಣೆಗಾರಿಕೆ ಹಾಗೂ ಸಾಮಾಜಿಕ ಗುರುತನ್ನು ರೂಪಿಸುವ ಚೈತನ್ಯವಾಗಿ ಬದಲಾಗಬೇಕು’ ಎಂದು ಅಭಿಪ್ರಾಯಪಟ್ಟರು.



ಕಂಪ್ಯೂಟರ್ ಅಪ್ಲಿಕೇಷನ್ ವಿಭಾಗದಲ್ಲಿ ಮೊದಲ ರ್‍ಯಾಂಕ್ ಪಡೆದ ಮಧುಶ್ರೀ ಅವರಿಗೆ ಪ್ರಶಸ್ತಿ ಫಲಕ ನೀಡಿ ಸನ್ಮಾನಿಸಲಾಯಿತು

ಕಾಲೇಜು ಶಿಕ್ಷಣಕ್ಕೆ ಬಹುತೇಕ ವಿದಾಯ ಹಾಗೂ ಔದ್ಯೋಗಿಕ ಜೀವನದ ಆರಂಭಕ್ಕೆ ಮುನ್ನುಡಿ ಬರೆಯುವ ಘಟಿಕೋತ್ಸವವು, ಜೀವನದ ಪರ್ವ ಕಾಲವಾಗಿದೆ. ಯಾವುದೇ ನಕಾರಾತ್ಮಕ ಚಿಂತನೆ ಹಾಗೂ ಮಾತುಗಳಿಗೆ ಆಸ್ಪದೆ ನೀಡದೆ ಆತ್ಮ ವಿಶ್ವಾಸದೊಂದಿಗೆ ಮುನ್ನಡೆದರೆ ಯಶಸ್ಸು ನಮ್ಮದಾಗುತ್ತದೆ ಎಂದು ಹೇಳಿದರು.

ಪಿವಿಪಿ ಟ್ರಸ್ಟ್ ಅಧ್ಯಕ್ಷ ಹಾಗೂ ನಿವೃತ್ತ ಡಿಜಿಪಿ ಎಸ್.ಮರಿಸ್ವಾಮಿ ಪ್ರತಿಜ್ಞಾವಿಧಿ ಬೋಧಿಸಿದರು. ಪಿವಿಪಿ ಟ್ರಸ್ಟ್ ಕಾರ್ಯದರ್ಶಿ ಎಸ್.ಶಿವಮಲ್ಲು, ಖಜಾಂಚಿ ಪ್ರೊ.ಎಂ.ಮಹದೇವ್, ಧರ್ಮದರ್ಶಿ ಬಿ.ಎನ್.ಉಮೇಶ್, ಡಾ.ಎಲ್.ಎಂ. ಪಟ್ನಾಯಕ್, ಪ್ರಾಂಶುಪಾಲ ತಿಪ್ಪೇಸ್ವಾಮಿ.ಎಂ.ಎನ್. ಉಪ ಪ್ರಾಂಶುಪಾಲ ಸಿದ್ದರಾಜು ಮತ್ತಿತರರು ಉಪಸ್ಥಿತರಿದ್ದರು.

‘ಕಾಂಗ್ರೆಸ್ ಈಗ ‘ಪೇ ಸಿಎಂ’ ಅಭಿಯಾನ ನಡೆಸಲಿ’

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ವಿಧಾನಸಭಾ ಚುನಾವಣೆ ಸಮಯದಲ್ಲಿ ಬಿಜೆಪಿ ವಿರುದ್ಧ ಕಾಂಗ್ರೆಸ್ ‘ಪೇ ಸಿಎಂ’ ಆಂದೋಲನ ನಡೆಸಿದ ಮಾದರಿಯಲ್ಲಿಯೇ ರಾಜ್ಯದಲ್ಲಿ ಈಗ ನಡೆಯುತ್ತಿರುವ ಲೂಟಿ ವಿರುದ್ಧವೂ ಆಂದೋಲನ ನಡೆಸಲಿ ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್‌ಕುಮಾರಸ್ವಾಮಿ ಸವಾಲು ಹಾಕಿದ್ದಾರೆ.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಳೆದ ಒಂದೂವರೆ ವರ್ಷದಲ್ಲಿ ಕಾಂಗ್ರೆಸ್ ಸರ್ಕಾರದಲ್ಲಿ ನಡೆದಷ್ಟು ಭ್ರಷ್ಟಾಚಾರ ಬೇರೆ ಯಾವ ಸರ್ಕಾರದ ಅವಧಿಯಲ್ಲೂ ನಡೆದಿಲ್ಲ. ಕಾಂಗ್ರೆಸ್ ಸರ್ಕಾರದಲ್ಲಿ ಪ್ರತಿನಿತ್ಯ ಒಂದಿಲ್ಲ ಒಂದು ಹಗರಣ ಬೆಳಕಿಗೆ ಬರುತ್ತಿವೆ’ ಎಂದು ದೂರಿದರು.

‘ನನ್ನ ಸೋಲಿನಿಂದ ಕುಮಾರಸ್ವಾಮಿ ಹತಾಶರಾಗಿಲ್ಲ. ರಾಜ್ಯಕ್ಕೆ ಯಾವ ಉದ್ಯೋಗ ಮತ್ತು ಕೈಗಾರಿಕೆ ತರಬೇಕು ಎಂದು ನಿದ್ದೆಗೆಡುತ್ತಿದ್ದಾರೆ. ನನ್ನ ಸೋಲಿಗಾಗಿ ನಿದ್ದೆಗೆಟ್ಟಿಲ್ಲ’ ಎಂದು ಸಚಿವ ಎಂ.ಬಿ. ಪಾಟೀಲ ಟೀಕೆಗೆ ಉತ್ತರಿಸಿದರು.

ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ 2025: ಮತದಾರರ ಅಂತಿಮ ಪಟ್ಟಿ ಪ್ರಕಟ

ನಗರದಲ್ಲಿ 1.02 ಕೋಟಿ ಮತದಾರರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ– 2025ರಂತೆ ನಗರ ಜಿಲ್ಲೆಯ ಮತದಾರರ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಒಟ್ಟು 1.02 ಕೋಟಿ ಮತದಾರರಿದ್ದಾರೆ.

2024ರ ಜನವರಿ 22ರ ಮತದಾರರ ಅಂತಿಮ ಪಟ್ಟಿಯಂತೆ ನಗರದಲ್ಲಿ 98.43 ಲಕ್ಷ ಮತದಾರರಿದ್ದರು. ಏಪ್ರಿಲ್‌ನಲ್ಲಿ ನಡೆದ ಲೋಕಸಭೆ ಚುನಾವಣೆ ಸಂದರ್ಭದಲ್ಲಿ 1.01 ಕೋಟಿ ಮತದಾರರಿದ್ದರು. ಇದಕ್ಕೆ ಹೋಲಿಸಿದರೆ, 2025ರ ಜನವರಿ 6ರಂದು ಪ್ರಕಟಿಸಿರುವ ಮತದಾರರ ಅಂತಿಮ ಪಟ್ಟಿಯಲ್ಲಿ ಈ ಸಂಖ್ಯೆ ಒಂದು ಲಕ್ಷದಷ್ಟು ವೃದ್ಧಿಯಾಗಿದೆ. ಅಕ್ಟೋಬರ್ 29ರಂದು ಪ್ರಕಟವಾಗಿದ್ದ ಕರಡು ಪಟ್ಟಿಗಿಂತ 23,488 ಮತದಾರರು ಹೆಚ್ಚಾಗಿದ್ದಾರೆ.

‘ಮತದಾರರ ಅಂತಿಮ ಪಟ್ಟಿಯನ್ನು ನಗರದ ಎಲ್ಲ 28 ವಿಧಾನಸಭಾ ಕ್ಷೇತ್ರಗಳ ಮತದಾರರ ನೋಂದಣಾಧಿಕಾರಿ ಕಚೇರಿ, ಸಹಾಯಕ ಮತದಾರರ ನೋಂದಣಾಧಿಕಾರಿಗಳ ಕಚೇರಿ ಹಾಗೂ ವಾರ್ಡ್ ಕಚೇರಿಗಳಲ್ಲಿ ಪ್ರಕಟಿಸಲಾಗಿದೆ. ಸಾರ್ವಜನಿಕರಿಗೆ ಮತದಾರರ ಪಟ್ಟಿಯನ್ನು ಪರಿಶೀಲಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ’ ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಸುದ್ದಿಗೋಷ್ಠಿಯಲ್ಲಿ ಸೋಮವಾರ ತಿಳಿಸಿದರು.

ಮತದಾರರ ಅಂತಿಮ ಪಟ್ಟಿಯನ್ನು ಮುಖ್ಯ ಚುನಾವಣಾಧಿಕಾರಿ ಕಚೇರಿಯ ವೆಬ್‌ಸೈಟ್ (www.ceokarnataka.kar.nic.in) ಮತ್ತು ಬಿಬಿಎಂಪಿ ವೆಬ್‌ಸೈಟ್ (www.bbmp.gov.in)ನಲ್ಲೂ ಪರಿಶೀಲಿಸಿಕೊಳ್ಳಬಹುದು. ಮೊಬೈಲ್‌ನಲ್ಲಿ ವಿಎಚ್‌ಎ (Voter Helpline App) ಅಥವಾ ವೆಬ್ ಪೋರ್ಟಲ್ Voters.eci.gov.in ನಲ್ಲೂ ಮಾಹಿತಿಯನ್ನು ಖಾತರಿಪಡಿಸಿಕೊಳ್ಳಬಹುದು. e-EPIC ಆ್ಯಪ್‌ನಲ್ಲಿ ಮತಗಟ್ಟೆ, ಶೇಕಡವಾರು ಮತದಾನದ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ ಎಂದು ಹೇಳಿದರು.

43,902 ಮತದಾರರು ಸೇರ್ಪಡೆಯಾಗಿದ್ದು, ಅದರಲ್ಲಿ 22,755 ಮತದಾರರ ಮಾಹಿತಿಯನ್ನು ತಿದ್ದುಪಡಿ ಮಾಡಲಾಗಿದೆ. 20,414 ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ. ಪುಲಕೇಶಿನಗರ ವಿಧಾನಸಭೆ ಕ್ಷೇತ್ರದಲ್ಲಿ 1,385, ಯಶವಂತಪುರದಲ್ಲಿ 1,273, ಮಹದೇವಪುರದಲ್ಲಿ 1,224, ಬ್ಯಾಟರಾಯನಪುರದಲ್ಲಿ 1,083, ಬೆಂಗಳೂರು ದಕ್ಷಿಣದಲ್ಲಿ 1,078, ರಾಜರಾಜೇಶ್ವರಿ ನಗರ ವಿಧಾನಸಭೆ ಕ್ಷೇತ್ರದಲ್ಲಿ 1,014, ಆನೇಕಲ್ ವಿಧಾನಸಭೆ ಕ್ಷೇತ್ರದಲ್ಲಿ 1,553 ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಮಾಹಿತಿ ನೀಡಿದರು.

ಚುನಾವಣಾ ವಿಭಾಗದ ವಿಶೇಷ ಆಯುಕ್ತರಾದ ಆರ್. ಸೆಲ್ವಮಣಿ, ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಗಳಾದ ವಿನೋತ್ ಪ್ರಿಯಾ, ಅವಿನಾಶ್ ಮೆನನ್ ರಾಜೇಂದ್ರನ್, ಸ್ನೇಹಲ್, ಜಗದೀಶ್, ಚುನಾವಣಾ ವಿಭಾಗದ ಸಹಾಯಕ ಆಯುಕ್ತ ಶರಣಪ್ಪ ಉಪಸ್ಥಿತರಿದ್ದರು.

ಅತಿ ಹೆಚ್ಚು ಮತದಾರರ ವಿಧಾನಸಭೆ ಕ್ಷೇತ್ರ

ಬೆಂಗಳೂರು ದಕ್ಷಿಣ	7,67,416
ಮಹದೇವಪುರ	6,76,521
ಯಶವಂತಪುರ	6,09,122
ಬ್ಯಾಟರಾಯನಪುರ	5,38,300
ಕೆ.ಆರ್.ಪುರ	5,53,873

ಅತಿ ಕಡಿಮೆ ಮತದಾರರ ವಿಧಾನಸಭೆ ಕ್ಷೇತ್ರ

ಶಿವಾಜಿನಗರ	1,97,184
ರಾಜಾಜಿನಗರ	2,09,465
ಜಯನಗರ	2,18,098
ಮಲ್ಲೇಶ್ವರ	2,30,774
ಶಾಂತಿನಗರ	2,33,994

52,80,287 ಪುರುಷರು


49,82,589 ಮಹಿಳೆಯರು

1,838 ಲಿಂಗತ್ವ ಅಲ್ಪಸಂಖ್ಯಾತರು

1,02,64,714 ಒಟ್ಟು ಮತದಾರರು

95,391 ಯುವ ಮತದಾರರು

ನಗರದಲ್ಲಿ ಮತದಾರರ ಕರಡು ಪಟ್ಟಿಯಲ್ಲಿ 86,044 ಯುವ ಮತದಾರರಿದ್ದರು, ಅಂತಿಮ ಪಟ್ಟಿಯಲ್ಲಿ ಇವರ ಸಂಖ್ಯೆ ಹೆಚ್ಚಾಗಿದ್ದು, 95,391 ಆಗಿದೆ. 1,712 ಸೇವಾ, 32,505 ಅಂಗವಿಕಲ ಮತದಾರರಿದ್ದಾರೆ. 2,294 ಅನಿವಾಸಿ ಭಾರತೀಯ ಮತದಾರರಿದ್ದಾರೆ.



ಸುದ್ದಿ 2 ನಿಮಿಷ

ಬಿಬಿಎಂಪಿ: ಖಾತಾ ಇಲ್ಲದೇ ಸಾವಿರಾರು ಕೋಟಿ ವಂಚನೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಸುಮಾರು 15 ಲಕ್ಷ ಆಸ್ತಿಗಳು ಖಾತಾ ಹೊಂದಿಲ್ಲ. ಇದರಿಂದಾಗಿ ತೆರಿಗೆ ಪಾವತಿಸದ ಕಾರಣ ಸಾವಿರಾರು ಕೋಟಿ ರೂಪಾಯಿ ತೆರಿಗೆ ವಂಚನೆ ಆಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಳವಳ ವ್ಯಕ್ತಪಡಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಖಾತಾ ನೀಡಿರುವ ಮಾಹಿತಿಯನ್ನು ದತ್ತಾಂಶಕ್ಕೆ ಸೇರಿಸಬೇಕು. ಇದರಿಂದ ಖಾತಾ ಆದ ಆಸ್ತಿಗಳನ್ನು ಮಾತ್ರ ನೋಂದಣಿ ಮಾಡಬಹುದು. ಕಾಗದ–ದಾಖಲೆಗಳ ಆಧಾರದಲ್ಲಿ ಯಾವುದೇ ಕಾರಣಕ್ಕೂ ನೋಂದಣಿಗೆ ಪರಿಗಣಿಸಬಾರದು ಎಂದು ಅವರು ಹೇಳಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಈಗಾಗಲೇ 23 ಲಕ್ಷ ಆಸ್ತಿಗಳನ್ನು ಡಿಜಿಟಲೀಕರಣ ಮಾಡಲಾಗಿದೆ. 15 ಲಕ್ಷ ಖಾತೆಗಳನ್ನು ಡೌನ್‌ಲೋಡ್ ಮಾಡಲಾಗಿದೆ ಎಂದರು. ನೋಂದಣಿ ಪ್ರಕ್ರಿಯೆ ಇಂಟಗ್ರೇಷನ್ ಆದ ಮೇಲೆ ಅಕ್ರಮಗಳ ಮೇಲೆ ಕಡಿವಾಣ ಸಾಧ್ಯವಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಒಂದಾವರ್ತಿ ಪರಿಹಾರದ ಯೋಜನೆ ಬಗ್ಗೆ ಮುಂದಿನ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ಗೃಹಲಕ್ಷ್ಮಿ ಹಣದಲ್ಲಿ ಹೋಳಿಗೆ ಊಟ



ವಿಜಯಪುರ: ತಾಂಬಾ ಸಮೀಪದ ಗೂಗಿಹಾಳ ಗ್ರಾಮದ ಗೃಹಲಕ್ಷ್ಮಿ ಯೋಜನೆ ಫಲಾನುಭವಿ ಮಾಬೂಬಿ ಅಬ್ಬಾಸಲಿ ಚೌಧರಿ ಅವರು ಗೃಹಲಕ್ಷ್ಮಿ ಹಣ ಉಳಿಸಿ, ಸಿಂದಗಿ ಶಾಸಕ ಅಶೋಕ ಮನಗೂಳಿ ಮತ್ತು ಸಮಸ್ತ ಗ್ರಾಮಸ್ಥರಿಗೆ ಸೋಮವಾರ ಹೋಳಿಗೆ ಊಟ ಮಾಡಿಸಿದರು.

ಶಾಸಕ ಅಶೋಕ ಮನಗೂಳಿ ಮಾತನಾಡಿ, ‘ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಜನ ಕಲ್ಯಾಣಕ್ಕೆ ಹೆಚ್ಚಿನ ಒತ್ತು ನೀಡಿ, ಪಂಚ ಗ್ಯಾರಂಟಿ ಯೋಜನೆ ಜಾರಿಗೊಳಿಸಿದೆ. ಯೋಜನೆಗಳಿಂದ ರಾಜ್ಯ ದಿವಾಳಿಯಾಗುತ್ತದೆ ಎನ್ನುವ ವಿಪಕ್ಷದವರಿಗೆ ಸೂಕ್ತ ಉತ್ತರ ನೀಡಿ, ಸ್ವಾವಲಂಬಿ ಕರ್ನಾಟಕ ರೂಪುಗೊಳ್ಳುತ್ತಿದೆ’ ಎಂದರು.

ಫಲಾನುಭವಿ ಮಾಬೂಬಿ ಅಬ್ಬಾಸಲಿ ಮಾತನಾಡಿ, ‘ಅನ್ನ ಹಳಸುವ ಮುನ್ನ ಊಟ ಮಾಡಬೇಕು. ಬಾಡದ ಹೂವಿಲ್ಲ, ಅದು ಬಾಡುವ ಮುನ್ನ ಮುಡಿಯಬೇಕು. ಕೆಡಲಾರದ ಹಣ್ಣುಗಳಿಲ್ಲ, ಅವು ಕೆಡುವ ಮುನ್ನ ಸೇವಿಸಬೇಕು. ಸಾಯದ ಮನುಷ್ಯನಿಲ್ಲ, ಸಾಯುವ ಮುನ್ನ ಕೀರ್ತಿ ಪಡೆಯಬೇಕು’ ಎಂದರು.

ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಪೂಜಾರಿ, ಗ್ಯಾರಂಟಿ ಯೋಜನೆ ಅಧ್ಯಕ್ಷ ಶ್ರೀಶೈಲ ಕವಲಗಿ, ಜಿಲ್ಲಾ ಕೆಡಿಪಿ ಸದಸ್ಯ ನೂರಹಮ್ಮದ ಅತ್ತಾರ, ಸುನಂದಾ ಯಂಪುರೆ, ಮಹಾನಂದ ಬಮ್ಮಣ್ಣಿ, ಜಯಶ್ರೀ ಹಂದನೂರ, ಗ್ರಾಮ ಪಂಚಾಯತಿ ಅಧ್ಯಕ್ಷ ರಜಾಕ ಚಿಕ್ಕಗಸಿ, ಪರಸು ಬಿಸನಾಳ, ರಾಚ್ಚಪ್ಪ ಗಳೇದ, ಅಪ್ಪಣ್ಣ ಕಲ್ಲೂರ, ಸಿದ್ದು ಹತ್ತಳ್ಳಿ, ಕಾಂತನಗೌಡ ಪಾಟೀಲ ಇದ್ದರು.

ಮಧುಗಿರಿ ರಸ್ತೆಯಲ್ಲಿ ಕಾಣಿಸಿಕೊಂಡ ಚಿರತೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಇಲ್ಲಿನ ರಾಜ್ಯ ಹೆದ್ದಾರಿ 3ರಲ್ಲಿ (ಕೊರಟಗೆರೆ, ಮಧುಗಿರಿ, ಪಾವಗಡ ಸಂಪರ್ಕ ಕಲ್ಪಿಸುವ ರಸ್ತೆ) ಸೋಮವಾರ ರಾತ್ರಿ 7.20ರ ಸಮಯದಲ್ಲಿ ಚಿರತೆಯೊಂದು ಕಾಣಿಸಿಕೊಂಡಿದೆ.

ಈ ಮಾರ್ಗದಲ್ಲಿ ಸಿಗುವ ಚನ್ನೋಹಳ್ಳಿ ಹಾಗೂ ನರಸೀಪುರ ನಡುವಿನ ಪೆಟ್ರೋಲ್ ಬಂಕ್‌ನಿಂದ ತುಸು ದೂರದಲ್ಲಿ ಚಿರತೆ ಕಾಣಿಸಿಕೊಂಡಿದ್ದು, ಅದನ್ನು ನೋಡಿದ ಕೆಲ ವಾಹನ ಪ್ರಯಾಣಿಕರು ಭಯಗೊಂಡಿದ್ದಾರೆ.

ದಾಬಸ್ ಪೇಟೆ ಮಾರ್ಗದಿಂದ ನಾನು ವಾಹನದಲ್ಲಿ ಬರುತ್ತಿದ್ದೆ. ಪೆಟ್ರೋಲ್ ಬಂಕ್ ಬಿಟ್ಟು ಮುಂದೆ ಹೋಗುವಾಗ ರಸ್ತೆಯಲ್ಲಿ ಚಿರತೆ ಕಂಡಿತು. ಒಂದು ಕ್ಷಣ ಭಯವಾಯಿತು. ನರಸೀಪುರ ಕಡೆಯಿಂದ ವಾಹನದಲ್ಲಿ ಬರುತ್ತಿದ್ದವರು ಹೆದರಿದರು. ನಂತರ ಚಿರತೆ ಇಮಚೇನಹಳ್ಳಿ ಕಡೆ ಓಡಿತು ಎಂದರು ಪ್ರತ್ಯಕ್ಷದರ್ಶಿ ನಂಜೇಗೌಡ.

‘ಇದೇ ಸ್ಥಳದಲ್ಲಿ ಕೆಲವು ದಿನಗಳ ಹಿಂದೆ ಚಿರತೆ ಓಡಾಡುತ್ತಿತ್ತು. ನಾನು ಫೋನ್‌ನಲ್ಲಿ ಮಾತಾಡುತ್ತಾ ನಿಂತಿರುವಾಗ ರಾಮದೇವ ಬೆಟ್ಟದ ಕಡೆಯಿಂದ ಬಂದ ಚಿರತೆ ನನ್ನ ಸನಿಹದಲ್ಲೇ ಹಾದು ಹೋಯ್ತು. ನಾನು ನಾಯಿ ಇರಬೇಕು ಎಂದುಕೊಂಡೆ. ರಸ್ತೆಯಲ್ಲಿ ವಾಹನಗಳ ಬೆಳಕು ಬಿದ್ದಾಗ ಅದು ಚಿರತೆ ಅಂತ ತಿಳಿಯಿತು’ ಎಂದು ಉಮೇಶ್ ಹೇಳಿದರು. ಸಂಜೆ ವೇಳೆಗೆ ಚಿರತೆ ಓಡಾಡುತ್ತಿದ್ದು, ಈ ಭಾಗದಲ್ಲಿರುವ ಒಂಟಿ ಮನೆಯವರು, ವಾಹನ ಚಾಲಕರಲ್ಲಿ ಆತಂಕ ಮೂಡಿಸಿದೆ.

‘ಈ ಭಾಗದ ನಿವಾಸಿಗಳು ತಮ್ಮ ಮೇಕೆ, ಕುರಿ, ದನಗಳನ್ನು ಕೊಟ್ಟಿಗೆಗೆ ಕಟ್ಟಬೇಕು. ರಾತ್ರಿ ವೇಳೆ ಎಲ್ಲರೂ ಒಂಟಿಯಾಗಿ ಓಡಾಡಬಾರದು’ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

222 ವಾಣಿಜ್ಯ ಮಳಿಗೆಗೆ ಬೀಗ ಮುದ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿ ಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದ 222 ವಾಣಿಜ್ಯ ಕಟ್ಟಡಗಳಿಗೆ ಬೀಗಮುದ್ರೆ ಹಾಕಲಾಗಿದೆ ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದ್ದಾರೆ.

ಪಾಲಿಕೆಯ ಎಂಟು ವಲಯಗಳಲ್ಲಿ ಅತಿ ಹೆಚ್ಚು ಸುಸ್ತಿದಾರರಿಂದ ತ್ವರಿತವಾಗಿ ಆಸ್ತಿ ತೆರಿಗೆ ಸಂಗ್ರಹಿಸಬೇಕು. ಎಲ್ಲ ಪರಿಷ್ಕರಣೆ ಪ್ರಕರಣಗಳಲ್ಲಿ, ಆಸ್ತಿಗಳಿಗೆ ಬೀಗಮುದ್ರೆ, ಮುಟ್ಟುಗೋಲು ಮತ್ತು ಜಪ್ತಿ ಮಾರಾಟದ ಕಾನೂನನ್ನು ಬಳಸಿಕೊಂಡು ವಸೂಲಾತಿ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದಿದ್ದಾರೆ.

ಬೊಮ್ಮನಹಳ್ಳಿ ವಲಯದಲ್ಲಿ 15 ಆಸ್ತಿಗಳ ಜಪ್ತಿ ಮಾರಾಟಕ್ಕಾಗಿ ಬೀಗ ಮುದ್ರೆ ಮಾಡಲಾಗಿದೆ. ಜಪ್ತಿ ಮಾರಾಟದ ಪ್ರಸ್ತಾವ ಸಿದ್ಧಪಡಿಸಲಾಗುತ್ತದೆ.

ಪೂರ್ವ ವಲಯದಲ್ಲಿ 77 ಕಟ್ಟಡಗಳಿಗೆ ಬೀಗಮುದ್ರೆ ಹಾಕಲಾಗಿದೆ. ಪಶ್ಚಿಮ ವಲಯದಲ್ಲಿ 68 ಕಟ್ಟಡಗಳ ಬಾಗಿಲುಗಳಿಗೆ ಬೀಗಹಾಕಿ, ಮೊಹರು ಮಾಡಲಾಗಿದೆ. ಜಪ್ತಿ ಮಾರಾಟಕ್ಕಾಗಿ ಅತ್ಯಧಿಕ ಬಾಕಿ ಇರುವ ಆಸ್ತಿಗಳನ್ನು ಗುರುತಿಸಲಾಗುತ್ತಿದೆ. ಆರ್.ಆರ್ ನಗರ ವಲಯದಲ್ಲಿ 10 ವಸತಿಯೇತರ ಆಸ್ತಿಗಳಿಗೆ ಬೀಗಮುದ್ರೆ ಹಾಕಲಾಗಿದೆ.

ಯಲಹಂಕ ವಲಯದಲ್ಲಿ ಐದು ಆಸ್ತಿ, ದಾಸರಹಳ್ಳಿ ವಲಯದಲ್ಲಿ 12 ಆಸ್ತಿ, ಮಹದೇವಪುರ ವಲಯದಲ್ಲಿ 20 ವಸತಿಯೇತರ ಆಸ್ತಿಗಳಿಗೆ ಬೀಗಮುದ್ರೆ ಹಾಕಲಾಗಿದ್ದು, ಜಪ್ತಿ ಮಾರಾಟಕ್ಕಾಗಿ ಆಸ್ತಿಗಳನ್ನು ಗುರುತಿಸಲಾಗುತ್ತಿದೆ. ದಕ್ಷಿಣ ವಲಯದಲ್ಲಿ 15 ವಸತಿಯೇತರ ಆಸ್ತಿಗಳಿಗೆ ಬೀಗಮುದ್ರೆ ಹಾಕಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

2024ರ ಏಪ್ರಿಲ್ 1ಕ್ಕೆ ಅನ್ವಯವಾಗುವಂತೆ 3.95 ಲಕ್ಷ ಆಸ್ತಿಗಳ ತೆರಿಗೆದಾರರು ಸುಸ್ತಿದಾರರಾಗಿ, ₹733.61 ಕೋಟಿ ಪಾವತಿಸಬೇಕಿತ್ತು. ಅದರಲ್ಲಿ 1.88 ಆಸ್ತಿ ಮಾಲೀಕರು ₹404.46 ಕೋಟಿ ಪಾವತಿಸಿದ್ದಾರೆ. 2.06 ಲಕ್ಷ ಮಾಲೀಕರು ಇನ್ನೂ ₹329.15 ಕೋಟಿ ತೆರಿಗೆ ಪಾವತಿಸಬೇಕಿದೆ. 15,731 ಪ್ರಕರಣಗಳಲ್ಲಿ ತೆರಿಗೆ ಪರಿಷ್ಕರಣೆ ಮಾಡಿದ್ದು, ಒಟ್ಟು ₹398 ಕೋಟಿ ಸಂಗ್ರಹವಾಗಬೇಕಿತ್ತು. ಅದರಲ್ಲಿ 9,260 ಆಸ್ತಿಗಳಿಂದ ₹114.82 ಕೋಟಿ ಪಾವತಿಯಾಗಿದ್ದು, 9,691 ಆಸ್ತಿಗಳಿಂದ ₹191.47 ಕೋಟಿ ಬಾಕಿ ಉಳಿಸಿಕೊಂಡಿವೆ ಎಂದು ಮುನೀಶ್ ಹೇಳಿದ್ದಾರೆ.

ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ: ಬೀಗಮುದ್ರೆ



ಬೆಂಗಳೂರು: ಪೂರ್ವ ವಲಯದಲ್ಲಿ ಕಟ್ಟಡ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಾಣ ಮಾಡಲಾಗಿದ್ದ 16 ಕಟ್ಟಡಗಳಿಗೆ ಬಿಬಿಎಂಪಿ ಸಿಬ್ಬಂದಿ ಬೀಗಮುದ್ರೆ ಹಾಕಿದ್ದಾರೆ.

ಪೂರ್ವ ವಲಯ ಆಯುಕ್ತೆ ಸ್ನೇಹಲ್ ಅವರ ನಿರ್ದೇಶನದಂತೆ ಕಾರ್ಯಾಚರಣೆ ನಡೆಸಿರುವ ಉಪ ವಿಭಾಗಗಳ ಎಂಜಿನಿಯರ್‌ಗಳು ಹಾಗೂ ವಲಯದ ನಗರ ಯೋಜನೆ ವಿಭಾಗದ ಎಂಜಿನಿಯರ್‌ಗಳು, ನಕ್ಷೆ ಮಂಜೂರಾತಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಕಟ್ಟಡಗಳ ಮಾಲೀಕರಿಗೆ, ಬಿಬಿಎಂಪಿ ಕಾಯ್ದೆ 2020ರಡಿ ನೋಟಿಸ್ ಜಾರಿ ಮಾಡಿದ್ದಾರೆ.

ಮುಖ್ಯ ಆಯುಕ್ತರು ಹಾಗೂ ಮೇಲ್ಮನವಿ ಪ್ರಾಧಿಕಾರದವರು ಮಾಲೀಕರ ಮೇಲ್ಮನವಿಗಳನ್ನು ವಜಾಗೊಳಿಸಿರುವುದರಿಂದ ಕಟ್ಟಡಗಳಿಗೆ ಬೀಗಮುದ್ರೆ ಹಾಕಲಾಗಿದೆ ಎಂದು ನಗರ ಯೋಜನೆ ವಿಭಾಗದ ಸಹಾಯಕ ನಿರ್ದೇಶಕ ಇಮ್ರಾನ್ ತಿಳಿಸಿದ್ದಾರೆ.



ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಶನ್ ಟ್ರಸ್ಟ್ ಭಾನುವಾರ ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಆಯೋಜಿಸಿದ್ದ ‘ಉಸ್ತಾದ್ ಜಾಕಿರ್ ಹುಸೇನ್ ಅವರ ಸ್ಮರಣೆಯ ಲಯ ಶ್ರದ್ಧಾಂಜಲಿ’ ಕಾರ್ಯಕ್ರಮದಲ್ಲಿ ಜಾಕಿರ್ ಹುಸೇನ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಮೃತ್ಯುಂಜಯ ಶೆಟ್ಟರ್, ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಶನ್ ಟ್ರಸ್ಟ್‌ನ ಅಧ್ಯಕ್ಷ ಸತೀಶ್ ಹಂಪಿಹೊಳಿ, ಪೂರ್ಣ ಆಚಾರ್ಯ, ರೇಖಾ ಗೋವಿಂದ ಮತ್ತು ಪ್ರವೀಣ್ ಗೋಡ್ಖಿಂಡಿ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಐಶ್ವರ್ಯಾ ದಂಪತಿ ಬಂಧನ, ಬಿಡುಗಡೆ

ಬೆಂಗಳೂರು: ಮಾಜಿ ಸಂಸದ ಡಿ.ಕೆ.ಸುರೇಶ್ ಸಹೋದರಿ ಎಂದು ಹೇಳಿಕೊಂಡು ₹3.25 ಕೋಟಿ ಮತ್ತು 450 ಗ್ರಾಂ ಚಿನ್ನಾಭರಣ ಪಡೆದು ವಂಚಿಸಿದ ಆರೋಪಕ್ಕೆ ಸಂಬಂಧಿಸಿದ ಎರಡನೇ ಪ್ರಕರಣದಲ್ಲಿ ಮತ್ತೆ ಐಶ್ವರ್ಯಾಗೌಡ ಹಾಗೂ ಅವರ ಪತಿ ಹರೀಶ್ ಅವರನ್ನು ಸೋಮವಾರ ರಾಜರಾಜೇಶ್ವರಿ ಠಾಣೆ ಪೊಲೀಸರು ಬಂಧಿಸಿದ್ದರು.

ಬಂಧಿತ ಐಶ್ವರ್ಯಾ ಗೌಡ ಅಲಿಯಾಸ್ ನವ್ಯಶ್ರೀ ದಂಪತಿಯನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಹೈಕೋರ್ಟ್ ಸಂಜೆ ಆದೇಶಿಸಿತು. ಬಳಿಕ ಅವರನ್ನು ಬಿಡುಗಡೆ ಮಾಡಲಾಯಿತು.

ಆರ್.ಆರ್.ನಗರ ನಿವಾಸಿ ಶಿಲ್ಪಾ ಗೌಡ ದೂರಿನ ಮೇರೆಗೆ ರಾಜರಾಜೇಶ್ವರಿ ಠಾಣೆಯಲ್ಲಿ ಐಶ್ವರ್ಯಾ ಗೌಡ, ಹರೀಶ್, ಬೌನ್ಸರ್ ಗಜ ಅವರ ವಿರುದ್ಧ ಎಫ್ಐಆರ್ ದಾಖಲಾಗಿತ್ತು.

ದಾಖಲಾಗಿರುವ ಎಫ್ಐಆರ್‌ಗೆ ಸಂಬಂಧಿಸಿದಂತೆ ಬಂಧಿಸಿರುವುದನ್ನು ಪ್ರಶ್ನಿಸಿ ಐಶ್ವರ್ಯಾ ಗೌಡ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿತು.

‘ಐಶ್ವರ್ಯಾ ಅವರನ್ನು ವಿಚಾರಣೆಗೆ ಕರೆದಿರುವ ಪೊಲೀಸರು ಏಕಾಏಕಿ ಬಂಧಿಸಿದ್ದಾರೆ. ಸಿಆರ್‌ಪಿಸಿ ಕಲಂ 41ಎ ಅಡಿ ನೋಟಿಸ್ ನೀಡಿಲ್ಲ. ಇದು ಸುಪ್ರೀಂ ಕೋರ್ಟ್ ತೀರ್ಪುಗಳಿಗೆ ವಿರುದ್ಧವಾದ ಕ್ರಮ. ಇಂತಹುದೇ ಆರೋಪಕ್ಕೆ ಸಂಬಂಧಿಸಿದಂತೆ ಮತ್ತೊಂದು ಪ್ರಕರಣದಲ್ಲಿ ಐಶ್ವರ್ಯಾ ಅವರನ್ನು ಬಿಡುಗಡೆ ಮಾಡುವಂತೆ ಹೈಕೋರ್ಟ್ ಆದೇಶಿಸಿದೆ. ಹಾಗಾಗಿ ಈ ಹಿಂದಿನ ಪ್ರಕರಣದಲ್ಲಿ ಮಾಡಲಾಗಿರುವ ಆದೇಶವನ್ನು ಈ ಪ್ರಕರಣಕ್ಕೂ ಅನ್ವಯಿಸಬಹುದು ಮತ್ತು ಪೊಲೀಸರು ತನಿಖೆ ಮುಂದುವರಿಸಲಿ’ ಎಂಬ ಅರ್ಜಿದಾರರ ಪರ ವಕೀಲರ ವಾದ ಮಾನ್ಯ ಮಾಡಿದ ನ್ಯಾಯಪೀಠ ಐಶ್ವರ್ಯಾ ದಂಪತಿಯನ್ನು ಬಿಡುಗಡೆ ಮಾಡುವಂತೆ ಆದೇಶಿಸಿದೆ.

‘ಪೊಲೀಸರು ಕಾನೂನಿನ ಅನುಸಾರ ಐಶ್ವರ್ಯಾ ಗೌಡ ಅವರ ಮನೆಯಲ್ಲಿ ತನಿಖೆ, ಶೋಧ ಮತ್ತು ಜಪ್ತಿ ಮುಂದುವರಿಸಬಹುದು. ಐಶ್ವರ್ಯಾ ಗೌಡ ತನಿಖೆಗೆ ಸಹಕರಿಸಬೇಕು ಮತ್ತು ಸಾಕ್ಷಿ ತಿರುಚುವುದಾಗಲೀ ಅಥವಾ ನಾಶಪಡಿಸುವುದನ್ನಾಗಲೀ ಮಾಡಬಾರದು’ ಎಂಬ ಷರತ್ತಿನೊಂದಿಗೆ ರಾಜ್ಯ ಸರ್ಕಾರ ಮತ್ತು ದೂರುದಾರರಾದ ಶಿಲ್ಪಾಗೌಡ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ವಿಚಾರಣೆಯನ್ನು ಫೆಬ್ರುವರಿ 27ಕ್ಕೆ ಮುಂದೂಡಿದೆ.

ಸಂಕ್ಷಿಪ್ತ ಸುದ್ದಿ

ಕೊಡು–ಕೊಳ್ಳುವವರ ಸಮಾವೇಶ ಜ. 10ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘದಿಂದ ಜನವರಿ 10ರಿಂದ 12ರವರೆಗೆ ‘ಕೊಡು–ಕೊಳ್ಳುವವರ ಸಮಾವೇಶ–2025, ಫ್ಯಾಷನ್ ಶೋ ಹಾಗೂ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಆಯೋಜಿಸಲಾಗಿದೆ.

ಈ ಮೇಳ ಹೆಗ್ಗೋಡಿನ ಕವಿ–ಕಾವ್ಯ ಟ್ರಸ್ಟ್ ಹಾಗೂ ದೇಸಿ ಟ್ರಸ್ಟ್‌ನ ನೇತೃತ್ವದಲ್ಲಿ ನಡೆಯಲಿದೆ. ಜ. 10ರ ಬೆಳಿಗ್ಗೆ 11ಕ್ಕೆ ಕರ್ನಾಟಕ ಕ್ರಾಫ್ಟ್ ಕೌನ್ಸಿಲ್‌ನ ಕಾರ್ಯಕಾರಿ ಸಮಿತಿ ಸದಸ್ಯೆ ಚಂದ್ರಾ ಜೈನ್ ಚಾಲನೆ ನೀಡಲಿದ್ದಾರೆ. ಚರಕ ಸಂಸ್ಥಾಪಕ ರಂಗಕರ್ಮಿ ಪ್ರಸನ್ನ ಉಪಸ್ಥಿತರಿರಲಿದ್ದಾರೆ. ಮಧ್ಯಾಹ್ನ 2ಕ್ಕೆ ನಡೆಯುವ ಕೈಮಗ್ಗ ವಸ್ತ್ರಗಳ ಫ್ಯಾಷನ್ ಶೊ ಹಾಗೂ ಕೊಡು–ಕೊಳ್ಳುವವರ ಸಮಾವೇಶವನ್ನು ವಿನ್ಯಾಸಗಾರ್ತಿ ಲತಾ ಪುಟ್ಟಣ್ಣ ಉದ್ಘಾಟಿಸಲಿದ್ದಾರೆ.

ವಿನ್ಯಾಸಕಾರ ಪ್ರಸಾದ್ ಬಿದ್ದಪ್ಪ ಅವರ ತಂಡದಿಂದ ಫ್ಯಾಷನ್ ಶೋ ನಡೆಯಲಿದೆ. ಕೊಡು-ಕೊಳ್ಳುವವರ ಸಮಾವೇಶದಲ್ಲಿ ಕೈಮಗ್ಗ ಬಟ್ಟೆ ಉತ್ಪಾದಕರು ಹಾಗೂ ಗ್ರಾಹಕರು ಇಬ್ಬರನ್ನೂ ಒಟ್ಟಿಗೆ ಸೇರಿಸಲಾಗುತ್ತದೆ. ಇವರಿಬ್ಬರ ಮಧ್ಯೆ ನೇರ ಸಂವಾದ-ವಿಚಾರಗಳ ಚಿಂತನ-ಮಂಥನ ನಡೆಯಲಿದೆ. ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳವು ಮೂರು ದಿನವು ಬೆಳಿಗ್ಗೆ 10ರಿಂದ ರಾತ್ರಿ 8ರವರೆಗೆ ನಡೆಯಲಿದೆ. ಮಾಹಿತಿಗೆ: 63638 85215 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಬಸ್ ಚಕ್ರ ಹರಿದು ವ್ಯಕ್ತಿ ಸಾವು

ಬೆಂಗಳೂರು: ಮೆಜೆಸ್ಟಿಕ್ ಟರ್ಮಿನಲ್ 3ರಲ್ಲಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಪ್ರಯಾಣಿಕರೊಬ್ಬರು ಮೃತಪಟ್ಟಿದ್ದಾರೆ.

ಬೆಳಗಾವಿ ಜಿಲ್ಲೆಯ ಖಾನಾಪುರ ನಿವಾಸಿ ಪ್ರಶಾಂತ್ ಭೂಷಣ್ (30) ಮೃತ ವ್ಯಕ್ತಿ ಎಂದು ಗುರುತಿಸಲಾಗಿದೆ. ಸೋಮವಾರ ರಾತ್ರಿ ನಿಲ್ದಾಣದಲ್ಲಿ ಭೂಷಣ್ ಅವರು ಬಸ್‌ಗೆ ಒರಗಿ ನಿಂತಿದ್ದರು. ಇದನ್ನು ಗಮನಿಸದ ಆಂಧ್ರ ಸಾರಿಗೆ ಸಂಸ್ಥೆಯ ಬಸ್‌ನ ಚಾಲಕ ಚಾಲನೆ ಮಾಡಿದಾಗ ನಿಯಂತ್ರಣ ತಪ್ಪಿ ಭೂಷಣ್ ಕೆಳಗೆ ಬಿದ್ದಿದ್ದಾರೆ. ಅವರ ತಲೆಯ ಮೇಲೆ ಬಸ್ ಚಕ್ರ ಹರಿದಿದೆ.

ಚಾಮರಾಜ ಪೇಟೆ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಚಾಲಕನನ್ನು ಬಂಧಿಸಿ, ಪ್ರಕರಣ ದಾಖಲಿಸಿಕೊಂಡರು.

ಉಚಿತ ಪ್ರಿಲಿಮ್ಸ್ ಕ್ರ್ಯಾಶ್ ಕೋರ್ಸ್‌ಗೆ ಅರ್ಜಿ ಆಹ್ವಾನ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಸಂಸ್ಥೆಯು ಯುಪಿಎಸ್‌ಸಿ 2025ನೇ ಪೂರ್ವಭಾವಿ ಪರೀಕ್ಷೆ ಬರೆಯುತ್ತಿರುವ ಅಭ್ಯರ್ಥಿಗಳಿಗಾಗಿ ಉಚಿತ ಪ್ರಿಲಿಮ್ಸ್ ಕ್ರ್ಯಾಶ್ ಕೋರ್ಸ್‌ಗೆ ಅರ್ಜಿ ಆಹ್ವಾನಿಸಿದೆ.

ಈ ಕೋರ್ಸ್ ಅನ್ನು ಜನವರಿ 16ರಿಂದ ಏಪ್ರಿಲ್ 30ರವರೆಗೆ ಆಯೋಜಿಸಲಾಗಿದೆ. ನುರಿತ ಪ್ರಾಧ್ಯಾಪಕರಿಂದ ಗುಣಮಟ್ಟದ ಬೋಧನೆ ನೀಡಲಾಗುತ್ತದೆ. ಹದಿನೈದು ದಿನಗಳಿಗೊಮ್ಮೆ ವಿಷಯವಾರು ಪರೀಕ್ಷೆಗಳು ಮತ್ತು ಯುಪಿಎಸ್‌ಸಿ ಪ್ರಿಲಿಮ್ಸ್‌ನ ಜಿಎಸ್1 ಹಾಗೂ ಜಿಎಸ್2ನ ಅಣಕು ಪರೀಕ್ಷೆಗಳನ್ನು ನಡೆಸಲಾಗುತ್ತದೆ.

ಈ ತರಗತಿಗಳು ಆನ್‌ಲೈನ್, ಆಫ್‌ಲೈನ್ ಎರಡೂ ವಿಧಾನಗಳಲ್ಲಿ ನಡೆಯುತ್ತವೆ. ಆಫ್‌ಲೈನ್ ತರಗತಿಗಳು ಕೆಎಸ್ಎಫ್ ಅಕಾಡೆಮಿ, 80 ಅಡಿ ರಸ್ತೆ, 1214, ಒಂದನೇ ಮಹಡಿ, ಬಿಎಂಟಿಸಿ ಬಸ್ ನಿಲ್ದಾಣದ ಎದುರು ಚಂದ್ರಾ ಲೇಔಟ್, ವಿಜಯನಗರ, ಬೆಂಗಳೂರು–40ರಲ್ಲಿ ನಡೆಯಲಿವೆ.

ನೋಂದಣಿಗೆ: 98453 18599, 98453 19899ಗೆ ಸಂಪರ್ಕಿಸಿ. ಹೆಚ್ಚಿನ ಮಾಹಿತಿಗಾಗಿ http://www.ksfkarnataka.comಗೆ ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಸ್ಪೇಡೆಕ್ಸ್ ಡಾಕಿಂಗ್ ಪ್ರಯೋಗ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಸ್ರೊ ಉಡಾವಣೆ ಮಾಡಿದ್ದ ಸ್ಪೇಡೆಕ್ಸ್ ಉಪಗ್ರಹಗಳ ಜೋಡಣೆಯ (ಡಾಕಿಂಗ್) ಪ್ರಯೋಗ ಜ. 7 ಕ್ಕೆ ಮುಂದೂಡಲಾಗಿದೆ. ಈ ಹಿಂದೆ ನಿಗದಿ ಮಾಡಿದಂತೆ ಮಂಗಳವಾರ ಈ ಪ್ರಯೋಗ ನಡೆಯಬೇಕಿತ್ತು ಎಂದು ಇಸ್ರೊ ‘ಎಕ್ಸ್’ನಲ್ಲಿ ತಿಳಿಸಿದೆ.

ಉಪಗ್ರಹಗಳನ್ನು ಜೋಡಿಸುವ ಪ್ರಕ್ರಿಯೆಗೆ ಭೂಮಿಯ ಸಿಮ್ಯುಲೇಷನ್‌ನಿಂದ ಇನ್ನಷ್ಟು ದೃಢೀಕರಣದ ಅಗತ್ಯವಿತ್ತು. ಆದರೆ, ಈ ಪ್ರಯೋಗವನ್ನು ಸ್ಥಗಿತಗೊಳಿಸುವ ಸನ್ನಿವೇಶವನ್ನು ಸೋಮವಾರ ಗುರುತಿಸಲಾಯಿತು ಎಂದು ಇಸ್ರೊ ಹೇಳಿದೆ. ಒಂದು ವಾರದ ಹಿಂದೆ ಈ ಉಪಗ್ರಹಗಳನ್ನು ಉಡಾವಣೆ ಮಾಡಿ ಕಕ್ಷೆಗೆ ಸೇರಿಸಲಾಗಿತ್ತು.

‘ಬಿಜೆಪಿ ನಷ್ಟ ಮಾಡಿದ್ದು ಸರಿಪಡಿಸುತ್ತೇವೆ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಬಿಜೆಪಿ ಅಧಿಕಾರದಲ್ಲಿದ್ದಾಗ ಆದ ನಷ್ಟವನ್ನು ನಾವು ಈಗ ಸರಿಪಡಿಸುತ್ತಿದ್ದೇವೆ’ ಎಂದು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಅಧ್ಯಕ್ಷ ಭರಮಗೌಡ (ರಾಜು) ಕಾಗೆ ಹೇಳಿದರು.

ಬಸ್ ಪ್ರಯಾಣ ದರ ಏರಿಕೆ ಬಗ್ಗೆ ಸೋಮವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಡೀಸೆಲ್, ಪೆಟ್ರೋಲ್, ಟೈರ್, ಬಸ್ ಬಿಡಿಭಾಗಗಳ ದರ ಏರಿಕೆಯಾಗಿದೆ. ಅದಕ್ಕಾಗಿ ಬಸ್ ಪ್ರಯಾಣ ದರ ಏರಿಕೆ ಮಾಡಿದ್ದೇವೆ. ಜನರ ಅನುಕೂಲ ದೃಷ್ಟಿ ಇರಿಸಿಕೊಂಡು ಮುಖ್ಯಮಂತ್ರಿ ಹಾಗೂ ಸಚಿವರು ಸಾಧಕ– ಬಾಧಕಗಳನ್ನು ನೋಡಿ ನಿರ್ಧರಿಸಿದ್ದಾರೆ’ ಎಂದರು.

‘ನಾವು ಲಾಭ ನೋಡುತ್ತಿಲ್ಲ. ಇಲ್ಲಿ ಲಾಭ ಮಾಡಿ, ಆ ಹಣವನ್ನು ಬೇರೆಡೆ ಉಪಯೋಗಿಸಬೇಕು ಎಂಬ ಉದ್ದೇಶವೂ ಇಲ್ಲ. ಸಂಸ್ಥೆ ಉಳಿಯದಿದ್ದರೆ ಜನರಿಗೆ ಕಷ್ಟ. ಜನರ ಕಷ್ಟ ಕಡಿಮೆ ಮಾಡಲು ಸಂಸ್ಥೆ ಉಳಿಸಿಕೊಳ್ಳಬೇಕಿದೆ’ ಎಂದರು.



ರಾಜ್ಯದಲ್ಲಿ ವಕ್ಫ್ ಹೆಸರಲ್ಲಿ ನಡೆಯುತ್ತಿರುವ ಭೂ ಕಬಳಿಕೆಯಿಂದ ರೈತರು, ಮಠ, ಮಂದಿರಗಳು ಜಮೀನು ಕಳೆದುಕೊಂಡು ಸಮಸ್ಯೆ ಉಂಟಾಗುತ್ತಿದೆ ಎಂದು ರಾಜ್ಯ ಬಿಜೆಪಿಯ ನಾಯಕರು ಕೇಂದ್ರದ ಸಂಸದೀಯ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ಸಚಿವ ಕಿರಣ್ ರಿಜಿಜು ಅವರಿಗೆ ಮನವಿ ಸಲ್ಲಿಸಿದರು

ರಿಜಿಜು ಭೇಟಿಯಾದ ಬಿಜೆಪಿ ಭಿನ್ನಮತೀಯರು

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರೋಧಿ ಬಣದಲ್ಲಿ ಗುರುತಿಸಿಕೊಂಡಿರುವ ಪಕ್ಷದ ನಾಯಕರ ನಿಯೋಗವು ಸೋಮವಾರ ಇಲ್ಲಿ ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರನ್ನು ಭೇಟಿ ಮಾಡಿ ವಕ್ಫ್ ಆಸ್ತಿಗಳ ರಾಷ್ಟ್ರೀಕರಣಕ್ಕೆ ಒತ್ತಾಯಿಸಿತು.

ನಿಯೋಗದಲ್ಲಿ ಮಾಜಿ ಸಚಿವರಾದ ರಮೇಶ್ ಜಾರಕಿಹೊಳಿ, ಅರವಿಂದ ಲಿಂಬಾವಳಿ, ಕುಮಾರ್ ಬಂಗಾರಪ್ಪ, ಮಾಜಿ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಹಲವು ನಾಯಕರು ಇದ್ದರು.

‘ಕರ್ನಾಟಕ ಸರ್ಕಾರವು ಸಾವಿರಾರು ರೈತರ ಜಮೀನುಗಳನ್ನು ವಕ್ಫ್ ಆಸ್ತಿ ಎಂದು ವರ್ಗೀಕರಿಸಲು ಮುಂದಾಗಿದೆ. ಈ ಸಂಬಂಧ ರೈತರಿಗೆ ನೋಟಿಸ್‌ಗಳನ್ನು ನೀಡಿದೆ. ಇದರಿಂದಾಗಿ, ರೈತರು ಆತಂಕಕ್ಕೆ ಒಳಗಾಗಿದ್ದಾರೆ. ವಕ್ಫ್ ಮೇಲೆ ನಿಷೇಧ ಹೇರಬೇಕು ಮತ್ತು ವಕ್ಫ್ ಆಸ್ತಿಗಳನ್ನು ರಾಷ್ಟ್ರೀಕರಣಗೊಳಿಸಬೇಕು’ ಎಂದು ನಿಯೋಗ ಒತ್ತಾಯಿಸಿತು.

ಮೊದಲ ಹಂತದ ವಕ್ಫ್ ಹೋರಾಟ ನಡೆಸಿದ್ದ ಈ ನಾಯಕರು ವಕ್ಫ್ (ತಿದ್ದುಪಡಿ) ಮಸೂದೆಯ ಜಂಟಿ ಸಂಸದೀಯ ಸಮಿತಿಯ ಅಧ್ಯಕ್ಷ ಜಗದಾಂಬಿಕಾ ಪಾಲ್ ಅವರನ್ನು ಇತ್ತೀಚೆಗೆ ಭೇಟಿ ಮಾಡಿ ದಾಖಲೆಗಳನ್ನು ಸಲ್ಲಿಸಿದ್ದರು. ಎರಡನೇ ಹಂತದ ಹೋರಾಟ ನಡೆಸಲು ಭಿನ್ನಮತೀಯ ನಾಯಕ ಬಸನಗೌಡ ಪಾಟೀಲ ಯತ್ನಾಳ ಅವರು ವರಿಷ್ಠರ ಒಪ್ಪಿಗೆ ಪಡೆದಿದ್ದರು.

ಜ.23ರಂದು ಭೂಮಿಪೂಜೆ, 18 ತಿಂಗಳಲ್ಲಿ ಕಾಮಗಾರಿ ಪೂರ್ಣ

ಹೆಬ್ಬಾಳದಲ್ಲಿ ‘ಸಾವಯವ–ಸಿರಿಧಾನ್ಯ ಹಬ್’

• ಗಾಣಧಾಳು ಶ್ರೀಕಂಠ

ಬೆಂಗಳೂರು: ಸಿರಿಧಾನ್ಯ ಮತ್ತು ಸಾವಯವ ಪದಾರ್ಥಗಳ ಉತ್ಪಾದಕರು, ಮಾರುಕಟ್ಟೆದಾರರು, ಗ್ರಾಹಕರ ನಡುವೆ ಸಂಪರ್ಕ ಕಲ್ಪಿಸುವ ಹಾಗೂ ಮಾರುಕಟ್ಟೆಯನ್ನು ವಿಸ್ತರಿಸುವ ಉದ್ದೇಶದಿಂದ ಕೃಷಿ ಇಲಾಖೆಯು ಹೆಬ್ಬಾಳದಲ್ಲಿ ‘ಸಾವಯವ–ಸಿರಿಧಾನ್ಯ ಹಬ್’ ನಿರ್ಮಾಣ ಮಾಡುತ್ತಿದೆ.

ಹೆಬ್ಬಾಳದಲ್ಲಿರುವ ಕರ್ನಾಟಕ ರಾಜ್ಯ ಬೀಜ ನಿಗಮದ ಎದುರಿನ ಸುಮಾರು ಎರಡು ಎಕರೆ ಪ್ರದೇಶದಲ್ಲಿ ಈ ಹಬ್ ತಲೆ ಎತ್ತಲಿದೆ. ಎಲ್ಲವೂ ಯೋಜನೆ ಪ್ರಕಾರ ಸಾಗಿದರೆ, ಮುಂದಿನ ವರ್ಷ ಈ ಕೇಂದ್ರ ಬಳಕೆಗೆ ಸಿದ್ಧವಾಗಲಿದೆ.

ಕೇಂದ್ರ ಸರ್ಕಾರದ ₹12 ಕೋಟಿ, ರಾಜ್ಯ ಸರ್ಕಾರದ ₹8 ಕೋಟಿ ಅನುದಾನ ಸೇರಿ ಒಟ್ಟು ₹20 ಕೋಟಿ ವೆಚ್ಚದಲ್ಲಿ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ(ಆರ್‌ಕೆವಿವೈ) ಈ ಹಬ್ ನಿರ್ಮಾಣವಾಗುತ್ತಿದೆ. 18 ತಿಂಗಳಲ್ಲಿ ‘ಹಬ್’ ನಿರ್ಮಾಣ ಪೂರ್ಣಗೊಳಿಸಲು ಸಮಯ ನಿಗದಿಯಾಗಿದೆ.

ಸಿರಿಧಾನ್ಯ ಸಾವಯವ ಉತ್ಪನ್ನಗಳ ಉತ್ಪಾದನೆಯಲ್ಲಿ ರಾಜ್ಯ ಮುಂಚೂಣಿಯಲ್ಲಿದೆ. ನವೋದ್ಯಮಗಳು, ರೈತ ಉತ್ಪಾದಕ ಸಂಸ್ಥೆಗಳು (ಎಫ್‌ಪಿಒ), ರೈತ ಉತ್ಪಾದಕ ಕಂಪನಿಗಳು(ಎಫ್‌ಪಿಸಿ), ಸ್ವಸಹಾಯ ಸಂಘಗಳು ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುತ್ತಿವೆ. ಕೆಲ ಎಫ್‌ಪಿಒಗಳು ವಿದೇಶಗಳಿಗೂ ಉತ್ಪನ್ನಗಳನ್ನು ರಫ್ತು ಮಾಡುತ್ತಿವೆ.

‘ಉತ್ಪಾದಕರು, ಮಾರುಕಟ್ಟೆದಾರರು ಹಾಗೂ ಗ್ರಾಹಕರ ಮಧ್ಯೆ ಸಂಪರ್ಕ ಬೆಸೆದು ಮಾರುಕಟ್ಟೆಯನ್ನು ವಿಸ್ತರಿಸುವುದು ಹಾಗೂ ಸಿರಿಧಾನ್ಯ–ಸಾವಯವ ಉತ್ಪನ್ನಗಳ ಆರೋಗ್ಯದ ಪ್ರಯೋಜನ ಕುರಿತು ಗ್ರಾಹಕರಲ್ಲಿ ಅರಿವು ಮೂಡಿಸುವುದಕ್ಕಾಗಿ ‘ಸಿರಿಧಾನ್ಯ–ಸಾವಯವ ಹಬ್’ ನಿರ್ಮಿಸಲಾಗುತ್ತಿದೆ. ಈವರೆಗೆ ನಡೆಸಿರುವ ಸಾವಯವ ಮತ್ತು ಸಿರಿ ಧಾನ್ಯಗಳ ಮೇಳಗಳಿಗೆ ವ್ಯಕ್ತವಾದ ಪ್ರತಿಕ್ರಿಯೆ ಆಧರಿಸಿ ‘ಹಬ್’ ನಿರ್ಮಾಣ ಯೋಜನೆ ರೂಪಿಸಲಾಗಿದೆ’ ಎಂದು ಕೃಷಿ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

‘ಹಬ್’ನಲ್ಲಿ ಏನೇನಿರುತ್ತದೆ?: ಈ ಹಬ್‌ನಲ್ಲಿ ಹಳ್ಳಿಯ ಪರಿಸರವನ್ನು ಸೃಷ್ಟಿಸಲಾಗುತ್ತದೆ. ಇಲ್ಲಿ ಸಾವಯವ, ಸಿರಿಧಾನ್ಯಗಳು ಮತ್ತು ಮೌಲ್ಯವರ್ಧಿತ ಉತ್ಪನ್ನಗಳ ಪ್ರದರ್ಶನ ಮಾರಾಟ ಮಳಿಗೆಗಳಿರುತ್ತವೆ. ಪ್ರತ್ಯೇಕ ಆಹಾರ ಮಳಿಗೆಗಳು (ಹೋಟೆಲ್)ಗಳಿರುತ್ತವೆ. ಸಿರಿಧಾನ್ಯಗಳ ಸಂಸ್ಕರಣೆ, ಪ್ಯಾಕಿಂಗ್ ಹಾಗೂ ಸಂಗ್ರಹಣೆಯ ಸೌಲಭ್ಯವಿರುತ್ತದೆ. ಗ್ರಾಹಕರಿಗೆ ಅರಿವು ಮೂಡಿಸುವ ವಸ್ತು ಪ್ರದರ್ಶನ ಕೇಂದ್ರ, ಸಮ್ಮೇಳನ ಸಭಾಂಗಣ, ಪ್ರದರ್ಶನ ಅಂಗಳ, ಬಿ2ಬಿ ಸಭಾಂಗಣ, ರಫ್ತು ಕುರಿತು ಮಾಹಿತಿ ನೀಡುವ ಕೇಂದ್ರಗಳಿರುತ್ತವೆ.

‘ಸಿರಿಧಾನ್ಯ, ಸಾವಯವ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಮಾರಾಟದ ಕುರಿತು ತರಬೇತಿ ನೀಡಲು ಕೃಷಿ ಇಲಾಖೆ ಪ್ರತ್ಯೇಕ ಕೇಂದ್ರವನ್ನು ತೆರೆಯಲಿದೆ. ಸಿರಿಧಾನ್ಯಗಳನ್ನು ಹೆಚ್ಚು ಗ್ರಾಹಕರ ಬಳಿ ಕೊಂಡೊಯ್ಯುವಂತಹ ಆಸಕ್ತ ಸಂಸ್ಥೆ/ಕಂಪನಿಗಳನ್ನು ಮಳಿಗೆಗಳನ್ನು ತೆರೆಯಲು ಆಹ್ವಾನಿಸಲಾಗುತ್ತದೆ. ಟೆಂಡರ್ ಮೂಲಕ ಈ ಪ್ರಕ್ರಿಯೆ ನಡೆಯುತ್ತದೆ. ಇಲಾಖೆ ನೀಡುವ ಪರಿಕಲ್ಪನೆಯಲ್ಲೇ ಕಂಪನಿಗಳು ಮಳಿಗೆ ನಿರ್ಮಿಸಿಕೊಳ್ಳಬೇಕು’ ಎಂದು ಕೃಷಿ ಆಯುಕ್ತ ವೈ.ಎಸ್. ಪಾಟೀಲ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ರಾಜ್ಯದ ಅಂಕಿ ಅಂಶಗಳು

18.37 ಲಕ್ಷ ಹೆಕ್ಟೇರ್	ಸಿರಿ ಧಾನ್ಯ ಬೆಳೆಯುವ ಪ್ರದೇಶ
22.16 ಲಕ್ಷ ಟನ್	ಸಿರಿ ಧಾನ್ಯ ಉತ್ಪಾದನೆ ಪ್ರಮಾಣ
71,086 ಹೆಕ್ಟೇರ್	ಸಾವಯವ ಕೃಷಿ ವಿಸ್ತೀರ್ಣ
1,97,328 ಟನ್	ಸಾವಯವ ಆಹಾರ ಉತ್ಪಾದನೆ

(*ರಾಗಿ, ಜೋಳ, ಬಾಜ್ರ ಮತ್ತು ಸಿರಿಧಾನ್ಯಗಳು)



ಜ. 23ರಿಂದ ಅಂತರ ರಾಷ್ಟ್ರೀಯ ಸಾವಯವ–ಸಿರಿ ಧಾನ್ಯ ಮೇಳ ಆರಂಭವಾಗಲಿದೆ. ಅದೇ ದಿನ ‘ಸಾವಯವ–ಸಿರಿಧಾನ್ಯ ಹಬ್’ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಗುತ್ತಿದೆ

ಎನ್. ಚಲುವರಾಯಸ್ವಾಮಿ, ಕೃಷಿ ಸಚಿವ

ಯಾರಿಗೆಲ್ಲ ಅನುಕೂಲ?

‘ಹಬ್’ನಲ್ಲಿ ಗ್ರಾಹಕರಿಗೆ ಸಾವಯವ ಉತ್ಪನ್ನಗಳು ಮತ್ತು ಸಿರಿ ಧಾನ್ಯಗಳ ಕುರಿತ ಮಾಹಿತಿ ಲಭ್ಯವಾಗುತ್ತದೆ. ಮೌಲ್ಯವರ್ಧಿತ ಉತ್ಪನ್ನಗಳು, ರೆಡಿ ಟು ಕುಕ್ ಮತ್ತು ರೆಡಿ ಟು ಈಟ್ ಉತ್ಪನ್ನಗಳು ಖರೀದಿಗೆ ಲಭ್ಯವಾಗುತ್ತವೆ. ಸಿರಿಧಾನ್ಯದ ಆಹಾರದ ರುಚಿ ಸವಿಯಬಹುದು. ಅಡುಗೆ ತಯಾರಿಯ ಬಗ್ಗೆಯೂ ಮಾಹಿತಿ ಪಡೆಯಬಹುದು.

ಬಹುಮುಖ್ಯವಾಗಿ ಕೃಷಿಕರಿಗೆ, ಎಫ್‌ಪಿಒ/ ಎಫ್‌ಪಿಸಿ, ನವೋದ್ಯಮಗಳು ಮತ್ತು ಸಾವಯವ ಮತ್ತು ಸಿರಿ ಧಾನ್ಯ ಪದಾರ್ಥಗಳ ಉತ್ಪಾದನೆ/ಸಂಸ್ಕರಣೆ/ಮಾರಾಟದಲ್ಲಿ ತೊಡಗಿರುವ ಎಲ್ಲ ಪಾಲುದಾರರಿಗೆ ಇಲ್ಲಿ ಅಗತ್ಯ ಮಾಹಿತಿಗಳು ಲಭ್ಯವಾಗುತ್ತವೆ.

ಜೈಲಿನೊಳಗೆ ಮೊಬೈಲ್ ಎಸೆಯಲು ಯತ್ನ; ಬಂಧನ

ಮಂಗಳೂರು: ಜಿಲ್ಲಾ ಕಾರಾಗೃಹದ ಆವರಣದೊಳಗೆ ಕೆಂಬಣ್ಣದ ಟೇಪ್ ಸುತ್ತಿದ್ದ ಕಟ್ಟುಗಳನ್ನು ಭಾನುವಾರ ಎಸೆಯಲು ಯತ್ನಿಸಿದ್ದ ಆರೋಪಿಯನ್ನು ಬರ್ಕೆ ಪೊಲೀಸರು ಬಂಧಿಸಿದ್ದಾರೆ.

ಪಂಜಿಮೊಗರುವಿನ ಪ್ರಜ್ವಲ್ (21) ಬಂಧಿತ ಆರೋಪಿ. ಕಾರಾಗೃಹದ ಪಕ್ಕದ ಕೆನರಾ ಕಾಲೇಜಿನ ಮುಖ್ಯದ್ವಾರದ ಮೂಲಕ ಪ್ರವೇಶಿಸಿದ್ದ ಆರೋಪಿ ಕೆಂಬಣ್ಣದ ಟೇಪ್ ಸುತ್ತಿದ್ದ ಕಟ್ಟುಗಳನ್ನು ಕಾರಾಗೃಹದ ಆವರಣ ಗೋಡೆಯ ಒಳಗೆ ಎಸೆಯಲು ಯತ್ನಿಸಿದ್ದ. ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ ಸಿಬ್ಬಂದಿ ಅವಿನಾಶ್ ಇದನ್ನು ಗಮನಿಸಿದ್ದು, ಆತನನ್ನು ಹಿಡಿಯಲು ಯತ್ನಿಸಿದ್ದರು. ಬಳಿಕ ಪೊಲೀಸರು ಆತನನ್ನು ಬಂಧಿಸಿದ್ದರು.

ಆ ಕಟ್ಟಿನ ಒಳಗೆ ಎರಡು ಕೀ ಪ್ಯಾಡ್ ಮೊಬೈಲ್ ಫೋನುಗಳು ಹಾಗೂ ಸಿಗರೇಟುಗಳಿದ್ದ ಎರಡು ಪೊಟ್ಟಣಗಳು ಇದ್ದವು. ಪ್ರಜ್ವಲ್ ಈ ಹಿಂದೆ ಪ್ರಕರಣವೊಂದರಲ್ಲಿ ಬಂಧಿತನಾಗಿದ್ದು, ಕೆಲಕಾಲ ಜೈಲಿನಲ್ಲಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಬರ್ಕೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 26 ಕೋಟಿ ಲೀಟರ್ ನೀರು ಮಳೆನೀರು ಶೇಖರಣೆ • ವರ್ಷಾಂತ್ಯಕ್ಕೆ ಒಂದೂವರೆ ಸಾವಿರ ಉದ್ಯಾನಗಳಲ್ಲಿ ಇಂಗುಗುಂಡಿ ನಿರ್ಮಾಣ

ಉದ್ಯಾನಗಳಲ್ಲಿ 54 ಕೋಟಿ ಲೀ. ನೀರು ಇಂಗಿಸುವ ಗುರಿ

• ಆರ್. ಮಂಜುನಾಥ್

ಬೆಂಗಳೂರು: ಮಳೆನೀರನ್ನು ಹಿಡಿದಿಟ್ಟುಕೊಂಡು, ಅಂತರ್ಜಲ ವೃದ್ಧಿಯತ್ತ ಹೆಚ್ಚು ಗಮನ ಕೇಂದ್ರೀಕರಿಸಿರುವ ಬಿಬಿಎಂಪಿ, ಉದ್ಯಾನಗಳಲ್ಲಿ ಮಳೆ ನೀರು ಇಂಗಿಸುವ ಕಾರ್ಯಕ್ಕೆ ಮತ್ತಷ್ಟು ವೇಗ ನೀಡುತ್ತಿದೆ. ಉದ್ಯಾನಗಳಲ್ಲಿ ನೀರು ಇಂಗಿಸುವ ಸಾಮರ್ಥ್ಯವು 26 ಕೋಟಿ ಲೀಟರ್‌ಗಳಷ್ಟಿದ್ದು, ಈ ವರ್ಷಾಂತ್ಯಕ್ಕೆ 54 ಕೋಟಿ ಲೀಟರ್‌ಗಳಿಗೆ ಹೆಚ್ಚಿಸುವ ಗುರಿ ಹೊಂದಿದೆ.

ಇಂಗುಗುಂಡಿಗಳ ಮೂಲಕ ಮಳೆ ನೀರನ್ನು ಹಿಡಿದಿಡುವ ಯೋಜನೆಯನ್ನು ಬಿಬಿಎಂಪಿ 2020ರಲ್ಲಿಯೇ ಆರಂಭಿಸಿತ್ತು. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿ ಮೂಲಕ 'ಯುನೈಟೆಡ್ ವೇ ಬೆಂಗಳೂರು' ಈ ಯೋಜನೆಯನ್ನು ಪಾಲಿಕೆಯ ಉದ್ಯಾನಗಳಲ್ಲಿ ಅನುಷ್ಠಾನಗೊಳಿಸಿದೆ.

ಉದ್ಯಾನಗಳಲ್ಲಿ ಇಂಗುಗುಂಡಿಗಳನ್ನು ನಿರ್ಮಿಸಿರುವುದರಿಂದ ಉದ್ಯಾನಕ್ಕೆ ಮಾತ್ರವಲ್ಲದೆ ಸುತ್ತಮುತ್ತಲಿನ ಎರಡು ಕಿ.ಮೀ ವ್ಯಾಪ್ತಿಯಲ್ಲೂ ಅಂತರ್ಜಲ ವೃದ್ಧಿಯಾಗುತ್ತಿದೆ. ಕೊಳವೆಬಾವಿಗಳಲ್ಲಿ ನೀರಿನ ಮಟ್ಟ ವೃದ್ಧಿಯಾಗುತ್ತಿದೆ. ಇಂಗುಗುಂಡಿಗಳು ನಿರ್ಮಾಣವಾದ ಮೂರು ವರ್ಷಗಳಲ್ಲಿ ಅದರ ಸಂಪೂರ್ಣ ಅನುಕೂಲ ಎಲ್ಲರಿಗೂ ಗೋಚರವಾಗುತ್ತದೆ.

ಬೆಂಗಳೂರಿನಲ್ಲಿ ವರ್ಷಕ್ಕೆ ಸರಾಸರಿ 970 ಮಿಲಿ ಮೀಟರ್ ಮಳೆಯಾಗುತ್ತದೆ. 59 ದಿನಗಳನ್ನು ಮಳೆದಿನ ಎಂದು ಪರಿಗಣಿಸಲಾಗಿದ್ದು, ಇದರಲ್ಲಿ ಪ್ರತಿಯೊಂದು ಇಂಗುಗುಂಡಿ ಕನಿಷ್ಠ 30 ದಿನ ಸಂಪೂರ್ಣ ತುಂಬುತ್ತದೆ. ಹೆಚ್ಚು ಇಂಗುಗುಂಡಿಗಳನ್ನು ನಿರ್ಮಿಸಿ ಹೆಚ್ಚು ಮಳೆ ನೀರನ್ನು ಹಿಡಿದಿಟ್ಟುಕೊಂಡು, ಇಂಗಿಸುವ ಉದ್ದೇಶ ಬಿಬಿಎಂಪಿಯ ತೋಟಗಾರಿಕೆ ವಿಭಾಗದ್ದಾಗಿದೆ.

ಬಿಬಿಎಂಪಿ ಉದ್ಯಾನಗಳಲ್ಲಿ ಮಳೆ ನೀರನ್ನು ಇಂಗಿಸಲು ಗುಂಡಿಗಳನ್ನು ನಿರ್ಮಿಸುವ ಕಾರ್ಯವನ್ನು 2020ರಿಂದಲೇ ಆರಂಭಿಸಿದೆ. ಪ್ರಾರಂಭದಲ್ಲಿ ನಿರ್ಮಿಸಲಾದ ಗುಂಡಿಗಳ ಸಂಖ್ಯೆಯ ಕೆಲವು ನೂರು ಮಾತ್ರ ಇತ್ತು. ಆಗ ನಿರ್ಮಾಣವಾಗಿರುವ ಇಂಗುಗುಂಡಿಗಳು ಇದೀಗ ಹೆಚ್ಚಿನ ಪ್ರಯೋಜನವನ್ನು ಸುತ್ತಮುತ್ತಲಿನ ಪ್ರದೇಶಕ್ಕೆ ನೀಡುತ್ತಿವೆ.

ಇಂಗುಗುಂಡಿಗಳನ್ನು ನಿರ್ಮಿಸುವ ಯೋಜನೆಗೆ 2024ರಿಂದ ವೇಗ ನೀಡಲಾಗಿದೆ.

'ಎಚ್‌ಬಿಆರ್ ಲೇಔಟ್‌ನಲ್ಲಿರುವ 'ಫಾರೆಸ್ಟ್ ಪಾರ್ಕ್'ನಲ್ಲಿ ಮೂರು ವರ್ಷಗಳ ಹಿಂದೆ ಇಂಗುಗುಂಡಿಗಳನ್ನು ನಿರ್ಮಿಸಲಾಯಿತು. ಆ ಸಂದರ್ಭದಲ್ಲಿ ಸ್ಥಳೀಯ ನಿವಾಸಿಗಳು ಉದ್ಯಾನದಲ್ಲಿ ಗುಂಡಿ ತೋಡಿ, ಹಾಳು ಮಾಡಲಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ್ದರು. ಆದರೆ, ಇಂದು ಅವರೆಲ್ಲ ಸಂತಸ ವ್ಯಕ್ತಪಡಿಸುತ್ತಿದ್ದಾರೆ. ಉದ್ಯಾನದಲ್ಲಿರುವ ಕೊಳವೆಬಾವಿಯಲ್ಲಿ ಎಂದಿಗೂ ನೀರಿರುತ್ತದೆ. ಅಷ್ಟೇ ಅಲ್ಲ, ಸುತ್ತಮುತ್ತಲಿನ ನಾಲ್ಕೂ ದಿಕ್ಕುಗಳಲ್ಲಿರುವ ನಿವಾಸಿಗಳ ಕೊಳವೆಬಾವಿಗಳಲ್ಲೂ ನೀರು ಮೇಲ್ಮಟ್ಟದಲ್ಲೇ ಇರುತ್ತದೆ. ಅವರೆಲ್ಲರೂ ಬಂದು ಅಭಿನಂದನೆ ಸಲ್ಲಿಸುವಾಗ ನಮ್ಮ ಶ್ರಮ ಸಾರ್ಥಕ ಎನಿಸುತ್ತದೆ' ಎಂದು ಬಿಬಿಎಂಪಿ ತೋಟಗಾರಿಕೆ ವಿಭಾಗದ ಉಪ ನಿರ್ದೇಶಕ ಚಂದ್ರಶೇಖರ್ ಸಂತಸ ವ್ಯಕ್ತಪಡಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ 1,280 ಉದ್ಯಾನಗಳಿವೆ. ಎಲ್ಲ ಉದ್ಯಾನಗಳಲ್ಲೂ ಇಂಗುಗುಂಡಿಗಳನ್ನು ನಿರ್ಮಿಸಲು ಸಾಧ್ಯವಿಲ್ಲ. ಕನಿಷ್ಠ ಅರ್ಧ ಎಕರೆಯಷ್ಟು ವಿಸ್ತಾರವಿರುವ ಉದ್ಯಾನದಲ್ಲಿ, ಮಳೆ ನೀರು ಹರಿಯುವ ಪ್ರದೇಶ, ಅಚ್ಚುಕಟ್ಟು ಪ್ರದೇಶವನ್ನು ಪರಿಶೀಲಿಸಿಕೊಂಡು ಇಂಗು ಗುಂಡಿಗಳನ್ನು ನಿರ್ಮಿಸಲಾಗುತ್ತದೆ. ಪಾಲಿಕೆ ವ್ಯಾಪ್ತಿಯ ಸುಮಾರು 450 ಉದ್ಯಾನಗಳು ವರ್ಷಾಂತ್ಯಕ್ಕೆ ಇಂಗು ಗುಂಡಿಗಳನ್ನು ಹೊಂದಲಿವೆ. ಮಳೆ ನೀರನ್ನು ಸಾಧ್ಯವಾದಷ್ಟೂ ಹೆಚ್ಚಾಗಿ ಹಿಡಿದಿಟ್ಟುಕೊಳ್ಳುವ ಉದ್ದೇಶವನ್ನು ಬಿಬಿಎಂಪಿ ಹೊಂದಿದೆ ಎಂದು ಮಾಹಿತಿ ನೀಡಿದರು.




2,607 ಇಂಗು ಗುಂಡಿಗಳು ಬಿಬಿಎಂಪಿಯ 178 ಉದ್ಯಾನಗಳಲ್ಲಿವೆ

1,28,100 ಲೀಟರ್ ನೀರು; ವರ್ಷವೊಂದಕ್ಕೆ ಇಂಗು ಗುಂಡಿಯೊಂದು ಸಂಗ್ರಹಿಸುವ ಮಳೆ ನೀರು

26,47,82,700 ಲೀಟರ್ ನೀರು ವರ್ಷವೊಂದಕ್ಕೆ 178 ಉದ್ಯಾನಗಳಲ್ಲಿ ಇಂಗುತ್ತಿರುವ ಮಳೆ ನೀರು

1,632 ಇಂಗು ಗುಂಡಿಗಳು; 2025ರ ಡಿಸೆಂಬರ್ ಅಂತ್ಯ ನಿರ್ಮಿಸುವ ಗುರಿ

54,30,15,900 ಲೀಟರ್ ನೀರು ಮುಂದಿನ ವರ್ಷ ಇಂಗು ಗುಂಡಿಗಳಲ್ಲಿ ಸಂಗ್ರಹವಾಗುವ ಮಳೆ ನೀರು



'ಉದ್ಯಾನಗಳ ಕೊಳವೆಬಾವಿಯಲ್ಲಿ ಹೆಚ್ಚಾದ ನೀರು'

'ಬಿಬಿಎಂಪಿಯ ಉದ್ಯಾನಗಳಲ್ಲಿ ಇಂಗುಗುಂಡಿಗಳನ್ನು ನಿರ್ಮಿಸಿರುವುದರಿಂದ ನಮ್ಮ ಕೊಳವೆಬಾವಿಗಳಲ್ಲಿ ನೀರು ಹೆಚ್ಚಿದೆ. 12 ಅಡಿ ಕೆಳಭಾಗದಲ್ಲಿ ಮಳೆ ನೀರು ಭೂಮಿಗೆ ಇಂಗುವುದರಿಂದ ಅಂತರ್ಜಲ ವೃದ್ಧಿಯ ಜೊತೆಗೆ, ಉದ್ಯಾನಗಳಲ್ಲಿರುವ ದೊಡ್ಡ ಮರ–ಗಿಡಗಳಿಗೆ ಅಗತ್ಯವಿರುವ ತೇವಾಂಶ ಲಭ್ಯವಾಗುತ್ತಿದೆ. ಇದಲ್ಲದೆ, ಸುತ್ತಮುತ್ತಲಿನ ನಿವಾಸಿಗಳು ಹೊಂದಿರುವ ಕೊಳವೆಬಾವಿಯಲ್ಲೂ ನೀರಿನ ಮಟ್ಟ ಹೆಚ್ಚಾಗುತ್ತಿದೆ' ಎಂದು ಬಿಬಿಎಂಪಿ ತೋಟಗಾರಿಕೆ ವಿಭಾಗದ ಉಪ ನಿರ್ದೇಶಕ ಚಂದ್ರಶೇಖರ್ ತಿಳಿಸಿದರು.

'ಉದ್ಯಾನಗಳಲ್ಲಿ ಮಳೆ ನೀರು ಸಂಗ್ರಹಿಸಿ, ಅದನ್ನು ಉದ್ಯಾನಗಳಲ್ಲಿರುವ ಗಿಡಗಳಿಗೆ ಉಪಯೋಗಿಸುವ ಉದ್ದೇಶವಿದೆ. ಚಿಕ್ಕ ಉದ್ಯಾನಗಳಲ್ಲಿ ಇದು ಸಾಧ್ಯವಿಲ್ಲದ್ದರಿಂದ, ದೊಡ್ಡ ಉದ್ಯಾನಗಳಲ್ಲಿ ಲಕ್ಷಾಂತರ ಲೀಟರ್ ಮಳೆ ನೀರು ಸಂಗ್ರಹಿಸುವುದು ನಮ್ಮ ಉದ್ದೇಶವಾಗಿದೆ. ಸಿಎಸ್‌ಆರ್ ಚಟುವಟಿಕೆಯಾದ್ದರಿಂದ ಪಾಲಿಕೆಗೆ ಆರ್ಥಿಕ ಹೊರೆಯಾಗುವುದಿಲ್ಲ' ಎಂದು ಹೇಳಿದರು.


'ಒಂದು ಶತಕೋಟಿ ಹನಿಗಳು ಇಂಗಿಸುವ ಗುರಿ'

'ನಗರದಲ್ಲಿ ಮಳೆ ನೀರನ್ನು ಇಂಗಿಸಿ ಅಂತರ್ಜಲವನ್ನು ವೃದ್ಧಿಸಲು 'ಯುನೈಟೆಡ್ ವೇ ಆಫ್ ಬೆಂಗಳೂರು' ಎಂಬ ಸರ್ಕಾರೇತರ ಸಂಸ್ಥೆ (ಎನ್‌ಜಿಒ) ಮೂಲಕ ನಾವು ಕಾರ್ಯನಿರ್ವಹಿಸುತ್ತಿದ್ದೇವೆ. 'ಒನ್ ಬಿಲಿಯನ್ ಡ್ರಾಪ್ಸ್' (ಒಂದು ಶತಕೋಟಿ ಹನಿಗಳು) ಎಂಬ ಯೋಜನೆ ಮೂಲಕ ಶತಕೋಟಿ ಲೀಟರ್ ನೀರನ್ನು ಬೆಂಗಳೂರಿನಲ್ಲಿ ಇಂಗಿಸುವ ಗುರಿ ಹೊಂದಿದ್ದೇವೆ' ಎಂದು ಯುನೈಟೆಡ್ ವೇ ಆಫ್ ಬೆಂಗಳೂರಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಜೇಶ್ ಕೃಷ್ಣನ್ ತಿಳಿಸಿದರು.

'ಹಲವು ಕಾರ್ಪೊರೇಟ್ ಸಂಸ್ಥೆಗಳಿಂದ ಸಿಎಸ್‌ಆರ್ ಹಣವನ್ನು ಸಂಗ್ರಹಿಸಿ, ನಗರದ ಉದ್ಯಾನಗಳಲ್ಲಿ ಇಂಗುಗುಂಡಿಗಳನ್ನು ನಿರ್ಮಿಸುತ್ತಿದ್ದೇವೆ. ಬಿಬಿಎಂಪಿ ನಮ್ಮ ಯೋಜನೆಯನ್ನು ಒಪ್ಪಿ, ಅನುಮತಿಸಿರುವ ಉದ್ಯಾನಗಳಲ್ಲಿ ಇಂಗುಗುಂಡಿ ನಿರ್ಮಿಸುತ್ತಿದ್ದೇವೆ. ಕಳೆದ ವರ್ಷದಲ್ಲಿ ಈ ಕಾರ್ಯಕ್ಕೆ ಹೆಚ್ಚು ವೇಗ ಸಿಕ್ಕಿದೆ' ಎಂದು ಹೇಳಿದರು.

ಯಾವ ವಲಯದಲ್ಲಿ ಎಷ್ಟು ಇಂಗು ಗುಂಡಿ?

ವಲಯ	ಉದ್ಯಾನ	ಇಂಗುಗುಂಡಿ
ಯಲಹಂಕ	51	356
ದಕ್ಷಿಣ	32	884
ಪೂರ್ವ	10	137
ಪೂರ್ವ	1	33
ದಾಸರಹಳ್ಳಿ	12	75
ಮಹದೇವಪುರ	9	123
ಬೊಮ್ಮನಹಳ್ಳಿ	58	849
ರಾಜರಾಜೇಶ್ವರಿ ನಗರ	5	150





ವಾಲ್ಮೀಕಿ ಜನಕಲ್ಯಾಣ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಉದ್ಘಾಟಿಸಿದ ಸಚಿವ ಕೆ.ಎನ್.ರಾಜಣ್ಣ

'ಸಮುದಾಯದ ಅಭಿವೃದ್ಧಿಗೆ ಒಟ್ಟಾಗಿ ಶ್ರಮಿಸಿ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಯಾವುದೇ ಸಮುದಾಯ ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಆ ಸಮುದಾಯದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಾಗಬೇಕು' ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದರು.

ಕೆ.ಆರ್.ಪುರದಲ್ಲಿ ಶ್ರೀ ವಾಲ್ಮೀಕಿ ಜನಕಲ್ಯಾಣ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಉದ್ಘಾಟಿಸಿ ಅವರು ಮಾತನಾಡಿದರು.

ವಾಲ್ಮೀಕಿ ಸಮುದಾಯ ಅಭಿವೃದ್ಧಿ ಹೊಂದಬೇಕಾದರೆ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಸಂಘಟನೆಗೆ ಹೆಚ್ಚು ಒತ್ತು ನೀಡಿದರೆ ಸಮುದಾಯ ಅಭಿವೃದ್ಧಿಯಾಗುತ್ತದೆ. ಈ ನಿಟ್ಟಿನಲ್ಲಿ ಪಕ್ಷಾತೀತವಾಗಿ ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸಬೇಕು' ಎಂದರು.

'ಸಹಕಾರ ಬ್ಯಾಂಕ್ ಸ್ಥಾಪಿಸುವುದು ಸುಲಭ. ಆದರೆ, ಅದನ್ನು ಮುನ್ನಡೆಸಿಕೊಂಡು ಹೋಗುವುದೇ ದೊಡ್ಡ ಸವಾಲು' ಎಂದು ಹೇಳಿದರು.

ಮುಖ್ಯಾಂಶಗಳು
- ಸಮುದಾಯದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಲಿ
- ಸಂಘಟನೆಗೆ ಹೆಚ್ಚು ಒತ್ತು ನೀಡಿದರೆ ಸಮುದಾಯದ ಅಭಿವೃದ್ಧಿ: ಸಚಿವ

ಮಾಜಿ ಸಚಿವ ಶ್ರೀರಾಮುಲು ಮಾತನಾಡಿ, 'ಒಳ್ಳೆಯ ಉದ್ದೇಶಕ್ಕಾಗಿ ಸಹಕಾರ ಸಂಘ ಸ್ಥಾಪನೆ ಮಾಡಿದ್ದೀರಿ. ಈ ಸಹಕಾರ ಬೆಂಗಳೂರಿಗೆ ಸೀಮಿತವಾಗದೆ, ಉತ್ತರ ಕರ್ನಾಟಕಕ್ಕೂ ವಿಸ್ತರಣೆಯಾಗಲಿ. ಆ ಭಾಗದ ಜನರಿಗೆ ಸಹಕಾರ ಸಂಘದ ಲಾಭ ಸಿಗಲಿ' ಎಂದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಬೈರತಿ ಬಸವರಾಜ, ಸೊಸೈಟಿ ಉಪಾಧ್ಯಕ್ಷ ಅರ್ಜುನ್ ನಾಗೇಂದ್ರ, ಎಲ್. ಮುನಿಸ್ವಾಮಿ, ಜಿ.ಕೆ.ನಾಗೇಶ್ ಇದ್ದರು.


ಸಚಿವ ಕೆ.ಎನ್.ರಾಜಣ್ಣ ಅವರು ಶ್ರೀವಾಲ್ಮೀಕಿ ಜನಕಲ್ಯಾಣ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಉದ್ಘಾಟಿಸಿದರು. ಶ್ರೀಮಹರ್ಷಿ ವಾಲ್ಮೀಕಿ ಗುರುಪೀಠ ಪೀಠಾಧ್ಯಕ್ಷ ಪ್ರಸನ್ನಾನಂದಪುರಿ ಸ್ವಾಮೀಜಿ, ಕೇಂದ್ರ ಪರಿಶಿಷ್ಟ ಜಾತಿ ಸಂಸದೀಯ ಕಲ್ಯಾಣ ಸಮಿತಿ ಅಧ್ಯಕ್ಷ ಫಗ್ಗನ್ ಸಿಂಗ್ ಕುಲಸ್ತೆ, ಮಾಜಿ ಶಾಸಕ ಬಿ.ಶ್ರೀರಾಮುಲು, ಸೊಸೈಟಿ ಅಧ್ಯಕ್ಷ ಬಾಕ್ಸರ್ ನಾಗರಾಜ್ ಕಾರ್ಯಕ್ರಮದಲ್ಲಿ ಹಾಜರಿದ್ದರು

ಬೆಟ್ಟಹಲಸೂರು–ರಾಜಾನುಕುಂಟೆ: ವಿಶೇಷ ರೈಲ್ವೆ ಯೋಜನೆ ಮಾನ್ಯತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು–ರಾಜಾನುಕುಂಟೆ ನಡುವಿನ 6.14 ಕಿ.ಮೀ. ರೈಲ್ವೆ ಮಾರ್ಗ ನಿರ್ಮಾಣ ಯೋಜನೆಯನ್ನು ವಿಶೇಷ ಯೋಜನೆಯೆಂದು ಕೇಂದ್ರ ರೈಲ್ವೆ ಸಚಿವಾಲಯ ಪರಿಗಣಿಸಿದೆ. ಈ ಬಗ್ಗೆ ಗೆಜೆಟ್ ಅಧಿಸೂಚನೆಯನ್ನು ಸೋಮವಾರ ಪ್ರಕಟಿಸಲಾಗಿದೆ.

ಈ ಮಾರ್ಗದ ನಡುವೆ ₹248 ಕೋಟಿ ವೆಚ್ಚದಲ್ಲಿ ರೈಲ್ವೆ ಬೈಪಾಸ್ ಮಾರ್ಗ (ಕಾರ್ಡ್ ಲೈನ್) ನಿರ್ಮಾಣಕ್ಕೆ ರೈಲ್ವೆ ಮಂಡಳಿ ಇತ್ತೀಚೆಗೆ ಮಂಜೂರಾತಿ ನೀಡಿದೆ. ಪ್ರಯಾಣಿಕ ರೈಲುಗಳು ಬೈಪಾಸ್ ಮಾರ್ಗದಲ್ಲಿ ಓಡಾಟ ನಡೆಸುವುದರಿಂದ ನಿಲ್ದಾಣದಲ್ಲಿ ಇತರ ರೈಲುಗಳ ಓಡಾಟಕ್ಕೆ ಅನುಕೂಲವಾಗಲಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು. 'ಈ ಯೋಜನೆಯನ್ನು ವಿಶೇಷ ಯೋಜನೆಯೆಂದು ಪರಿಗಣಿಸಬೇಕೆಂದು ನಾವು ಮಾಡಿಕೊಂಡ ಮನವಿಗೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಸ್ಪಂದಿಸಿದ್ದಾರೆ' ಎಂದರು.

ಈ ಮಾರ್ಗದಲ್ಲಿ ಜೋಡಿ ಹಳಿ ನಿರ್ಮಾಣಕ್ಕೆ ಒಪ್ಪಿಗೆ ನೀಡುವಂತೆ ನೈರುತ್ಯ ರೈಲ್ವೆಯು ರೈಲ್ವೆ ಮಂಡಳಿಗೆ 2022ರಲ್ಲಿ ಪ್ರಸ್ತಾವನೆ ಸಲ್ಲಿಸಿತ್ತು. ಸರ್ವೆ ಹಾಗೂ ಕಾರ್ಯಸಾಧ್ಯತಾ ಅಧ್ಯಯನ ನಡೆಸಲಾಗಿತ್ತು. ಹಳಿ ನಿರ್ಮಾಣ ಸೇರಿದಂತೆ ಸಿವಿಲ್ ಕಾಮಗಾರಿಗೆ ₹216 ಕೋಟಿ, ಸಿಗ್ನಲ್ ಕಾಮಗಾರಿಗೆ ₹21 ಕೋಟಿ, ಎಲೆಕ್ಟ್ರಿಕಲ್ ಕಾಮಗಾರಿಗೆ ₹14 ಕೋಟಿ ಸೇರಿದಂತೆ ಒಟ್ಟು ₹248 ಕೋಟಿ ವೆಚ್ಚ ಮಾಡಲು ಮಂಜೂರಾತಿ ನೀಡಲಾಗಿದೆ. ಸರಕು ಸಾಗಣೆ ರೈಲುಗಳ ಮಾರ್ಗ ಬದಲಾವಣೆಗೆ ಈ ಬೈಪಾಸ್ ಮಾರ್ಗ ಹೆಚ್ಚು ಅನುಕೂಲ ಕಲ್ಪಿಸಲಿದೆ.

'ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ನಗರ ಪ್ರದೇಶಗಳ ನಡುವೆ ತಡೆರಹಿತ ರೈಲು ಸೇವೆ ಒದಗಿಸುವ ಉದ್ದೇಶದಿಂದ ಮಾಹಿತಿ ತಂತ್ರಜ್ಞಾನ ನಗರದ ಸುತ್ತಲೂ 742 ಕಿ.ಮೀ. ಹೊಸ ರೈಲು ಮಾರ್ಗ ನಿರ್ಮಿಸಲು ಅಂತಿಮ ಸ್ಥಳ ಸಮೀಕ್ಷೆ ನಡೆಸಲಾಗುತ್ತಿದೆ. ಬೆಂಗಳೂರಿನ ಸುತ್ತಮುತ್ತಲಿನ ಪ್ರಮುಖ ಪಟ್ಟಣಗಳನ್ನು ಸಂಪರ್ಕಿಸುವ ದೇಶದ ಅತಿದೊಡ್ಡ ವೃತ್ತರೈಲು ಸಂಪರ್ಕಜಾಲವನ್ನು (ಸರ್ಕ್ಯುಲರ್ ರೈಲ್ವೆ) ನಿರ್ಮಿಸುವ ಯೋಜನೆ ಇದ್ದು, ಅದರ ಕಾರ್ಯಸಾಧ್ಯತೆಯ ಬಗ್ಗೆ ಅಧ್ಯಯನ ನಡೆಸಲಾಗುತ್ತಿದೆ. ಈ ಬೈಪಾಸ್ ಮಾರ್ಗದಿಂದ ಸರ್ಕ್ಯುಲರ್ ರೈಲ್ವೆ ಯೋಜನೆಗೂ ಅನುಕೂಲವಾಗಲಿದೆ' ಎಂದು ಸಚಿವರು ಹೇಳಿದರು.

'ರಾಜಾನುಕುಂಟೆ–ಬೆಟ್ಟಹಲಸೂರು ವಿಶೇಷ ರೈಲು ಯೋಜನೆಯಿಂದ ಸರಕು ವಾಹನಗಳಿಗೆ ಹೆಚ್ಚು ಉಪಯೋಗವಾಗುವ ನಿರೀಕ್ಷೆ ಇದೆ. ಈ ಯೋಜನೆಯಿಂದ ವಿಮಾನ ನಿಲ್ದಾಣಕ್ಕೆ ತೆರಳುವ ಜನರಿಗೆ ಸಹಾಯವಾಗಲಿದೆ' ಎಂದು ರೈಲ್ವೆ ತಜ್ಞ ಕೆ.ಎನ್.ಕೃಷ್ಣಪ್ರಸಾದ್ ಹೇಳಿದರು.

'ಪ್ರಿಯಾಂಕ್ ಗುರಿ ಮಾಡಿದರೆ ಸುಮ್ಮನೆ ಇರಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಿಯಾಂಕ್ ಖರ್ಗೆ, ಪರಮೇಶ್ವರ ನಮ್ಮ ಸಮುದಾಯದ ನಾಯಕರು. ಅವರ ನಾಯಕತ್ವ ನಾಶ ಮಾಡಲು ಹೋದರೆ ನೀವೇ ನಾಶ ಆಗುತ್ತೀರಿ' ಎಂದು ಬಿಜೆಪಿ ನಾಯಕರಿಗೆ ಮೈಸೂರಿನ ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಎಚ್ಚರಿಕೆ ನೀಡಿದರು.

ಛಲವಾದಿ ಗುರು ಪೀಠದ ಬಸವನಾಗಿದೇವ ಸ್ವಾಮೀಜಿ, ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಸೇರಿದಂತೆ ದಲಿತ ಮುಖಂಡರ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರಿಯಾಂಕ್ ಖರ್ಗೆ ಮನೆಗೆ ನೀವು ಮುತ್ತಿಗೆ ಹಾಕಿದರೆ ನಾವು ಸುಮ್ಮನೆ ಇರಬೇಕೇ? ಅಂಬೇಡ್ಕರ್ ನಿಮಗೆ ಫ್ಯಾಷನ್ ಇರಬಹುದು. ನಮಗೆ ಅಂಬೇಡ್ಕರ್ ಉಸಿರು' ಎಂದರು.


ಪ್ರಿಯಾಂಕ್ ಖರ್ಗೆ

'ಆತ್ಮಹತ್ಯೆ ಮಾಡಿಕೊಂಡಿರುವ ಗುತ್ತಿಗೆದಾರ ಸಚಿನ್ ಪಾಂಚಾಳ್ ಮರಣಪತ್ರದಲ್ಲಿ ಪ್ರಿಯಾಂಕ್ ಖರ್ಗೆ ಹೆಸರು ಎಲ್ಲಿದೆ? ಕಾನೂನು ಸುವ್ಯವಸ್ಥೆ ಕಾಪಾಡುವುದು ಕೂಡ ನಮ್ಮ ಕರ್ತವ್ಯ. ಹೀಗಾಗಿ ನಾವು ಸುಮ್ಮನಿದ್ದೇವೆ' ಎಂದರು.

'ನಿಮ್ಮ ಹಗರಣಗಳನ್ನು ಪ್ರಿಯಾಂಕ್ ಖರ್ಗೆ ಬಯಲಿಗೆ ಎಳೆದಿದ್ದಾರೆ. ಅವರನ್ನು ಗುರಿ ಮಾಡಿದರೆ ನಾವು ಸುಮ್ಮನೆ ಇರಲ್ಲ' ಎಂದೂ ಅವರು ಎಚ್ಚರಿಕೆ ನೀಡಿದರು.

ಛಲವಾದಿ ಗುರುಪೀಠದ ಬಸವದೇವನಾಗಿ ಸ್ವಾಮೀಜಿ ಮಾತನಾಡಿ, 'ನಾವು ಸಂವಿಧಾನದ ಮೇಲೆ ಬದುಕುತ್ತಿದ್ದೇವೆ. ಅದಕ್ಕೆ ಧಕ್ಕೆ ತರುವ ಕೆಲಸಕ್ಕೆ ನಾವು ಅವಕಾಶ ಕೊಡುವುದಿಲ್ಲ' ಎಂದರು.


ಶಾಸಕ ಬೈರತಿ ಬಸವರಾಜ ಅವರು ಕಲಾಸೌರಭ ಕಾರ್ಯಕ್ರಮ ಉದ್ಘಾಟಿಸಿದರು

'ಉತ್ತಮ ಶಿಕ್ಷಣ ಪಡೆದು, ದೇಶ ಮುನ್ನಡೆಸುವವರಾಗಿ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಮಕ್ಕಳು ಉತ್ತಮವಾಗಿ ವಿದ್ಯಾಭ್ಯಾಸ ಮಾಡುವ ಮೂಲಕ ದೇಶ ಹಾಗೂ ರಾಜ್ಯವನ್ನು ಮುನ್ನಡೆಸುವ ಕೆಲಸ ಮಾಡಬೇಕು' ಎಂದು ಶಾಸಕ ಬೈರತಿ ಬಸವರಾಜ ಹೇಳಿದರು.

ಕೆ.ಆರ್.ಪುರದ ಶ್ರೀವೆಂಕಟೇಶ್ವರ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ 46 ನೇ ಶಾಲಾ ವಾರ್ಷಿಕೋತ್ಸವದ ಕಲಾ ಸೌರಭ-2025 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ತಂದೆ, ತಾಯಿ ಮತ್ತು ಶಿಕ್ಷಕರ ಮಾರ್ಗದರ್ಶನದಲ್ಲಿ ಉನ್ನತ ಮಟ್ಟದ ವಿದ್ಯಾಭ್ಯಾಸ ಮಾಡಿದರೆ ಅಂದುಕೊಂಡಿದ್ದನ್ನು ಸಾಧಿಸಬಹುದು' ಎಂದು ಹೇಳಿದರು.

ಬೆಂಗಳೂರು ದಕ್ಷಿಣ ವಲಯದ ಶಿಕ್ಷಣಾಧಿಕಾರಿ ಸಿ.ಎನ್.ಗೋವಿಂದಪ್ಪ ಮಾತನಾಡಿ, 'ಶಿಕ್ಷಕರು, ಮಕ್ಕಳ ಬಗ್ಗೆ ವೈಯಕ್ತಿಕವಾಗಿ ಗಮನಹರಿಸಿ ಅವರನ್ನು ಪ್ರೋತ್ಸಾಹಿಸಬೇಕು' ಎಂದರು. ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಸಾಧನೆ ಮಾಡಿದ 60 ಮಕ್ಕಳಿಗೆ ಪ್ರೋತ್ಸಾಹಧನ ನೀಡಲಾಯಿತು. ಶಾಲೆ ಸಂಸ್ಥಾಪಕ ಅಧ್ಯಕ್ಷ ಕೆ.ವಿ.ಮುನಿಸ್ವಾಮಿ, ನಿರ್ದೇಶಕ ಪ್ರೊ.ವಿ.ಎಂ.ರವಿ, ಪ್ರಾಂಶುಪಾಲರಾದ ನಂದಿನಿ, ವಿಶಾಲ, ಗೀತಾಂಜಲಿ ಇದ್ದರು.

ಅಡುಗೆ ಅನಿಲ ಸಿಲಿಂಡರ್ ಸ್ಫೋಟ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಸೂರ್ಯಸಿಟಿ ಪೊಲೀಸ್ ಠಾಣೆ ವ್ಯಾಪ್ತಿಯ ಕಿತ್ತಗಾನಹಳ್ಳಿ ಗ್ರಾಮದಲ್ಲಿ ಸೋಮವಾರ ಅಡುಗೆ ಅನಿಲ ಸೋರಿಕೆಯಿಂದ ಸಿಲಿಂಡರ್ ಸ್ಫೋಟಗೊಂಡು ಇಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ.

ಸಿಲಿಂಡರ್ ಸ್ಫೋಟಗೊಂಡ ಮನೆ ಸೇರಿದಂತೆ ಸುತ್ತಮುತ್ತಲಿನ ನಾಲ್ಕು ಮನೆಗಳ ಗೋಡೆಗಳು ಛಿದ್ರವಾಗಿದೆ. ಎಂಟು ವಾಹನಗಳಿಗೆ ಹಾನಿಯಾಗಿದೆ.

ಘಟನೆಯಲ್ಲಿ ಮನೆಯಲ್ಲಿದ್ದ ಕೇರಳದ ಸುನೀಲ್ ಜೋಸೆಫ್, ತಮಿಳುನಾಡಿನ ವಿಷ್ಣು ಜಯರಾಜ್ ಮತ್ತು ಸಬೀನ್ ಸನ್ನಿ ಗಾಯಗೊಂಡಿದ್ದಾರೆ. ಇಬ್ಬರಿಗೆ ಶೇ 50ರಷ್ಟು ಸುಟ್ಟು ಗಾಯಗಳಾಗಿವೆ. ಗಾಯಾಳುಗಳು ನಾರಾಯಣ ಹೆಲ್ತ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮೂವರೂ ಬೊಮ್ಮಸಂದ್ರದ ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆಯಲ್ಲಿ ಎಕ್ಸ್‌ರೇ ವಿಭಾಗದ ನೌಕರರು. ಕಿತ್ತಗಾನಹಳ್ಳಿಯ ಕೃಷ್ಣಪ್ಪ ಲೇ ಔಟ್‌ನ ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ.

ಮೂವರೂ ಭಾನುವಾರ ರಾತ್ರಿ ಊಟ ಮುಗಿಸಿ ಮಲಗಿದ್ದರು. ಅಡುಗೆ ಮಾಡಿದ ನಂತರ ಸಿಲಿಂಡರ್ ಬಂದ್ ಮಾಡುವುದನ್ನು ಮರೆತಿದ್ದರು. ಚಳಿಯಿಂದಾಗಿ ಎಲ್ಲಾ ಕಿಟಕಿಗಳನ್ನು ಮುಚ್ಚಿ ಮಲಗಿದ್ದರು. ಸೋಮವಾರ ಬೆಳಗ್ಗೆ ಎದ್ದು ವಿದ್ಯುತ್ ದೀಪದ ಸ್ವಿಚ್ ಆನ್ ಮಾಡುತ್ತಿದ್ದಂತೆಯೇ ಸಿಲಿಂಡರ್ ಸ್ಫೋಟಗೊಂಡಿದೆ.

ನಾಲ್ಕು ಮನೆಗಳಿಗೆ ಸಂಪೂರ್ಣ ಹಾನಿಯಾಗಿದ್ದು, ಮನೆಯಲ್ಲಿದ್ದ ಎಲ್ಲಾ ವಸ್ತುಗಳು ಬೆಂಕಿಗೆ ಆಹುತಿಯಾಗಿವೆ. ಸ್ಫೋಟದ ತೀವ್ರತೆಗೆ ಕಿಟಕಿ ಬಾಗಿಲು, ಕಿಟಕಿ ಕಿತ್ತು ಹೋಗಿವೆ. ಮನೆಯ ಗೋಡೆ, ಸಿಮೆಂಟ್ ಕಂಬಗಳು ಕಿತ್ತು ಹೋಗಿವೆ. ಮನೆ ಗೋಡೆಯ ಸಿಮೆಂಟ್ ಇಟ್ಟಿಗೆ ಬಿದ್ದು ಮೂರು ಕಾರು ಮತ್ತು ಐದು ದ್ವಿಚಕ್ರ ವಾಹನಗಳಿಗೆ ಹಾನಿಯಾಗಿವೆ.

ವಿಷಯ ತಿಳಿಯುತ್ತಿದ್ದಂತೆ ಎಲೆಕ್ಟ್ರಾನಿಕ್‌ಸಿಟಿ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಗಾಯಾಳುಗಳನ್ನು ರಕ್ಷಿಸಿದರು. ಎಸ್‌ಪಿ ನಾಗೇಶ್ ಕುಮಾರ್, ಡಿವೈಎಸ್‌ಪಿ ಮೋಹನ್ ಸ್ಥಳಕ್ಕೆ ತೆರಳಿ ಪರಿಶೀಲಿಸಿದರು.

ಠೇವಣಿದಾರರು ಯಾವುದೇ ಭಯವಿಲ್ಲದೇ ಕಾರ್ಯನಿರ್ವಹಿಸಿ–ಮನವಿ

ಕಾಸ್ಮೋಸ್ ಬ್ಯಾಂಕ್ ಜೊತೆಗೆ ನ್ಯಾಷನಲ್ ಬ್ಯಾಂಕ್ ವಿಲೀನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ದಿ ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ ಮಹಾರಾಷ್ಟ್ರದ ದಿ ಕಾಸ್ಮೋಸ್ ಕೋ ಆಪರೇಟಿವ್ ಬ್ಯಾಂಕ್‌ನೊಂದಿಗೆ ವಿಲೀನವಾಗಿದೆ. ಕಾಸ್ಮೋಸ್ ಕೋ ಆಪರೇಟಿವ್ ಬ್ಯಾಂಕ್ ಸೋಮವಾರ ಕಾರ್ಯಾರಂಭ ಮಾಡಿದೆ.

ಕಾಸ್ಮೋಸ್ ಬ್ಯಾಂಕ್ ಅಧ್ಯಕ್ಷ ಪ್ರಹ್ಲಾದ್ ಕೋಕರೆ, ಆಡಳಿತ ಮಂಡಳಿ ಅಧ್ಯಕ್ಷ ಮಿಲಿಂದ್ ಕಾಳೆ ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿರ್ದೇಶನದಂತೆ ಎರಡೂ ಬ್ಯಾಂಕ್‌ಗಳ ಒಪ್ಪಿಗೆಯ ಮೇರೆಗೆ ವಿಲೀನ ಮಾಡಲಾಗಿದೆ. ನ್ಯಾಷನಲ್ ಬ್ಯಾಂಕ್‌ನ ಎಲ್ಲ 13 ಶಾಖೆಗಳು ಇನ್ನು ಮುಂದೆ ಹೊಸ ಹೆಸರು, ಹೊಸ ಆಡಳಿತ ಮಂಡಳಿಯೊಂದಿಗೆ ಕಾರ್ಯನಿರ್ವಹಿಸಲಿವೆ. ಅಲ್ಲಿನ ಉದ್ಯೋಗಿಗಳು ಮುಂದುವರಿಯಲಿದ್ದಾರೆ. ಹೇಗೆ ಕಾರ್ಯನಿರ್ವಹಿಸಬೇಕು ಎಂಬುದರ ಬಗ್ಗೆ ತರಬೇತಿ ನೀಡಲಾಗುತ್ತದೆ. ಕೆಲವು ಅಧಿಕಾರಿಗಳು ನಮ್ಮ ಬೇರೆ ಶಾಖೆಗಳಿಂದ ಬರಲಿದ್ದಾರೆ' ಎಂದು ತಿಳಿಸಿದರು.

ನ್ಯಾಷನಲ್ ಬ್ಯಾಂಕ್ ಬೆಂಗಳೂರಿನಲ್ಲಿ 12 ಮತ್ತು ಮೈಸೂರಿನಲ್ಲಿ ಒಂದು ಒಟ್ಟು 13 ಶಾಖೆಗಳನ್ನು ಹೊಂದಿದೆ. 2024ರ ಅಂತ್ಯದ ವೇಳೆ ₹1,326 ಕೋಟಿ ವ್ಯವಹಾರ ಹೊಂದಿದೆ. ಅದರಲ್ಲಿ ಶೇ 43ರಷ್ಟು ನಿವ್ವಳ ಅನುತ್ಪಾದಕ ಆಸ್ತಿ (ಎನ್‌ಪಿಎ) ಹೊಂದಿತ್ತು ಎಂದು ವಿವರಿಸಿದರು.

1906ರಲ್ಲಿ ಆರಂಭವಾಗಿರುವ ಕಾಸ್ಮೋಸ್ ಬ್ಯಾಂಕ್ ಏಳು ರಾಜ್ಯಗಳಲ್ಲಿ 183 ಶಾಖೆಗಳನ್ನು ಹೊಂದಿದೆ. ₹35 ಸಾವಿರ ಕೋಟಿ ವ್ಯವಹಾರ ಹೊಂದಿದ್ದು, ಶೇ 1.54ರಷ್ಟು ಮಾತ್ರ ಎನ್‌ಪಿಎ ಇದೆ. ಇಲ್ಲಿವರೆಗೆ 18 ಸಹಕಾರಿ ಬ್ಯಾಂಕ್‌ಗಳು ವಿಲೀನಗೊಂಡಿದ್ದು, ನ್ಯಾಷನಲ್ ಬ್ಯಾಂಕ್ 19ನೇಯದ್ದಾಗಿದೆ ಎಂದು ವಿವರ ನೀಡಿದರು.

ಕೋವಿಡ್ ನಂತರದ ಕಾಲದಲ್ಲಿ ತೀವ್ರ ಪೈಪೋಟಿಯಿಂದಾಗಿ ಸಣ್ಣ ಬ್ಯಾಂಕ್‌ಗಳನ್ನು ಉಳಿಸಿಕೊಳ್ಳುವುದು ಕಷ್ಟವಾಗಿದೆ. ಇಂಥ ಸನ್ನಿವೇಶದಲ್ಲಿ ಸಹಕಾರಿ ಕ್ಷೇತ್ರದ ತತ್ವವನ್ನು ಎತ್ತಿ ಹಿಡಿಯುವಲ್ಲಿ ಕಾಸ್ಮೋಸ್ ಬ್ಯಾಂಕ್ ಸಹಾಯ ಮಾಡಿದೆ. ಹಿಂದಿನ ಎಲ್ಲ ವಿಲೀನಗಳಲ್ಲಿ ಶೇ 6ರಷ್ಟು ಠೇವಣಿದಾರರು ತಮ್ಮ ಠೇವಣಿ ವಾಪಸ್ ಪಡೆದಿದ್ದಾರೆ. ಉಳಿದವರು ಮುಂದುವರಿಸಿದ್ದಾರೆ. ಠೇವಣಿದಾರರಿಗೆ ಭದ್ರತೆಯನ್ನು ಕಾಸ್ಮೋಸ್ ಒದಗಿಸಿದೆ. ನ್ಯಾಷನಲ್ ಬ್ಯಾಂಕ್ ಠೇವಣಿದಾರರು ಯಾವುದೇ ಭಯವಿಲ್ಲದೇ ಕಾರ್ಯನಿರ್ವಹಿಸಬಹುದು. ಸಾಲ ಬಾಕಿ ವಸೂಲಿಗೆ ನಿಯಮದ ಪ್ರಕಾರ ಕ್ರಮವಹಿಸಲಾಗುವುದು ಎಂದು ಹೇಳಿದರು.


ದಿ ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ ಮಹಾರಾಷ್ಟ್ರದ ದಿ ಕಾಸ್ಮೋಸ್ ಕೋ ಆಪರೇಟಿವ್ ಬ್ಯಾಂಕ್‌ನೊಂದಿಗೆ ವಿಲೀನವಾಗಿರುವ ಬಗ್ಗೆ ಕಾಸ್ಮೋಸ್ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಪ್ರಹ್ಲಾದ್ ಕೋಕರೆ ಮಾತನಾಡಿದರು. ಆಡಳಿತ ಮಂಡಳಿ ಅಧ್ಯಕ್ಷ ಮಿಲಿಂದ್ ಕಾಳೆ ಮತ್ತು ನಿರ್ದೇಶಕ ಸಚಿನ್ ಆಪ್ಟೆ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಕ್ಷೇಮ ಕುಶಲ



ವಯಸ್ಸಾದವರಲ್ಲಿ ಕಾಲುಗಳ ಮುಖ್ಯ ಕೀಲುಗಳಲ್ಲಿ ಸಮಸ್ಯೆ ಆರಂಭವಾಗುತ್ತದೆ. ಆರಂಭದಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುವ ನೋವು ಕ್ರಮೇಣ ನಿರಂತರವಾಗಿ ಕಾಡತೊಡಗುತ್ತದೆ.

ಕೀಲುನೋವಿಗೆ ಕಾರಣ ಹಲವು

ಡಾ. ವಿನಯ ಶ್ರೀನಿವಾಸ್

ಮಾನವದೇಹದ ಚಲನೆಯಲ್ಲಿ ಕೀಲುಗಳ ಪಾತ್ರ ಬಹಳ ಮುಖ್ಯ. ಯಾವುದೇ ಕೀಲುಗಳಲ್ಲಿ ವ್ಯತ್ಯಾಸವಾದಾಗ ಚಲನೆಯು ನೋವಿನಿಂದ ಕೂಡಿರುತ್ತದೆ ಅಥವಾ ಚಲನೆಯ ಮಿತಿ ಕಡಿಮೆಯಾಗುತ್ತದೆ. ಸಮಸ್ಯೆ ತೀವ್ರವಾದಾಗ ಆ ಭಾಗದ ಚಲನೆಯೇ ಅಸಾಧ್ಯವಾಗಲೂಬಹುದು.

ಕೀಲುನೋವಿಗೆ ಮುಖ್ಯ ಕಾರಣ ಕೀಲುಗಳಲ್ಲಿ ಕಾಣಿಸಿಕೊಳ್ಳುವ ಉರಿಯೂತ. ಉರಿಯೂತ ಹಲವು ಕಾರಣಗಳಿಗಾಗಿ ಉಂಟಾಗಬಹುದು. ಇದು ಕೆಲವೊಮ್ಮೆ ಒಂದೇ ಕೀಲಿನಲ್ಲಿ ಕಾಣಿಸಿಕೊಂಡರೆ ಇನ್ನು ಕೆಲವೊಮ್ಮೆ ಹಲವು ಕೀಲುಗಳಲ್ಲಿಯೂ ಕಾಣಿಸಿಕೊಳ್ಳುವುದಿದೆ. ವಿವಿಧ ಬ್ಯಾಕ್ಟೀರಿಯಾ ಮತ್ತು ವೈರಾಣುಗಳ ಸೋಂಕು, ಅನುವಂಶೀಯತೆ, ವ್ಯಕ್ತಿಯ ರೋಗನಿರೋಧಕ ವ್ಯವಸ್ಥೆಯಲ್ಲಿನ ದೋಷ (ಆಟೋ ಇಮ್ಯುನ್), ಅಪಘಾತ ಮತ್ತು ಪೆಟ್ಟು, ಕೀಲುಗಳಲ್ಲಿನ ವಯೋಸಹಜ ಬದಲಾವಣೆಗಳು ಇವೇ ಮೊದಲಾದವು ಕೀಲುನೋವಿಗೆ ಮುಖ್ಯ ಕಾರಣಗಳು.

ಊತ, ಕೆಂಪಾಗುವಿಕೆ, ನೋವು, ಬಿಗಿತ (ಸ್ಟಿಫ್‌ನೆಸ್), ಆ ಭಾಗದಲ್ಲಿ ನೀರಿನಾಂಶ ತುಂಬಿಕೊಳ್ಳುವುದು ಮೊದಲಾದುವು ಕೀಲುಗಳ ಉರಿಯೂತವಾದಾಗ ಕಂಡುಬರುವ ಲಕ್ಷಣಗಳು. ಹಿಮೋಫಿಲಿಯಾ, ಸೋರಿಯಾಸಿಸ್, ಗೌಟ್ ಹಾಗೂ ಕೆಲವು ನರಸಂಬಂಧಿತ ಕಾಯಿಲೆಗಳ ಭಾಗವಾಗಿಯೂ ಕೀಲುಗಳಲ್ಲಿ ಉರಿಯೂತ ಉಂಟಾಗಬಹುದು.

ಕೆಲವು ನಿರ್ದಿಷ್ಟ ಕೀಲುನೋವುಗಳು

ರುಮಟಾಯ್ಡ್ ಆರ್ಥ್ರೈಟಿಸ್: ಆನುವಂಶೀಯತೆ ಮತ್ತು ರೋಗನಿರೋಧಕ ವ್ಯವಸ್ಥೆಯಲ್ಲಿನ ದೋಷದಿಂದ (ಆಟೋ ಇಮ್ಯೂನ್) ಉಂಟಾಗುವ ಈ ಬಗೆಯ ಕೀಲುನೋವು ಪುರುಷರಿಗಿಂತ ಮಹಿಳೆಯರಲ್ಲಿ ಮೂರು ಪಟ್ಟು ಹೆಚ್ಚು. ಸಾಮಾನ್ಯವಾಗಿ ಬೆಳಿಗ್ಗೆ ಎದ್ದೊಡನೆಯೇ ಎರಡೂ ಕೈಗಳ ಬೆರಳುಗಳ ಸಂಧುಗಳಲ್ಲಿ ನೋವು, ಊತ ಮತ್ತು ಬಿಗಿತ ಇದರ ಮುಖ್ಯ ಲಕ್ಷಣಗಳು. ಕಣಕೈ (ರಿಸ್ಟ್), ಮೊಣಕೈ, ಮೊಣಕಾಲು ಮತ್ತು ಕಣಕಾಲು (ಯಾಂಕಲ್)ಗಳ ಸಂಧುಗಳಲ್ಲಿಯೂ ಉರಿಯೂತ ಕಾಣಿಸಿಕೊಳ್ಳಬಹುದು. ಪದೇ ಪದೇ ಕಾಣಿಸಿಕೊಳ್ಳುವ ಉರಿಯೂತದಿಂದಾಗಿ ಕೈಬೆರಳುಗಳು ವಿರೂಪತೆಯನ್ನು ಪಡೆಯುವ ಸಾಧ್ಯತೆಗಳೂ ಇರುತ್ತವೆ. ಎಕ್ಸ್-ರೆ ಪರೀಕ್ಷೆಯಲ್ಲಿ ನಿರ್ದಿಷ್ಟ ಲಕ್ಷಣ ಮತ್ತು ರಕ್ತದಲ್ಲಿ ರುಮಟ್ಯಾಯ್ಡ್ ಅಂಶ ಪತ್ತೆ ಮಾಡಿ ದೃಢಪಡಿಸಿದ ನಂತರ ಮೂಳೆತಜ್ಞರು ಚಿಕಿತ್ಸೆಯನ್ನು ಸೂಚಿಸುತ್ತಾರೆ. ನೋವು ಮತ್ತು ಉರಿಯೂತದ ನಿಯಂತ್ರಣಕ್ಕಾಗಿ ಔಷಧೋಪಚಾರ ಹಾಗೂ ಕೀಲುಗಳ ಚಲನೆಯ ಸುಧಾರಣೆಗೆ ಫಿಸಿಯೋಥೆರಪಿ ಚಿಕಿತ್ಸೆಯ ಮುಖ್ಯ ಭಾಗವಾಗಿರುತ್ತದೆ.

ಆಸ್ಟಿಯೋ ಆರ್ಥ್ರೈಟಿಸ್: ಮೂಳೆ ಹಾಗೂ ಕೀಲುಗಳಲ್ಲಿ ಆಗುವ ವಯೋಸಹಜ ಸವೆತ ಮತ್ತು ಸುತ್ತಲಿನ ಅಂಗಾಂಶಗಳ ಕ್ಷಮತೆಯಲ್ಲಿ ಇಳಿಮುಖವೇ ಇದಕ್ಕೆ ಮುಖ್ಯ ಕಾರಣ. ಇದರಲ್ಲಿ ಎರಡು ಬಗೆಯಿದ್ದು, ಮೊದಲು ಆರೋಗ್ಯವಾಗಿದ್ದ ಕೀಲುಗಳಲ್ಲಿ ವಯೋಸಹಜವಾಗಿ ಕಂಡುಬರುವ ಸಮಸ್ಯೆಯನ್ನು ಪ್ರಾಥಮಿಕ ಎಂದೂ, ಈ ಮೊದಲು ಸಮಸ್ಯೆಯಿದ್ದ ಕೀಲುಗಳಲ್ಲಿ ಕಾಣಿಸಿಕೊಳ್ಳುವ ಉರಿಯೂತವನ್ನು ಎರಡನೆಯ ಬಗೆಯೆಂದೂ ತಜ್ಞರು ಪರಿಗಣಿಸುತ್ತಾರೆ. ಮೊದಲಿನ ಬಗೆಯು ಸಾಮಾನ್ಯವಾಗಿ ದೇಹದ ತೂಕವನ್ನು ಹೆಚ್ಚು ಹೊರುವ ಕೀಲುಗಳಾದ ಮಂಡಿ ಮತ್ತು ಸೊಂಟದ ಕೀಲು(ಹಿಪ್ ಜಾಯಿಂಟ್)ಗಳಲ್ಲಿ ಸಾಮಾನ್ಯ. ಎರಡನೆಯ ಬಗೆಯು ಜನ್ಮಜಾತವಾಗಿ ವಿರೂಪತೆಯಿದ್ದ ಕೀಲುಗಳಲ್ಲಿ, ಹಿಂದಿನ ಅಪಘಾತಗಳಿಂದ ವ್ಯತ್ಯಾಸವಾದ ಕೀಲುಗಳಲ್ಲಿ, ಈ ಮೊದಲ ಮೂಳೆಮುರಿತದಲ್ಲಿ ಅಸಮರ್ಪಕ ಜೋಡಣೆಯಾದ ಕೀಲುಗಳಲ್ಲಿ, ಬೊಜ್ಜು, ಅಧಿಕ ದೇಹತೂಕವಿರುವವರಲ್ಲಿ ಕಂಡು ಬರುತ್ತದೆ.

ಲಕ್ಷಣಗಳು

ಸಾಮಾನ್ಯವಾಗಿ ವಯಸ್ಸಾದ ಹಿರಿಯರಲ್ಲಿ, ಕಾಲುಗಳ ಮುಖ್ಯ ಕೀಲುಗಳಲ್ಲಿ ಸಮಸ್ಯೆ ಆರಂಭವಾಗುತ್ತದೆ. ಸೊಂಟದ ಕೀಲು ಹಾಗೂ ಮೊಣಕಾಲಿನ ಕೀಲುಗಳಲ್ಲಿ ಈ ಸಮಸ್ಯೆ ಸಾಮಾನ್ಯ.

ಮೊಟ್ಟಮೊದಲಿನ ಲಕ್ಷಣ ಎಂದರೆ ನೋವು. ಆರಂಭದಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುವ ನೋವು ಕ್ರಮೇಣ ನಿರಂತರವಾಗಿ ಕಾಡತೊಡಗುತ್ತದೆ. ಮೊದಮೊದಲು ದೀರ್ಘಕಾಲದ ವಿಶ್ರಾಂತಿಯ ಬಳಿಕ ಎದ್ದು ನಡೆಯುವಾಗ ಕಾಣಿಸುವ ನೋವು ಬರುಬರುತ್ತಾ ಚಟುವಟಿಕೆಗಳನ್ನು ಮಾಡುವಾಗ ಮತ್ತು ನಂತರವೂ ಕಾಣಿಸಿಕೊಳ್ಳುತ್ತದೆ. ಕೀಲುಗಳಲ್ಲಿ ಊತ ಹಾಗೂ ಸುತ್ತಲಿನ ಸ್ನಾಯುಗಳಲ್ಲಿ ಬಿಗಿತ ಕೂಡ ಸಾಮಾನ್ಯ. ಕೆಲವರು ಕೀಲುಗಳ ಚಲನೆಯಲ್ಲಿ ಒಂದು ರೀತಿಯ ಶಬ್ದವನ್ನೂ (ಕ್ರಿಪಿಟಸ್) ದೂರುತ್ತಾರೆ. ಕೆಲವೊಮ್ಮೆ ಕೀಲುಗಳಲ್ಲಿ ಒಂದು ಬಗೆಯ ಅಸ್ಥಿರತೆಯ (ಇನ್ ಸ್ಟೆಬಿಲಿಟಿ) ಭಾವವೂ ಕಾಡಬಹುದು.

ಸಮಸ್ಯೆಯನ್ನು ಕೀಲುಗಳ ಎಕ್ಸ್-ರೆ ತಪಾಸಣೆಯಲ್ಲಿ ಬಹುತೇಕ ಪತ್ತೆ ಮಾಡಬಹುದಾದರೂ ಇತರ ಕಾರಣಗಳಾವುವೂ ಪೂರಕವಾಗಿಲ್ಲ ಎಂಬುದನ್ನು ರಕ್ತಪರೀಕ್ಷೆಯಿಂದ ದೃಢಪಡಿಸಿಕೊಳ್ಳುವುದು ಮುಖ್ಯ.

ಚಿಕಿತ್ಸೆ

ವಯೋಸಹಜ ಆಸ್ಟಿಯೋ ಆರ್ಥ್ರೈಟಿಸ್ ಸಮಸ್ಯೆ ಒಮ್ಮೆ ಆರಂಭವಾದರೆ ನಿಧಾನಗತಿಯಲ್ಲಿ ಹೆಚ್ಚುತ್ತಾ ಹೋಗುತ್ತದೆ. ಇದನ್ನು ನಿಯಂತ್ರಿಸಲು ಮೂಳೆತಜ್ಞರು ಹಲವು ಕ್ರಮಗಳನ್ನು ಸೂಚಿಸುತ್ತಾರೆ. ನೋವುನಿವಾರಕಗಳ ಜೊತೆಯಲ್ಲಿ ಕೀಲುಗಳಲ್ಲಿನ ಮೃದ್ವಸ್ಥಿಯನ್ನು ಸದೃಢಗೊಳಿಸಲು ಪೂರಕ ಔಷಧಗಳು ಹಾಗೂ ಅದರ ಕ್ಷಮತೆಯನ್ನು ಹೆಚ್ಚಿಸಲು ಕೀಲುಗಳ ಒಳಗೇ 'ಸೋಡಿಯಂ ಹಯಲ್ಯುರೊನಾನ್' ಎಂಬ ಚುಚ್ಚುಮದ್ದು ಕೂಡ ನೆರವಾಗುತ್ತದೆ ಎನ್ನುತ್ತವೆ, ಅಧ್ಯಯನಗಳು.

ಚಿಕಿತ್ಸೆಯ ಇತರ ಕ್ರಮಗಳು

- ದೇಹದ ತೂಕವನ್ನು ಎತ್ತರ ಮತ್ತು ವಯಸ್ಸಿಗೆ ತಕ್ಕಂತೆ ಕಾಪಾಡಿಕೊಳ್ಳುವುದು.
- ನಿತ್ಯದ ಚಟುವಟಿಕೆಗಳಲ್ಲಿ ತೊಂದರೆಗೊಳಗಾದ ಕೀಲುಗಳ ಮೇಲೆ ಒತ್ತಡವಾಗದಂತೆ ಗಮನವನ್ನು ವಹಿಸುವುದು. (ಮಂಡಿಯನ್ನು ಸ್ಥಿರಗೊಳಿಸುವ ಮಂಡಿ ಕ್ಯಾಪ್ ಬಳಕೆ.)
- ಮೊಣಕಾಲಿನ ಕೀಲುಗಳಲ್ಲಿ ಸಮಸ್ಯೆಯಿದ್ದಾಗ ಹೆಚ್ಚು ಅವಧಿಯವರೆಗೆ ನಿಲ್ಲುವುದನ್ನು ಹಾಗೂ ಓಡುವುದನ್ನು ಮಾಡದಿರುವುದು.
- ನೆಲದ ಮೇಲೆ ಹಾಗೂ ಕುಕ್ಕುರಗಾಲಿನಲ್ಲಿ ಕುಳಿತುಕೊಳ್ಳದಿರುವುದು.
- ಆ ಭಾಗಕ್ಕೆ ಶಾಖದ ಚಿಕಿತ್ಸೆ ಕೊಡುವುದರಿಂದ ನೋವು ಮತ್ತು ಬಿಗಿತವನ್ನು ಕಡಿಮೆ ಮಾಡಿಕೊಳ್ಳಬಹುದು.
- ಆ ಭಾಗದ ಮಾಂಸಖಂಡಗಳನ್ನು ಸದೃಢಗೊಳಿಸಿಕೊಳ್ಳಲು ನಿಯಮಿತವಾಗಿ ನಿರ್ದಿಷ್ಟ ವ್ಯಾಯಾಮಗಳನ್ನು ರೂಢಿಸಿಕೊಳ್ಳುವುದು. ಇದಕ್ಕಾಗಿ ಹತ್ತಿರದ ಫಿಸಿಯೋಥೆರಪಿ ಕೇಂದ್ರದಲ್ಲಿ ನುರಿತ ಫಿಸಿಯೋಥೆರಪಿಸ್ಟ್ ಬಳಿ ಸಲಹೆಯನ್ನು ಪಡೆಯುವುದು ಸೂಕ್ತ.

ಈ ಮೇಲಿನ ಕ್ರಮಗಳಾವುವೂ ಪರಿಣಾಮ ಬೀರದಿದ್ದಾಗ, ಶಸ್ತ್ರಚಿಕಿತ್ಸೆಯೇ ಬೇಕಾಗಬಹುದು.



ಉಗುರಿನ ಕೆಲಸಕ್ಕೆ ಕೊಡಲಿ ಏಕೆ?

ಡಾ. ಕಿರಣ್ ವಿ. ಎಸ್.

ಈಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಒಂದು ಸಂಗತಿ ಹರಿದಾಡುತ್ತಿದೆ. ಎಡಭುಜದ ನೋವಿನಿಂದ ನರಳುತ್ತಿದ್ದ ವ್ಯಕ್ತಿಯೊಬ್ಬರು ಮೂವರು ಸೂಪರ್-ಸ್ಪೆಷಾಲಿಟಿ ವೈದ್ಯರನ್ನು ಭೇಟಿಯಾಗಿ, ಅನೇಕ ಪರೀಕ್ಷೆಗಳನ್ನು ಮಾಡಿಸಿ, ಅನಂತರ ಅದು ಸಾಮಾನ್ಯ ಕಾಯಿಲೆ ಎಂದು ಪತ್ತೆಯಾದ ಪ್ರಸಂಗ. ವೈದ್ಯಕೀಯ ಸೂಪರ್-ಸ್ಪೆಷಾಲಿಟಿ ಯಾವ ರೀತಿಯಲ್ಲಿ ಆರೋಗ್ಯಸಮಸ್ಯೆಯನ್ನು ಆಮೂಲಾಗ್ರವಾಗಿ ಪರಿಶೀಲಿಸಲು ಅಡ್ಡಿಯಾಗಿದೆ ಎನ್ನುವುದಕ್ಕೆ ಇದೊಂದು ಷರಾ.

ಇದು ಬಹುತೇಕ ರೋಗಿಗಳು ಮನಗಂಡಿರುವ ಇಂದಿನ ವಾಸ್ತವದ ಚಿತ್ರಣ. ಎದೆನೋವು ಎಂದು ಹೃದ್ರೋಗತಜ್ಞರ ಬಳಿ ಹೋಗಿ, ಹತ್ತಾರು ಸಾವಿರ ರೂಪಾಯಿಗಳ ಪರೀಕ್ಷೆಗಳನ್ನು ಮಾಡಿಸಿ, ಬಳಿಕ 'ನಿಮ್ಮ ಹಾರ್ಟು ನಾರ್ಮಲ್ಲಾಗಿದೆ. ಏನೂ ಔಷಧ ಬೇಕಿಲ್ಲ' ಎನಿಸಿಕೊಂಡ ರೋಗಿ, 'ನನಗೆ ಎದೆನೋವು ಇನ್ನೂ ಇದೆ' ಎನ್ನುತ್ತಾರೆ. 'ಹಾಗಿದ್ದರೆ ಗ್ಯಾಸ್ಟ್ರಿಕ್ ಆಗಿರಬಹುದು. ಹೊಟ್ಟೆಯ ತಜ್ಞರ ಬಳಿ ಹೋಗಿ' ಎನ್ನುವ ಉತ್ತರ ಬರುತ್ತದೆ. ಮತ್ತೆ ಸಾವಿರಾರು ರೂಪಾಯಿಗಳ ವೆಚ್ಚದ ಮುಂದಿನ ಪರೀಕ್ಷೆಗಳ ಸರದಿ; ರೋಗಿಗೆ ಮಾತ್ರ ಆತಂಕದ ನಿವಾರಣೆ ಇಲ್ಲ!

ಹೀಗೇಕೆ ಆಗುತ್ತಿದೆ? ಇದಕ್ಕೆ ಪರಿಹಾರವೇನು? – ಎಂದು ಯೋಚಿಸುವಾಗ, ಇತರ ದೇಶಗಳಲ್ಲಿ ಏನಾಗುತ್ತಿದೆ ಎನ್ನುವುದನ್ನು ಗಮನಿಸಬಹುದು. ಮುಂದುವರೆದ ದೇಶಗಳಲ್ಲಿ ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ಎಂಬ ಮೂರು ವೈದ್ಯಕೀಯ ಹಂತಗಳಿವೆ. ಯಾವುದೇ ರೋಗಿಗೆ ಮೊದಲು ಚಿಕಿತ್ಸೆ ನೀಡುವವರು ಪ್ರಾಥಮಿಕ ಹಂತದ ವೈದ್ಯರು. ಅವರು ರೋಗಿಯ ಕಾಯಿಲೆಯ ವಿವರಗಳನ್ನು ಕೇಳಿ ತಿಳಿದು, ಭೌತಿಕ ಪರೀಕ್ಷೆ ಮಾಡಿ, ರೋಗಿಯ ರೋಗಲಕ್ಷಣಗಳಿಗೆ ಯಾವುದು ಅತ್ಯಂತ ಸಾಮಾನ್ಯ ಕಾರಣವೋ ಅವುಗಳಿಗೆ ಚಿಕಿತ್ಸೆ ನೀಡುತ್ತಾರೆ. ರೋಗ ಗುಣವಾಗದಿದ್ದರೆ, ಅದರ ಮುಂದಿನ ಕಾರಣಗಳ ಪತ್ತೆಕಾರ್ಯ ನಡೆಯುತ್ತದೆ. ಪ್ರಾಥಮಿಕ ಹಂತದಲ್ಲಿ ಪ್ರಯೋಗಾಲಯದ ಪರೀಕ್ಷೆಗಳು ತೀರಾ ಕಡಿಮೆ. ಶೇಕಡಾ 80ರಷ್ಟು ಕಾಯಿಲೆಗಳು ಈ ಹಂತದಲ್ಲೇ ಗುಣವಾಗುತ್ತವೆ. ಇಲ್ಲವಾದರೆ ಪ್ರಾಥಮಿಕ ಹಂತದಿಂದ ರೋಗಿ ದ್ವಿತೀಯ ಹಂತಕ್ಕೆ ಏರಬೇಕಾಗುತ್ತದೆ.

ದ್ವಿತೀಯ ಹಂತದ ವೈದ್ಯರ ವಿದ್ಯಾರ್ಹತೆ ಹೆಚ್ಚು; ಮೊದಲ ಹಂತದಲ್ಲಿ ಗುಣವಾಗದ ರೋಗಿಗಳನ್ನು ಪರೀಕ್ಷಿಸಿದ ಅನುಭವವೂ ಹೆಚ್ಚು. ಇದರ ಆಧಾರದಮೇಲೆ ಅವರು ಕೆಲವು ಪರೀಕ್ಷೆಗಳನ್ನು ಮಾಡಿ ಚಿಕಿತ್ಸೆಯನ್ನು ನೀಡುತ್ತಾರೆ. ರೋಗಿಯ ಕಾಯಿಲೆಯ ಕಾರಣಗಳು ಎರಡನೆಯ ಹಂತದಲ್ಲಿ ಬಹುತೇಕ ಪತ್ತೆಯಾಗುತ್ತವೆ. ನೂರಕ್ಕೆ ತೊಂಬತ್ತೈದಕ್ಕಿಂತ ಅಧಿಕ ರೋಗಿಗಳಿಗೆ ಈ ಹಂತ ಸಾಕಾಗುತ್ತದೆ. ಈ ಸ್ತರದ ಚಿಕಿತ್ಸೆಗೂ ಗುಣವಾಗದ ಪ್ರತಿಶತ ಐದಕ್ಕಿಂತ ಕಡಿಮೆ ರೋಗಿಗಳು ಮಾತ್ರ ಸೂಪರ್-ಸ್ಪೆಷಾಲಿಟಿ ಎನ್ನುವ ಮೂರನೆಯ ಹಂತದ ವಿಶ್ಲೇಷಣೆಗೆ ಒಳಪಡಬೇಕಾಗುತ್ತದೆ. ಇಲ್ಲಿ ಆಯಾ ಕಾಯಿಲೆಯ ವಿಶೇಷ ತಜ್ಞರು ಇರುತ್ತಾರೆ. ಈ ಹಂತದಲ್ಲಿ ಪ್ರಯೋಗಾಲಯದ ಪರೀಕ್ಷೆಗಳು ಅಧಿಕ ಮತ್ತು ದುಬಾರಿ. ಮುಂದುವರೆದ ದೇಶಗಳಲ್ಲಿ ತುರ್ತುಪರಿಸ್ಥಿತಿಯನ್ನು ಹೊರತುಪಡಿಸಿ ಯಾವ ರೋಗಿಯೂ ಸೀದಾ ಮೂರನೇ ಹಂತದ ತಜ್ಞವೈದ್ಯರನ್ನು ಸಂಪರ್ಕಿಸಲು ಸಾಧ್ಯವಿಲ್ಲ. ಮೊದಲ ಶ್ರೇಣಿಯಿಂದ ಎರಡನೇ ಶ್ರೇಣಿಗೆ, ಅನಂತರವೇ ಮೂರನೆಯ ಶ್ರೇಣಿಗೆ ಅಧಿಕೃತವಾಗಿ ವರ್ಗಾವಣೆ ಆಗಬೇಕು. ವ್ಯವಸ್ಥೆಯ ಶಿಸ್ತು ಹಾಗಿದೆ. ಒಂದು ವೇಳೆ ವ್ಯವಸ್ಥೆಯ ಶಿಸ್ತನ್ನು ಮೀರಬೇಕೆಂದರೆ ಅದಕ್ಕೆ ಬಹಳ ದುಬಾರಿ ವೆಚ್ಚವನ್ನು ತೆರಬೇಕಾಗುತ್ತದೆ.

ನಮ್ಮ ದೇಶದಲ್ಲಿ ಇಂತಹ ವರ್ಗೀಕರಣ ಇಲ್ಲ. ನಮ್ಮ ಆರೋಗ್ಯವ್ಯವಸ್ಥೆ ತೀರಾ ವಿಲಕ್ಷಣವಾಗಿ ರೂಪುಗೊಂಡಿದೆ. ನಮಗೆ ಶಿಸ್ತಿನ ಅಗತ್ಯವೇ ಇಲ್ಲ. ಎಲ್ಲವೂ ಝಟ್-ಪಟ್ ವೇಗದಿಂದ ಆಗಬೇಕು. ವ್ಯವಸ್ಥೆಯಲ್ಲಿ ಬಿಗಿ ಇಲ್ಲ; ಅಧಿಕೃತ ವರ್ಗಾವಣೆ ಬೇಕಿಲ್ಲ; ರೋಗನಿದಾನದ ಪ್ರಕ್ರಿಯೆಯ ಹಂತಗಳ ಅರಿವಿಲ್ಲ. ಔಷಧವನ್ನು ತೆಗೆದುಕೊಂಡ ಅಲ್ಪಕಾಲದಲ್ಲಿಯೇ ಸಮಸ್ಯೆ ಸರಿಹೋಗದಿದ್ದರೆ ನಮಗೆ ಚಡಪಡಿಕೆ. ಮೊದಲನೆಯ ಭೇಟಿಗೆ ಕಾಯಿಲೆ ಗುಣವಾಗದಿದ್ದರೆ ಆ ವೈದ್ಯನೇ ಅಸಮರ್ಥ; ಅವನ ಕೈಗುಣ ಸರಿಯಿಲ್ಲ. ಇದರಮೇಲೆ ಗೂಗಲ್ ಮಹಾಶಯನ ನೆರವು ಬೇರೆ! ತಲೆನೋವು ಎಂದಾಕ್ಷಣ ಏಕ್ದಂ ನರರೋಗತಜ್ಞರನ್ನು ಭೇಟಿ ಆಗಬಹುದು. ತಲೆನೋವಿನ ನೂರಾರು ಕಾರಣಗಳನ್ನೂ ಆ ತಜ್ಞರೇ ಪರಿಷ್ಕರಿಸಬೇಕು. ಸಮಯದ, ಒತ್ತಡದ ರೀತ್ಯಾ ಇದು ಬಹಳ ತ್ರಾಸದ ಕೆಲಸ. ಯಾವ ಕೆಲಸವನ್ನು ಮುಂದುವರೆದ ದೇಶಗಳಲ್ಲಿ ಮೂರು ವೈದ್ಯರು ಸಾಕಷ್ಟು ಸಮಯ ತೆಗೆದುಕೊಂಡು ಮಾಡುತ್ತಾರೋ, ಅದೇ ಕೆಲಸವನ್ನು ಇಲ್ಲಿ ಮೇಲಿನ ಸ್ತರದ ಒಬ್ಬ ತಜ್ಞ ಕೆಲವೇ ನಿಮಿಷಗಳಲ್ಲಿ ಮಾಡುವುದು ಅಸಮಂಜಸ. ನಮ್ಮ ದೇಶದ ರೋಗಿಗಳ ಸಂಖ್ಯಾಬಾಹುಳ್ಯ ಈ ಒತ್ತಡವನ್ನು ಅಧಿಕಗೊಳಿಸುತ್ತದೆ. ಅಲ್ಲದೇ, ಮೂರನೆಯ ಸ್ತರದ ತಜ್ಞವೈದ್ಯನ ಮಾತು ಅಂತಿಮ ಎನಿಸಿಕೊಳ್ಳುವುದರಿಂದ, ಆತ ಅವಕಾಶಗಳನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. ತನ್ನ ಬಳಿ ಬಂದ ಪ್ರತಿ ರೋಗಿಗೂ ಎಲ್ಲಾ ರೀತಿಯ ದುಬಾರಿ ಪರೀಕ್ಷೆಗಳನ್ನು ನಡೆಸಿ ತನ್ನ ತೀರ್ಪು ನೀಡಬೇಕಾಗುತ್ತದೆ. ಹೀಗಾಗಿ ಪ್ರಯೋಗಾಲಯಗಳಿಗೆ ಸುಗ್ಗಿ. ಇಂತಹ ಸಂದರ್ಭದಲ್ಲಿ ಅವರ ಮಧ್ಯೆ ಅನೈತಿಕ ಒಪ್ಪಂದಗಳು ಏರ್ಪಡುವುದು ಸಾಧ್ಯ. ಇಂತಹ ಅಶಿಸ್ತಿನ ಪರಿಸರದಲ್ಲಿ ಕೊನೆಗೆ ಕಂಗೆಟ್ಟು ಹೋಗುವುದು ರೋಗಿಯೇ.

ಈ ಸಮಸ್ಯೆಗಳನ್ನು ಮೀರಬೇಕಂದರೆ ನಮ್ಮ ಸರ್ಕಾರಕ್ಕೆ ಒಂದು ಸ್ಪಷ್ಟ ಆರೋಗ್ಯ ನೀತಿ ಬೇಕು. ನಮ್ಮ ದೇಶದ ವಿಚಿತ್ರ ಸಮಸ್ಯೆಗಳಿಗೆ ನಮ್ಮದೇ ಆದ ವಿನೂತನ ಪರಿಹಾರಗಳು ಬೇಕು. ಶ್ರೇಣೀಕೃತ ಆರೋಗ್ಯವ್ಯವಸ್ಥೆಯ ನಿರ್ಮಾಣವನ್ನು ಸರ್ಕಾರ ಜಾರಿಗೊಳಿಸಬೇಕು. ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಆರೋಗ್ಯ ಸಂಸ್ಥೆಗಳಿಗೆ ವರ್ಗೀಕೃತ ಶ್ರೇಣಿ ನೀಡಬೇಕು. ಅವುಗಳಲ್ಲಿ ಇರುವ ಅನುಕೂಲಕ್ಕೆ ತಕ್ಕಂತೆ, ಅವುಗಳು ಮಾಡಬಹುದಾದ ಚಿಕಿತ್ಸೆಯನ್ನು ನಿಯಂತ್ರಿಸಬೇಕು. ರೋಗಿಗಳಿಗೆ ಅಂತಿಮವಾಗಿ ಒಳಿತನ್ನು ಮಾಡಲು ಇಡೀ ವ್ಯವಸ್ಥೆಯಲ್ಲಿ ಶಿಸ್ತು ಅತ್ಯಗತ್ಯ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಒಂದು ಘನಬಹುಪದೋಕ್ತಿಯ ಮಹತ್ತಮ ಘಾತ ಅಥವಾ ಡಿಗ್ರಿಯು

(A) 1 (B) 2
(C) 3 (D) 4

ಉತ್ತರ:– (ಸಿ)3

2) ಈ ಕೆಳಗಿನವುಗಳಲ್ಲಿ ಯಾವುದು ಸಮಾಂತರ ಶ್ರೇಢಿಯಾಗಿದೆ?

(A) 1, – 1, – 2, ... (B) 1, 5, 9, ...
(C) 2, – 2, 2, – 2, ... (D) 1, 2, 4, 8, ...

ಉತ್ತರ:– (ಬಿ) 1, 5, 9

3) $2x^2 + ax + 6 = 0$ ವರ್ಗ ಸಮೀಕರಣದ ಒಂದು ಮೂಲವು 2 ಆದಾಗ a ಯ ಬೆಲೆ

(A) 7 (B) 2 7
(C) – 7 (D) 2

ಉತ್ತರ:– (ಸಿ) – 7

4) $a_1x + b_1y + C_1 = 0$ ಹಾಗೂ $a_2x + b_2y + C_2 = 0$ ರೂಪದ ರೇಖಾತ್ಮಕ ಸಮೀಕರಣಗಳಿಗೆ ಎಳೆದ ರೇಖೆಗಳು ಪರಸ್ಪರ ಐಕ್ಯಗೊಂಡರೆ ಕೆಳಗಿನವುಗಳಲ್ಲಿ ಸರಿಯಾದ ಸಂಬಂಧವು

(A) $\frac{a_1}{a_2} = \frac{b_1}{b_2} = \frac{c_1}{c_2}$ (B) $\frac{a_1}{a_2} \neq \frac{b_1}{b_2} \neq \frac{c_1}{c_2}$

(C) $\frac{a_1}{a_2} = \frac{b_1}{b_2} \neq \frac{c_1}{c_2}$ (D) $\frac{a_1}{a_2} \neq \frac{b_1}{b_2} = \frac{c_1}{c_2}$

ಉತ್ತರ:–

(A) $\frac{a_1}{a_2} = \frac{b_1}{b_2} = \frac{c_1}{c_2}$

5) $(\sec^2 A - 1)$ ಕ್ಕೆ ಸಮನಾಗಿರುವುದು

(A) $\tan^2 A$ (B) $\cot^2 A$
(C) $\sin^2 A$ (D) $\mathrm{cosec}^2 A$

ಉತ್ತರ:–

(A) $\tan^2 A$

6) 3, 8, 13, 18..ಈ ಸಮಾಂತರ ಶ್ರೇಢಿಯ ಎಷ್ಟನೇ ಪದ 78?

(A) 20 (B) 2 7
(C) 16 (D) 28

ಉತ್ತರ:– (ಸಿ) 16

ಪರಿಹಾರ:– ನೀಡಿರುವ ಸಮಾಂತರ ಶ್ರೇಢಿ 3, 8, 13, 18……

ಇಲ್ಲಿ a=3 d=8-3=5 nth ಪದ =78

Then
$$a_n = a + (n-1)d$$
$$78 = 3 + (n-1)(5)$$
$$5(n-1) = 78 - 3$$
$$5(n-1) = 75$$
$$n - 1 = \frac{75}{5}$$
$$n - 1 = 15$$
$$n = 15 + 1$$
$$n = 16$$

ಹೀಗಾಗಿ 78 ಸಮಾಂತರ ಶ್ರೇಢಿಯ 16ನೇ ಪದವಾಗಿದೆ

7) ಎರಡು ಅನುಕ್ರಮ ಧನ ಪೂರ್ಣಾಂಕಗಳ ಗುಣಲಬ್ಧವು 306 ಆಗಿದೆ. ನಾವು ಆ ಪೂರ್ಣಾಂಕಗಳನ್ನು ಕಂಡುಹಿಡಿಯಬೇಕಾಗಿದೆ. ಈ ಸನ್ನಿವೇಶದ ವರ್ಗ ಸಮೀಕರಣಗಳ ರೂಪ ಯಾವುದು?

(A) $3x^2 + 2x - 306 = 0$
(B) $6x^2 + 9x - 706 = 0$
(C) $2x^2 + x - 360 = 0$
(D) $x^2 + x - 306 = 0$

ಉತ್ತರ:– (D) $x^2 + x - 306 = 0$

ಪರಿಹಾರ:– ಎರಡು ಅನುಕ್ರಮ ಧನ ಪೂರ್ಣಾಂಕಗಳು x ಮತ್ತು $x+1$ ಆಗಿರಲಿ

ಎರಡು ಅನುಕ್ರಮ ಧನಪೂರ್ಣಾಂಕಗಳ ಗುಣಲಬ್ಧವು $= x(x+1)$ ಆಗಿರಲಿ

ನೀಡಿರುವ ಸಮಸ್ಯೆಯ ಪ್ರಕಾರ

$(x + 1) = 306$

$x^2 + x - 306 = 0$

ಎರಡು ಅನುಕ್ರಮ ಧನ ಪೂರ್ಣಾಂಕಗಳ ಗುಣಲಬ್ಧವು 306 ಆಗಿದೆ.

ನಾವು ಆ ಪೂರ್ಣಾಂಕಗಳನ್ನು ಕಂಡು ಹಿಡಿಯಬೇಕಾದಾಗ ಬಳಸಬಹುದಾದ ವರ್ಗ ಸಮೀಕರಣ $x^2 + x - 306 = 0$

8) ಆಯತಾಕಾರದ ಒಂದು ಭೂಮಿಯ ಉದ್ದ ಮತ್ತು ಅಗಲ ಕ್ರಮವಾಗಿ 110ಮೀ ಮತ್ತು 30ಮೀ ಇದೆ. ಉದ್ದ ಮತ್ತು ಅಗಲಗಳೆರಡನ್ನೂ ನಿಖರವಾಗಿ ಅಳತೆ ಮಾಡುವ ಗರಿಷ್ಠ ಉದ್ದದ ಸಲಾಕೆಯ ಉದ್ದ ಎಷ್ಟು?

(A) 10 ಮೀ (B) 22 ಮೀ
(C) 17 ಮೀ (D) 18 ಮೀ

ಉತ್ತರ:–(ಎ) 10 ಮೀ

ಪರಿಹಾರ:– 110 ಮತ್ತು 30ನ್ನು ಅವಿಭಾಜ್ಯ ಅಪವರ್ತನಗಳಾಗಿ ಬರೆದಾಗ $110 = 2 \times 5 \times 11$;

$30 = 2 \times 3 \times 5$

ಮ.ಸಾ.ಅ. $(110, 30) = 2 \times 5 = 10$

∴ ಉದ್ದ ಮತ್ತು ಅಗಲ ಎರಡನ್ನು ನಿಖರವಾಗಿ ಅಳತೆ ಮಾಡುವ ಗರಿಷ್ಠ ಉದ್ದದ ಸಲಾಕೆಯು 10 ಮೀ.

9) ಆಟದಲ್ಲಿ ಗೆಲ್ಲುವ ಸಂಭವನೀಯತೆಯು $\frac{5}{6}$. ಆದರೆ ಸೋಲುವ ಸಂಭವನೀಯತೆ ....

(A) $-\frac{5}{6}$ (B) $\frac{5}{6}$
(C) $-\frac{1}{6}$ (D) $\frac{1}{6}$

ಉತ್ತರ: (D)

10) 7x 11 x13 + 13 ಇದು ಒಂದು................

(ಎ) ಅವಿಭಾಜ್ಯ ಸಂಖ್ಯೆ (ಬಿ) ಸಂಯುಕ್ತ ಸಂಖ್ಯೆ
(ಸಿ) ಅಭಾಗಲಬ್ಧ ಸಂಖ್ಯೆ (ಡಿ) ಬೆಸ ಸಂಖ್ಯೆ

ಉತ್ತರ:– (ಬಿ) ಸಂಯುಕ್ತ ಸಂಖ್ಯೆ

11) $x + ky = 4$ ಮತ್ತು $2x + 4y = 12$ ಈ ರೇಖಾತ್ಮಕ ಸಮೀಕರಣಗಳನ್ನು ಪ್ರತಿನಿಧಿಸುವ ರೇಖೆಗಳ ಜೋಡಿಯು ಸಮಾಂತರ ರೇಖೆಗಳಾದರೆ 'k' ಯ ಬೆಲೆಯು

(A) -2 (B) 2
(C) 4 (D) -4

ಉತ್ತರ:– (ಬಿ) 2

(ಮುಂದುವರಿಯುವುದು..)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC PHYSICS

REVISION: MODEL QUESTIONS

I. Pick the correct option among the four given options for ALL of the following questions:

1. The S.I. unit of electric charge is

(A) coulomb metre (B) coulomb per metre
(C) coulomb (D) per coulomb

Ans:- (C) coulomb

2. The angle between equipotential surface and electric field is

(A) 90° (B) 0°
(C) 180° (D) 45°

Ans:- (A) 90°

3. An electron emitted in beta radiation originates from

a) free electrons existing in the nuclei
b) inner orbits of an atom
c) photon escaping from the nucleus
d) decay of a neutron in a nuclei

Ans: (c) photon escaping from the nucleus

Expln: An electron emitted in beta radiation originates from photons escaping from the nucleus.


4. How can the fringe width increase in Young's double-slit experiment?

a) By decreasing the width of the slit
b) By reducing the separation of slits
c) By reducing the wavelength of the slits
d) By decreasing the distance between slits and the screen

Ans: (b) By decreasing the separation of slits

Expln: The fringe width can be increased in Young's double-slit experiment by decreasing the separation of slits.


5. An ammeter, a voltmeter V and a resistance R are connected as shown. Ammeter reads 2A. Voltmeter reading is 10V. Then R is



a) 5Ω b) >5Ω
c) <5Ω
d) Dependent on resistance of voltmeter

Ans:- (b) >5Ω

6. Which of the following graphs represent the variation of electric field intensity E(r) due to a charged spherical shell of radius R with distance r from its centre?



Ans:-C

7. A moving coil galvanometer can be converted into a voltmeter by connecting

(A) a low resistance in parallel with galvanometer.
(B) a low resistance in series with galvanometer.
(C) a high resistance in parallel with galvanometer.
(D) a high resistance in series with galvanometer.

Ans:- (D) a high resistance in series with galvanometer

8. The column-I is the list of materials and the column-II, the list of energy band gaps E_g. Identify the correct match.

Column-I	Column-II
(i) conductors	(a) $E_g < 3\ eV$
(ii) insulators	(b) $E_g = 0\ eV$
(iii) semiconductors	(c) $E_g > 3\ eV$

(A) (i) - (a), (ii) - (b), (iii) - (c)
(B) (i) - (b), (ii) - (a), (iii) - (c)
(C) (i) - (c), (ii) - (a), (iii) - (b)
(D) (i) - (b), (ii) - (c), (iii) - (a)

Ans:- (D) (i) - (b), (ii) - (c), (iii) - (a)

9. Fill in the blanks by choosing appropriate answer given in the bracket for ALL the following questions:(photon, polar, zero, infinite, phase, phasor)

1. A molecule possessing permanent dipole moment is called ____________ molecule.

Ans:- **polar**

2. The net magnetic flux through any closed surface is ____________.

Ans:- **zero**

3. A rotating vector used to represent alternating quantities is called ____________.

Ans: **phasor**

4. A wavefront is a surface of constant ____________.

Ans; **phase**

5. In interaction with matter, light behaves as if it is made up of packet of energy called ____________.

Ans;- **photon**

Answer the following questions:-

1. Write an expression for refractive index of the material of prism in terms of its angle and minimum deviation. Does it hold good for all positions?

Ans:- An expression for refractive index of the material of prism in terms of its angle and minimum deviation is –

$$n = \frac{\sin \frac{(A + \delta_m)}{2}}{\sin \frac{A}{2}}$$

where, n is the refractive index of the material of prism,

δ_m is the minimum deviation position

A is angle of the prism

It does not hold good for all positions.

ಯುವಜನೋತ್ಸವದಲ್ಲಿ ಬಿಜೆಪಿ ಶಾಸಕ ಬಿ.ಪಿ. ಹರೀಶ್ ಮಾತಿಗೆ ಆಕ್ಷೇಪ

ರಾಜಕೀಯ ಭಾಷಣಕ್ಕೆ ಅಸಮಾಧಾನ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಸೋಮವಾರ ಸಂಜೆ ಇಲ್ಲಿ ನಡೆದ ರಾಜ್ಯ ಮಟ್ಟದ ಯುವಜನೋತ್ಸವದ ಸಮಾರೋಪ ಸಮಾರಂಭದಲ್ಲಿ ಹರಿಹರದ ಬಿಜೆಪಿ ಶಾಸಕ ಬಿ.ಪಿ.ಹರೀಶ್ ಪ್ರಸ್ತಾಪಿಸಿದ ರಾಜಕೀಯ ವಿಚಾರಗಳಿಗೆ ಪ್ರೇಕ್ಷಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಸ್ಪರ್ಧಾ ವಿಜೇತರ ಪ್ರಶಸ್ತಿ ಪ್ರದಾನಕ್ಕೂ ಮುನ್ನ ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರ ನಡುವಿನ ವಾಗ್ವಾದಕ್ಕೆ ಕಾರ್ಯಕ್ರಮ ವೇದಿಕೆಯಾಯಿತು.

ನಗರದ ಬಿಐಇಟಿ ಎಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ಸಮಾರೋಪ ಸಮಾರಂಭ ಏರ್ಪಡಿಸಲಾಗಿತ್ತು. ಎರಡು ದಿನ ಏಳು ವಿಭಾಗದಲ್ಲಿ ನಡೆದ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಶಸ್ತಿ ವಿತರಣೆಗೂ ಮುನ್ನ ವೇದಿಕೆಯಲ್ಲಿದ್ದ ಗಣ್ಯರ ಭಾಷಣ ಉತ್ಸವಕ್ಕೆ ರಾಜಕೀಯ ಬಣ್ಣ ಬಳಿಯಿತು.

'ಪ್ರತಿ ವರ್ಷ ದಸರಾ ಮೆರವಣಿಗೆಯನ್ನು ತಾಲ್ಲೂಕು ಕೇಂದ್ರಗಳಲ್ಲೂ ಆಯೋಜಿಸಲಾಗುತ್ತದೆ. ಆಗ ಕನಿಷ್ಠ 8 ಕಲಾತಂಡಗಳಿಗೆ ಅವಕಾಶ ಸಿಗುತ್ತಿತ್ತು. ಆದರೆ, 2024ರಲ್ಲಿ ನಡೆದ ದಸರಾ ಮಹೋತ್ಸವದಲ್ಲಿ 2 ಕಲಾತಂಡಗಳಿಗೆ ಮಾತ್ರ ಅವಕಾಶ ಸಿಕ್ಕಿದೆ. ಕಲೆ, ಸಂಸ್ಕೃತಿ ಕಾರ್ಯಕ್ಕೂ ರಾಜ್ಯ ಸರ್ಕಾರ ಅನುದಾನ ನೀಡುತ್ತಿಲ್ಲ. ಬಡ ಕಲಾವಿದರು ಬದುಕುವುದೂ ಕಷ್ಟವಾಗಿದೆ' ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.

'ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಅವಕಾಶ ಕಲ್ಪಿಸಿ ಪ್ರಚಾರ ಗಿಟ್ಟಿಸಿಕೊಳ್ಳುತ್ತಿರುವ ಸರ್ಕಾರ, ಬಸ್ ಸಂಖ್ಯೆ ಕಡಿಮೆ ಮಾಡಿದೆ. ಯುವಜನಾ ರಾಜಕಾರಣದ ಜೊತೆಗೆ ಅಭಿವೃದ್ಧಿಗೂ ಒತ್ತುನೀಡಬೇಕು. ಇಲ್ಲವಾದರೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮತದಾರರ ಎದುರು ಮುಖ ಮುಚ್ಚಿಕೊಂಡು ಹೋಗಬೇಕಾಗುತ್ತದೆ' ಎಂದು ಆರೋಪಿಸಿದರು.

'ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶಾಸಕರು ರಾಜಕೀಯ ಮಾತನಾಡಬಾರದು' ಎಂದು ಪ್ರೇಕ್ಷಕರು ಅಸಮಾಧಾನ ವ್ಯಕ್ತಪಡಿಸಿದರು. ಯುವ ಕಾಂಗ್ರೆಸ್ ಮುಖಂಡರು ವೇದಿಕೆ ಬಳಿ ಜಮಾಯಿಸಿದರು. ವೇದಿಕೆಯ ಮೇಲಿದ್ದ ಮಾಯಕೊಂಡದ ಕಾಂಗ್ರೆಸ್ ಶಾಸಕ ಕೆ.ಎಸ್.ಬಸವಂತಪ್ಪ ಎದ್ದುನಿಂತು ಆಕ್ಷೇಪಿಸಿದರು. ಮೇಯರ್ ಕೆ.ಚಮನ್ ಸಾಬ್ ಪೋಡಿಯಂ ಬಳಿಗೆ ತೆರಳಿ ಭಾಷಣ ನಿಲ್ಲಿಸುವಂತೆ ಆಗ್ರಹಿಸಿದರು.

ಇದರಿಂದ ಕೆರಳಿದ ಹರೀಶ್, 'ಭಾಷಣಕ್ಕೆ ಅಡ್ಡಿಪಡಿಸಿದ್ದ ಸರಿ ಇರುವುದಿಲ್ಲ' ಎಂದು ಆಕ್ರೋಶಗೊಂಡರು. ಮಧ್ಯಪ್ರವೇಶ ಮಾಡಿದ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಹಾಗೂ ಜಿಲ್ಲಾ ಪಂಚಾಯಿತಿ ಸಿಇಒ ಸುರೇಶ್ ಇಟ್ನಾಳ್ ಶಾಸಕರ ಮನವೊಲಿಸಲು ಪ್ರಯತ್ನಿಸಿದರು.

ವೇದಿಕೆಯಲ್ಲಿದ್ದ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಮೌನವಾಗಿದ್ದರು.



ಯುವಜನೋತ್ಸವದಲ್ಲಿ ಶಾಸಕ ಬಿ.ಪಿ.ಹರೀಶ್ ಭಾಷಣಕ್ಕೆ ಆಕ್ಷೇಪ ವ್ಯಕ್ತಪಡಿಸಿದವರ ಮನವೊಲಿಸಲು ಕೈಮುಗಿದು ವಿನಂತಿಸಿದ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ. ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ಅವರೂ ಪರಿಸ್ಥಿತಿ ತಿಳಿಗೊಳಿಸಲು ಪ್ರಯತ್ನಿಸಿದರು – ಪ್ರಜಾವಾಣಿ ಚಿತ್ರ

ನೋವುಂಡ ದೇಶಕ್ಕೆ ಶಿಷ್ಟ ನೀಡಿದ್ದ ಅಂಬೇಡ್ಕರ್. ದೇಶ ಕಟ್ಟಲು ಪ್ರೀತಿ ಹಂಚೋಣ, ದ್ವೇಷ ಅಲ್ಲ. ಸಾಂಸ್ಕೃತಿಕ ಕಾರ್ಯಕ್ರಮ ರಾಜಕೀಯಕ್ಕೆ ವೇದಿಕೆ ಆಗಬಾರದಿತ್ತು
ಕೆ.ಚಮನ್ ಸಾಬ್
ಮೇಯರ್, ದಾವಣಗೆರೆ

ಕಿಡಿ ಹೊತ್ತಿಸಿದ ಕಾಂಗ್ರೆಸ್ ಶಾಸಕ

'ಕಲಾತಂಡಗಳಿಗೆ ನೀಡುವ ಪ್ರೋತ್ಸಾಹಧನ ತೀರಾ ಕಡಿಮೆ ಇದೆ. ಕಲಾವಿದರ ಪ್ರಯಾಣ ವೆಚ್ಚಕ್ಕೂ ಇದು ಸಾಲದು. ವಿಜೇತ ತಂಡಗಳಿಗೆ ಕನಿಷ್ಠ ₹ 1 ಲಕ್ಷ ಬಹುಮಾನ ನೀಡಿದರೆ ಅನುಕೂಲ. ಈ ಕುರಿತು ಸರ್ಕಾರದ ಗಮನ ಸೆಳೆಯುವೆ. ಮುಖ್ಯಮಂತ್ರಿ ಜೊತೆ ಚರ್ಚಿಸುವೆ' ಎಂದು ಮಾಯಕೊಂಡ ಕಾಂಗ್ರೆಸ್ ಶಾಸಕ ಕೆ.ಎಸ್.ಬಸವಂತಪ್ಪ ಹೇಳಿದರು. ಇದಕ್ಕೆ ಕಲಾವಿದರು ಚಪ್ಪಾಳೆ ತಟ್ಟಿ ಪ್ರೋತ್ಸಾಹ ನೀಡಿದರು.


'ಯುವಜನೋತ್ಸವದಲ್ಲಿ ದುಂದು ವೆಚ್ಚ ಹೆಚ್ಚಾಗಿದೆ. ಇದನ್ನು ಕಡಿಮೆ ಮಾಡಿದರೆ ಕಲಾವಿದರಿಗೆ ನೆರವು ನೀಡಲು ಸಾಧ್ಯ. ಕಲಾವಿದರಲ್ಲಿ ಬಹುತೇಕರು ಬಡವರೇ ಇದ್ದಾರೆ. ಅವರ ಜೀವನದ ಬಗ್ಗೆ ಕೂಡ ಗಮನ ಹರಿಸಬೇಕಿದೆ' ಎಂದರು.

ಬಸವಂತಪ್ಪ ಅವರ ಅಭಿಪ್ರಾಯಕ್ಕೆ ಬೆಂಬಲ ಸೂಚಿಸುತ್ತ ಮಾತು ಆರಂಭಿಸಿದ ಹರಿಹರ ಶಾಸಕ ಬಿ.ಪಿ. ಹರೀಶ್ ಅವರ ಭಾಷಣ ರಾಜಕೀಯಕ್ಕೆ ಹೊರಳಿತು.

ದ್ವೇಷ ಭಾಷಣ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಉಡುಪಿ: ಇಲ್ಲಿಯ ಪೂರ್ಣಪ್ರಜ್ಞ ಸಭಾಂಗಣದಲ್ಲಿ ಈಚೆಗೆ ನಡೆದ 'ವಿಶ್ವಾರ್ಪಣಂ' ಕಾರ್ಯಕ್ರಮದಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ ಆರೋಪದಲ್ಲಿ ಹರಿಯಾಣದ ಚಿಂತಕಿ ಮೀನಾಕ್ಷಿ ಸೆಹರಾವತ್ ಅವರ ವಿರುದ್ಧ ನಗರ ಪೊಲೀಸ್ ಠಾಣೆಯಲ್ಲಿ ಸ್ವಯಂ ಪ್ರೇರಿತ ಪ್ರಕರಣ ದಾಖಲಾಗಿದೆ.



ಮೀನಾಕ್ಷಿ ಸೆಹರಾವತ್

ಕಾರ್ಯಕ್ರಮ ಆಯೋಜಕರಾದ ಗೋವಿಂದರಾಜು ಎಂಬುವವರ ವಿರುದ್ಧವೂ ಪ್ರಕರಣ ದಾಖಲಾಗಿದೆ.

ಕಾರ್ಯಕ್ರಮದಲ್ಲಿ 'ಬಾಂಗ್ಲಾ ಪಾಠ' ಎಂಬ ವಿಷಯದ ಬಗ್ಗೆ ಹಿಂದಿ ಭಾಷೆಯಲ್ಲಿ ಭಾಷಣ ಮಾಡಿದ್ದ ಮೀನಾಕ್ಷಿ ಸೆಹರಾವತ್, 'ಗಾಂಧಿ ಅವರು ಜಿನ್ನಾ ಜೊತೆಗೆ ಸೇರಿಕೊಂಡು ಪಾಕಿಸ್ತಾನಕ್ಕೆ ಜನ್ಮ ನೀಡಿದ್ದಾರೆ. ನಾವು ಮಹಾತ್ಮ ಗಾಂಧಿ ಅವರನ್ನು ರಾಷ್ಟ್ರಪಿತ ಎಂಬುದಾಗಿ ಒಪ್ಪಿಕೊಳ್ಳುವುದಿಲ್ಲ' ಎಂದು ಹೇಳಿದ್ದರು ಎಂಬುದಾಗಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ದೇಶದ ಬೇರೆ ಬೇರೆ ಧರ್ಮದ, ಗುಂಪುಗಳ ನಡುವೆ ವೈಮನಸ್ಸು ಹಾಗೂ ಸಮಾಜದಲ್ಲಿ ಅಶಾಂತಿ ಉಂಟು ಮಾಡುವ ರೀತಿಯಲ್ಲಿ ಮೀನಾಕ್ಷಿ ಅವರು ಪ್ರಚೋದನಕಾರಿಯಾಗಿ ಭಾಷಣ ಮಾಡಿದ್ದಾರೆ ಎಂಬುದು ಎಫ್‌ಐಆರ್‌ನಲ್ಲಿದೆ.

ದೇಗುಲ ನಿರ್ಮಾಣಕ್ಕೆ ದೇಣಿಗೆ ಸಂಗ್ರಹ

ಪ್ರಜಾವಾಣಿ ವಾರ್ತೆ

ಧಾರವಾಡ: ಕೃಷಿ ವಿಶ್ವವಿದ್ಯಾಲಯದ ಮಾವಿನ ತೋಟದಲ್ಲಿ ಅನಧಿಕೃತವಾಗಿ ಅಯ್ಯಪ್ಪ ಸ್ವಾಮಿ ಮೂರ್ತಿ ತಂದಿಟ್ಟ ಸ್ಥಳದಲ್ಲಿ ದೇವಾಲಯ ನಿರ್ಮಾಣಕ್ಕೆ ದೇಣಿಗೆ ಸಂಗ್ರಹ ಪ್ರಕ್ರಿಯೆ ಆರಂಭಗೊಂಡಿದೆ.

ಮೂರ್ತಿಗೆ ನಿರ್ಮಿಸಿರುವ ಶೆಡ್ ಹಾಗೂ ಶೆಡ್ ಜಾಗದ ಪಕ್ಕದಲ್ಲಿ ಕಾಂಪೌಂಡ್ ಬಳಿ ಭಿತ್ತಿಫಲಕಗಳಲ್ಲಿ ಮನವಿ ಎಂಬ ಬ್ಯಾನರ್ ಕಟ್ಟಲಾಗಿದೆ. 'ಅಯ್ಯಪ್ಪಸ್ವಾಮಿ ಭವ್ಯ ಮಂದಿರ ಕಟ್ಟಲಾಗುವುದು ಮತ್ತು ನಿರಂತರ ಪ್ರಸಾದ ವ್ಯವಸ್ಥೆ ಮಾಡಲಾಗುವುದು. ತನು, ಮನ, ಧನ ಸೇವೆಯನ್ನು ಮಾಡಬೇಕೆಂದು ವಿನಂತಿ' ಎಂದು ಬರೆಯಲಾಗಿದೆ.

'ಶೆಡ್ ಜಾಗದಲ್ಲಿ ದೇವಾಲಯ ನಿರ್ಮಿಸುವ ಇಚ್ಛೆ ಭಕ್ತರದ್ದು. ದೇಣಿಗೆ ಸಂಗ್ರಹ ನಡೆದಿದೆ. ನಾನು ಸೇರಿದಂತೆ ಹಲವರು ಧನ ಸಹಾಯ ಮಾಡಿದ್ದಾರೆ' ಎಂದು ಮುಖಂಡ ಈಶ್ವರ ಶಿವಳ್ಳಿ 'ಪ್ರಜಾವಾಣಿ'ಗೆ ತಿಳಿಸಿದರು.

ವಿ.ವಿ ಜಾಗದಲ್ಲಿ ಅಕ್ರಮವಾಗಿ ಮೂರ್ತಿ ತಂದಿಟ್ಟು ಶೆಡ್ ನಿರ್ಮಿಸಿದ್ದಾರೆ. ದೇಗುಲ ನಿರ್ಮಾಣಕ್ಕೆ ಈವರೆಗೆ ಯಾರೂ ಮನವಿ ಸಲ್ಲಿಸಿಲ್ಲ
ಪ್ರೊ.ಪಿ.ಎಲ್.ಪಾಟೀಲ
ಕುಲಪತಿ, ಕೃಷಿ ವಿಶ್ವವಿದ್ಯಾಲಯ



ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನ ಯರಡೋಣದ ಜಾಮಿಯಾ ಮಸೀದಿ ಆವರಣದಲ್ಲಿ ಮುಸ್ಲಿಂ ಸಮುದಾಯದವರು ಅಯ್ಯಪ್ಪಸ್ವಾಮಿ ಮಾಲಾಧಾರಿಗಳಿಗೆ ಪ್ರಸಾದ ಬಡಿಸಿದರು

ಮಸೀದಿ ಆವರಣದಲ್ಲಿ ಪ್ರಸಾದ

ಲಿಂಗಸುಗೂರು (ರಾಯಚೂರು ಜಿಲ್ಲೆ): ಮುಸ್ಲಿಂ ಸಮುದಾಯದವರು ತಾಲ್ಲೂಕಿನ ಯರಡೋಣ ಗ್ರಾಮದ ಜಾಮಿಯಾ ಮಸೀದಿ ಆವರಣದಲ್ಲಿ ಅಯ್ಯಪ್ಪಸ್ವಾಮಿ ಮಾಲಾಧಾರಿಗಳಿಗೆ ಪ್ರಸಾದದ ವ್ಯವಸ್ಥೆ ಕಲ್ಪಿಸಿ ಭಾವೈಕ್ಯ ಮೆರೆದಿದ್ದಾರೆ. ಸೋಮವಾರ ವೈವಿಧ್ಯಮಯ ಖಾದ್ಯ ತಯಾರಿಸಿ ಮಾಲಾಧಾರಿಗಳಿಗೆ ಉಣಬಡಿಸಿದರು.

ಗುರುಸ್ವಾಮಿಗಳಾದ ಸಿದ್ಧಾರಾಮ, ಪ್ರಭು ಯರಡೋಣ, ಶಿವಕುಮಾರ, ವೀರೇಶ ಹೊನ್ನಳ್ಳಿ ನೇತೃತ್ವದಲ್ಲಿ ಮಾಲಾಧಾರಿಗಳು ಪ್ರಸಾದ ಸ್ವೀಕರಿಸಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು.

ಮೌಲ್ವಿ ಮಝಾರ್ ಖಾಲೀದ್ ಮಾತನಾಡಿ, 'ನಾವೆಲ್ಲ ಭಾರತೀಯರು. ನಮ್ಮ ಧರ್ಮ ನಮಗೆ ಶ್ರೇಷ್ಠ. ಧರ್ಮದ ಹೆಸರಲ್ಲಿ ಘರ್ಷಣೆ ನಡೆಸುವುದು ಸರಿಯಲ್ಲ. ಪರಸ್ಪರ ಅರಿತು ಬದುಕು ನಡೆಸಿ ನಾವೆಲ್ಲಾ ಒಂದೇ ಎಂಬ ಸಂದೇಶ ನೀಡಬೇಕು' ಎಂದು ಮನವಿ ಮಾಡಿದರು.

ಹೃದಯ ಸ್ತಂಭನ ಬಾಲಕಿ ಸಾವು

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ನಗರದ ಸೇಂಟ್ ಫ್ರಾನ್ಸಿಸ್ ಶಾಲೆಯ ಮೂರನೇ ತರಗತಿ ವಿದ್ಯಾರ್ಥಿನಿ ತೇಜಸ್ವಿನಿ (9) ಹೃದಯ-ಸ್ತಂಭನದಿಂದ ಸೋಮವಾರ ಮೃತಪಟ್ಟಳು.



ತೇಜಸ್ವಿನಿ

ಬೆಳಿಗ್ಗೆ ಲವಲವಿಕೆಯಿಂದಲೇ ಶಾಲೆಗೆ ಹಾಜರಾಗಿದ್ದ ಬಾಲಕಿ, ಇನ್ನೊಂದು ತರಗತಿಗೆ ಹೋಗುವಾಗ ಏಕಾಏಕಿ ಕುಸಿದುಬಿದ್ದಳು. ಶಿಕ್ಷಕರು ಸಮೀಪದ ಜೆಎಸ್‌ಎಸ್ ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಮೃತಪಟ್ಟಿದ್ದಳು. 'ಸಾವಿಗೆ ಹೃದಯಸ್ತಂಭನ ಕಾರಣ' ಎಂದು ವೈದ್ಯರು ತಿಳಿಸಿದ್ದಾರೆ.

ಈಕೆ ಬದನಗುಪ್ಪೆಯ ಲಿಂಗರಾಜು–ಶೃತಿ ದಂಪತಿ ಪುತ್ರಿ. ಅಂತ್ಯಕ್ರಿಯೆ ಮಂಗಳವಾರ (ಜ.7) ನಡೆಯಲಿದೆ.

ಯುವಜನೋತ್ಸವ ಫಲಿತಾಂಶ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಭಾನುವಾರದಿಂದ ಎರಡು ದಿನ ಇಲ್ಲಿ ನಡೆದ ರಾಜ್ಯಮಟ್ಟದ ಯುವಜನೋತ್ಸವಕ್ಕೆ ಸೋಮವಾರ ತೆರೆಬಿದ್ದಿದೆ. ಒಟ್ಟು ಏಳು ವಿಭಾಗಗಳಲ್ಲಿ ನಡೆದ ವೈಯಕ್ತಿಕ ಹಾಗೂ ಗುಂಪು ಸ್ಪರ್ಧೆಯಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದವರು ದೆಹಲಿಯಲ್ಲಿ ಆಯೋಜಿಸಲಾಗುವ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಪ್ರಥಮ ₹25,000, ದ್ವಿತೀಯ ₹15,000 ಹಾಗೂ ತೃತೀಯ ಸ್ಥಾನಕ್ಕೆ ₹10,000 ನಗದು ಬಹುಮಾನ ನೀಡಲಾಯಿತು. ವಿವರ ಕೆಳಕಂಡಂತಿದೆ.

ಜನಪದ ಗೀತೆ: ಮಂಡ್ಯ (ಪ್ರಥಮ), ಬಾಗಲಕೋಟೆ (ದ್ವಿತೀಯ), ಚಾಮರಾಜನಗರ (ತೃತೀಯ)

ಜನಪದ ನೃತ್ಯ: ಮಂಡ್ಯ (ಪ್ರಥಮ), ಉಡುಪಿ (ದ್ವಿತೀಯ), ಬಾಗಲಕೋಟೆ (ತೃತೀಯ)

ಕವನ ರಚನೆ: ಬೆಳಗಾವಿಯ ಶಾಂಭವಿ ಕುಶಪ್ಪ ತೇರ್ಲಿ (ಪ್ರಥಮ), ಹಾಸನದ ಶ್ರುತಿ ಎಸ್.ರಾಜ್ (ದ್ವಿತೀಯ), ಉತ್ತರ ಕನ್ನಡದ ಅಸ್ಪಿಯಾ ಇರ್ಶಾದ್ ಅಹಮದ್ ಶೇಕ್ (ತೃತೀಯ)

ಕಥೆ ರಚನೆ: ಹಾಸನದ ತೀರ್ಥ ಪೂವಯ್ಯ (ಪ್ರಥಮ), ಚಿಕ್ಕಮಗಳೂರಿನ ಎಸ್. ಗಗನ್ (ದ್ವಿತೀಯ), ರಾಮನಗರದ ಜಿ.ಕೆ.ರವಿಕುಮಾರ್ (ತೃತೀಯ)

ಚಿತ್ರಕಲೆ: ಗದಗದ ವಿನುತ ಎನ್. ಅಕ್ಕಸಾಲಿಗ (ಪ್ರಥಮ), ದಾವಣಗೆರೆಯ ಕಾರ್ತಿಕ್ ಆಲೂರು (ದ್ವಿತೀಯ), ಉತ್ತರ ಕನ್ನಡದ ಪ್ರಶಾಂತ ಬಾರುಗೌಡ (ತೃತೀಯ)

ಘೋಷಣೆ ಸ್ಪರ್ಧೆ: ಬೆಂಗಳೂರು ನಗರ ಜಿಲ್ಲೆಯ ಚಂದನ್ ಎಂ.ನಾಯ್ಕ (ಪ್ರಥಮ), ಚಿಕ್ಕಮಗಳೂರಿನ ವರುಣ್ ಡಿ.ಆರ್ಯ (ದ್ವಿತೀಯ), ಹಾಸನದ ದೇಶರಾಜ್ ಪರಿಪೂರ್ಣ (ತೃತೀಯ)

ವಿಜ್ಞಾನ ವಸ್ತುಪ್ರದರ್ಶನ: ಬಳ್ಳಾರಿಯ ಜೆ.ಎನ್.ಹರ್ಷ ಮತ್ತು ತಂಡ (ಪ್ರಥಮ), ಮಡಿಕೇರಿ ಶ್ವೇತಾನ್.ಜಿ.ರಾಯ್ (ದ್ವಿತೀಯ), ದಾವಣಗೆರೆಯ ವಿ.ಜೆ. ಜೀವನ (ತೃತೀಯ)

ರಿಮ್ಸ್‌ನಲ್ಲಿ ಬಾಣಂತಿ ಸಾವು

ಪ್ರಜಾವಾಣಿ ವಾರ್ತೆ

ರಾಯಚೂರು: ಜಿಲ್ಲೆಯಲ್ಲಿ ಬಾಣಂತಿಯರ ಸಾವಿನ ಸರಣಿ ಮುಂದುವರಿದಿದೆ. ನಗರದ ರಿಮ್ಸ್ ಆಸ್ಪತ್ರೆಯಲ್ಲಿ ಮತ್ತೊಬ್ಬ ಬಾಣಂತಿ ಮೃತಪಟ್ಟಿದ್ದಾರೆ.

ದೇವದುರ್ಗ ತಾಲ್ಲೂಕಿನ ಹದ್ದಿನಾಳ ಗ್ರಾಮದ ಸರಸ್ವತಿ (24) ಸಾವಿಗೀಡಾದವರು. ಜನವರಿ 2ರಂದು ರಿಮ್ಸ್ ಆಸ್ಪತ್ರೆಯಲ್ಲಿ ಸಿಸೇರಿಯನ್ ಶಸ್ತ್ರಚಿಕಿತ್ಸೆಯ ಮೂಲಕ ಹೆರಿಗೆ ಮಾಡಿಸಲಾಗಿತ್ತು.

'ಹೆರಿಗೆ ಬಳಿಕ ರಕ್ತದೊತ್ತಡ ಹೆಚ್ಚಾಗಿದ್ದರಿಂದ ಸರಸ್ವತಿಗೆ ಚಿಕಿತ್ಸೆ ನೀಡಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಭಾನುವಾರ ಮೃತಪಟ್ಟಿದ್ದಾರೆ' ಎಂದು ರಿಮ್ಸ್‌ನ ವೈದ್ಯಕೀಯ ಅಧೀಕ್ಷಕ ಡಾ.ಭಾಸ್ಕರ್ ತಿಳಿಸಿದ್ದಾರೆ.

ತೀವ್ರ ನಿಗಾ ಘಟಕದಲ್ಲಿ ಮಗುವಿಗೆ ಚಿಕಿತ್ಸೆ ನೀಡಲಾಗುತ್ತಿದೆ. ನಾಲ್ಕನೇ



ಸರಸ್ವತಿ

ಮಗುವಿಗೆ ಜನ್ಮ ನೀಡಿದ್ದ ಸರಸ್ವತಿ ಸಾವಿನಿಂದಾಗಿ ಕುಟುಂಬ ಸದಸ್ಯರು ಆತಂಕಕ್ಕೆ ಒಳಗಾಗಿದ್ದಾರೆ.


ರಿಮ್ಸ್ ಆಸ್ಪತ್ರೆಯಲ್ಲಿ ಮೂರು ತಿಂಗಳಲ್ಲಿ ಐವರು ಬಾಣಂತಿಯರು ಮೃತಪಟ್ಟಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ ಮೂರು ತಿಂಗಳಲ್ಲಿ ಮೃತಪಟ್ಟ ಬಾಣಂತಿಯರ ಸಂಖ್ಯೆ 12ಕ್ಕೆ ಏರಿಕೆಯಾಗಿದೆ.

ಸತ್ಯ ಶೋಧನಾ ತಂಡ ಭೇಟಿ (ಕೊಪ್ಪಳ ವರದಿ): ಕೊಪ್ಪಳ ಜಿಲ್ಲಾಸ್ಪತ್ರೆಯಲ್ಲಿ ಒಂದೇ ವಾರದಲ್ಲಿ ಇಬ್ಬರು ಬಾಣಂತಿಯರು ಹಾಗೂ ನವಜಾತ ಶಿಶುಗಳು ಮೃತಪಟ್ಟ ಹಿನ್ನೆಲೆಯಲ್ಲಿ ಬಿಜೆಪಿಯ ಸತ್ಯಶೋಧನಾ ತಂಡ ತಾಯಿ ಹಾಗೂ ಮಗುವಿನ ಆಸ್ಪತ್ರೆಗೆ ಸೋಮವಾರ ಭೇಟಿ ನೀಡಿ ವೈದ್ಯರಿಂದ ಮಾಹಿತಿ ಪಡೆಯಿತು.

ನಾ.ಡಿಸೋಜ ಅಂತ್ಯಕ್ರಿಯೆ ಇಂದು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ಭಾನುವಾರ ರಾತ್ರಿ ನಿಧನರಾದ ಸಾಹಿತಿ ನಾ.ಡಿಸೋಜ ಅವರ ಪಾರ್ಥಿವ ಶರೀರವನ್ನು ಸೋಮವಾರ ಮಧ್ಯಾಹ್ನ 1.30ಕ್ಕೆ ಸಾಗರಕ್ಕೆ ತರಲಾಯಿತು.



ನಾ. ಡಿಸೋಜ

ಸಾಗರದ ನೆಹರೂ ನಗರದಲ್ಲಿರುವ ಅವರ ನಿವಾಸದಲ್ಲಿ ಪಾರ್ಥಿವ ಶರೀರವನ್ನು ಸಾರ್ವಜನಿಕ ದರ್ಶನಕ್ಕೆ ಇಡಲಾಗಿದೆ. ಮಾಜಿ ಸಚಿವ ಕಾಗೋಡು ತಿಮ್ಮಪ್ಪ, ಶಾಸಕ ಬೇಳೂರು ಗೋಪಾಲ ಕೃಷ್ಣ, ಸಂಸದ ಬಿ.ವೈ.ರಾಘವೇಂದ್ರ, ವಿಧಾನಪರಿಷತ್ ಸದಸ್ಯರಾದ ಬಲ್ಕಿಷ್ ಬಾನು, ಡಾ.ಧನಂಜಯ ಸರ್ಜಿ, ರಾಜ್ಯ ರೈತ ಸಂಘದ ಅಧ್ಯಕ್ಷ ಕೆ.ಟಿ. ಗಂಗಾಧರ್ ಹಾಗೂ ಸಾಹಿತ್ಯ ಪ್ರೇಮಿಗಳು, ಅಭಿಮಾನಿಗಳು ಸೇರಿದಂತೆ ಅನೇಕರು ಅಂತಿಮ ದರ್ಶನ ಪಡೆದರು.

ಸಾಗರ ಸೇರಿದಂತೆ ಸುತ್ತಲಿನ ಊರುಗಳ ಜನರೂ ತಂಡೋಪತಂಡವಾಗಿ ಬಂದು ನಾ.ಡಿಸೋಜ ಅವರಿಗೆ ಅಂತಿಮ ನಮನ ಸಲ್ಲಿಸಿದರು.

ಸಾಗರದ ಸಂತ ಜೋಸೆಫರ ದೇವಾಲಯದ ಪಕ್ಕದಲ್ಲಿರುವ ಸಮಾಧಿ ಸ್ಥಳದಲ್ಲಿ ಮಂಗಳವಾರ (ಜ.7) ಸಂಜೆ 4ಕ್ಕೆ ನಾ.ಡಿಸೋಜ ಅವರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಮೆಗಾಗಿ ತಂದೆಯನ್ನು ಕೊಲ್ಲಿಸಿದ ಮಗ

ಕಲಬುರಗಿ: ಸಾಲ ತೀರಿಸಲು ವಿಮೆ ಹಣಕ್ಕಾಗಿ ತಂದೆಯನ್ನು ಕೊಲ್ಲಿಸಿ, ಅಪಘಾತವೆಂದು ಸುಳ್ಳು ಪ್ರಕರಣ ದಾಖಲಿಸಿದ ಮಗ ಹಾಗೂ ಕೃತ್ಯದಲ್ಲಿ ಭಾಗಿಯಾದ ಆರೋಪಿಗಳನ್ನು ಮಾಡಬೂಳ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆದರ್ಶ ನಗರದ ನಿವಾಸಿ ಕಾಳಿಂಗರಾವ (60) ಕೊಲೆಯಾದವರು.

ಇವರ ಮಗ ಸತೀಶ ಕಾಳಿಂಗರಾವ ಖಮಿತಕರ್, ಕೊಲೆಯ ಸಂಚುಕೋರ ಅರುಣಕುಮಾರ್, ಟ್ರ್ಯಾಕ್ಟರ್‌ನಿಂದ ಡಿಕ್ಕಿ ಹೊಡೆಸಿ ಕೊಲೆಗೈದ ತರಿ ತಾಂಡಾದ ರಾಕೇಶ ಮತ್ತು ಯುವರಾಜನನ್ನು ಬಂಧಿಸಲಾಗಿದೆ.

'ಹೋಟೆಲ್ ನಡೆಸುತ್ತಿದ್ದ ಸತೀಶ್, ಸಾಕಷ್ಟು ಸಾಲ ಮಾಡಿಕೊಂಡಿದ್ದ. ಪರಿಚಯಸ್ಥನಾದ ಅರುಣಕುಮಾರ್, ವಯಸ್ಸಾದ ತಂದೆ ಹೆಸರಿಗೆ ವಿಮೆ ಮಾಡಿಸಿ, ಸಾಯಿಸಿದರೆ ವಿಮೆಯ ಹಣ ಸಿಗುತ್ತದೆ. ಜತೆಗೆ ಆಸ್ತಿಯನ್ನೂ ಮಾರಿ ಸಾಲ ತೀರಿಸಬಹುದು ಎಂದು ಕೊಲೆಯ ಸಂಚು ರೂಪಿಸಿದ್ದ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು ಸೋಮವಾರ ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಔತಣ ಸುತ್ತ 'ಕೈ' ರಾಜಕಾರಣ

'ರಾಜಕೀಯ ಮಾತನಾಡಿಲ್ಲ'

ಒಂದನೇ ಪುಟದಿಂದ...

ತಮ್ಮ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ಸಚಿವರು ಮತ್ತು ಶಾಸಕರು ಒಂದು ಕಡೆ ಸೇರಿ ಊಟ ಮಾಡಿರುವುದೇ ದೊಡ್ಡ ಸುದ್ದಿ ಆಗಿದೆ' ಎಂದರು.

'ಎಲ್ಲ ಸಚಿವರು ಮತ್ತು ಶಾಸಕರು ಆ ಸಭೆಯಲ್ಲಿ ಇರಲಿಲ್ಲವಲ್ಲ' ಎಂಬ ಪ್ರಶ್ನೆಗೆ, 'ನನ್ನನ್ನು, ಮಹದೇವಪ್ಪ, ರಾಜಣ್ಣ ಅವರನ್ನು ಸತೀಶ ಕರೆದಿದ್ದರು. ಹೋಗಿದ್ದೆವು. ಬೇರೆಯವರನ್ನು ಯಾಕೆ ಕರೆದಿಲ್ಲ ಎನ್ನುವುದನ್ನು ಸತೀಶಗೆ ಕೇಳಿ. ನನಗೆ ಏಕೆ ಕೇಳುತ್ತೀರಿ. ಕರೆ ಬಂದವರು ಮಾತ್ರ ಹೋಗುತ್ತಾರೆ. ಕರೆಯದಿದ್ದರೆ ಹೋಗಬೇಕೇ? ನಮ್ಮನ್ನು ಕರೆದಿದ್ದರು, ನಾವು ಹೋಗಿದ್ದೆವು' ಎಂದರು.

'ಈ ಸಭೆಯಲ್ಲಿ ರಾಜಕೀಯ ಏನೂ ಚರ್ಚೆ ಆಗಿಲ್ಲ. ಮಾಧ್ಯಮದಲ್ಲಿ ಬಂದಿರುವಂತೆ ಅಲ್ಲಿ ಏನೂ ನಡೆದಿಲ್ಲ. ಎಲ್ಲ ಊಹಾಪೋಹ ಬರೆದಿದ್ದೀರಿ. ನೀವು ಊಹೆ ಮಾಡಿ ಬರೆದರೆ ಏನು ಮಾಡುವುದು. ಊಹೆ ತುಂಬಾ ಅಪಾಯ. ನಡೆಯುವುದೇ ಬೇರೆ ಊಹಿಸಿಕೊಳ್ಳುವುದೇ ಬೇರೆ' ಎಂದು ಸಿದ್ದರಾಮಯ್ಯ ಹೇಳಿದರು.

ಊಟಕ್ಕೆ ಸೇರಿದರೆ ತಪ್ಪೇನು?: ಡಿಕೆಶಿ

ಒಂದನೇ ಪುಟದಿಂದ...

'ನಾಲ್ಕು ವರ್ಷಗಳಿಂದ ಎಲ್ಲಿಗೂ ಹೋಗಿರಲಿಲ್ಲ. ಹೀಗಾಗಿ, ಹೊಸ ವರ್ಷದ ಸಂದರ್ಭದಲ್ಲಿ ಕುಟುಂಬದ ಸಮೇತ ವಿದೇಶಕ್ಕೆ ತೆರಳಿದ್ದೆ. ಕೆಲವು ಸಚಿವರು ಬೇರೆ ಕಡೆಗೆ ಹೋಗಿದ್ದರು. ಉಳಿದ ಸಚಿವರು ಔತಣಕೂಟದಲ್ಲಿ ಸೇರಿದ್ದರು. ನಾನೂ ಅನೇಕ ಸಲ ಔತಣಕೂಟ ಆಯೋಜಿಸಿದ್ದೇನೆ' ಎಂದರು.

'2028ರಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಪ್ರಯತ್ನ'

ಒಂದನೇ ಪುಟದಿಂದ...

'ಯಾವಾಗ ಯಾರನ್ನು ನೇಮಕ ಮಾಡಬೇಕು ಅನ್ನೋದು ಹೈಕಮಾಂಡ್‌ಗೆ ಬಿಟ್ಟಿದ್ದು' ಎಂದರು.

'ಎಲ್ಲರೂ ಸೇರಿ ಊಟ ಮಾಡುವುದು ಸಹಜ. ನಮ್ಮ ಮನೆಯಲ್ಲೇ 20 ತಿಂಗಳಲ್ಲಿ ಹತ್ತು ಬಾರಿ ಡಿನ್ನರ್ ಪಾರ್ಟಿ ಆಗಿದೆ. ಪ್ರತಿ ಬಾರಿಯೂ ಅನೇಕರು ಸೇರುತ್ತೇವೆ. ಇದಕ್ಕೆ ಬೇರೆ ಅರ್ಥ ಕಲ್ಪಿಸುವ ಅಗತ್ಯವಿಲ್ಲ' ಎಂದು ಪ್ರತಿಕ್ರಿಯಿಸಿದರು.



❦ ಸುಭಾಷಿತ ❦

ಮಾತಾಡಬೇಕಾದ ಸಂದರ್ಭದಲ್ಲಿ ಮೌನ ಕಾಯ್ದುಕೊಳ್ಳುವುದು ತುಂಬಾ ಕೆಟ್ಟದ್ದು.

-ಪೂರ್ಣಚಂದ್ರ ತೇಜಸ್ವಿ

ಆಶಾ ಕಾರ್ಯಕರ್ತೆಯರ ಬೇಡಿಕೆಗೆ ಸರ್ಕಾರ ತ್ವರಿತವಾಗಿ ಸ್ಪಂದಿಸಲಿ

ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ ನೇಮಿಸಲಾಗಿರುವ ಆಶಾ (ಮಾನ್ಯತೆ ಪಡೆದ ಸಾಮಾಜಿಕ ಆರೋಗ್ಯ ಕಾರ್ಯಕರ್ತೆಯರು- ಎಎಸ್‌ಎಚ್‌ಎ) ಕಾರ್ಯಕರ್ತೆಯರು ಜನಸಮುದಾಯ ಮತ್ತು ಆರೋಗ್ಯ ವ್ಯವಸ್ಥೆಯ ಮಧ್ಯೆ ಸೇತುವೆಯಂತೆ ಕೆಲಸ ಮಾಡುತ್ತಿದ್ದಾರೆ. ಅದರಲ್ಲೂ ಗ್ರಾಮೀಣ ಪ್ರದೇಶಗಳಿಗೆ ಆರೋಗ್ಯ ಸೇವೆಗಳನ್ನು ತಲುಪಿಸುವುದರಲ್ಲಿ ಅವರ ಕೆಲಸ ಅನನ್ಯವಾದುದು. ಆರೋಗ್ಯ ಕ್ಷೇತ್ರದ ಸುಧಾರಣೆಗೆ ಕೊಡುಗೆ ನೀಡುತ್ತಿರುವ ಇವರಿಗೆ ಸ್ವಯಂಸೇವಕರ ಸ್ಥಾನಮಾನ ಮಾತ್ರ ಇದೆ. ಆದರೆ, ಲಸಿಕೆ ವಿತರಣೆ, ಶಿಶು ಮತ್ತು ತಾಯಂದಿರ ಆರೈಕೆ, ನೈರ್ಮಲ್ಯ, ರೋಗನಿಯಂತ್ರಣ ಸೇರಿದಂತೆ ಸರ್ಕಾರದ ಹಲವು ಅಭಿಯಾನಗಳ ಅನುಷ್ಠಾನದಲ್ಲಿ ಇವರ ಪಾತ್ರ ಹಿರಿದು. ಸರಿಯಾದ ಸಂಪರ್ಕ ವ್ಯವಸ್ಥೆಗಳಿಲ್ಲದ ಪುಟ್ಟ ಗ್ರಾಮಗಳಿಗೂ ಆರೋಗ್ಯ ಸೇವೆಗಳನ್ನು ಪರಿಚಯಿಸುವ ದಿಸೆಯಲ್ಲಿ ಕೆಲಸ ಮಾಡುತ್ತಿರುವ ಇವರು, ವೈದ್ಯಕೀಯ ಸೇವೆಗಳ ಸಂಪರ್ಕದ ಕೊರತೆ ಇರುವ ಜನಸಮೂಹ ಮತ್ತು ಆರೋಗ್ಯ ಇಲಾಖೆಯ ಮಧ್ಯೆ ಸೇತುವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ವೇತನ ಹೆಚ್ಚಳವೂ ಸೇರಿದಂತೆ ಹತ್ತು ಬೇಡಿಕೆಗಳ ಈಡೇರಿಕೆ ಹಾಗೂ ಆರೋಗ್ಯ ಸೇವೆಗಳ ವಿತರಣೆಯಲ್ಲಿ ತಮ್ಮ ಕೆಲಸಕ್ಕೆ ಸೂಕ್ತ ಮಾನ್ಯತೆಗೆ ಆಗ್ರಹಿಸಿ ರಾಜ್ಯದ ಸುಮಾರು 42,000 ಆಶಾ ಕಾರ್ಯಕರ್ತೆಯರು ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಮುಂದಾಗಿದ್ದಾರೆ.



ಆಶಾ ಕಾರ್ಯಕರ್ತೆಯರ ಬೇಡಿಕೆಗಳ ಸಾಧಕ–ಬಾಧಕ ಪರಿಶೀಲಿಸಿ, ನಿರ್ಧಾರ ಕೈಗೊಳ್ಳಬೇಕಾದ ಹೊಣೆಗಾರಿಕೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಮೇಲಿದೆ

ಆಶಾ ಕಾರ್ಯಕರ್ತೆಯರಿಗೆ ನಿಗದಿತ ವೇತನ ನೀಡಲಾಗುತ್ತಿಲ್ಲ. ಅವರು ಮಾಡುವ ಕೆಲಸಗಳ ಆಧಾರದಲ್ಲಿ ಗೌರವಧನ ಮತ್ತು ಭತ್ಯೆಗಳನ್ನು ಮಾತ್ರ ನೀಡಲಾಗುತ್ತಿದೆ. ಇದರಿಂದಾಗಿ ಅವರು ಆರ್ಥಿಕ ಸಂಕಷ್ಟದ ಸುಳಿಗೆ ಸಿಲುಕುತ್ತಿದ್ದಾರೆ. ತಿಂಗಳಿಗೆ ಕನಿಷ್ಠ ₹15,000 ಗೌರವಧನ, ನಗರ ಪ್ರದೇಶಗಳ ಆಶಾ ಕಾರ್ಯಕರ್ತೆಯರಿಗೆ ಹೆಚ್ಚಿನ ಜೀವನ ನಿರ್ವಹಣೆ ವೆಚ್ಚ ಭರಿಸುವುದಕ್ಕಾಗಿ ₹2,000 ಹೆಚ್ಚುವರಿ ಭತ್ಯೆ ಹಾಗೂ ಗ್ರ್ಯಾಚ್ಯುಟಿ, ಭವಿಷ್ಯ ನಿಧಿ, ರಾಜ್ಯ ಕಾರ್ಮಿಕರ ವಿಮೆ (ಇಎಸ್‌ಐ) ಸೌಲಭ್ಯಗಳೊಂದಿಗೆ ತಮಗೆ ಕಾಯಂ ನೌಕರರ ಸ್ಥಾನಮಾನ ನೀಡಬೇಕು ಎಂಬ ಬೇಡಿಕೆಯನ್ನು ಆಶಾ ಕಾರ್ಯಕರ್ತೆಯರು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಮುಂದೆ ಇರಿಸಿದ್ದಾರೆ. ಅದರ ಜೊತೆಯಲ್ಲೇ ಬಾಕಿ ಗೌರವಧನ ಬಿಡುಗಡೆ, ವಾರ್ಷಿಕ ಆರೋಗ್ಯ ತಪಾಸಣೆ, ಗಂಭೀರ ಕಾಯಿಲೆಗಳಿಗೆ ಉಚಿತ ಚಿಕಿತ್ಸೆ ನೀಡಬೇಕೆಂಬ ಬೇಡಿಕೆಗಳನ್ನೂ ಮುಂದಿಟ್ಟಿದ್ದಾರೆ. ಆಶಾ ಕಾರ್ಯಕರ್ತೆಯರು ಕಡ್ಡಾಯವಾಗಿ ಸ್ಮಾರ್ಟ್‌ಫೋನ್ ಮೂಲಕ ಕೆಲಸ ಮಾಡಬೇಕೆಂದು ಹೊರಡಿಸಿರುವ ಆದೇಶವನ್ನು ಹಿಂದಕ್ಕೆ ಪಡೆಯುವಂತೆಯೂ ಆಗ್ರಹಿಸಿದ್ದಾರೆ. ಅತ್ಯಂತ ಕಡಿಮೆ ಗೌರವಧನಕ್ಕೆ ಕೆಲಸ ಮಾಡುವ ಆಶಾ ಕಾರ್ಯಕರ್ತೆಯರಂತಹ ಆರೋಗ್ಯ ಸೇವಕರ ಆರ್ಥಿಕ ಸಂಕಷ್ಟಗಳನ್ನು ಪರಿಗಣಿಸದೇ ಅವರು ಡಿಜಿಟಲ್ ಸಾಧನಗಳನ್ನು ಖರೀದಿಸಿ, ಬಳಸಬೇಕು ಎಂದು ಆದೇಶ ಹೊರಡಿಸಿರುವುದು ಸಮರ್ಥನೀಯವಲ್ಲ.

ಆರೋಗ್ಯ ಇಲಾಖೆಗೆ ಸಂಬಂಧಿಸಿದ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಮುಂಚೂಣಿಯಲ್ಲಿ ಕೆಲಸ ಮಾಡುತ್ತಿರುವ ಆಶಾ ಕಾರ್ಯಕರ್ತೆಯರ ಬೆಂಬಲ ಇಲ್ಲದೇ ಹೋದರೆ ಸಾರ್ವಜನಿಕ ಆರೋಗ್ಯ ಅಭಿಯಾನಗಳು ಬಲಹೀನವಾಗುತ್ತವೆ. ಜನಸಾಮಾನ್ಯರು ಆರೋಗ್ಯ ಸೇವೆಗಳನ್ನು ಪಡೆಯುವುದೂ ದುಸ್ತರವಾಗುತ್ತದೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಆಧಾರಸ್ತಂಭದಂತೆ ಕೆಲಸ ಮಾಡುತ್ತಿರುವ ಸ್ವಯಂಸೇವಕರ ಬೇಡಿಕೆಗಳಿಗೆ ಸರ್ಕಾರವು ಸ್ಪಂದಿಸದೇ ಇದ್ದರೆ ಅಂತಹ ಧೋರಣೆಯು ಆಶಾ ಕಾರ್ಯಕರ್ತೆಯರ ಶಕ್ತಿಯನ್ನು ಕುಗ್ಗಿಸುವುದಷ್ಟೇ ಅಲ್ಲ, ಗ್ರಾಮೀಣ ಆರೋಗ್ಯ ಸೇವೆಗಳ ಗುಣಮಟ್ಟ ಕುಸಿಯುವುದಕ್ಕೂ ಕಾರಣವಾಗುತ್ತದೆ. ಸಾರ್ವಜನಿಕ ಆರೋಗ್ಯ ಸೇವೆಗಳಿಗೆ ನೀಡುತ್ತಿರುವ ಸೇವೆಯನ್ನು ಪರಿಗಣಿಸಿ ಆಶಾ ಕಾರ್ಯಕರ್ತೆಯರನ್ನು ಗೌರವಯುತವಾಗಿ ನಡೆಸಿಕೊಂಡು, ಅವರ ಬೇಡಿಕೆಗಳ ಸಾಧಕ–ಬಾಧಕ ಕುರಿತು ಪರಿಶೀಲಿಸಿ, ನಿರ್ಧಾರ ಕೈಗೊಳ್ಳಬೇಕಾದ ಹೊಣೆಗಾರಿಕೆ ಸರ್ಕಾರಗಳ ಮೇಲಿದೆ. ದೇಶದ ಆರೋಗ್ಯ ವ್ಯವಸ್ಥೆಯಿಂದ ಆಶಾ ಕಾರ್ಯಕರ್ತೆಯರನ್ನು ಪ್ರತ್ಯೇಕಿಸಲಾಗದಂತಹ ಸ್ಥಿತಿ ಇದೆ. ಅವರು ನಡೆಸುತ್ತಿರುವ ಮುಷ್ಕರವು ಗೌರವಧನ ಹೆಚ್ಚಳದ ಉದ್ದೇಶವನ್ನು ಮಾತ್ರ ಹೊಂದಿಲ್ಲ. ಅದು, ಘನತೆ, ನ್ಯಾಯ ಮತ್ತು ತಮ್ಮ ಸೇವೆಗೆ ಮಾನ್ಯತೆ ಪಡೆಯುವ ಉದ್ದೇಶದಿಂದ ಕೂಡಿದ ಹೋರಾಟ ಎಂಬುದನ್ನು ಸರ್ಕಾರಗಳು ಅರಿತು, ವಿಳಂಬವಿಲ್ಲದೇ ಸ್ಪಂದಿಸಬೇಕು.

‘ಒಂದು ದೇಶ ಒಂದು ಚಂದಾ’: ಲಭ್ಯವಾಗಲಿದೆ ಸಾವಿರಾರು ಸಂಶೋಧನಾ ಪತ್ರಿಕೆಗಳ ಇ-ಪ್ರತಿ

‘ಚಂದಾ’ ಯೋಜನೆ: ಸಂಶೋಧನೆಗೆ ಬಲ?



ವಿಶ್ಲೇಷಣೆ

ಎಚ್‌.ಕೆ.ಶರತ್

ಸರ್ಕಾರಿ ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ಸಂಶೋಧನಾ ಕೇಂದ್ರಗಳಿಗೆ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಸುಮಾರು 13,000 ಸಂಶೋಧನಾ ಪತ್ರಿಕೆಗಳ ವಿದ್ಯುನ್ಮಾನ ಪ್ರತಿಗಳನ್ನು (ಇ-ಕಾಪಿ) ಲಭ್ಯವಾಗಿಸುವ ಗುರಿ ಹೊಂದಿರುವ ‘ಒಂದು ದೇಶ ಒಂದು ಚಂದಾ’ ಯೋಜನೆಗೆ ಕೇಂದ್ರ ಸಚಿವ ಸಂಪುಟದ ಒಪ್ಪಿಗೆ ಇತ್ತೀಚೆಗೆ ದೊರೆತಿದೆ. 2025ರಿಂದ 2027ರವರೆಗೆ ಈ ಯೋಜನೆಯ ಸಲುವಾಗಿ ಒಕ್ಕೂಟ ಸರ್ಕಾರವು ₹6,000 ಕೋಟಿ ವಿನಿಯೋಗಿಸಲಿದೆ. 30 ಅಂತರರಾಷ್ಟ್ರೀಯ ಪ್ರಕಾಶನ ಸಂಸ್ಥೆಗಳು ಹೊರತರುತ್ತಿರುವ ಸಂಶೋಧನಾ ಪತ್ರಿಕೆಗಳು ಈ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅನುದಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ದೇಶದ 6,300ಕ್ಕೂ ಹೆಚ್ಚು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಗಳಲ್ಲಿನ ಸಂಶೋಧಕರು, ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರಿಗೆ ಲಭ್ಯವಾಗಲಿವೆ.

ಮಾಹಿತಿ ಮತ್ತು ಗ್ರಂಥಾಲಯ ಜಾಲದ (inflibnet) ಮೂಲಕ ಇದು ಅನುಷ್ಠಾನಕ್ಕೆ ಬರಲಿದೆ. ಸರ್ಕಾರಿ ಸ್ವಾಮ್ಯದ ಹಲವು ಶಿಕ್ಷಣ ಸಂಸ್ಥೆಗಳಲ್ಲಿನ ಸಂಶೋಧನಾರ್ಥಿಗಳಿಗೆ ಹೆಚ್ಚೆಚ್ಚು ಸಂಶೋಧನಾ ಪ್ರಬಂಧಗಳನ್ನು ಪರಾಮರ್ಶಿಸುವ ಅವಕಾಶ ಇದರಿಂದ ದೊರೆಯಲಿದೆ.

ಇದು ದೇಶದ ಉನ್ನತ ಶಿಕ್ಷಣ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಸದ್ಯ ಹೆಚ್ಚು ಆರ್ಥಿಕ ಸಂಪನ್ಮೂಲಗಳನ್ನು ಹೊಂದಿರುವ ಬೆರಳೆಣಿಕೆಯಷ್ಟು ಶಿಕ್ಷಣ ಸಂಸ್ಥೆಗಳಲ್ಲಿ ಮಾತ್ರ ಹೆಚ್ಚಿನ ಸಂಶೋಧನಾ ಪತ್ರಿಕೆಗಳನ್ನು ಪಡೆಯುವ ಅವಕಾಶವಿದೆ. ಉತ್ತಮ ಉದ್ದೇಶ ಮತ್ತು ಗುರಿ ಹೊಂದಿರುವ ಈ ಉಪಕ್ರಮವು ಸಂಶೋಧನಾ ಪತ್ರಿಕೆಗಳನ್ನು ಹೊರತರುತ್ತಿರುವ ಕೆಲ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳ ಧೋರಣೆ ಕುರಿತೂ ಚರ್ಚೆ ಏರ್ಪಡಲು ಕಾರಣವಾಗಿದೆ.

ಸಂಶೋಧನಾ ಪತ್ರಿಕೆಗಳ ಪ್ರಕಟಣಾ ಕ್ಷೇತ್ರವನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿರುವ ಕೆಲವು ಪ್ರಕಾಶನ ಸಂಸ್ಥೆಗಳು, ಲಾಭಕ್ಕಾಗಿ ಅನುಸರಿಸುತ್ತಿರುವ ಧೋರಣೆಯಿಂದಾಗಿ ಒಟ್ಟಾರೆ ಸಂಶೋಧನಾ ಕ್ಷೇತ್ರ ಮತ್ತು ಜ್ಞಾನವನ್ನು ಎಲ್ಲರಿಗೂ ಮುಕ್ತವಾಗಿಸುವ ಆಶಯಕ್ಕೆ ಪೆಟ್ಟು ಬೀಳುತ್ತಿದೆ ಎನ್ನುವ ಅಸಮಾಧಾನವೂ ಇದೆ. ಇದಕ್ಕೆ ಪರ್ಯಾಯವಾಗಿ, ಸಂಶೋಧನಾ ಪತ್ರಿಕೆಗಳನ್ನು ಉಚಿತವಾಗಿ ಎಲ್ಲರಿಗೂ ಲಭ್ಯವಾಗಿಸುವ ‘ಮುಕ್ತ ಲಭ್ಯತೆ’ (ಓಪನ್ ಆ್ಯಕ್ಸೆಸ್) ಮಾದರಿಗೆ ಜಾಗತಿಕ ಸಂಶೋಧನಾ ವಲಯದಲ್ಲಿ ಹೆಚ್ಚಿನ ಪ್ರಾಮುಖ್ಯ ದೊರೆಯುತ್ತಿದೆ. ಇಲ್ಲಿ, ಸಂಶೋಧನಾ ಪ್ರಬಂಧಗಳನ್ನು ಯಾರು ಬೇಕಾದರೂ ಉಚಿತವಾಗಿ ಡೌನ್‌ಲೋಡ್ ಮಾಡಿಕೊಂಡು ಓದಬಹುದು. ಆದರೆ, ಈ ಪತ್ರಿಕೆಗಳು ಸಂಶೋಧನಾ ಲೇಖನವೊಂದರ ಪ್ರಕಟಣೆಗೆ ತಗಲುವ ವೆಚ್ಚವನ್ನು ಆಯಾ ಲೇಖಕರಿಂದಲೇ ಪಡೆಯುತ್ತವೆ.

ಸಂಶೋಧನಾ ಪತ್ರಿಕೆಗಳ ಮುದ್ರಿತ ಆವೃತ್ತಿ ಇಂದು ಬಹುತೇಕ ಅಪ್ರಸ್ತುತವೇ ಆಗಿದೆ. ವಿದ್ಯುನ್ಮಾನ ಆವೃತ್ತಿಗಳ ಬಳಕೆ ಹೆಚ್ಚಿದೆ. ಸಂಶೋಧನಾ ಲೇಖನಗಳ ಬರವಣಿಗೆ, ಪರಾಮರ್ಶೆ ಮತ್ತು ಉಲ್ಲೇಖ ಪ್ರಕ್ರಿಯೆಗಳನ್ನು ಸರಳಗೊಳಿಸುವ ತಾಂತ್ರಿಕ ಹತಾರಗಳ ಬಳಕೆಯೂ ವ್ಯಾಪಕವಾಗಿದೆ. ಜಾಗತಿಕ ಸಂಶೋಧನಾ ವಲಯದಲ್ಲಿ ಅತಿ ಹೆಚ್ಚು ಬಳಕೆಗೆ ಒಳಪಟ್ಟ ಮತ್ತು ಸಂಶೋಧನಾ ಜ್ಞಾನವನ್ನು ನಿಜವಾದ ಅರ್ಥದಲ್ಲಿ ಎಲ್ಲರಿಗೂ ಮುಕ್ತಗೊಳಿಸುವಲ್ಲಿ ಯಶಸ್ಸು ಕಂಡಿದ್ದ ‘ಸೈ-ಹಬ್’ (sci-hub) ಯೋಜನೆಯು 2021ರ ನಂತರ ಕಾನೂನಾತ್ಮಕ ಕುಣಿಕೆಗೆ ಸಿಲುಕಿ ತನ್ನ ಪ್ರಸ್ತುತತೆ ಕಳೆದುಕೊಳ್ಳುತ್ತಿದೆ. ‘ಒಂದು ದೇಶ ಒಂದು ಚಂದಾ’ದಂತಹ ಉಪಕ್ರಮಗಳ ಅನುಪಸ್ಥಿತಿಯಲ್ಲಿ ಬಹುತೇಕ ಪಾವತಿಸಿ ಓದಬೇಕಿದ್ದ ಸಂಶೋಧನಾ ಪತ್ರಿಕೆಗಳನ್ನು ‘ಸೈ-ಹಬ್’ ಸುಲಭವಾಗಿ ಲಭ್ಯವಾಗಿಸುತ್ತಿತ್ತು. ಆದರೆ, 2021ರ ನಂತರ ಪ್ರಕಟವಾದ, ಪಾವತಿಸಿ ಓದಬೇಕಾದ ಸಂಶೋಧನಾ ಪ್ರಬಂಧಗಳನ್ನು ಇಂದು ‘ಸೈ-ಹಬ್’ ನೆರವಿನಿಂದ ಡೌನ್‌ಲೋಡ್ ಮಾಡಿಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ, ಸದ್ಯದ ಮಟ್ಟಿಗೆ ‘ಒಂದು ದೇಶ ಒಂದು ಚಂದಾ’ ದೇಶದಲ್ಲಿನ ಸಂಶೋಧನಾ ಚಟುವಟಿಕೆಗಳನ್ನು ಉತ್ತೇಜಿಸಲು ನೆರವಾಗಬಲ್ಲ ಉಪಕ್ರಮ.

2013ರಿಂದ 2020ರವರೆಗೂ ಸಕ್ರಿಯವಾಗಿದ್ದ ‘ಸೈ-ಹಬ್’ ವಿವಾದಾತ್ಮಕ ಯೋಜನೆಯು ವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದ ಬಹುಪಾಲು ಸಂಶೋಧನಾ ಲೇಖನಗಳನ್ನು ಉಚಿತವಾಗಿ ಲಭ್ಯವಾಗಿಸುತ್ತಿತ್ತು. ಕಾಪಿರೈಟ್ ಉಲ್ಲಂಘನೆಯ ಕಾರಣ ಮುಂದಿಟ್ಟುಕೊಂಡು ಪ್ರಕಾಶನ ಸಂಸ್ಥೆಗಳು ನ್ಯಾಯಾಲಯದ ಮೆಟ್ಟಿಲೇರಿದ್ದರಿಂದ, 2021ರಿಂದ ‘ಸೈ-ಹಬ್’ ಸಂಪನ್ಮೂಲಕ್ಕೆ ಹೊಸ ಲೇಖನಗಳನ್ನು ಸೇರಿಸಲಾಗುತ್ತಿಲ್ಲ. ಕಾಪಿರೈಟ್ ಉಲ್ಲಂಘನೆಯನ್ನು ಗಣನೆಗೆ ತೆಗೆದುಕೊಳ್ಳದೆ ಸಂಶೋಧನಾ ಜ್ಞಾನವನ್ನು ಎಲ್ಲರಿಗೂ ಉಚಿತವಾಗಿ ಲಭ್ಯವಾಗಿಸುವ ‘ಸೈ-ಹಬ್’ನಂತಹ ಯೋಜನೆ ನಿಂತ ನೀರಾದ ಮೇಲೆ, ಚಂದಾ ಮಾಡಿಸದೆ ಸಂಶೋಧನಾ ಪತ್ರಿಕೆಗಳನ್ನು ಪಡೆಯುವ ದಾರಿ ಬಂದ್ ಆಯಿತು. ‘ಸೈ-ಹಬ್’ ಸಂಗ್ರಹದಲ್ಲಿ ಇಂದಿಗೂ 8.83 ಕೋಟಿ ಸಂಶೋಧನಾ ಲೇಖನಗಳು ಮತ್ತು ಪುಸ್ತಕಗಳ ವಿದ್ಯುನ್ಮಾನ ಪ್ರತಿಗಳು ಉಚಿತವಾಗಿ ಲಭ್ಯವಾಗುತ್ತಿವೆ.

ಇಂದು ‘ಒಂದು ದೇಶ ಒಂದು ಚಂದಾ’ದಂತಹ ಉಪಕ್ರಮವು ದೇಶದ ಸಂಶೋಧನಾ ವಲಯದಲ್ಲಿ ಹೊಸ ಆಶಾಭಾವ ಮೂಡಿಸಲು ‘ಸೈ-ಹಬ್’ ಸಕ್ರಿಯವಾಗಿ ಇಲ್ಲದಿರುವುದು ಕೂಡ ಒಂದು ಪ್ರಮುಖ ಕಾರಣ. ‘ಸೈ-ಹಬ್’ ಮೂಲಕ ಅತಿ ಹೆಚ್ಚು ಲೇಖನಗಳನ್ನು ಡೌನ್‌ಲೋಡ್ ಮಾಡಿಕೊಂಡ ದೇಶಗಳ ಪಟ್ಟಿಯಲ್ಲಿ ಭಾರತ ಮೂರನೇ ಸ್ಥಾನದಲ್ಲಿದೆ. ಚೀನಾ ಮತ್ತು ಅಮೆರಿಕ ಮೊದಲ ಎರಡು ಸ್ಥಾನಗಳಲ್ಲಿವೆ. ಇದು ‘ಸೈ-ಹಬ್’ ಭಾರತದ ಸಂಶೋಧನಾ ವಲಯದಲ್ಲಿ ಯಾವ ಪರಿ ಜನಪ್ರಿಯವಾಗಿತ್ತು ಎಂಬುದಕ್ಕೆ ಕನ್ನಡಿ ಹಿಡಿಯುತ್ತದೆ. ಭಾರತದಲ್ಲಿ ‘ಸೈ-ಹಬ್’ ಬಳಕೆದಾರರ ಸಂಖ್ಯೆ ಹೆಚ್ಚಳವನ್ನು ಗಮನಿಸಿ ಎಚ್ಚೆತ್ತುಕೊಂಡ ಪ್ರಕಾಶನ ಸಂಸ್ಥೆಗಳು, ಅದರ ವಿರುದ್ಧ ದೆಹಲಿ ಹೈಕೋರ್ಟ್‌ನಲ್ಲಿ ದಾವೆ ಹೂಡಿ ಯೋಜನೆಯ ನಾಗಾಲೋಟಕ್ಕೆ ತಡೆ ಒಡ್ಡಿದವು.



ವ್ಯವಸ್ಥಿತ ರೀತಿಯಲ್ಲಿ ನಡೆಸುವ ಸಂಶೋಧನೆಗಳಿಗೆ ಸಂಶೋಧನಾ ಪರಾಮರ್ಶೆ ಭದ್ರ ಬುನಾದಿ ಒದಗಿಸುತ್ತದೆ. ವಿಸ್ತಾರವಾಗಿ ಸಂಶೋಧನಾ ಪರಾಮರ್ಶೆ ನಡೆಸಲು ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟವಾದ, ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಬಂಧಗಳನ್ನು ಓದಿ, ಅರ್ಥೈಸಿಕೊಂಡು, ತಮ್ಮ ಸಂಶೋಧನೆಗೆ ಪೂರಕವಾಗಬಲ್ಲ ಸಂಗತಿಗಳನ್ನು ವ್ಯವಸ್ಥಿತ ರೀತಿಯಲ್ಲಿ ದಾಖಲಿಸಿ ಇಟ್ಟುಕೊಳ್ಳುವುದು ಮುಖ್ಯವಾಗುತ್ತದೆ. ಗುಣಮಟ್ಟದ ಪತ್ರಿಕೆಗಳಿಗೆ ಚಂದಾ ಹೊಂದಿಲ್ಲದ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳಲ್ಲಿ ಸಂಶೋಧನೆ ಕೈಗೊಳ್ಳುತ್ತಿರುವವರಿಗೆ, ತಮಗೆ ಅಗತ್ಯವಿರುವ ಪ್ರಬಂಧಗಳನ್ನು ಸಂಗ್ರಹಿಸುವುದೇ ಸವಾಲಿನ ಕೆಲಸ. ‘ಒಂದು ದೇಶ ಒಂದು ಚಂದಾ’ ಯೋಜನೆ ಇಂತಹ ತೊಡಕುಗಳನ್ನು ನಿವಾರಿಸುವ ಆಶಾಭಾವ ಮೂಡಿಸಿದೆ.

ಉನ್ನತ ಶಿಕ್ಷಣ ಸಂಸ್ಥೆಗಳ ಗುಣಮಟ್ಟ ನಿರ್ಣಯಿಸಲು ಆಯಾ ಸಂಸ್ಥೆಗಳಲ್ಲಿ ಸಂಶೋಧನಾ ಚಟುವಟಿಕೆಗಳನ್ನು ನಡೆಸುತ್ತಿರುವವರು ಎಷ್ಟು ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ ಎನ್ನುವುದು ಮುಖ್ಯ ಮಾನದಂಡವಾಗಿದೆ. ಹೀಗಾಗಿ, ಸಂಶೋಧನಾ ಲೇಖನಗಳ ಪ್ರಕಟಣೆ ಇಂದು ಹಿಂದೆಂದಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿದೆ. ಹೆಚ್ಚೆಚ್ಚು ಪ್ರಕಟಿಸಿದಂತೆಲ್ಲ ಹೆಚ್ಚಿನ ಮನ್ನಣೆ ದೊರೆಯುತ್ತಿದೆ. ಹೀಗಾಗಿ, ಪ್ರಕಟಣೆ ವೇಳೆ ಅನುಸರಿಸಬೇಕಾದ ನೈತಿಕ ಮೌಲ್ಯಗಳನ್ನೆಲ್ಲ ಗಾಳಿಗೆ ತೂರಿ ಗುರಿ ಮುಟ್ಟುವ ಕಸರತ್ತು ಕೂಡ ದೇಶದ ಶೈಕ್ಷಣಿಕ ವಲಯದಲ್ಲಿ ಚಾಲ್ತಿಯಲ್ಲಿದೆ. ‘ಒಂದು ದೇಶ ಒಂದು ಚಂದಾ’ದಂತಹ ಉಪಕ್ರಮ ಹೆಚ್ಚೆಚ್ಚು ಪ್ರಕಟಿಸುವ ಉಮೇದಿಗೆ ಬಿದ್ದಿರುವವರ ಪಾಲಿಗೂ ವರದಾನವಾಗಲಿದೆ.

ಈ ಉಪಕ್ರಮವು ಸದ್ಯ ವಿಕೇಂದ್ರೀಕೃತ ಮಾದರಿಯಲ್ಲಿ ಅಸ್ತಿತ್ವದಲ್ಲಿರುವ ಆಯಾ ಶಿಕ್ಷಣ ಸಂಸ್ಥೆಯ ಅಗತ್ಯಕ್ಕೆ ಅನುಗುಣವಾಗಿ ಸಂಶೋಧನಾ ಪತ್ರಿಕೆಗಳಿಗೆ ಚಂದಾ ಮಾಡಿಸುವ ಆಯ್ಕೆಯನ್ನು ಕಸಿದುಕೊಳ್ಳುವ ಅಪಾಯವೂ ಇದೆ. ಸಂಶೋಧನಾ ಕೇಂದ್ರವೊಂದಕ್ಕೆ ಅಗತ್ಯವಿರುವ ಪತ್ರಿಕೆಗಳು ‘ಒಂದು ದೇಶ ಒಂದು ಚಂದಾ’ ವ್ಯಾಪ್ತಿಗೆ ಒಳಪಡದಿದ್ದರೆ ತನ್ನಲ್ಲಿರುವ ಸಂಪನ್ಮೂಲ ಬಳಸಿಯೇ ಅಂತಹ ಪತ್ರಿಕೆಗಳನ್ನು ಖರೀದಿಸುವ ಸಂದರ್ಭ ಎದುರಾಗಲಿದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಸಂಶೋಧನಾ ವಲಯವನ್ನು ಆವರಿಸಿರುವ ತಪ್ಪು ಆದ್ಯತೆಗಳನ್ನು ಸರಿಪಡಿಸುವ ದಿಸೆಯಲ್ಲಿ ಕೂಡ ಒಕ್ಕೂಟ ಸರ್ಕಾರ ಚಿಂತಿಸುವ ಜರೂರತ್ತಿದೆ. ಪ್ರಮಾಣಕ್ಕಿಂತ ಗುಣಮಟ್ಟಕ್ಕೆ ಆದ್ಯತೆ ನೀಡಬೇಕಿದೆ. ಸಂಶೋಧನೆಗಳ ಮೂಲಕ ಹೊರಹೊಮ್ಮುವ ತಿಳಿವಳಿಕೆಯನ್ನು ಪ್ರಾಯೋಗಿಕವಾಗಿಯೂ ಅನುಷ್ಠಾನಯೋಗ್ಯ ಆಗಿಸುವಲ್ಲಿ ಇರುವ ತೊಡಕುಗಳನ್ನು ಗುರುತಿಸಿ, ಅವುಗಳ ನಿವಾರಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಇಲ್ಲದೇಹೋದಲ್ಲಿ, ಸಂಶೋಧನಾ ಚಟುವಟಿಕೆ ಮತ್ತು ಪ್ರಕಟಣೆ ಪ್ರಮಾಣದಲ್ಲಿ ಏರುಗತಿ ಕಂಡುಬಂದರೂ ಅದರಿಂದ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಕ್ಕೆ ಹೆಚ್ಚಿನ ಪ್ರಯೋಜನವಾಗದು.

ಲೇಖಕ: ಸಹಾಯಕ ಪ್ರಾಧ್ಯಾಪಕ
ಮಲೆನಾಡು ತಾಂತ್ರಿಕ ಮಹಾವಿದ್ಯಾಲಯ, ಹಾಸನ

ಚುರುಮುರಿ



ಹೊಸ ಸಂಕಲ್ಪಗಳು

• ಲಿಂಗರಾಜು ಡಿ.ಎಸ್.

ಹೊಸ ವರ್ಷದ ಸಂದರ್ಭದಲ್ಲಿ ರಾಜ್ಯದ ದೊಡ್ಡ ಮಂತ್ರಿಗಳ ಸಂದರ್ಶನ ನಡೆದಿತ್ತು. ‘ಸಾ... ಹೊಸ ವರ್ಷದಲ್ಲಿ ಕರ್ನಾಟಕದ ಜನತೆಗೆ ನಿಮ್ಮ ಸಂದೇಶ ಏನು?’ ಪತ್ರಕರ್ತ ಕೇಳಿದ.

‘ರಾಜೀನಾಮೆ ಕೊಡ್ರೀ ಅಂತ ಯಾರು ಬಟ್ಟೆ ಹರಕಂದ್ರೂ ಅವರ ಮಾತಿಗೆ ದಕ್ಕಬಾರದು ಅಂತ ಜನರ ಪರವಾಗಿ ತೀರ್ಮಾನ ತಕ್ಕಂದಿದ್ದೀನಿ’ ದೊಡ್ಡಮಂತ್ರಿಗಳು ಘೋಷಿಸಿದರು.

‘ಜನರಿಗೆ ನಿಮ್ಮ ಕೊಡುಗೆ ಏನು?’

‘ಸರ್ಕಾರದ ಬೆಂಬಲಕ್ಕೆ ಸದಾ ನಿಂತಿರೋ ಮದ್ಯಪ್ರಿಯರಿಗೆ ಓಣಿಗೆ ಒಬ್ಬರಂಗೆ ಮದ್ಯಜ್ಯೋತಿ ಅಂತ ಪ್ರಶಸ್ತಿ ಕೊಡ್ತೀವಿ. ವರಮಾನ ಹೆಚ್ಚಿಸಕ್ಕೆ ಬಸ್‌ಚಾರ್ಜು ಡಬ್ಬಲ್ ಮಾಡ್ತೀವಿ, ಹಾಲು ಲೀಟರಿಗೆ ನೂರು ರೂಪಾಯಿ ಮಾಡ್ತೀವಿ, ಮೆಟ್ರೊ, ಆಟೊ ದರ ಸೇರಿದಂಗೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಯಕ್ಕ-ಮಕ್ಕಾ ರೇಟು ಏರಿಸ್ತೀವಿ’.

‘ಅಲ್ಲಸಾ, ಜನ ಈಗಲೇ ಬೆಲೆ ಏರಿಕೆಗೆ ರೋಸೋಗವ್ರೆ. ವಿರೋಧಪಕ್ಷಗಳು ಮುಂದ್ಲ ಎಲೆಕ್ಷನ್ನಲ್ಲಿ ನಿಮ್ಮನ್ನ ಬುಟ್ಟಾರೇ?’

‘ಅವರೆಲ್ಲಾ ಹಿಂದ್ಲಬಾಗಿಲಿಂದ ಬಂದೋರು, ಅವರ ಕೈಲಿ ಏನೂ ಕಿಸಿಯಕ್ಕೆ ಆಗಕುಲ್ಲ ಕನ್ರೀ. ಅವರೆಲ್ಲಾ ಫೇಲ್‌ರತ್ನಗಳು ಕಯ್ಯಾ. ಯಾವ ಎಲೆಕ್ಷನ್ನಲ್ಲಿ ಅವರೇನು ಕಿತ್ತು ದಬ್ಬಾಕ್ಯವರೆ?’

‘ನಿಮ್ಮ ಪಕ್ಷದಲ್ಲೂ ಅಧಿಕಾರಕ್ಕೆ ಕಡಿದಾಟವಂತೆ. ನಿಮ್ಮ ಚೇರಿಗೆ, ಡಿಸಿಎಂ ಚೇರಿಗೆ, ಅಧ್ಯಕ್ಷ ಸ್ಥಾನಕ್ಕೆ ಆಕಾಂಕ್ಷಿಗಳು ಹೌ-ತಣ ಕೂಟ ಮಾಡ್ತಾವ್ರಂತೆ? ನೀವಿರಬಕು ಇಲ್ಲ ಅವರಿರಬಾರದು ಅಂತ ನಿಮ್ಮ ಕಡೆಯವರ ಹೋರಾಟವಂತೆ? ಅಧಿಕಾರ ಹಂಚಿಕೆ ಅಂದ್ರೆ ಅಹಂ ಆಗೋಗ್ಯದಲ್ಲ ಸಾ’.

‘ರಾಜಕೀಯದೇಲಿ ಕೊನೇವರೆಗೂ ಅಧಿಕಾರದ ಅಹಂ ಇರಬಕು ಕನ್ರೀ. ಸಿಎಂ ಆಗಕ್ಕೆ ಸಾಲಾವಳಿ ಬರಬಕು’.

‘ಅಂದ್ರೆ ಇದೇ ನಿಮ್ಮ ವಾರ್ಧಕ್ಯ ಷಟ್-ಪದಿ ಅನ್ನಿ. ಜನವ ಎಲ್ಲೀಗಂಟ ತಿಪುರಚಂಡಾಡು ಸ್ತೀರ? ನೀವು ಮುಗ್ಗರಿಸದಂಗೆ ಆತುಗಳಕ್ಕೆ ನಾಕು ಜನವ್ರೆ. ಜನ ಮುಗ್ಗರಿಸದಂಗೆ ಆತುಗಳಕ್ಕೆ ಒಬ್ಬರೂ ಇಲ್ಲವಲ್ಲ ಸಾ’.

‘ಯಾರ್ರೀ ನೀವು. ಈ ಅಹಂ ಎಲ್ಲಾ ಜನರಿಗೋಸ್ಕರ ಕನ್ರೀ...’

ದಿನದ ಟ್ವೀಟ್



ಮಿತಿಮೀರಿದ ಓಲೈಕೆ

ರಾಜ್ಯ ಮಟ್ಟದ ಯುವಜನೋತ್ಸವದ ಕಥೆ ಮತ್ತು ಕವನ ರಚನೆ ಸ್ಪರ್ಧೆಯಲ್ಲಿ ಮೊದಲಿಗೆ ಹಿಂದಿ ಮತ್ತು ಇಂಗ್ಲಿಷ್ ಭಾಷೆಗೆ ಮಾತ್ರ ಸರ್ಕಾರ ಅವಕಾಶ ಕಲ್ಪಿಸಿದ್ದು ಆಘಾತಕಾರಿ. ಕನ್ನಡದ ಬಗೆಗಿನ ಈ ನಿರ್ಲಕ್ಷ್ಯ ಸಾರ್ವಜನಿಕರನ್ನು ಕೆರಳಿಸಿದ್ದು, ಅವರು ನ್ಯಾಯಯುತವಾಗಿಯೇ ದನಿ ಎತ್ತುತ್ತಿದ್ದಾರೆ. ಹಿಂದಿ ಕೇಂದ್ರಿತ ದೆಹಲಿ ನಾಯಕತ್ವವನ್ನು ಕುರುಡಾಗಿ ಓಲೈಸುವ ‘ಹೈಕಮಾಂಡ್ ಗುಲಾಮ’ ರಾಜಕಾರಣಿಗಳಿಗೆ ಪಾಠ ಕಲಿಸುವುದಕ್ಕೆ ಇದು ತಕ್ಕ ಸಮಯ...

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

ಕಿಡಿನುಡಿ



ಗ್ಯಾರಂಟಿ ಯೋಜನೆಗಳಿಂದಾಗಿ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ಆಗುತ್ತಿಲ್ಲ, ಅವುಗಳನ್ನು ಹಿಂದಕ್ಕೆ ಪಡೆಯಬೇಕು ಎಂದು ಬಿ.ಎಸ್.ಯಡಿಯೂರಪ್ಪ ಪ್ರತಿ ಬಾರಿಯೂ ಹೇಳುತ್ತಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಇದೆ. ಯೋಜನೆಗಳಿಗೆ ಹೇಗೆ ಹಣ ಹೊಂದಿಸಬೇಕು ಎನ್ನುವುದು ಗೊತ್ತಿದೆ.

ಸತೀಶ ಜಾರಕಿಹೊಳಿ, ಲೋಕೋಪಯೋಗಿ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 7-1-2000

• **ವಿಮಾನ ಅಪಹರಣಕಾರರ ಪ್ರಮುಖ ಸಹಚರರ ಸೆರೆ**

ನವದೆಹಲಿ, ಜ. 6 (ಪಿಟಿಐ, ಯುಎನ್‌ಐ)– ಇಂಡಿಯನ್ ಏರ್‌ಲೈನ್ಸ್ ವಿಮಾನ ಅಪಹರಣಕಾರರ ನಾಲ್ವರು ಪ್ರಮುಖ ಸಹಚರರನ್ನು ಬಂಧಿಸಲಾಗಿದ್ದು, ಅಪಹರಣಕಾರರು ಪಾಕಿಸ್ತಾನೀ ಪ್ರಜೆಗಳು ಎಂಬುದು ದೃಢಪಟ್ಟಿದೆ ಎಂದು ಗೃಹ ಸಚಿವ ಎಲ್.ಕೆ. ಅಡ್ವಾಣಿ ಇಂದು ಪ್ರಕಟಿಸಿದ್ದಾರೆ.

ಕಿಕ್ಕಿರಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಅಪಹರಣ ಕೃತ್ಯಕ್ಕೆ ಬೆಂಬಲವಾಗಿ ನಿಂತಿದ್ದ ‘ಹರ್ಕತ್ ಉಲ್ ಅನ್ಸಾರ್’ ಗುಂಪಿನ ನಾಲ್ವರು ಕಾರ್ಯಕರ್ತರನ್ನು ಮುಂಬೈನ ಪೊಲೀಸರು ಬಂಧಿಸಿದ್ದು, ಅವರಿಂದ ಮಹತ್ವದ ದಾಖಲೆಗಳು ಸಿಕ್ಕಿವೆ. ದಾಖಲೆಗಳಿಂದ ವಿಮಾನ ಅಪಹರಣ ಪ್ರಕರಣದಲ್ಲಿ ಪಾಕಿಸ್ತಾನ ಶಾಮೀಲಾಗಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ ಎಂದಿದ್ದಾರೆ.

• **ಜನತಾ ಪರಿವಾರ ವಿಲೀನ ಕನಸು ಭಗ್ನ**

ನವದೆಹಲಿ, ಜ. 6– ಶರದ್ ಯಾದವ್ ನಾಯಕತ್ವವನ್ನು ಒಪ್ಪದ ಸಮತಾ ಪಕ್ಷವು ಲೋಕಶಕ್ತಿ ಮತ್ತು ಜನತಾದಳ (ಯು) ಜತೆ ವಿಲೀನವಾಗುವ ಪ್ರಕ್ರಿಯೆಯಿಂದ ದೂರ ಉಳಿಯುವ ಮೂಲಕ ಜನತಾ ಪರಿವಾರದ ಮರು ಸಂಘಟನೆಯ ಮತ್ತೊಂದು ಯತ್ನ ಇಂದು ವಿಫಲಗೊಂಡಿತು.

ಆದರೆ ಕೆಲವು ದಿನಗಳ ಹಿಂದೆ ಕರ್ನಾಟಕದಲ್ಲಿ ಲೋಕಶಕ್ತಿಯು ಜನತಾದಳ (ಯು) ಜತೆ ವಿಲೀನಗೊಂಡ ನಿರ್ಧಾರ ದೆಹಲಿ ಮಟ್ಟದಲ್ಲಿಯೂ ಪ್ರತಿಫಲಿಸಿದ್ದನ್ನು ಬಿಟ್ಟರೆ ಲೋಕಸಭೆ ಮತ್ತು ಕರ್ನಾಟಕ ವಿಧಾನಸಭಾ ಚುನಾವಣೆಗೆ ಮುನ್ನಾ ದಿನಗಳಲ್ಲಿ ಜನತಾದಳ ಒಡೆದು, ಶರದ್ ಯಾದವ್ ನೇತೃತ್ವದ ಗುಂಪು, ಸಮತಾ ಪಕ್ಷ ಮತ್ತು ಲೋಕಶಕ್ತಿಯು ಒಂದು ಪಕ್ಷವಾಗುವ ಕನಸು ಈಗ ಪೂರ್ಣವಾಗಿ ಭಗ್ನವಾಯಿತು.

50 ವರ್ಷಗಳ ಹಿಂದೆ

ಮಂಗಳವಾರ, 7-1-1975

• **ತೆರಿಗೆ ಏರಿಕೆ ಅಗತ್ಯವಾದಾಗ ವೋಟಿನ ಚಿಂತೆ ಬೇಡ: ಅರಸು**

ಬೆಂಗಳೂರು, ಜ. 6– ಮುಖ್ಯಮಂತ್ರಿಗಳು ನೀಡಿದ ಸಲಹೆಯನ್ನು ಬೆಂಗಳೂರು ನಗರ ಕಾರ್ಪೊರೇಷನ್ ಅಂಗೀಕರಿಸಿದ ಪಕ್ಷದಲ್ಲಿ, ನಗರದ ಜನತೆ ಇನ್ನು ಮುಂದೆ ಹೆಚ್ಚು ಮನೆಗಂದಾಯ ಕೊಡುವುದು ಅನಿವಾರ್ಯ.

ಮಹಾತ್ಮ ಗಾಂಧಿ ರಸ್ತೆಯಲ್ಲಿ ಕಾರ್ಪೊರೇಷನ್ ನಿರ್ಮಿಸಿದ 24 ಅಂತಸ್ತಿನ ‘ಜನೋಪಯೋಗಿ’ ಕಟ್ಟಡದ ಪ್ರಾರಂಭೋತ್ಸವ ನೆರವೇರಿಸಿದ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರು, ‘ಹೆಚ್ಚು ತೆರಿಗೆ ಹಾಕಿದರೆ ಜನ ನಮಗೆ ವೋಟು ಕೊಡ್ತಾರೋ ಇಲ್ಲವೋ ಎಂಬ ವಿಚಾರ ಇಲ್ಲಿ ಬೇಡ. ವಿರೋಧ ಪಕ್ಷಗಳು ಈ ಬಗ್ಗೆ ಸಾಕಷ್ಟು ಪ್ರಚಾರ ಮಾಡಲಿ. ವೋಟುಗಳು ವಿರೋಧ ಪಕ್ಷಕ್ಕೆ ಹೋದರೂ ಚಿಂತೆಯಿಲ್ಲ. ಕಾರ್ಪೊರೇಷನ್ನಿಗೆ ಹೆಚ್ಚು ಹಣ ಸಂದಾಯವಾಗಲಿ’ ಎಂದರು.

ಹೆಚ್ಚು ತೆರಿಗೆ ವಿಧಿಸಿದಲ್ಲಿ ಜನ ಮತ ಕೊಡುವುದಿಲ್ಲ ಎಂಬ ಮನೋಭಾವನೆಯನ್ನು ತೀವ್ರವಾಗಿ ಖಂಡಿಸಿದ ಮುಖ್ಯಮಂತ್ರಿ ಅವರು, ‘ಇಂತಹ ಪ್ರವೃತ್ತಿಯನ್ನು ನಾನು ವಿರೋಧಿಸುವುದರ ಜತೆಯಲ್ಲಿ ಹಾಗೆ ಧೋರಣೆ ಇಟ್ಟುಕೊಂಡು ಚಲಾಯಿಸಿದ ಮತಗಳನ್ನು ಕೂಡ ಲೆಕ್ಕಿಸಲಾರೆ. ಆದರೆ ವಿಚಾರವಂತರು ತೆರಿಗೆ ಹಿಂದೆ ಇರುವ ಉದ್ದೇಶ ಅರಿತು ನಮಗೆ ಬೆಂಬಲ ಕೊಟ್ಟೇ ಕೊಡುತ್ತಾರೆ ಎಂಬ ವಿಶ್ವಾಸ ಇದೆ’ ಎಂದರು.

ಸಂಗತ

ವೀಕ್ಷಕ ವಿವರಣೆ: ಭಾವಾವೇಶಕ್ಕೆ ಮಣೆ

ಆಟದ ಸೂಕ್ಷ್ಮಗಳಿಗಿಂತ ಮಾತಿನ ವರಸೆಗೇ ಹೆಚ್ಚು ಒತ್ತು ನೀಡಲಾಗುತ್ತಿದೆ

• ವಿಶಾಖ ಎನ್.

‘ಸ್ಟುಪಿಡ್, ಸ್ಟುಪಿಡ್, ಸ್ಟುಪಿಡ್’ (ಮೂರ್ಖ, ಮೂರ್ಖ, ಮೂರ್ಖ) ಮುಖದ ತುಂಬಾ ಕೋಪ ತುಳುಕಿಸುತ್ತ ಸುನಿಲ್ ಗಾವಸ್ಕರ್ ಹೀಗೆ ಮೊನ್ನೆ ಮೊನ್ನೆ ಜರೆದರು. ವಿಕೆಟ್ ಕೀಪರ್ ತಲೆಯ ಮೇಲಿಂದ ಹೊಡೆಯುವ ತಮ್ಮ ಶೈಲಿಯ ಆಟಕ್ಕೆ ಕೈ ಹಾಕಿದ ಬ್ಯಾಟ್ಸ್‌ಮನ್ ರಿಷಭ್ ಪಂತ್, ಥರ್ಡ್‌ಮ್ಯಾನ್ ಬೌಂಡರಿ ಬಳಿ ಇದ್ದ ಫೀಲ್ಡರ್‌ಗೆ ಕ್ಯಾಚ್ ಕೊಟ್ಟು ವಿಕೆಟ್ ಒಪ್ಪಿಸಿದರು. ಆಸ್ಟ್ರೇಲಿಯಾದ ಮೆಲ್ಬರ್ನ್ ಕ್ರಿಕೆಟ್ ಕ್ರೀಡಾಂಗಣದಲ್ಲಿನ ಅವರ ಆ ಹೊಡೆತಕ್ಕೆ ಗಾವಸ್ಕರ್ ಸಿಟ್ಟಿನಿಂದ ಈ ಪ್ರತಿಕ್ರಿಯೆ ನೀಡಿದರು. ಅವರ ಪಕ್ಕದಲ್ಲೇ ಕುಳಿತಿದ್ದ ಹರ್ಷ ಭೋಗ್ಲೆ ಏನೊಂದೂ ಹೇಳದೆ ಉಗುಳು ನುಂಗಿಕೊಂಡು ಭಾರತದ ಮೊದಲ ಇನಿಂಗ್ಸ್ ಸ್ಕೋರ್ ಎಷ್ಟಾಗಿತ್ತು ಎಂದಷ್ಟೇ ಹೇಳಿದರು.

ವೀಕ್ಷಕ ವಿವರಣೆಕಾರರು ಹೀಗೆ ಭಾವಾವೇಶಕ್ಕೆ ಒಳಗಾಗುವ ಹೊಸ ಮಾದರಿ ಇತ್ತೀಚೆಗೆ ವ್ಯಾಪಕವಾಗಿ ಕಾಣುತ್ತಿದೆ. ಅದರಲ್ಲೂ ಸುನಿಲ್ ಗಾವಸ್ಕರ್ ಅವರಂಥವರು ಮಾತನಾಡಿದರೆ ಅದು ಮಾಧ್ಯಮಕ್ಕೆ ಪೊಗದಸ್ತಾದ ಆಹಾರವೂ ಆಗುತ್ತದೆ. ಅವರ ಆ ಕ್ಷಣದ ಭಾವುಕ ಪ್ರತಿಕ್ರಿಯೆಯೇ ಆಮೇಲೆ ಸಂವಾದವೊಂದಕ್ಕೂ ಎಡೆಮಾಡಿಕೊಟ್ಟಿತು. ಅದರಲ್ಲಿ ಅವರು ರಿಷಭ್ ಪಂತ್ ಬ್ಯಾಟಿಂಗ್ ಕ್ರಮಾಂಕವನ್ನು ಇನ್ನಷ್ಟು ಕೆಳಕ್ಕೆ ಇಳಿಸಬೇಕೆನ್ನುವ ಅಭಿಪ್ರಾಯವನ್ನೂ ಮುಂದಿಟ್ಟರು.

1983ರ ವಿಶ್ವಕಪ್ ಕ್ರಿಕೆಟ್‌ನಲ್ಲಿ ಭಾರತವು ಕಪ್ ಎತ್ತಿ ಹಿಡಿದಿದ್ದಾಗ ಗಾವಸ್ಕರ್ ಕೂಡ ತಮ್ಮ ಕಳೆಗುಂದಿದ ಆಟದ ಕಾರಣಕ್ಕೆ ಟೀಕೆಗೆ ಗುರಿಯಾಗಿದ್ದವರು. ಅದು ಬೇರೆಯದೇ ಮಾತಾದರೂ, ಟೀಕೆ ಮಾಡುವಾಗ ಅಷ್ಟು ಭಾವಾವೇಶವನ್ನು ವೀಕ್ಷಕ ವಿವರಣೆಕಾರರು ವ್ಯಕ್ತಪಡಿಸದೇ ಇರುವುದು ಲಾಗಾಯ್ತಿನಿಂದ ನಡೆದುಕೊಂಡು ಬಂದಿದ್ದ ಒಂದು ಶಿಷ್ಟಾಚಾರ. ನವಜೋತ್ ಸಿಂಗ್ ಸಿಧು ತರಹದವರು ಮಾತಿನ ಮಂಟಪದಲ್ಲಿ ಭಾವಾತಿರೇಕ ಬೆರೆಸಿದ್ದಷ್ಟೇ ಅಲ್ಲದೆ, ಕೆಲವು ಅಪರೂಪದ ಉಪಮೆಗಳನ್ನೂ ಸೇರಿಸಿ ಅದನ್ನು ಮನರಂಜನೆಯಾಗಿಸಿದರು. ಈಗ ವೀಕ್ಷಕ ವಿವರಣೆಕಾರರ ಮಾತಿನ ವರಸೆ ಸಂಪೂರ್ಣ ಬದಲಾಗಿದೆ.

ಹಿಂದೆ ರೇಡಿಯೊ ಕಾಮೆಂಟರಿ ಹೇಳುವಾಗ ಆಟದ ಸೂಕ್ಷ್ಮಗಳಿಗೆ ಒತ್ತುಕೊಟ್ಟು ಅಭಿವ್ಯಕ್ತಿಸುತ್ತಿದ್ದ ತಣ್ಣಗಿನ ಮಾದರಿಯೊಂದು ಇತ್ತು. ಇದ್ದುದರಲ್ಲೇ ಹೊಸ ಪದಗಳನ್ನು ಹೊಸೆಯುವ ಸೃಜನಶೀಲರೂ ಆಗೀಗ ಕಾಣುತ್ತಿದ್ದರು. ಕನ್ನಡ ವೀಕ್ಷಕ ವಿವರಣೆಕಾರರು ‘ವೈಡ್ ಬಾಲ್’ಗೆ ‘ಅಗಲವಾದ ಚೆಂಡು’ ಎನ್ನುವಂತಹ ವಾಚ್ಯ ಪ್ರಯೋಗ ಮಾಡಿರುವ ಉದಾಹರಣೆಗಳೂ ಇವೆ.

ಈಗ ವೀಕ್ಷಕ ವಿವರಣೆಕಾರರು ಅಭಿಮಾನಿಗಳಂತೆ ಮಾತಾಡಲು ಶುರುವಿಟ್ಟುಕೊಂಡಿದ್ದಾರೆ ಅಥವಾ ಗಾವಸ್ಕರ್ ತರಹ ಭಾವಾವೇಶ ಪ್ರಕಟಿಸುವ ಮಾದರಿಗೆ ಕಟ್ಟುಬಿದ್ದಿದ್ದಾರೆ.

ನೆನಪಿನ ಪುಟವೊಂದು ತಕ್ಷಣಕ್ಕೆ ತೆರೆದುಕೊಳ್ಳುತ್ತದೆ. 1969-70ರ ಕ್ರಿಕೆಟ್ ಋತುವಿನಲ್ಲಿ ಭಾರತಕ್ಕೆ ಆಸ್ಟ್ರೇಲಿಯಾ ತಂಡ ಪ್ರವಾಸ ಬಂದಿತ್ತು. ಆಗಿನ ಬಾಂಬೆಯಲ್ಲಿ ಟೆಸ್ಟ್ ಪಂದ್ಯ. ಆಸ್ಟ್ರೇಲಿಯಾದ ಬೌಲರ್ ಅಲನ್ ಕನೋಲಿ ಎಸೆತದಲ್ಲಿ, ವಿಕೆಟ್ ಕೀಪರ್ ಹಿಡಿದ ಕ್ಯಾಚ್‌ಗೆ ‘ಎಸ್. ವೆಂಕಟರಾಘವನ್ ಅವರು ಔಟ್’ ಎಂದು ಅಂಪೈರ್ ಶಂಭು ಪಿ. ತಪ್ಪು ನಿರ್ಣಯ ಕೊಟ್ಟರು. ದೇವರಾಜ್ ಪುರಿ ಎಂಬ ಜನಪ್ರಿಯ ವೀಕ್ಷಕ ವಿವರಣೆಕಾರರೊಬ್ಬರು ಆಗ ಎಐಆರ್‌ನಲ್ಲಿ ಕ್ರಿಕೆಟ್‌ನ ಅಷ್ಟೂ ಬೆಳವಣಿಗೆಗಳನ್ನು ವಿವರಿಸಿ ಹೇಳುತ್ತಿದ್ದರು. ಅಂಪೈರ್ ನಿರ್ಧಾರ ತಪ್ಪಾಗಿತ್ತು ಎಂದು ಅವರು ವೀಕ್ಷಕ ವಿವರಣೆಯಲ್ಲಿ ಬಿಚ್ಚಿಟ್ಟದ್ದೇ ಅಲ್ಲದೆ ಅದನ್ನು ವಿಶ್ಲೇಷಣಾತ್ಮಕ ಶೈಲಿಯಲ್ಲಿ ಬಣ್ಣಿಸಿದರು.

ಟ್ರಾನ್ಸಿಸ್ಟರ್‌ಗಳು ಜನಪ್ರಿಯವಾಗಿದ್ದ ಕಾಲ ಅದು. ಕ್ರಿಕೆಟ್ ಮೈದಾನಕ್ಕೆ ಪಂದ್ಯ ನೋಡಲು ಹೋದವರ ಕೈಲೂ ಒಂದೊಂದು ಟ್ರಾನ್ಸಿಸ್ಟರ್ ಇರುತ್ತಿತ್ತು. ದೂರದಿಂದ ಆಟ ನೋಡುತ್ತಲೇ, ವೀಕ್ಷಕ ವಿವರಣೆಕಾರ ನೀಡುತ್ತಿದ್ದ ಒಳನೋಟಗಳನ್ನು, ಕಿವಿಗೆ ಟ್ರಾನ್ಸಿಸ್ಟರ್ ಆನಿಸಿಕೊಂಡು ಕೇಳುತ್ತಿದ್ದರು. ವೆಂಕಟರಾಘವನ್ ಔಟ್ ಆಗಿದ್ದು ಅಂಪೈರ್ ತಪ್ಪು ನಿರ್ಣಯದಿಂದ ಎಂದು ತಿಳಿದದ್ದೇ ವೀಕ್ಷಕರು ಕ್ರುದ್ಧರಾದರು. ಸ್ಟ್ಯಾಂಡ್‌ಗೆ ಬೆಂಕಿ ಹಚ್ಚಿದರು. ಕ್ರಿಕೆಟ್ ವೀಕ್ಷಕ ವಿವರಣೆಯನ್ನು ಜನ ಯಾವ ಮಟ್ಟಕ್ಕೆ ನಂಬುತ್ತಿದ್ದರು ಎನ್ನುವುದಕ್ಕೆ ಈ ಪ್ರಕರಣದಂತೆಯೇ ಹಲವು ನಿದರ್ಶನಗಳು ಸಿಗುತ್ತವೆ.



ಯಾವುದು ಒಳ್ಳೆಯ ವೀಕ್ಷಕ ವಿವರಣೆ ಎನ್ನುವ ಅನೌಪಚಾರಿಕ ಪ್ರಶ್ನೆಗೆ, ಖುದ್ದು ವೀಕ್ಷಕ ವಿವರಣೆಕಾರರಾದ ಚಂದ್ರಮೌಳಿ ಸಿ.ಕಣವಿ ಅವರು ಒಂದೊಮ್ಮೆ, ‘ಆಟವನ್ನು ಚಿತ್ರವತ್ತಾಗಿ ಕಟ್ಟಿಕೊಡುವ ರೀತಿಯದ್ದು’ ಎಂದು ಉತ್ತರಿಸಿದ್ದರು.

ಈಗ ಹೊಸಕಾಲದವರಿಗೆ ರುಚಿಸುತ್ತದೆ ಎಂಬ ಸಬೂಬು ನೀಡಿ, ಕನ್ನಡದ ಟಿ.ವಿ. ವೀಕ್ಷಕ ವಿವರಣೆಯಂತೂ ಹುಬ್ಬೇರಿಸುವಂತಹ, ಮುಖ ಕಿವುಚುವಂತೆ ಮಾಡುವ ಪದಪುಂಜಗಳನ್ನು ಹೊಮ್ಮಿಸುತ್ತಿದೆ. ‘ಡಿಮಿಲ್ ಡಮಾಲ್’ ಎಂದು ಹೊಡೆದರು, ‘ಏನು ಗುದ್ದಿದರು ಗುರೂ’ ಎನ್ನುವಂತಹ ಪದಗಳ ಪ್ರಯೋಗವೂ ಈಗ ಸ್ವೀಕೃತವಾಗಿಬಿಟ್ಟಿದೆ. ಬ್ಯಾಟಿಂಗ್‌ನಲ್ಲಿ ಪಂಚ್ ಎನ್ನುವುದನ್ನು ಪದಶಃ ‘ಗುದ್ದಿದರು’ ಎಂದು ಹೇಳುವ ಮಾದರಿಯನ್ನು ಕಂಡರೆ ವ್ಯಾಕರಣಪ್ರಿಯರಿಗೆ ಪಿಚ್ಚೆನ್ನಿಸಬಹುದು.

ಇದು ಒಂದು ಆಯಾಮವಷ್ಟೇ. ಟೆಸ್ಟ್ ಪಂದ್ಯ ಅತ್ತ ಇತ್ತ ಇರುವ ಸನ್ನಿವೇಶದಲ್ಲಿಯೂ ಒಂದು ತಂಡದ ಪರವಾಗಿಯೇ ಅಭಿಪ್ರಾಯ ಮಂಡಿಸುವ ವೀಕ್ಷಕ ವಿವರಣೆಯ ಬಗೆಯೊಂದು ಈಗ ಎದ್ದುಕಾಣುತ್ತಿದೆ. ಇವೆಲ್ಲ ಚುಟುಕು ಕ್ರಿಕೆಟ್‌ನಿಂದ ಉಂಟಾಗಿರುವ ಪರಿಣಾಮ ಎನ್ನಲೂ ಹಲವು ಉದಾಹರಣೆಗಳು ಸಿಗುತ್ತವೆ. ಅದರಲ್ಲೂ ವಿಶೇಷವಾಗಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ಪರವಾಗಿಯೇ ಕನ್ನಡದ ವೀಕ್ಷಕ ವಿವರಣೆಕಾರರು ನುಡಿಮುತ್ತುಗಳನ್ನು ಪೋಣಿಸುತ್ತಿರುತ್ತಾರೆ.

ಆಟದ ಸೂಕ್ಷ್ಮಗಳಿಗಿಂತ ಹೆಚ್ಚಾಗಿ ನುಡಿಸಾಣಿಕೆಯನ್ನೇ ಮುಂದುಮಾಡುವ ವಾಚಾಳಿ ವೀಕ್ಷಕ ವಿವರಣೆಕಾರರ ನಡುವೆ ಹರ್ಷ ಭೋಗ್ಲೆ ತರಹದವರು ತಣ್ಣಗಿನ ಸ್ವಭಾವದಿಂದಲೇ ಗಮನ ಸೆಳೆಯುತ್ತಿದ್ದಾರೆ.

ವಾಚಕರ ವಾಣಿ

ಕೀಳು ಅಭಿರುಚಿಯ ಮಾತು ಸಲ್ಲದು

ದೆಹಲಿ ಮುಖ್ಯಮಂತ್ರಿ ಆತಿಶಿ ಅವರು ತಮ್ಮ ‘ತಂದೆಯನ್ನೇ ಬದಲಾಯಿಸಿದ್ದಾರೆ’ ಎಂದು ಹೇಳುವ ಮೂಲಕ ಬಿಜೆಪಿ ಮುಖಂಡ ರಮೇಶ್ ಬಿಧೂಡಿ ವಿವಾದ ಸೃಷ್ಟಿಸಿದ್ದಾರೆ. ಅಷ್ಟೇಅಲ್ಲದೆ, ಸಂಸದೆ ಪ್ರಿಯಾಂಕಾ ಗಾಂಧಿ ಅವರ ಕೆನ್ನೆಯಂತೆ ನಯವಾಗಿ ರಸ್ತೆಯನ್ನು ಅಭಿವೃದ್ಧಿಪಡಿಸುವುದಾಗಿ ಸಹ ಹೇಳಿರುವ ಅವರು, ಇಂತಹ ಹೇಳಿಕೆಗಳ ಮೂಲಕ ತಮ್ಮ ಸಣ್ಣತನವನ್ನು ಪ್ರದರ್ಶಿಸಿದ್ದಾರೆ. ಅಭಿವೃದ್ಧಿಯನ್ನು ಮಾಡಿ ತೋರಿಸಬೇಕು. ಕೀಳು ಅಭಿರುಚಿಯ ಮಾತುಗಳ ಮೂಲಕ ಮಾಧ್ಯಮಗಳಲ್ಲಿ ಮಿಂಚಬಹುದು ಎಂಬ ಭ್ರಮೆಯಿಂದ ಇಂತಹ ಮುಖಂಡರು ಹೊರಬರಬೇಕು.

ನಮ್ಮನ್ನು ಹೆತ್ತವಳೂ ಒಂದು ಹೆಣ್ಣು ಎಂಬ ಅರಿವು ನಮಗಿರಬೇಕು. ಹೆಂಡತಿಯಾಗಿ, ಅಕ್ಕ- ತಂಗಿ ಮತ್ತು ಮಗಳಾಗಿ ಹೆಣ್ಣುಮಕ್ಕಳ ಪಾತ್ರ ವಿಶೇಷವಾದುದು. ವಿರೋಧ ಮಾಡಲೇಬೇಕೆನಿಸಿದರೆ ಅವರು ಮಾಡುವ ಕೆಲಸಗಳ ಬಗ್ಗೆ, ನಡೆಯದ ಅಭಿವೃದ್ಧಿ ಕಾರ್ಯಗಳ ಬಗ್ಗೆ ವಿರೋಧಿಸಿ. ವೈಯಕ್ತಿಕವಾಗಿ ನಿಂದನೆ ಮಾಡುವುದೇ ವಿರೋಧ ಪಕ್ಷದವರ ಕೆಲಸ ಎಂಬ ಧೋರಣೆ ಬಿಡಿ. ಹೀಗೆಲ್ಲ ಮಾತನಾಡುವಾಗ ತಮ್ಮ ಕುಟುಂಬದ ಹೆಣ್ಣುಮಕ್ಕಳ ನೆನಪಾಗುವುದಿಲ್ಲವೇಕೆ? ವಿಶೇಷವಾಗಿ ಜನಪ್ರತಿನಿಧಿಗಳಿಗೆ ನಾಲಿಗೆಯ ಮೇಲೆ ಹಿಡಿತ ಇರಬೇಕು.

ಮಲ್ಲತಹಳ್ಳಿ ಎಚ್. ತುಕಾರಾಂ, ಬೆಂಗಳೂರು

ಲಿಂಗತ್ವ ಅಲ್ಪಸಂಖ್ಯಾತರ ಸಬಲೀಕರಣಕ್ಕೆ ಸಿಗಲಿ ಒತ್ತು

ಹೈದರಾಬಾದ್‌ನಲ್ಲಿ 39 ಲಿಂಗತ್ವ ಅಲ್ಪಸಂಖ್ಯಾತರನ್ನು ಸಂಚಾರ ನಿಯಂತ್ರಕರನ್ನಾಗಿ ನೇಮಿಸುವ ಮೂಲಕ ಅಲ್ಲಿನ ಸರ್ಕಾರವು ಅವರ ಸಬಲೀಕರಣಕ್ಕೆ ಮುಂದಾಗಿರುವ ಸುದ್ದಿಯನ್ನು ಓದಿ ಸಂತಸದ ಜೊತೆಗೆ ಭರವಸೆಯ ಭಾವ ಮೂಡಿತು. ಆರ್ಥಿಕವಾಗಿ ಸಬಲರಾದರೆ ಸಮಾಜದಲ್ಲಿ ಲಿಂಗತ್ವ ಅಲ್ಪಸಂಖ್ಯಾತರನ್ನು ನೋಡುವ ದೃಷ್ಟಿಕೋನವೇ ಬದಲಾಗಬಹುದು. ಈ ದಿಸೆಯಲ್ಲಿ ತೆಲಂಗಾಣ ಸರ್ಕಾರ ಕೈಗೊಂಡಿರುವ ಕ್ರಮ ಶ್ಲಾಘನೀಯ.

ಕುಟುಂಬದವರು, ಸ್ನೇಹಿತರು, ನೆರೆಹೊರೆಯವರು ಮತ್ತು ಇಡೀ ಸಮಾಜದಿಂದ ತಿರಸ್ಕಾರಕ್ಕೆ ಒಳಗಾಗುವ ಲಿಂಗತ್ವ ಅಲ್ಪಸಂಖ್ಯಾತರ ಪರವಾಗಿ ಕೈಗೊಂಡಿರುವ ಈ ಕ್ರಮವು ದೇಶದ ಎಲ್ಲಾ ರಾಜ್ಯ ಸರ್ಕಾರಗಳಿಗೆ ಮಾದರಿಯಾಗಬೇಕು.

ಮಾದಪ್ಪ ಎಸ್. ಕಠಾರಿ, ವಿಜಯಪುರ

ಸಂಗೀತ ವಿ.ವಿ: ಅವ್ಯವಸ್ಥೆ ಕೊನೆಯಾಗಲಿ

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಪರೀಕ್ಷಾ ಕೇಂದ್ರಗಳನ್ನು ಹೊರರಾಜ್ಯ ಹಾಗೂ ಹೊರದೇಶಗಳಲ್ಲಿ ತೆರೆಯಲು ಬೇಡಿಕೆ ಬಂದಿದ್ದು, ಈ ಸಂಬಂಧ ಪ್ರಸ್ತಾವ ಸಲ್ಲಿಸಲಾಗುವುದು ಎಂದು ಕುಲಪತಿ ಪ್ರೊ. ನಾಗೇಶ್ ಬೆಟ್ಟಕೋಟೆ ಅವರು ತಿಳಿಸಿರುವುದಾಗಿ ವರದಿಯಾಗಿದೆ (ಪ್ರ.ವಾ., ಜ. 5). ಈ ವಿಶ್ವವಿದ್ಯಾಲಯವು ಈಗ ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂಬುದು ಪರೀಕ್ಷೆ ತೆಗೆದುಕೊಂಡ ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಈ ಬಾರಿಯಂತೂ ಪರೀಕ್ಷೆ ಅವ್ಯವಸ್ಥೆಯ ಆಗರವಾಗಿತ್ತು. ಕೆಲವು ಕೇಂದ್ರಗಳಲ್ಲಿ ಯಾವ ಪೂರ್ವಸಿದ್ಧತೆಯನ್ನೂ ಮಾಡಿಕೊಂಡಿರಲಿಲ್ಲ. ಇನ್ನು ಕೆಲವು ಕೇಂದ್ರಗಳಲ್ಲಿ ಸಣ್ಣ ಕೊಠಡಿಗಳಲ್ಲಿ ಅತಿ ಹೆಚ್ಚಿನ ವಿದ್ಯಾರ್ಥಿಗಳಿಗೆ ಒಂದೇ ಸಮಯದಲ್ಲಿ ಸಂಗೀತದ ಪ್ರಾಯೋಗಿಕ (ಹಾಡುವ) ಪರೀಕ್ಷೆ ನಡೆಸಲಾಗಿದೆ. ಮೊದಲು ಸೆಕೆಂಡರಿ ಬೋರ್ಡ್ ಈ ಪರೀಕ್ಷೆಯನ್ನು ನಡೆಸುತ್ತಿತ್ತು. ಅದನ್ನು ಈ ವಿಶ್ವವಿದ್ಯಾಲಯ ವಹಿಸಿಕೊಂಡ ಮೇಲೆ ಪರೀಕ್ಷೆಗಳು ಚೆನ್ನಾಗಿ ನಡೆಯಬಹುದೆಂಬ ನಂಬಿಕೆಯಿತ್ತು. ಆದರೆ ಈಗ ನಡೆಯುತ್ತಿರುವುದನ್ನು ನೋಡಿದರೆ ಸಂಗೀತ ಹಾಗೂ ಇತರ ಕಲೆಗಳ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ತೀವ್ರ ಆಘಾತವಾಗಿದೆ.

ಸರಿಯಾದ ವೇಳಾಪಟ್ಟಿಯಿಲ್ಲ, ಪರೀಕ್ಷೆ ಕಟ್ಟಿಸುವ ಶಾಲೆಯ ಮುಖ್ಯಸ್ಥರೇ ಪರೀಕ್ಷಾ ಕೇಂದ್ರಕ್ಕೆ ಬರಬೇಕೆನ್ನುವ ನಿಯಮ ಹಾಗೂ ಅವ್ಯವಸ್ಥೆಯ ಪ್ರಾಯೋಗಿಕ ಕೇಂದ್ರಗಳು... ಇವನ್ನೆಲ್ಲ ಸರಿಪಡಿಸುವ ಹೊಣೆಗಾರಿಕೆ ಈ ವಿಶ್ವವಿದ್ಯಾಲಯಕ್ಕಿದೆ. ಇದನ್ನು ಮೊದಲು ಸರಿಪಡಿಸಿ ನಂತರ ಹೊರರಾಜ್ಯ ಮತ್ತು ಹೊರದೇಶಗಳಲ್ಲಿ ಪರೀಕ್ಷೆ ನಡೆಸುವುದರ ಬಗ್ಗೆ ಯೋಚಿಸುವುದು ಒಳ್ಳೆಯದು.

ಕಡೂರು ಫಣಿಶಂಕರ್, ಬೆಂಗಳೂರು

‘ನಾ.ಡಿ’ಗೆ ನಮನ

ಧರ್ಮ ಮೀರಿದ
ಮಾನವೀಯತೆ
ಮೇಳೈಸಿದ ಬರಹಗಾರ,
ಕನ್ನಡ ನಾಡಿನ ನಾಡಿ
ನಾ. ಡಿಸೋಜ,
ತಮಗೆ ಈ ಕರುನಾಡಿಗರ
ಹೃದಯಪೂರ್ವಕ ನಮನ.

ಪ್ರೊ. ಬಸಪ್ಪ ಯ. ಬಂಗಾರಿ
ಬೆಂಗಳೂರು

ಪುರುಷರ ಅಳಲು ಕೇಳಲು ಬೇಕಿದೆ ಆಯೋಗ

ಪತ್ನಿಯ ದೌರ್ಜನ್ಯ ಮತ್ತು ಕಿರುಕುಳದಿಂದ ಮನನೊಂದು ಆತ್ಮಹತ್ಯೆಗೆ ಶರಣಾಗುತ್ತಿರುವ ಗಂಡಂದಿರ ಸಂಖ್ಯೆ ಹೆಚ್ಚುತ್ತಿರುವುದು ಆತಂಕಕಾರಿ. ಗೃಹಿಣಿಯರಿಗೆ ಗಂಡ ಮತ್ತು ಅವರ ಮನೆಯವರು ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುವುದು, ವರದಕ್ಷಿಣೆಗಾಗಿ ಪೀಡಿಸುವಂತಹ ಪ್ರಕರಣಗಳು ಸಮಾಜದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವರದಿಯಾಗುತ್ತಿದ್ದವು. ಆದರೆ ಈಗ ದೇಶದಾದ್ಯಂತ ಪತಿಪೀಡಕಿಯರ ಸಂಖ್ಯೆಯೂ ಹೆಚ್ಚುತ್ತಿದೆ. ಇದಕ್ಕೆ ಹೆಂಡತಿ ಮನೆಯವರ ಕುಮ್ಮಕ್ಕೂ ಇರುತ್ತದೆ.

ಮಹಿಳೆಯರ ವಿರುದ್ಧ ದೌರ್ಜನ್ಯ ನಡೆದರೆ ಅದನ್ನು ವಿಚಾರಿಸಲು ಮಹಿಳಾ ಪೊಲೀಸ್ ಠಾಣೆ, ಮಹಿಳಾ ಆಯೋಗ, ನೂರಾರು ಮಹಿಳಾ ಸಂಘಟನೆಗಳು, ಮಹಿಳಾಪರ ವೇದಿಕೆಗಳು ಅಸ್ತಿತ್ವದಲ್ಲಿವೆ. ಇವುಗಳ ಜೊತೆಗೆ ನ್ಯಾಯಾಲಯಗಳಿವೆ. ಅದೇ ಪುರುಷರ ಮೇಲೆ ದೌರ್ಜನ್ಯ ನಡೆಸುವ ಮಹಿಳೆಯರು ಕಾನೂನಿನ ಬಾಹುಗಳಿಂದ ಸುಲಭವಾಗಿ ಪಾರಾಗುತ್ತಿದ್ದಾರೆ. ಈ ರೀತಿಯ ಅಸಮಾನತೆಯು ಇಂತಹ ಪ್ರಕರಣಗಳು ಹೆಚ್ಚಾಗಲು ಕಾರಣವಾಗುತ್ತಿದೆಯೇ? ಗೊತ್ತಿಲ್ಲ. ರಾಜ್ಯ ಹಾಗೂ ಕೇಂದ್ರ ಮಟ್ಟದಲ್ಲಿ ಮಹಿಳಾ ಆಯೋಗ ಅಸ್ತಿತ್ವದಲ್ಲಿರುವ ಹಾಗೆ ಪುರುಷರ ವಿರುದ್ಧ ನಡೆಯುವ ದೌರ್ಜನ್ಯಗಳನ್ನು ವಿಚಾರಣೆಗೆ ಒಳಪಡಿಸಿ, ನೊಂದ ಪುರುಷರಿಗೆ ನ್ಯಾಯ ದೊರಕಿಸಿಕೊಡಲು ‘ಪುರುಷ ಆಯೋಗ’ದ ರಚನೆಗೆ ಈಗ ಕಾಲ ಪಕ್ವವಾಗಿದೆ ಎನ್ನಬಹುದು.

ಕೆ.ವಿ.ವಾಸು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಎಚ್‌ಎಂಪಿವಿ

ಸಾಮಾನ್ಯ ಸೋಂಕು ಅಪಾಯಕಾರಿ ಅಲ್ಲ



ಹ್ಯೂಮನ್ ಮೆಟಾನ್ಯೂಮೋವೈರಸ್ (ಎಚ್‌ಎಂಪಿವಿ) ಎನ್ನುವ ಈ ವೈರಾಣು ಸೋಂಕಿನ ಎರಡು ಪ್ರಕರಣಗಳು ಕರ್ನಾಟಕದಲ್ಲಿ ದೃಢಪಟ್ಟಿವೆ. ಕೋವಿಡ್ ಕಾಲದ ಸಾವು–ನೋವಿನ ನೆನಪು ಇನ್ನೂ ಕಾಡುತ್ತಿರುವುದರಿಂದ ಸಹಜವಾಗಿಯೇ ಈ ವೈರಸ್ ಬಗ್ಗೆ ಹಲವು ರೀತಿಯ ವದಂತಿ ಹಬ್ಬುತ್ತಿದ್ದು, ಆತಂಕ ಸೃಷ್ಟಿಯಾಗಿದೆ. ಆದರೆ, ಶ್ವಾಸಕೋಶದ ಸೋಂಕನ್ನು ಉಂಟುಮಾಡುವ ಈ ವೈರಸ್ ಮಾರಣಾಂತಿಕ ಅಲ್ಲ, ಜನ ಆತಂಕ ಪಡುವ ಅಗತ್ಯವೇ ಇಲ್ಲ ಎಂದು ವೈದ್ಯರು ದೃಢವಾಗಿ ಹೇಳಿದ್ದಾರೆ

ಕೋವಿಡ್ ಎರಡು ವರ್ಷಕ್ಕೂ ಹೆಚ್ಚು ಕಾಲ ಜಗತ್ತನ್ನು ನಲುಗಿಸಿಬಿಟ್ಟಿತ್ತು. ಕೊರೊನಾ ವೈರಸ್ ಮೊದಲು ತನ್ನ ಅಬ್ಬರವನ್ನು ತೋರಿದ್ದು ಚೀನಾದಲ್ಲಿ. ಸದ್ಯ, ಹ್ಯೂಮನ್ ಮೆಟಾನ್ಯೂಮೋವೈರಸ್ (ಎಚ್‌ಎಂಪಿವಿ) ಎನ್ನುವ ಶ್ವಾಸಕೋಶದ ಸೋಂಕು ಚೀನಾದಲ್ಲಿ ವ್ಯಾಪಕವಾಗಿ ಹರಡುತ್ತಿದೆ ಮತ್ತು ಅಲ್ಲಿ ಆರೋಗ್ಯ ತುರ್ತುಪರಿಸ್ಥಿತಿ ಉಂಟಾಗಿದೆ ಎಂದೂ ಕೆಲವರು ವದಂತಿ ಹರಡುತ್ತಿದ್ದಾರೆ. ಆದರೆ, ಅದನ್ನು ವಿಶ್ವ ಆರೋಗ್ಯ ಸಂಸ್ಥೆ ಆಗಲಿ, ಚೀನಾದ ರೋಗ ನಿಯಂತ್ರಣ ಮತ್ತು ತಡೆಗಟ್ಟುವಿಕೆ ಕೇಂದ್ರ (ಸಿಡಿಸಿ) ಆಗಲಿ ದೃಢಪಡಿಸಿಲ್ಲ.

ಆದಾಗ್ಯೂ, ಉತ್ತರ ಚೀನಾದಲ್ಲಿ ಅದರಲ್ಲೂ ವಿಶೇಷವಾಗಿ ಮಕ್ಕಳಲ್ಲಿ, ಎಚ್‌ಎಂಪಿವಿ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ಅಲ್ಲಿನ ಅಧಿಕಾರಿಗಳ ಹೇಳಿಕೆ ಉಲ್ಲೇಖಿಸಿ ಕೆಲವು ಮಾಧ್ಯಮಗಳು ವರದಿ ಮಾಡಿವೆ. ಸೋಂಕಿನ ಬಗ್ಗೆ ಜನ ಎಚ್ಚರಿಕೆ ವಹಿಸಬೇಕು; ನೈರ್ಮಲ್ಯ ಮತ್ತು ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಸಿಡಿಸಿ ಎಚ್ಚರಿಕೆ ನೀಡಿದೆ ಎಂದೂ ವರದಿಯಾಗಿದೆ.

ಚಳಿಗಾಲದಲ್ಲಿ ಶ್ವಾಸಕೋಶಕ್ಕೆ ಸಂಬಂಧಿಸಿದ ರೋಗಗಳು ಹೆಚ್ಚಾಗುವುದು ಸಹಜ. ಈ ಬಾರಿ ಕಾಣಿಸಿಕೊಂಡಿರುವ ಸೋಂಕು ಕಡಿಮೆ ತೀವ್ರತೆಯಿಂದ ಕೂಡಿದ್ದು, ಹಿಂದಿನ ವರ್ಷಕ್ಕೆ ಹೋಲಿಸಿದರೆ ಸಣ್ಣ ಪ್ರಮಾಣದಲ್ಲಿದೆ. ಆದರೆ, ಹೊಸ ಪರಿಕರಗಳ ಮೂಲಕ ಎಚ್‌ಎಂಪಿವಿ ಸೋಂಕನ್ನು ಸುಲಭವಾಗಿ ಪತ್ತೆ ಹಚ್ಚಬಹುದಾಗಿದ್ದು, ಅದರಿಂದ ಹೆಚ್ಚಿನ ಪ್ರಕರಣಗಳು ವರದಿಯಾಗುತ್ತಿವೆ ಎನ್ನಲಾಗಿದೆ.

ಎಚ್‌ಎಂಪಿವಿ ಪ್ರಕರಣಗಳ ಬಗ್ಗೆ ಚೀನಾ ಇದುವರೆಗೂ ಯಾವುದೇ ಅಧಿಕೃತ ಮಾಹಿತಿ, ಅಂಕಿಅಂಶ ಬಿಡುಗಡೆ ಮಾಡಿಲ್ಲ. ಆದರೆ, ಮಲೇಷ್ಯಾ ಸೇರಿದಂತೆ ನೆರೆಯ ಪೂರ್ವ ಏಷ್ಯಾ ರಾಷ್ಟ್ರಗಳಲ್ಲಿ ಎಚ್‌ಎಂಪಿವಿ ಪ್ರಕರಣಗಳು ಹೆಚ್ಚುತ್ತಿವೆ. ಜಪಾನ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ ಪ್ರಕಾರ, 2024ರ ಡಿಸೆಂಬರ್ 15ರ ಹೊತ್ತಿಗೆ ಅಲ್ಲಿ ಒಂದೇ ವಾರದಲ್ಲಿ 94,259 ಪ್ರಕರಣಗಳು ವರದಿಯಾಗಿವೆ. ಜಪಾನ್‌ನಲ್ಲಿ ಜನವರಿ 3ರ ಹೊತ್ತಿಗೆ ಒಟ್ಟು 7.18 ಲಕ್ಷ ಪ್ರಕರಣಗಳು ವರದಿಯಾಗಿವೆ ಎಂದು 'ಡೌನ್ ಟು ಅರ್ಥ್' ಮಾಹಿತಿ ನೀಡಿದೆ.

ಕೋವಿಡ್–19ಗೆ ಕಾರಣವಾಗಿದ್ದ ಸಾರ್ಸ್–ಕೋವಿಡ್–2 ಹೊಸ ವೈರಾಣು ಆಗಿತ್ತು. ಆದರೆ, ಎಚ್‌ಎಂಪಿವಿ ಈ ಹಿಂದೆಯೇ ಕಂಡುಬಂದಿದ್ದ ವೈರಸ್. 2001ರಲ್ಲಿ ನೆದರ್ಲೆಂಡ್ಸ್‌ನ ಕೆಲವು ಮಕ್ಕಳಲ್ಲಿ ಮೊದಲ ಬಾರಿಗೆ ಇದು ಪತ್ತೆಯಾಗಿತ್ತು. ಅದಕ್ಕೂ ಮೊದಲೇ ಜಗತ್ತಿನ ಹಲವು ಭಾಗಗಳಲ್ಲಿ ಈ ವೈರಸ್ ಸೋಂಕನ್ನು ಉಂಟುಮಾಡಿತ್ತು ಎಂದೂ ಹೇಳಲಾಗಿದೆ. ಇದು ಹಳೆಯ ವೈರಸ್ ಆದ್ದರಿಂದ ಕೊರೊನಾ ವೈರಸ್‌ನಂತೆ ಇದರಿಂದ ಜಾಗತಿಕ ಮಟ್ಟದಲ್ಲಿ ಸಾಂಕ್ರಾಮಿಕ ಉಂಟಾಗುತ್ತದೆ ಎಂದು ಹೇಳಲಾಗದು ಎನ್ನುವುದು ತಜ್ಞರ ಅಭಿಮತ.


ಹಳೆಯ ವೈರಸ್ ಆದರೂ ಎಚ್‌ಎಂಪಿವಿ ಸೋಂಕು ತಡೆಗಟ್ಟಲು ಯಾವುದೇ ಲಸಿಕೆಯನ್ನು ಇದುವರೆಗೂ ಅಭಿವೃದ್ಧಿಪಡಿಸಿಲ್ಲ. ಈ ದಿಸೆಯಲ್ಲಿ ಕೆಲವು ಪ್ರಯೋಗಗಳು ನಡೆಯುತ್ತಿವೆಯಾದರೂ ಯಾವುದೂ ಫಲಪ್ರದವಾಗಿಲ್ಲ. ಜತೆಗೆ, ಸೋಂಕಿತರಿಗೆ ಚಿಕಿತ್ಸೆ ನೀಡಲು ನಿರ್ದಿಷ್ಟವಾದ ವೈರಾಣು ನಿರೋಧಕಗಳು (ಆ್ಯಂಟಿವೈರಲ್ಸ್) ಲಭ್ಯವಿಲ್ಲ. ಆದರೆ, ದಶಕಗಳಿಂದ ಈ ಸೋಂಕು ಕೋಟ್ಯಂತರ ಮಂದಿಗೆ ಬಂದುಹೋಗಿರುವ ಸಾಧ್ಯತೆ ಇದ್ದು, ಅವರಲ್ಲಿ ರೋಗನಿರೋಧ ಶಕ್ತಿ ಬೆಳೆದಿರುತ್ತದೆ. ಹಾಗಾಗಿ ಹೆಚ್ಚಿನ ಅಪಾಯ ಇಲ್ಲ. ನವಜಾತ ಶಿಶುಗಳು, ಹದಿಹರೆಯದವರು ಮತ್ತು ರೋಗನಿರೋಧಕ ಶಕ್ತಿ ಕಡಿಮೆ ಇರುವ ವೃದ್ಧರಲ್ಲಿ ವೈರಾಣು ತೀವ್ರ ಕಾಯಿಲೆ ಉಂಟುಮಾಡಬಹುದು ಎಂದು ತಜ್ಞರು ಎಚ್ಚರಿಸಿದ್ದಾರೆ.

ಎಚ್‌ಎಂಪಿವಿ ಮಾರಣಾಂತಿಕ ಅಲ್ಲ. ಹಾಗಾಗಿ ಜನ ಕಳವಳ ಪಡಬೇಕಾದ ಅಗತ್ಯ ಇಲ್ಲ. ಆದರೆ, ರೋಗನಿರೋಧ ಶಕ್ತಿ ಕಡಿಮೆ ಇರುವವರು ಹೆಚ್ಚು ಎಚ್ಚರಿಕೆಯಿಂದ ಇರಬೇಕು. ಸರ್ಕಾರದ ಮಾರ್ಗಸೂಚಿಗಳನ್ನು ಎಲ್ಲರೂ ಅನುಸರಿಸಬೇಕು ಎಂದು ತಜ್ಞರು ಸಲಹೆ ನೀಡಿದ್ದಾರೆ.

2001
ಮೊದಲ ಬಾರಿಗೆ ನೆದರ್ಲೆಂಡ್ಸ್‌ನಲ್ಲಿ ವೈರಸ್ ಪತ್ತೆ



ಆಧಾರ: ಪಿಟಿಐ, ಡೌನ್ ಟು ಅರ್ಥ್




'ಆತಂಕ ಪಡುವ ಕಾಯಿಲೆ ಅಲ್ಲ'

ಎಚ್‌ಎಂಪಿವಿ ಹೊಸ ವೈರಸ್ ಅಲ್ಲ. ಸಾವಿರಾರು ವರ್ಷಗಳಿಂದ ಭೂಮಿಯಲ್ಲಿದೆ. ಆಧುನಿಕ ರೋಗ ಪತ್ತೆ ಪರೀಕ್ಷೆ ತಂತ್ರಜ್ಞಾನದ ಅಭಿವೃದ್ಧಿಯಿಂದಾಗಿ 2001ರಲ್ಲಿ ಈ ವೈರಾಣು ಪತ್ತೆಯಾಗಿದೆಯಷ್ಟೆ. ಈ ವೈರಸ್ ಸೋಂಕಿನಿಂದ ಸಾವು ಸಂಭವಿಸುವುದಿಲ್ಲ. ಜನರು ಅನಗತ್ಯವಾಗಿ ಆತಂಕ ಪಡಬೇಕಾಗಿಲ್ಲ. ಸರ್ಕಾರ, ಮಾಧ್ಯಮಗಳು ಜನರಲ್ಲಿ ಭಯ ಬಿತ್ತುವುದೂ ಬೇಡ. ನಾವೆಲ್ಲ ಈ ಸೋಂಕಿಗೆ ಈಗಾಗಲೇ ಒಳಗಾಗಿದ್ದೇವೆ. ನಾವು ಪರೀಕ್ಷೆ ಮಾಡಿಸಿರಲಿಲ್ಲ. ಹಾಗಾಗಿ, ಗೊತ್ತಾಗಿಲ್ಲ ಅಷ್ಟೆ. ಈಗ ಮಕ್ಕಳಿಗೆ ಮೊದಲ ಬಾರಿಗೆ ವೈರಸ್ ತಗುಲುತ್ತಿರುವುದರಿಂದ ಅವರಲ್ಲಿ ಹೆಚ್ಚು ಪ್ರಕರಣಗಳು ಕಾಣಿಸಿಕೊಳ್ಳುತ್ತಿವೆ. ಒಮ್ಮೆ ಸೋಂಕು ಕಾಣಿಸಿಕೊಂಡ ನಂತರ ಅವರಲ್ಲೂ ರೋಗ ನಿರೋಧಕ ಶಕ್ತಿ ಉಂಟಾಗುತ್ತದೆ. ಮುಂದೆ ಅವರಿಗೂ ವೈರಾಣುವಿನಿಂದ ಸಮಸ್ಯೆ ಕಾಣಿಸದು. ಎಚ್‌ಎಂಪಿವಿಗೆ ನಿರ್ದಿಷ್ಟ ವೈರಸ್ ನಿರೋಧಕ ಔಷಧ ಇಲ್ಲ. ರೋಗ ಲಕ್ಷಣಗಳಿಗೆ ಅನುಗುಣವಾಗಿ ಚಿಕಿತ್ಸೆ ನೀಡಬೇಕಾಗುತ್ತದೆ. ಈ ಕಾಯಿಲೆಯ ಹೆಸರಿನಲ್ಲಿ ಸರ್ಕಾರ ನಿರ್ಬಂಧಗಳನ್ನು ಹೇರಲು ಮುಂದಾಗಬಾರದು. ಶಾಲೆಗಳನ್ನು ಮುಚ್ಚುವುದು, ಶೀತ ನೆಗಡಿ ಕೆಮ್ಮಿನಿಂದ ಬಳಲುತ್ತಿರುವ ಮಕ್ಕಳನ್ನು ತರಗತಿಯಿಂದ ಹೊರಗಡೆ ಹಾಕುವಂತಹ ಕ್ರಮಗಳನ್ನು ತೆಗೆದುಕೊಳ್ಳಬಾರದು.

ಡಾ.ಬಿ.ಶ್ರೀನಿವಾಸ ಕಕ್ಕಿಲ್ಲಾಯ, ವೈದ್ಯ

ರೋಗ ಪತ್ತೆ ಹೇಗೆ?

ರೋಗ ಲಕ್ಷಣಗಳ ಆಧಾರದಲ್ಲಿ ಎಚ್‌ಎಂಪಿವಿ ಸೋಂಕು ತಗುಲಿರುವುದನ್ನು ಪತ್ತೆ ಹಚ್ಚುವುದು ಸವಾಲಿನ ಕೆಲಸ. ಆರ್‌ಟಿ–ಪಿಸಿಆರ್ ಪರೀಕ್ಷೆಯ ಮೂಲಕ ಇದನ್ನು ಪತ್ತೆ ಹಚ್ಚಬಹುದು. ಉಳಿದ ಪರೀಕ್ಷೆಗಳಿಗೆ ಹೋಲಿಸಿದರೆ ಇದು ಕೊಂಚ ದುಬಾರಿ. ಆ್ಯಂಟಿಜೆನ್ (ಪ್ರತಿಜನಕ) ಪತ್ತೆ ಪರೀಕ್ಷೆಯ ಮೂಲಕ ಕ್ಷಿಪ್ರವಾಗಿ ಸೋಂಕು ಪತ್ತೆ ಸಾಧ್ಯ.



ವಾರದಲ್ಲಿ ಗುಣಮುಖ

ಸೌಮ್ಯ ರೂಪದ ಸೋಂಕು ತಗುಲಿದವರು ಎರಡು ಮೂರು ದಿನಗಳಿಂದ ಒಂದು ವಾರದ ಒಳಗಾಗಿ ಗುಣಮುಖರಾಗಬಹುದು. ಗಂಭೀರ ಪ್ರಕರಣಗಳಲ್ಲಿ ರೋಗಿಗಳು ಗುಣಮುಖರಾಗಲು ಹೆಚ್ಚು ಸಮಯ ಬೇಕಾಗಬಹುದು. ಹಾಗಿದ್ದರೂ ಕೆಮ್ಮಿನಂತಹ ಸಮಸ್ಯೆ ಪೂರ್ಣವಾಗಿ ಗುಣವಾಗಲು ದೀರ್ಘ ಸಮಯ ಬೇಕಾಗಬಹುದು.

ಸಾಂಕ್ರಾಮಿಕದ ಸಾಧ್ಯತೆ ಕ್ಷೀಣ

ಕೋವಿಡ್–19ರಂತಹ ಸಾಂಕ್ರಾಮಿಕ ಉಂಟಾಗುವುದು ಅಪರೂಪ. ನಿರ್ದಿಷ್ಟ ಸಂದರ್ಭಗಳಲ್ಲಿ ಮಾತ್ರ ಸಾಂಕ್ರಾಮಿಕಗಳು ಕಾಣಿಸಿಕೊಳ್ಳುತ್ತವೆ; ವೈರಾಣುಗಳು ತೀವ್ರಗತಿಯಲ್ಲಿ ದ್ವಿಗುಣಗೊಳ್ಳುವುದು, ಅತ್ಯಂತ ಕ್ಷಿಪ್ರವಾಗಿ ಮನುಷ್ಯರಿಂದ ಮನುಷ್ಯರಿಗೆ ಹರಡುವುದು, ಪ್ರದೇಶದಿಂದ ಪ್ರದೇಶಕ್ಕೆ ಹರಡುವಷ್ಟು ಸೋಂಕು ಪ್ರಬಲವಾಗಿರುವುದು ಇವೇ ಮುಂತಾದ ಕಾರಣಗಳು ಇರುತ್ತವೆ. ಆದರೆ, ಸದ್ಯ ಕಂಡುಬಂದಿರುವ ಎಚ್‌ಎಂಪಿವಿ ಇಂಥ ಲಕ್ಷಣಗಳನ್ನು ಹೊಂದಿಲ್ಲ. ಹಾಗಾಗಿ ಇದರಿಂದ ಸಾಂಕ್ರಾಮಿಕ ಉಂಟಾಗುವ ಸಾಧ್ಯತೆ ಇಲ್ಲ ಎನ್ನುವುದು ತಜ್ಞರ ಅಭಿಪ್ರಾಯ.

'ಸಹಜ ಸೋಂಕು'

ಕೋವಿಡ್–19, ಎಚ್1ಎನ್1 ರೀತಿಯಲ್ಲೇ ಇದೂ ಒಂದು ವೈರಾಣುವಿನಿಂದ ಉಂಟಾಗುವ ಸೋಂಕು. ಇದು ಹೊಸದೇನಲ್ಲ; ರೆಸ್ಪಿರೇಟರಿ ಸಿನ್ಸಿಟಿಯರ್ ವೈರಸ್ (ಆರ್‌ಎಸ್‌ವಿ) ರೀತಿಯ ಮತ್ತೊಂದು ಹಳೆಯ ವೈರಸ್. ಅಕ್ಟೋಬರ್–ನವೆಂಬರ್‌ನಿಂದ ಫೆಬ್ರುವರಿ–ಮಾರ್ಚ್‌ವರೆಗೆ ಫ್ಲೂ ಸೀಸನ್ ಆದ್ದರಿಂದ ವೈರಲ್ ಸೋಂಕುಗಳು ಬರುವುದು ಸಹಜ. ಅವುಗಳಲ್ಲಿ ಇದೂ ಒಂದು. ಹೆಚ್ಚಿನ ಜನರಲ್ಲಿ ಸೌಮ್ಯ ರೋಗಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ವಿಶೇಷವಾಗಿ, ಶ್ವಾಸಕೋಶದ ಸಮಸ್ಯೆ ಇರುವವರು, ಬ್ರಾಂಕೈಟಿಸ್ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವವರು, ಚಿಕ್ಕಮಕ್ಕಳಲ್ಲಿ ತೀವ್ರ ರೋಗ ಲಕ್ಷಣಗಳು ಕಾಣಿಸಿಕೊಳ್ಳಬಹುದು. ಕೆಮ್ಮು, ಶೀತದ ಜತೆಗೆ ಹೊಟ್ಟೆನೋವು, ಭೇದಿ ಕೂಡ ಕಾಣಿಸಿಕೊಳ್ಳಬಹುದು.



ಎಚ್‌ಎಂಪಿವಿಗೆ ನಿರ್ದಿಷ್ಟ ಚಿಕಿತ್ಸೆ ಇಲ್ಲ. ಲಕ್ಷಣಗಳನ್ನು ಅನುಸರಿಸಿ ಚಿಕಿತ್ಸೆ ಕೊಡಬೇಕು. ಸೋಂಕಿನ ಲಕ್ಷಣಗಳು ಕಾಣಿಸಿಕೊಂಡ ತಕ್ಷಣ, ಇತರರಿಂದ ಆದಷ್ಟೂ ದೂರ ಇರಬೇಕು, ಮನೆಯಲ್ಲೇ ಉಳಿದು ವಿಶ್ರಾಂತಿ ಮಾಡಬೇಕು. ಸ್ವಯಂ ನಿಯಂತ್ರಣ ಮತ್ತು ರಕ್ಷಣೆ ಬಹಳ ಮುಖ್ಯ. ಪ್ರಯಾಣ ಮಾಡದಿರುವುದು ಉತ್ತಮ. ಎರಡು ಮೂರು ದಿನದಲ್ಲಿ ಲಕ್ಷಣಗಳು ಕಡಿಮೆ ಆಗದಿದ್ದರೆ ತಜ್ಞ ವೈದ್ಯರನ್ನು ಸಂಪರ್ಕಿಸಬೇಕು. ಆತಂಕ ಪಡುವ ಅಗತ್ಯ ಇಲ್ಲವಾದರೂ, ಉಪೇಕ್ಷೆ ಮಾಡುವುದು ಸಲ್ಲದು.

ಡಾ.ಹುಲಿರಾಜ್ ನಾರಾಯಣಸ್ವಾಮಿ
ಮುಖ್ಯಸ್ಥ, ಶ್ವಾಸಕೋಶ ವಿಭಾಗ, ಕಿಮ್ಸ್ ಬೆಂಗಳೂರು

ಸಿನಿ ಬಿಟ್ಸ್

ಮತ್ತೆ ಸೆಟ್ಟೇರುತ್ತಿದೆ 'ದ ರೈಸ್ ಆಫ್ ಅಶೋಕ'



ಸತೀಶ್ ನೀನಾಸಂ

ಸತೀಶ್ ನೀನಾಸಂ ನಟಿಸುತ್ತಿರುವ 'ಅಶೋಕ ಬ್ಲೇಡ್' ಚಿತ್ರವೀಗ 'ದ ರೈಸ್ ಆಫ್ ಅಶೋಕ' ಎಂದು ಶೀರ್ಷಿಕೆ ಬದಲಿಸಿಕೊಂಡು ಮತ್ತೆ ಸೆಟ್ಟೇರುತ್ತಿದೆ. ಇದರ ನಿರ್ದೇಶಕ ವಿನೋದ್ ದೊಂಡಾಲೆ ಆತ್ಮಹತ್ಯೆ ಬಳಿಕ ಚಿತ್ರ ನಿಂತು ಹೋಗಿತ್ತು. ಇದೀಗ ಸತೀಶ್ ನೀನಾಸಂ ಚಿತ್ರವನ್ನು ಮತ್ತೆ ಕೈಗೆತ್ತಿಕೊಂಡಿದ್ದು, 'ಕ್ಷೇತ್ರಪತಿ', 'ಅವತಾರ ಪುರುಷ' ಸೇರಿದಂತೆ ಹಲವು ಚಿತ್ರಗಳಿಗೆ ಸಂಕಲನಕಾರರಾಗಿದ್ದ ಮನು ಶೆಡ್ಗಾರ್ ಈ ಚಿತ್ರದ ಮೂಲಕ ನಿರ್ದೇಶಕರಾಗುತ್ತಿದ್ದಾರೆ.

'ಜ.10ರಂದು ಚಿತ್ರದ ಮೋಷನ್ ಪೋಸ್ಟರ್ ರಿಲೀಸ್ ಮಾಡಿ, ಫೆ.15ರಿಂದ ಚಿತ್ರೀಕರಣ ಮುಂದುವರಿಸುತ್ತೇವೆ. ಶೀಘ್ರದಲ್ಲಿ ಚಿತ್ರವನ್ನು ತೆರೆಗೆ ತರುವ ಆಲೋಚನೆಯಿದೆ. ನನ್ನ ವೃತ್ತಿಜೀವನದಲ್ಲಿ ಈತನಕದ ಅತ್ಯುತ್ತಮ ಸಿನಿಮಾವಿದು. ಕಂಟೆಂಟ್ ಅಷ್ಟು ಅದ್ಭುತವಾಗಿದೆ. ಮೂರು ಭಾಷೆಗಳಲ್ಲಿ ಚಿತ್ರ ನಿರ್ಮಾಣವಾಗುತ್ತಿದ್ದು ವಿನೋದ್ ಅವರ ಕನಸಿನ ಚಿತ್ರವಾಗಿತ್ತು. ಹೀಗಾಗಿ ಈ ಸಿನಿಮಾ ಪೂರ್ಣಗೊಳಿಸಬೇಕೆಂದು ಪಣತೊಟ್ಟು ಮುಂದುವರಿಸುತ್ತಿದ್ದೇವೆ' ಎನ್ನುತ್ತಾರೆ ಸತೀಶ್.

'ಸದ್ಯ ಮಹೇಶ್ ನಿರ್ದೇಶಿಸುತ್ತಿರುವ, ರಚಿತಾ ರಾಮ್ ನಾಯಕಿಯಾಗಿರುವ 'ಅಯೋಗ್ಯ 2' ಚಿತ್ರದ ಚಿತ್ರೀಕರಣದಲ್ಲಿ ತೊಡಗಿಸಿಕೊಂಡಿರುವೆ. ಅದರ ಮೊದಲ ಹಂತದ ಚಿತ್ರೀಕರಣ ಮುಗಿಯುತ್ತಿದ್ದಂತೆ ಈ ಚಿತ್ರ ಕೈಗೆತ್ತಿಕೊಳ್ಳುತ್ತೇವೆ. ವೃದ್ಧಿ ಕ್ರಿಯೇಷನ್ಸ್ ಜೊತೆಗೆ ನಾನು ನಿರ್ಮಾಣದಲ್ಲಿ ಕೈಜೋಡಿಸುತ್ತಿರುವೆ' ಎಂದು ಸತೀಶ್ ಮಾಹಿತಿ ನೀಡಿದರು.

ಬಿ.ಸುರೇಶ್, ಗೋಪಾಲ ದೇಶಪಾಂಡೆ ಮೊದಲಾದವರು ತಾರಾಗಣದಲ್ಲಿದ್ದಾರೆ. ಪೂರ್ಣಚಂದ್ರ ತೇಜಸ್ವಿ ಸಂಗೀತ, ಲವಿತ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಫೆ.21ಕ್ಕೆ 'ವಿಷ್ಣು ಪ್ರಿಯಾ' ತೆರೆಗೆ



ಪ್ರಿಯಾ ವಾರಿಯರ್, ಶ್ರೇಯಸ್

90ರ ದಶಕದ ಪ್ರೇಮಕಥೆ ಹೊಂದಿರುವ 'ವಿಷ್ಣು ಪ್ರಿಯಾ' ಚಿತ್ರ ಫೆಬ್ರುವರಿ 21ರಂದು ತೆರೆಗೆ ಬರಲಿದೆ. ನಿರ್ಮಾಪಕ ಕೆ.ಮಂಜು ಪುತ್ರ ಶ್ರೇಯಸ್ ನಾಯಕನಾಗಿ ಕಾಣಿಸಿಕೊಂಡಿರುವ ಚಿತ್ರಕ್ಕೆ ಮಲಯಾಳ, ತೆಲುಗು, ತಮಿಳಿನಲ್ಲಿ ನಲವತ್ತಕ್ಕೂ ಹೆಚ್ಚು ಚಿತ್ರಗಳನ್ನು ನಿರ್ದೇಶಿಸಿರುವ ವಿ.ಕೆ.ಪ್ರಕಾಶ್ ಅವರು ಆ್ಯಕ್ಷನ್ ಕಟ್ ಹೇಳಿದ್ದಾರೆ. ಪುತ್ರನಿಗಾಗಿ ಕೆ.ಮಂಜು ಬಂಡವಾಳ ಹೂಡಿದ್ದಾರೆ.

'ಬಹಳ ಹಿಂದೆಯೇ ನಿರ್ಮಾಣವಾಗಿದ್ದ ಈ ಚಿತ್ರವೀಗ ಬಿಡುಗಡೆಯ ಹಂತಕ್ಕೆ ಬಂದಿದೆ. ನಾಯಕನ ಹೆಸರು ವಿಷ್ಣು, ನಾಯಕಿಯ ಹೆಸರು ಪ್ರಿಯಾ. ಅವರಿಬ್ಬರ ಹೆಸರೇ ಚಿತ್ರದ ಶೀರ್ಷಿಕೆಯಾಗಿದೆ. ಪ್ರಿಯಾ ವಾರಿಯರ್ ಚಿತ್ರದ ನಾಯಕಿ. ಜೀವನದಲ್ಲಿ ಪ್ರೀತಿ ಎಂಬುದು ಎಷ್ಟು ಮುಖ್ಯವೆಂದು ಈ ಚಿತ್ರದಲ್ಲಿ ತೋರಿಸಲಾಗಿದೆ. ಪ್ರೀತಿಗಾಗಿ ಏನು ಬೇಕಾದರೂ ಮಾಡಲು ರೆಡಿಯಾಗುವ ಯುವಕನ ಜೀವನದಲ್ಲಿ ಏನೇನೆಲ್ಲ ಆಗಿಹೋಯಿತು ಎಂಬುದೇ ಚಿತ್ರಕಥೆ' ಎಂದಿದೆ ಚಿತ್ರತಂಡ.

ದಕ್ಷಿಣ ಭಾರತದ ಹೆಸರಾಂತ ಸಂಗೀತ ನಿರ್ದೇಶಕ ಗೋಪಿಸುಂದರ್ ಈ ಚಿತ್ರಕ್ಕೆ ಸಂಗೀತ ನೀಡಿದ್ದಾರೆ. ನಾಯಕನ ತಂದೆಯಾಗಿ ಅಚ್ಯುತ್ ಕುಮಾರ್ ಹಾಗೂ ನಾಯಕಿಯ ತಂದೆಯಾಗಿ ಸುಚೇಂದ್ರ ಪ್ರಸಾದ್ ಅಭಿನಯಿಸಿದ್ದಾರೆ. ನಿರ್ದೇಶಕ ರವಿ ಶ್ರೀವತ್ಸ ಚಿತ್ರಕಥೆ, ವಿನೋದ್ ಭಾರತಿ ಛಾಯಾಚಿತ್ರಗ್ರಹಣ, ಸುರೇಶ್ ಅರಸ್ ಸಂಕಲನ ಈ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ 2024ರ ಡಿಸೆಂಬರ್ 28ರಂದು ದಾಖಲೆ ಪ್ರಮಾಣದಲ್ಲಿ ಮಳೆಯಾಯಿತು. ಇದಾದ ನಂತರ ಎಎಪಿ ಸರ್ಕಾರವನ್ನು ಟೀಕಿಸುವುದಕ್ಕಾಗಿ ದೆಹಲಿ ಬಿಜೆಪಿಯು ತನ್ನ ಅಧಿಕೃತ ಫೇಸ್‌ಬುಕ್ ಪುಟದಲ್ಲಿ ಹೊಂಡಗಳಿಂದ ಕೂಡಿದ ರಸ್ತೆಯಲ್ಲಿ ಬೈಕ್ ಸವಾರರೊಬ್ಬರು ಸಾಗುತ್ತಿರುವ ಚಿತ್ರವನ್ನು ಪೋಸ್ಟ್ ಮಾಡಿತ್ತು. 'ಕಡಿಮೆ ಅವಧಿಯಲ್ಲಿ ಬಿದ್ದ ಮಳೆಗೆ ಐರೋಪ್ಯ ಗುಣಮಟ್ಟದ ರಸ್ತೆಯ ಸ್ಥಿತಿ' ಎಂಬ ಒಕ್ಕಣೆ ಇದ್ದ ಈ ಪೋಸ್ಟ್ ಅನ್ನು ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ಸೇರಿದಂತೆ ಬಿಜೆಪಿಯ ಹಲವು ಬೆಂಬಲಿಗರು ಹಂಚಿಕೊಂಡಿದ್ದರು. ಆದರೆ, ಇದು ಮೂಲ ಚಿತ್ರವಲ್ಲ, ಚಿತ್ರವನ್ನು ತಿರುಚಲಾಗಿದೆ.

ದೆಹಲಿ ಬಿಜೆಪಿಯು ಪೋಸ್ಟ್ ಮಾಡಿದ ಚಿತ್ರವನ್ನು ಕ್ರಾಪ್ ಮಾಡಿ, ಗೂಗಲ್ ಲೆನ್ಸ್‌ನಲ್ಲಿ ರಿವರ್ಸ್ ಇಮೇಜ್ ವಿಧಾನದಲ್ಲಿ ಹುಡುಕಾಡಿದಾಗ ಫೋಟೊ ಸಂಗ್ರಹ ವೆಬ್‌ಸೈಟ್ ಗೆಟ್ಟಿ ಇಮೇಜಸ್‌ನಲ್ಲಿ 2024ರ ಸೆಪ್ಟೆಂಬರ್ 30ರಂದು ಅಪ್‌ಲೋಡ್ ಮಾಡಲಾದ ಇದೇ ರೀತಿಯ ಹಲವು ಚಿತ್ರಗಳು ಕಾಣ ಸಿಕ್ಕವು. ಚಿತ್ರದಲ್ಲಿನ ಶೀರ್ಷಿಕೆ ಪ್ರಕಾರ, ಸೆಪ್ಟೆಂಬರ್ ತಿಂಗಳ ಅಂತ್ಯದಲ್ಲಿ ದೆಹಲಿ ಮುಖ್ಯಮಂತ್ರಿ ಆತಿಶಿ ಅವರು ಕಲ್ಕಾಜಿ ಪ್ರದೇಶದಲ್ಲಿ ಮಳೆಯಿಂದಾಗಿ ಹಾಳಾದ ರಸ್ತೆಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ತೆಗೆದ ಚಿತ್ರಗಳು. ಗೆಟ್ಟಿ ಇಮೇಜಸ್‌ನಲ್ಲಿರುವ ಫೋಟೊದಲ್ಲಿ ರಸ್ತೆಯ ಡಾಂಬರು ಕಿತ್ತು ಬಂದಿರುವುದು ಕಾಣಿಸುತ್ತಿದೆಯಾದರೂ ಬಿಜೆಪಿ ಹಂಚಿಕೊಂಡ ಚಿತ್ರದಲ್ಲಿ ಇದ್ದಂತೆ ದೊಡ್ಡ ಹೊಂಡಗಳಿಲ್ಲ. ಎರಡೂ ಚಿತ್ರಗಳನ್ನು ಪರಸ್ಪರ ಹೋಲಿಸಿದಾಗ ದೆಹಲಿ ಬಿಜೆಪಿ, ಅಮಿತ್ ಮಾಳವೀಯ ಅವರು ಹಂಚಿಕೊಂಡ ಚಿತ್ರ ತಿರುಚಿದ್ದು ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಮನಸ್ಸು ತಿಳಿಯಾಗಿರಬೇಕು!

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

104

ತೇನ್ ಸಿಂಗ್, ಹಿಮಾಲಯದ ತಪ್ಪಲಲ್ಲಿ ಕುರಿ ಕಾಯೋ ಹುಡುಗ. ತಂದೆ ತೀರಿಕೊಂಡಿದ್ದ. ತಾಯಿ ಮುದುಕಿ. ಬಿಸಿಲು ಬಿದ್ದ ನಂತರ ಆ ತಾಯಿ ಮಗನಿಗೆ ಬುತ್ತಿ ಕಟ್ಟಿಕೊಂಡು ಬರುತ್ತಿದ್ದಳು. ಮಗನ ತಲೆಯ ಮೇಲೆ ಕೈಯಿಟ್ಟು ಗಲ್ಲಕ್ಕೆ ಒಂದು ಮುತ್ತುಕೊಟ್ಟು, ಬಾಯೊಳಗೆ ಒಂದು ತುತ್ತು ಇಟ್ಟು 'ಮಗಾ, ಈ ಹಿಮಾಲಯ ಬಹಳ ಎತ್ತರ ಐತಿ ಅಂತಾರ. ಈವರೆಗೆ ಯಾರೂ ಇದನ್ನು ಹತ್ತಿಲ್ಲ. ನೀನು ಹತ್ತಬೇಕು ನೋಡು' ಎನ್ನುತ್ತಿದ್ದಳು. ಒಂದು ದಿನ ತೇನ್ ಸಿಂಗ್ ಹಿಮಾಲಯ ಹತ್ತಿ ಇಳಿದ. ಆಗ ಆತನನ್ನು ಸಂದರ್ಶನ ಮಾಡಲು ಬಹಳ ಮಂದಿ ಬಂದರು. ಒಂದು ಪ್ರಶ್ನೆ ಕೇಳಿದರು. 'ಈ ಹಿಮಾಲಯ ಪರ್ವತವನ್ನು ಈವರೆಗೆ ಯಾರೂ ಹತ್ತಿರಲಿಲ್ಲ. ನೀವು ಹ್ಯಾಂಗ್ ಹತ್ತಿಳಿದಿರಿ. ಎಷ್ಟು ಸಮಯ ತೆಗೆದುಕೊಂಡರಿ, ಏನೇನು ತ್ರಾಸಾತು' ಅಂತ ಕೇಳಿದರು. ಆಗ ತೇನ್ ಸಿಂಗ್, 'ನಾನು ಚಿಕ್ಕವನಿರುವಾಗ ನನ್ನ ತಾಯಿ ಈ ಹಿಮಾಲಯವನ್ನು ತೋರಿಸಿ ಇದನ್ನು ಈವರೆಗೆ ಯಾರೂ ಹತ್ತಿಲ್ಲ. ನೀನು ಹತ್ತಬೇಕು ಅಂತ ಹೇಳುತ್ತಿದ್ದಳು. ಆಗಲೇ ನನ್ನ ಮನಸ್ಸು ಹಿಮಾಲಯವನ್ನು ಹತ್ತಿ ಆಗಿತ್ತು. ಈಗ ಬರೇ ದೇಹ ಹಿಮಾಲಯವನ್ನು ಹತ್ತಿ ಇಳಿದಿದೆ' ಎಂದು ಉತ್ತರಿಸಿದ. ಒಂದು ಮಾತು ಈ ಸಾಹಸವನ್ನು ಮಾಡಿಸಿದೆ ಅಂದರ, ಆ ತಾಯಿಯ ಮಾತು ಹೇಗಿರಬೇಕು! ಅದನ್ನು ಕೇಳಿ ಸಾಧಿಸಿದ ಈತನ ಮನಸ್ಸಾದರೂ ಹೇಗಿರಬೇಕು ಯೋಚಿಸಿ. ತಾಯಿಯ ಮಾತಿನಲ್ಲಿಯೂ ಅದ್ಭುತ ಸಾಮರ್ಥ್ಯ ಇತ್ತು. ಅದನ್ನು ಸ್ವೀಕರಿಸಿದ ಮಗನ ಮನಸ್ಸಿನಲ್ಲಿಯೂ ಅಷ್ಟೇ ಅದ್ಭುತ ಸಾಮರ್ಥ್ಯ ಇತ್ತು.

ನಮ್ಮ ಮನಸ್ಸಿನಲ್ಲಿಯೇ ಎಲ್ಲವೂ ಇದೆ. ಎಲ್ಲ ದಿಕ್ಕುಗಳೂ ನಮ್ಮ ಮನಸ್ಸಿನಲ್ಲಿಯೇ ಇವೆ. ನಮ್ಮ ಮನಸ್ಸು ಮುಂದೆ ನೋಡಿದರೆ ಅದೇ ಪೂರ್ವ. ಹಿಂದೆ ನೋಡಿದರೆ ಪಶ್ಚಿಮ. ಎಡಕ್ಕೆ ನೋಡಿದರೆ ಉತ್ತರ, ಬಲಕ್ಕೆ ನೋಡಿದರೆ ದಕ್ಷಿಣ. ಮೇಲಕ್ಕೆ ನೋಡಿದರೆ ಸ್ವರ್ಗ, ಕೆಳಕ್ಕೆ ನೋಡಿದರೆ ನರಕ. ಎಲ್ಲದಕ್ಕೂ ಮನಸ್ಸೇ ಕಾರಣ. ಮನುಷ್ಯ ಅಂದರ ಅಸಾಧ್ಯಗಳನ್ನು ಸಾಧ್ಯ ಮಾಡುವ ಸಾಧನ.

ಜ್ಞಾನದೇವ ಅಂತ ಒಬ್ಬ ಹುಡುಗ. ಬದುಕಿದ್ದು ಕೇವಲ 21 ವರ್ಷ. ಹೀಂಗ ಬರೆದಿದ್ದು ಅವನನ್ನು ಸಂತ ಜ್ಞಾನೇಶ್ವರನನ್ನಾಗಿಸಿತು. ಜ್ಞಾನದೇವ ಜ್ಞಾನೇಶ್ವರನಾಗಿದ್ದು ಮನಸ್ಸಿನಿಂದ. ಕುರಿ ಕಾಯುವ ಹುಡುಗನನ್ನು ಕವಿರತ್ನ ಕಾಳಿದಾಸನನ್ನಾಗಿ ಮಾಡಿದ್ದೂ ಇದೇ ಮನಸ್ಸು. ಬೋಟು ಕಟ್ಟುವವನ ಮಗ ಅಬ್ದುಲ್ ಕಲಾಂ ಆಗಿದ್ದು ಇದೇ ಮನಸ್ಸಿನಿಂದ. ಈ ಜಗತ್ತಿನಲ್ಲಿ ಏನಿದೆ, ಎಲ್ಲವೂ ಮನದ ನಿರ್ಮಾಣ. ನಮ್ಮ ಮನಸ್ಸು ಸುಂದರ ಆಗಬೇಕು. ಸಶಕ್ತ ಆಗಬೇಕು, ಸ್ವಚ್ಛ ಆಗಬೇಕು ಎಂದು ಎಲ್ಲರೂ ಬಯಸುತ್ತೇವೆ. ಅದಕ್ಕೆ ನಮ್ಮ ಮನಸ್ಸು ದೋಷಮುಕ್ತವಾಗಬೇಕಲ್ಲ. ಅದಕ್ಕೆ ಏನು ಮಾಡಬೇಕು?

ಒಂದು ಸ್ವಚ್ಛ ಪಾತ್ರೆ ತೆಗೆದುಕೊಳ್ಳಿ. ಅದರಲ್ಲಿ ನಮ್ಮ ಮುಖ ನೋಡಿದರೆ ಕಾಣಿಸುತ್ತದೆ. ಅದರೊಳಗೆ ಒಂದಿಷ್ಟು ಮಣ್ಣು ಹಾಕಿ ಮುಖ ಕಾಣೋದಿಲ್ಲ. ಅರಿವೆ ಹಾಕಿ ಮುಖ ಕಾಣೋದಿಲ್ಲ. ಅದನ್ನು ಸ್ವಲ್ಪ ಅಲುಗಾಡಿಸಿ ಮುಖ ಕಾಣೋದಿಲ್ಲ. ನೀರು ತಿಳಿಯಾತು ಅಂದರೆ ಮುಖ ದರ್ಶನ, ಮನಸ್ಸು ತಿಳಿಯಾತು ಅಂದರೆ ದೇವ ದರ್ಶನ. ಇದನ್ನು ತಿಳಕೋಬೇಕು. ಮನಸ್ಸು ತಿಳಿಯಾಗಿಟ್ಟುಕೊಳ್ಳಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಮಂಗಳವಾರ ಜನವರಿ 7, 2025

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಅಷ್ಟಮಿ ಗಂ. 16-27 ನಕ್ಷತ್ರ: ರೇವತಿ ಗಂ. 17-50 ಯೋಗ: ಶಿವ ಗಂ. 23-16 ಕರಣ: ಬವ ಗಂ. 16-27, ಧನು ಮಾಸದ 22 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 3.
ರಾಹುಕಾಲ: ಮಧ್ಯಾಹ್ನ 03-00 – 04-30
ಸೂರ್ಯೋದಯ: 06-59 ಸೂರ್ಯಾಸ್ತ: 06-15
ಮುಸ್ಲಿಂ ದಿನಾಂಕ: 06 ರಜಬ್
ಅದೃಷ್ಟ ಸಂಖ್ಯೆ: 6, 3

ಮೇಷ: ಲೇವಾದೇವಿ ವ್ಯವಹಾರ ನಡೆಸುವವರಿಗೆ ವ್ಯವಹಾರದಲ್ಲಿ ಸ್ವಲ್ಪ ಪ್ರಮಾಣದ ನಷ್ಟ ಸಂಭವಿಸಿ ಹಿನ್ನಡೆಯಾಗಲಿದೆ. ಪ್ರೀತಿ ಪಾತ್ರರಲ್ಲಿ ನಿಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಈ ದಿನ ಸೂಕ್ತವಾಗಿದೆ.

ವೃಷಭ: ಹಣಕಾಸು ಸಂಸ್ಥೆಗಳ ನೆರವಿನಿಂದ ಸ್ವಂತ ಉದ್ದಿಮೆ ಪ್ರಾರಂಭಿಸುವ ಬಹು ದಿನದ ಯೋಜನೆ ಕೈಗೂಡುವುದು. ದೈವಾನುಗ್ರಹ ಒದಗಿರುವುದರಿಂದ ಕೆಲಸ ಕಾರ್ಯಗಳಿಗಿದ್ದ ಅಡೆತಡೆಗಳು ದೂರಾಗುವುದು.

ಮಿಥುನ: ನೀವಿಂದು ಇನ್ನೊಬ್ಬರ ಅಧೀನದಿಂದ ಹೊರಬಂದು ಸ್ವತಂತ್ರ ಮನೋಭಾವದಿಂದ ಉಲ್ಲಾಸಭರಿತವಾಗಿ ಜೀವನವನ್ನು ನಡೆಸುವಂತಾಗಲಿದೆ. ಕೆಲಸಗಳನ್ನು ಸಮಯದಲ್ಲಿ ಪೂರ್ಣಗೊಳಿಸುವ ಬಗ್ಗೆ ಹೆಚ್ಚಿನ ಗಮನವಿರಲಿ.

ಕರ್ಕಾಟಕ: ಬೇರೆಯವರ ಹಿಡಿತದಿಂದ ಬಳಲಿರುವ ನಿಮಗೆ ಸಮಸ್ಯೆಯಿಂದ ಹೊರಬರುವ ಅವಕಾಶಗಳು ಸಿಗುವುದು. ಬಂಧು–ಮಿತ್ರರೊಂದಿಗೆ ಸಂತಸದ ಕ್ಷಣಗಳನ್ನು ಹಂಚಿಕೊಳ್ಳುವಿರಿ. ಆರ್ಥಿಕ ಪರಿಸ್ಥಿತಿಯಲ್ಲಿ ಸ್ವಲ್ಪ ವ್ಯತ್ಯಾಸವಾಗಲಿದೆ.

ಸಿಂಹ: ಒಳಿತಾಗುವ ನಿರ್ಧಾರಗಳನ್ನು ಕೈಗೊಳ್ಳುವ ಬಗ್ಗೆ ಯೋಚನೆಗಳು ಬೇಡ. ಸಾಂಸಾರಿಕ ಒತ್ತಡದಿಂದ ವೃತ್ತಿಪರವಾದ ಜವಾಬ್ದಾರಿ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ಆತ್ಮವಿಶ್ವಾಸ ಬೇಕೇ ವಿನಃ ಅಂಜಿಕೆ ಬೇಡ.

ಕನ್ಯಾ: ನಿಮ್ಮ ಮೇಲುಸ್ತುವಾರಿಯಲ್ಲಿ ಕೆಲಸ ಕಾರ್ಯಗಳು ಸುಗಮವಾಗಿ ಸಾಗುವುದು. ಮಕ್ಕಳಿಂದ ದುಬಾರಿ ಬೆಲೆಯ ವಸ್ತುಗಳ ಖರೀದಿ ಆಗುವುದು. ಇತರರೊಂದಿಗೆ ಇದ್ದ ವಿವಾದಗಳನ್ನು ರಾಜಿಯೊಂದಿಗೆ ಬಗೆಹರಿಸಿಕೊಳ್ಳುವಿರಿ.

ತುಲಾ: ಆರ್ಥಿಕವಾಗಿ ಲಾಭ ಪಡೆಯುವುದಕ್ಕೆ ಹೋರಾಟ ನಡೆಸಬೇಕಾಗ ಬಹುದು. ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕೆಂಬುದು ನಿಮಗೆ ತಿಳಿಯಲಿದೆ. ಸರ್ಕಾರಿ ಕೆಲಸ ಕಾರ್ಯಗಳು ಸುಲಭವಾಗಿ ಕೈಗೂಡುವುದು.

ವೃಶ್ಚಿಕ: ಪ್ರಾಮಾಣಿಕವಾಗಿ ಕೆಲಸಕಾರ್ಯದಲ್ಲಿ ತೊಡಗಿಸಿಕೊಂಡಲ್ಲಿ ನಿಧಾನವಾಗಿ ಯಶಸ್ಸು ಪ್ರಾಪ್ತಿಯಾಗುವುದು. ಕೆಲಸದಲ್ಲಿ ಹೆಚ್ಚಿನ ಜವಾಬ್ದಾರಿ ಹಾಗೂ ಸೌಲಭ್ಯ ಪಡೆಯಬಹುದು. ಹಳೇ ಬಾಕಿ ಸಂದಾಯವಾಗುವುದು.

ಧನು: ಶುಭ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿಯೂ ಯಶಸ್ಸು ಪಡೆಯುವಿರಿ. ಕುಟುಂಬದ ಸರ್ವ ಸದಸ್ಯರಲ್ಲಿ ಆರೋಗ್ಯ ಭಾಗ್ಯ ಇರುವುದು. ಈ ದಿನ ಮಾತಿಗೆ ಕಡಿವಾಣ ಹಾಕುವುದು ಲೇಸು.

ಮಕರ: ಗಿಡಗಳ ನರ್ಸರಿ ಮಾಡುವವರಿಗೆ ಕೀಟ ಬಾಧೆ ಹೆಚ್ಚಾಗಿರುವುದು. ಕೆಲಸದಲ್ಲಿ ಅಧಿಕ ಒತ್ತಡ, ದೇಹಾಯಾಸ ತೋರಿಬಂದು ತಪ್ಪು ನಿರ್ಧಾರ ತೆಗೆದುಕೊಳ್ಳುವಂತಾಗಬಹುದು. ಎಣ್ಣೆ ಪದಾರ್ಥಗಳನ್ನು ಮಿತಗೊಳಿಸಿ.

ಕುಂಭ: ಮಕ್ಕಳ ಹೆಸರಿನಲ್ಲಿ ನಿವೇಶನ ಖರೀದಿಸುವ ಯೋಚನೆಗಳು ಈ ದಿನ ಕಾರ್ಯರೂಪಕ್ಕೆ ತರಬಹುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಅಪರಿಮಿತ ಆಸಕ್ತಿ ಮೂಡಲಿದೆ. ಸಹವರ್ತಿಗಳೊಡನೆ ಸಂಯಮದಿಂದ ವರ್ತಿಸಿ.


ಮೀನ: ಹಣಕಾಸಿನ ವ್ಯವಹಾರ ನಡೆಸುವವರು ನೂತನ ಯೋಜನೆಗಳನ್ನು ವಿಸ್ತರಿಸಬಹುದು. ಸಮಸ್ಯೆಗಳನ್ನು ನಾಜೂಕಾಗಿ ಬಗೆಹರಿಸಿಕೊಳ್ಳುವ ಪ್ರಯತ್ನ ನಡೆಸಿ. ಯಾರಲ್ಲಿಯೂ ಯಾವ ವಿಚಾರವನ್ನೂ ಮುಚ್ಚಿಡಬೇಡಿ.

ಪದಬಂಧ 5915

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
4.ಬಿಸಿಲಲ್ಲಿ ಕಾಣಿಸಿದ ಡೊಗರು (2)
5.ವರ ನೀಡಿದ್ದು ಅನವಶ್ಯಕ ವಿವರಣೆ! (3)
6.ಮಂಗಳಗ್ರಹವನ್ನು ಹೀಗೂ ಕರೆಯುತ್ತಾರೆ (4)
7.ಲಾಬಿ ಮಾಡಿದಾಗ ಸಿಕ್ಕಿರುವ ಹೂವು (3)
9.ಆಯ್ದಕ್ಕಿ ಕಾಯಕವನ್ನು ಆರಿಕೊಂಡಿದ್ದ ಶರಣ ದಂಪತಿ (9)
11.ಅನ್ನ ಮಾಡುವ ಪಾತ್ರೆ (3)
14.ಅಹಿಂಸಾಮೂರ್ತಿ ಎಂಬ ಕೀರ್ತಿಗೆ ಭಾಜನನಾದ ಶರಣನ ಪತ್ನಿ ವೀರಮ್ಮ (4)
16.ಮಾತಿನ ಸರಣಿ (3)
17.ಕೊಬ್ಬು ಇಲ್ಲಿದೆ (2)

ಮೇಲಿಂದ ಕೆಳಕ್ಕೆ
1.ಸದ್ಯದ ಪರಿಸ್ಥಿತಿ (3)
2.ಮುದ್ರೆ ಮಾಡಲು ಬಳಸುವ ದ್ರವ್ಯ (3)
3.ನಾಣ್ಣುಡಿ ಇಲ್ಲಿ ಉಲ್ಟಾ ಆಗಿದೆ (2)
4.ಮಾರಾಟಕ್ಕೊಂದು ಪರ್ಯಾಯ ಪದ (3)
6.ದೋಣಿ ನಡೆಸುವ ವೃತ್ತಿಯಲ್ಲಿದ್ದ ಈ ಶರಣ ತನ್ನ ಹೆಸರನ್ನೇ ವಚನಾಂಕಿತ ಮಾಡಿಕೊಂಡಿದ್ದಾನೆ (7)
8.ಕಾಲ್ಪನಿಕ ಭೂತವು ಗುಮ್ಮಟದಲ್ಲಿದೆ! (2)
9.ವ್ಯಕ್ತಿ ಅಥವಾ ವಸ್ತುವಿನ ಹೆಸರನ್ನು ಹೇಳಿ ಮಾಡುವ ಪ್ರಮಾಣ (2)
10.ಅಂದವಾಗಿರುವ ಮೇನೆ (3)
12.ರೀತಿಯೊಡಗೂಡಿರುವ ಸಂಪ್ರದಾಯ (3)
13.ಆಲದ ಮರಕ್ಕೊರಗಿರುವ ಸೋಮಾರಿ (3)
15.ಧಾನ್ಯಗಳ ಸಣ್ಣ ನುಚ್ಚು (2)



5914ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಸಲೀಸು 4.ಆರಂಭ 6.ಹರಳು 7.ಕಡ 8.ಭಗ್ನಮನೋರಥ 10.ರಜ 12.ನಗು 14.ನಾರಿಕೇಳಪಾಕ 16.ಗಾನ 17.ಕಲಿಲ 19.ದಡಾರ 20.ಸಾರಣೆ

ಮೇಲಿಂದ ಕೆಳಕ್ಕೆ: 1.ವಾಯುಸಂಚಾರ 2.ಸಮಾರಂಭ 3.ಸುಹ 4.ಆಳು 5.ಬಗ್ಗಡ 7.ಕಥನ 9.ಮರುಳ 11.ಜನಾನ 3.ಗುಲಾಮಗಿರಿ 15.ಕಟ್ಟಪ್ಪಣೆ 16.ಗಾವುದ 17.ಕರ 18.ಲಸಾ

ಸುಡೊಕು 6300

3	4		2			6		1
				8		2	7	
			1		4			8
		4				1		
2	8		6	9	1		4	3
		7					6	5
	5			1				7
	1	6	8		2	5	3	
4	2			5			1	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6299 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ನಗದುರಹಿತ ವೈದ್ಯಕೀಯ ಚಿಕಿತ್ಸಾ ಯೋಜನೆ • 34 ಸಾವಿರ ಸಿಬ್ಬಂದಿ, 1.50 ಲಕ್ಷ ಅವಲಂಬಿತರಿಗೆ ಅನುಕೂಲ

‘ಕೆಎಸ್‌ಆರ್‌ಟಿಸಿ ಆರೋಗ್ಯ’ಕ್ಕೆ ಸಿ.ಎಂ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್‌ಆರ್‌ಟಿಸಿ) ನೌಕರರಿಗೆ ನಗದುರಹಿತ ವೈದ್ಯಕೀಯ ಚಿಕಿತ್ಸಾ ಯೋಜನೆ ‘ಕೆಎಸ್‌ಆರ್‌ಟಿಸಿ ಆರೋಗ್ಯ’ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಚಾಲನೆ ನೀಡಿದರು. ಆ ಮೂಲಕ, ಸಾರಿಗೆ ನೌಕರರ ಹಲವು ವರ್ಷಗಳ ಬೇಡಿಕೆ ಈಡೇರಿದಂತಾಗಿದೆ.

ಸುಮಾರು 34 ಸಾವಿರ ಸಿಬ್ಬಂದಿ ಮತ್ತು ಅವರ ಅವಲಂಬಿತರು (ಅಂದಾಜು 1.50 ಲಕ್ಷ) ಈ ಯೋಜನೆಗೆ ಅರ್ಹರಾಗಲಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿ, ‘ಈ ಯೋಜನೆಯಡಿ ಒಡಂಬಡಿಕೆ ಮಾಡಿಕೊಂಡಿರುವ ಎಲ್ಲ ಆಸ್ಪತ್ರೆಗಳು ಕೆಎಸ್‌ಆರ್‌ಟಿಸಿ ನೌಕರರು ಮತ್ತು ಕುಟುಂಬದವರು ಆಸ್ಪತ್ರೆಗೆ ಬಂದಾಗ ಗೌರವಯುತವಾಗಿ ಹಾಗೂ ಮಾನವೀಯತೆಯಿಂದ ಚಿಕಿತ್ಸೆ ನೀಡಬೇಕು’ ಎಂದರು.

‘ಸದ್ಯ ಕೆಎಸ್‌ಆರ್‌ಟಿಸಿ ಮಾತ್ರ ಈ ಯೋಜನೆಯನ್ನು ಜಾರಿಗೆ ತಂದಿದೆ. ಉಳಿದ ನಿಗಮಗಳು ಮೂರು ತಿಂಗಳ ಒಳಗೆ ಜಾರಿಗೆ ತರಲಿವೆ’ ಎಂದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ‘ಕೆಎಸ್‌ಆರ್‌ಟಿಸಿ ಆರೋಗ್ಯ’ ಕಾರ್ಡ್ ಅನ್ನು ಸಿಬ್ಬಂದಿಯೊಬ್ಬರಿಗೆ ನೀಡಿದರು. ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕೆಎಸ್‌ಆರ್‌ಟಿಸಿ ನಿಗಮದ ಅಧ್ಯಕ್ಷ ಎಸ್‌.ಆರ್. ಶ್ರೀನಿವಾಸ್ ಇದ್ದರು –ಪ್ರಜಾವಾಣಿ ಚಿತ್ರ

ಇದೇ ಸಂದರ್ಭದಲ್ಲಿ ಕೆಎಸ್‌ಆರ್‌ಟಿಸಿ ಟ್ರಸ್ಟ್‌ಗೆ ₹ 20 ಕೋಟಿ ಮೊತ್ತದ ಚೆಕ್ ಅನ್ನು ಹಸ್ತಾಂತರಿಸಿದ ಮುಖ್ಯಮಂತ್ರಿ, ಬಳಿಕ ನಿಗಮದ ಆಂತರಿಕ ನಿಯತಕಾಲಿಕ ‘ಸಾರಿಗೆ ಸಂಪದ’ ಸಂಚಿಕೆ ಮತ್ತು ಕೆಎಸ್‌ಆರ್‌ಟಿಸಿ ಆರೋಗ್ಯ ಕೈಪಿಡಿ ಬಿಡುಗಡೆ ಮಾಡಿದರು.

ನೌಕರರ ಕನಸು ನನಸಾದ ದಿನ: ‘ಸುಮಾರು 20 ವರ್ಷಗಳಿಂದ ಈ ವಿಚಾರವಾಗಿ ಬೇಡಿಕೆ ಇತ್ತು. ಅನೇಕ ನೌಕರರ ಕನಸು ನನಸಾಗಿದೆ. ಸದ್ಯ 250 ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದು. ಇನ್ನೂ 50 ಆಸ್ಪತ್ರೆಗಳನ್ನು ಸೇರ್ಪಡೆ ಮಾಡಲಾಗುವುದು’ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿದರು.

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅನ್ಬು ಕುಮಾರ್, ‘ಕೆಎಸ್‌ಆರ್‌ಟಿಸಿ ಆರೋಗ್ಯ ಕಾರ್ಡ್‌ಗಾಗಿ ನೌಕರರು ಪ್ರತಿ ತಿಂಗಳು ₹ 650 ಪಾವತಿ ಮಾಡಬೇಕು. ಕೆಎಸ್‌ಆರ್‌ಟಿಸಿ ₹ 600 ಪಾವತಿ ಮಾಡಲಿದೆ. ಇದರಿಂದ ವರ್ಷಕ್ಕೆ ಒಟ್ಟು ₹ 46 ಕೋಟಿ ಸಂಗ್ರಹ ಆಗಲಿದೆ. ಈ ಹಿಂದೆ ನೌಕರರ ಆರೋಗ್ಯಕ್ಕಾಗಿ ಕೆಎಸ್‌ಆರ್‌ಟಿಸಿ ಪ್ರತಿವರ್ಷ ₹ 16 ಕೋಟಿ ವೆಚ್ಚ ಮಾಡುತ್ತಿತ್ತು’ ಎಂದರು.

ಏನೇನು ಸೌಲಭ್ಯ?

- ಸರ್ಕಾರಿ, ಖಾಸಗಿ ಸೇರಿ 250 ಆಸ್ಪತ್ರೆಗಳಲ್ಲಿ ಆರೋಗ್ಯ ಕಾರ್ಡ್ ಬಳಸಿ ನಗದುರಹಿತ ಚಿಕಿತ್ಸೆ
- ಸೂಪರ್ ಸ್ಪೆಷಾಲಿಟಿ, ಮಲ್ಟಿ ಸ್ಪೆಷಾಲಿಟಿ, ಸಾಮಾನ್ಯ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಲಭ್ಯ
- ಯಾವುದೇ ಕಾಯಿಲೆಗೆ ಸಂಪೂರ್ಣ ಚಿಕಿತ್ಸಾ ವೆಚ್ಚ ಭರಿಸಲಾಗುತ್ತದೆ
- ನೌಕರರ ಮನೆಯ ಆರು ಜನರು ಆರೋಗ್ಯ ಕಾರ್ಡ್ ಬಳಸಿ ಚಿಕಿತ್ಸೆ ಪಡೆಯಬಹುದು
- ನೌಕರರು ನಿವೃತ್ತಿ ಆಗುವವರೆಗೂ ಸೌಲಭ್ಯ
- ಕಣ್ಣು ಮತ್ತು ದಂತ ಚಿಕಿತ್ಸಾ ವೆಚ್ಚವೂ ಲಭ್ಯ
- ಆಯುರ್ವೇದ, ಪ್ರಕೃತಿ, ಯುನಾನಿ ಮತ್ತು ಹೋಮಿಯೋಪತಿ ಚಿಕಿತ್ಸೆಗಳೂ ಸಿಗಲಿವೆ

ಎಸ್ಕಾಂ ಸಿಬ್ಬಂದಿಗೆ ನಗದು ರಹಿತ ವೈದ್ಯಕೀಯ ಸೌಲಭ್ಯ: ಸಚಿವ ಜಾರ್ಜ್

ಬೆಂಗಳೂರು: ಇಂಧನ ಇಲಾಖೆಯಲ್ಲಿರುವಂತೆ, ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳ (ಎಸ್ಕಾಂ) ಸಿಬ್ಬಂದಿಗೂ ₹ 5 ಲಕ್ಷದವರೆಗೆ ನಗದು ರಹಿತ ವೈದ್ಯಕೀಯ ಚಿಕಿತ್ಸ ಸೌಲಭ್ಯವನ್ನು ಕಲ್ಪಿಸಲು ಇಂಧನ ಸಚಿವ ಕೆ.ಜೆ.ಜಾರ್ಜ್ ಸೂಚಿಸಿದರು.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಎಂಜಿನಿಯರ್‌ಗಳ ಸಂಘದ ವಜ್ರ-ಮಹೋತ್ಸವ ಸಂವಹನ ಉಪನ್ಯಾಸ ಹಾಗೂ ಸಂಘದ 2025ನೇ ಸಾಲಿನ ತಾಂತ್ರಿಕ ದಿನಚರಿ ಬಿಡುಗಡೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಇಂಧನ ಇಲಾಖೆ ಸಿಬ್ಬಂದಿ ಹಾಗೂ ಚಾಮುಂಡೇಶ್ವರಿ ವಿದ್ಯುತ್ ಕಂಪನಿ (ಸೆಸ್ಕ್) ಸಿಬ್ಬಂದಿಗೆ ಈ ಸೌಲಭ್ಯವಿದೆ. ಬೇರೆ ಎಸ್ಕಾಂಗಳಲ್ಲೂ ಶೀಘ್ರವೇ ಈ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಬೇಕು ಎಂದು ಕಾರ್ಯಕ್ರಮದಲ್ಲಿ ಹಾಜರಿದ್ದ ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ ಅವರಿಗೆ ಸೂಚನೆ ನೀಡಿದರು.

‘ಇಲಾಖೆಯಲ್ಲಿ ಹಿರಿತನದ ಆಧಾರದ ಮೇಲೆ ಬಡ್ತಿ, ಹುದ್ದೆಗಳ ಭರ್ತಿ, ಹಳೇ ಪಿಂಚಣಿ ವ್ಯವಸ್ಥೆ ಜಾರಿಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಅದೇ ರೀತಿ ಇಲಾಖೆ ಪ್ರಗತಿ ಜತೆಗೆ ಜನರಿಗೆ ಸಮರ್ಪಕ ವಿದ್ಯುತ್ ಪೂರೈಸಲು ಶ್ರಮಿಸುತ್ತಿರುವ ಇಂಧನ ಇಲಾಖೆಯ ಅಧಿಕಾರಿಗಳು, ನೌಕರರ ಎಲ್ಲಾ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಬದ್ಧವಾಗಿದೆ’ ಎಂದರು.

ಇಂಧನ ಶೇಖರಣೆಗೆ ಆದ್ಯತೆ: ‘ವಿದ್ಯುತ್ ಉತ್ಪಾದನೆ ಜತೆಗೆ ಅದನ್ನು ಶೇಖರಣೆ ಮಾಡಿ ಅಗತ್ಯ ಸಂದರ್ಭದಲ್ಲಿ ಜನರಿಗೆ ಪೂರೈಸಲು ಸರ್ಕಾರ ಯೋಜನೆ ರೂಪಿಸಿದೆ. ಅದರಂತೆ ಶರಾವತಿಯಲ್ಲಿ 2,000 ಮೆಗಾವಾಟ್ ಮತ್ತು ವಾರಾಹಿಯಲ್ಲಿ 1,500 ಮೆಗಾವಾಟ್ ಸಾಮರ್ಥ್ಯದ ಪಂಪ್ಡ್ ಸ್ಟೋರೇಜ್ ಯೋಜನೆ ಜಾರಿಗೆ ನಿರ್ಧರಿಸಲಾಗಿದೆ. ಸೌರ ವಿದ್ಯುತ್ ಉತ್ಪಾದನೆ ಹೆಚ್ಚಿದಂತೆ ಶೇಖರಣಾ ವ್ಯವಸ್ಥೆಯ ಅಗತ್ಯವಿದ್ದು, ಇದಕ್ಕೆ ಸರ್ಕಾರ ಆದ್ಯತೆ ನೀಡಲಿದೆ’ ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಹೇಳಿಕೆಗೆ ಉಲ್ಟಾ ಹೊಡೆದ ಹಿಟ್ನಾಳ

ಕೊಪ್ಪಳ: ’ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕುಂಠಿತವಾಗಿದೆ ಎಂದು ನಾನು ಹೇಳಿಲ್ಲ’ ಎಂದು ಕೊಪ್ಪಳದ ಕಾಂಗ್ರೆಸ್ ಶಾಸಕ ರಾಘವೇಂದ್ರ ಹಿಟ್ನಾಳ ಹೇಳಿದರು.

ಸೋಮವಾರ ಇಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, ‘ನನ್ನ ಹೇಳಿಕೆಯನ್ನು ತಿರುಚಲಾಗಿದೆ. ನಾನು ಹೇಳಿದ ಮಾತಿನಲ್ಲಿ ಬೇರೆಯೇ ಅರ್ಥವಿದೆ. ಗ್ಯಾರಂಟಿ ಯೋಜನೆಗಳಿಗೆ ದೊಡ್ಡ ಮೊತ್ತದ ಹಣ ನೀಡುತ್ತಿದ್ದೇವೆ. ಆ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುತ್ತಿದ್ದೇವೆ. ನಾನು ಏನು ಎನ್ನುವುದು ನಮ್ಮ ಜನರಿಗೆ, ಪಕ್ಷದ ಮುಖಂಡರಿಗೆ ಗೊತ್ತಿದೆ’ ಎಂದು ಸಮರ್ಥಿಸಿಕೊಂಡರು.

ಭಾನುವಾರ ತಾಲ್ಲೂಕಿನ ಕುಣಿಕೇರಿಯಲ್ಲಿ ಅಂಚೆ ಕಚೇರಿಯ ನೂತನ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸುವ ಕಾರ್ಯಕ್ರಮದಲ್ಲಿ ಅವರು ‘ಸರ್ಕಾರ ಗ್ಯಾರಂಟಿ ಯೋಜನೆಗೆ ₹ 54 ಸಾವಿರ ಕೋಟಿ ನೀಡಿರುವ ಕಾರಣ ಅಭಿವೃದ್ಧಿ ಸ್ವಲ್ಪ ಕುಂಠಿತವಾಗಿದೆ’ ಎಂದಿದ್ದರು. ಅವರ ಹೇಳಿಕೆಯ ವಿಡಿಯೊ ಕೂಡ ವೈರಲ್ ಆಗಿದೆ.



‘ಆಶಾ’: ಅನಿರ್ದಿಷ್ಟಾವಧಿ ಮುಷ್ಕರ ಇಂದಿನಿಂದ

ಬೆಂಗಳೂರು: ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಆಶಾ ಕಾರ್ಯಕರ್ತೆಯರು ಮಂಗಳವಾರದಿಂದ (ಜನವರಿ 7) ರಾಜ್ಯದಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಲಿದ್ದಾರೆ ಎಂದು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಅಧ್ಯಕ್ಷ ಕೆ. ಸೋಮಶೇಖರ್ ಯಾದಗಿರಿ ತಿಳಿಸಿದ್ದಾರೆ.

‘ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುವ ಆಶಾ ಕಾರ್ಯಕರ್ತರು ಸೋಮವಾರ ರಾತ್ರಿಯೇ ಬೆಂಗಳೂರಿಗೆ ಹೊರಟಿದ್ದು, ಮಂಗಳವಾರ ಬೆಳಿಗ್ಗೆ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಆರಂಭವಾಗುವ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ’ ಎಂದು ಮಾಹಿತಿ ನೀಡಿದರು.

‘ನಮ್ಮ ಬೇಡಿಕೆಗಳನ್ನು ಮುಖ್ಯಮಂತ್ರಿಯವರ ಗಮನಕ್ಕೆ ತರಲಾಗಿತ್ತು. ಪರಿಹಾರದ ಭರವಸೆ ಈಡೇರಿಲ್ಲ. ಈಗ ರಾಜ್ಯ ಸರ್ಕಾರದ ಕಡೆಯಿಂದ ನಮಗೆ ಯಾವ ಸ್ಪಂದನೆಯೂ ದೊರಕಿಲ್ಲ. ಆದ್ದರಿಂದ ಮುಷ್ಕರ ನಡೆಸುವ ನಿರ್ಧಾರದಲ್ಲಿ ಯಾವುದೇ ಬದಲಾವಣೆ ಇಲ್ಲ’ ಎಂದು ಹೇಳಿದರು.

‘ನಗರ ಪ್ರದೇಶದ ಆಶಾ ಕಾರ್ಯಕರ್ತೆಯರ ಹೆಚ್ಚುವರಿ ಕೆಲಸ ಮತ್ತು ನಗರ ಜೀವನದ ದುಬಾರಿ ವೆಚ್ಚಗಳಿಗೆ ಅನುಗುಣವಾಗಿ ₹20 ಸಾವಿರ ಗೌರವಧನ ಹೆಚ್ಚಿಸಬೇಕು. ಎಂಟು ವರ್ಷಗಳಿಂದ ಆಶಾನಿಧಿ ಪೋರ್ಟಲ್‌ನಲ್ಲಿ ಆಶಾ ಕಾರ್ಯಕರ್ತೆಯರು ಮಾಡಿದ ಕೆಲಸಗಳು ದಾಖಲಾಗದೇ, ಪ್ರೋತ್ಸಾಹಧನವೂ ಬಂದಿಲ್ಲ. ರಾಜ್ಯದಾದ್ಯಂತ ಬಾಕಿ ಇರುವ ಮೂರು ತಿಂಗಳ ಪ್ರೋತ್ಸಾಹಧನ ಕೂಡಲೇ ಬಿಡುಗಡೆಗೊಳಿಸಬೇಕು’ ಎಂಬ ಬೇಡಿಕೆಗಳನ್ನು ಸಂಘವು ಸರ್ಕಾರದ ಮುಂದಿಟ್ಟಿದೆ.

‘ಶೇ 40 ಕಮಿಷನ್: ಆರೋಪಕ್ಕೆ ಕಾಂಗ್ರೆಸ್ ದಾಖಲೆ ಕೊಟ್ಟಿತ್ತೆ?’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಶೇ 60ರಷ್ಟು ಕಮಿಷನ್ ಆರೋಪಕ್ಕೆ ದಾಖಲೆ ಕೊಡಿ ಎನ್ನುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಮ್ಮ ಸರ್ಕಾರದ ವಿರುದ್ಧ ಶೇ 40 ಕಮಿಷನ್ ಸರ್ಕಾರವೆಂದು ಆರೋಪಿಸಿದಾಗ, ಏನು ದಾಖಲೆ ಕೊಟ್ಟಿದ್ದರು? ಈವರೆಗೆ ದಾಖಲೆ ಕೊಟ್ಟಿಲ್ಲ’ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಪ್ರತಿಯೊಂದು ಇಲಾಖೆಯಲ್ಲಿ ಭ್ರಷ್ಟಾಚಾರ ವ್ಯಾಪಿಸಿದೆ. ಯಾವುದೇ ಅಭಿವೃದ್ಧಿ ಕೆಲಸ ಆಗುತ್ತಿಲ್ಲ. ಜನಸಾಮಾನ್ಯರು,



ಬಸವರಾಜ ಬೊಮ್ಮಾಯಿ

ಗುತ್ತಿಗೆದಾರರು ಸೇರಿ ಎಲ್ಲ ವರ್ಗದ ಜನರಿಗೆ ಭ್ರಷ್ಟಾಚಾರದ ಬಿಸಿ ಮುಟ್ಟಿದೆ. ಇನ್ನೂ ಏನೂ ಆಗಿಲ್ಲ ಎಂದು ಮುಖ್ಯಮಂತ್ರಿಗಳು ವರ್ತಿಸುತ್ತಿರುವುದು ಭ್ರಷ್ಟಾಚಾರ ಮುಚ್ಚಿ ಹಾಕುವ ಪ್ರಯತ್ನ’ ಎಂದರು.

‘ಅವರು ಶಕ್ತಿ ಯೋಜನೆ ಮಾಡಿ ಅದಕ್ಕೆ ನೀಡಬೇಕಾದ ಹಣ ಸರಿಯಾಗಿ ನೀಡುತ್ತಿಲ್ಲ. ಹೆಚ್ಚಿನ ಬಸ್‌ಗಳನ್ನೂ ನೀಡುತ್ತಿಲ್ಲ. ನಾನು ಮುಖ್ಯಮಂತ್ರಿ ಆಗಿದ್ದಾಗ ಘೋಷಣೆ ಮಾಡಿದ ಬಸ್‌ಗಳು ಈಗ ಬರುತ್ತಿವೆ’ ಎಂದು ಹೇಳಿದರು.

ಮಾ.1ರಿಂದ ಚಲನಚಿತ್ರೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 16ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಮಾರ್ಚ್ 1ರಿಂದ 8ರವರೆಗೆ ಬೆಂಗಳೂರಿನಲ್ಲಿ ನಡೆಯಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದರು.

ಮುಖ್ಯಮಂತ್ರಿಯವರ ಗೃಹಕಚೇರಿ ‘ಕೃಷ್ಣಾ’ದಲ್ಲಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಸಂಘಟನಾ ಸಮಿತಿಯ ಸಭೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಈ ವಿವರ ನೀಡಿದರು.

ಈ ಸಾಲಿನ ಚಲನ ಚಿತ್ರೋತ್ಸವವು ‘ಸರ್ವ ಜನಾಂಗದ ಶಾಂತಿಯ ತೋಟ’ ಎಂಬ ಆಶಯದಡಿ ನಡೆಯಲಿದೆ. ಕಳೆದ ಬಾರಿ ‘ಸಾಮಾಜಿಕ ನ್ಯಾಯ’ ಎಂಬ ಆಶಯದಡಿ ನಡೆದಿತ್ತು. ಚಿತ್ರೋತ್ಸವಕ್ಕೆ ₹12 ಕೋಟಿ ಕೇಳಿದ್ದರು. ₹9 ಕೋಟಿ ಸಾಕು ಎಂದು ತೀರ್ಮಾನಿಸಲಾಯಿತು ಎಂದು ಅವರು ಹೇಳಿದರು.

ಸುಮಾರು 60 ದೇಶಗಳು ಈ ಚಲನ ಚಿತ್ರೋತ್ಸವದಲ್ಲಿ ಭಾಗ ವಹಿಸಲಿದ್ದು, ಕನ್ನಡ ಸೇರಿ ವಿವಿಧ ಭಾಷೆಗಳ ಒಟ್ಟಾರೆ 200 ಚಲನ ಚಿತ್ರಗಳು 13 ಚಿತ್ರಮಂದಿರಗಳಲ್ಲಿ ಪ್ರದರ್ಶನಗೊಳ್ಳಲಿವೆ. ಬೆಂಗಳೂರು ಮತ್ತು ರಾಜ್ಯದ ನಾಗರಿಕರಿಗೆ ಅಂತರರಾಷ್ಟ್ರೀಯ ಚಲನಚಿತ್ರ ವೀಕ್ಷಿಸಲು, ಇದೊಂದು ಸುವರ್ಣ ಅವಕಾಶ ಎಂದು ಸಿದ್ದರಾಮಯ್ಯ ತಿಳಿಸಿದರು.

ಮಾರ್ಚ್1 ರಂದು ಚಲನ ಚಿತ್ರೋತ್ಸವ ಉದ್ಘಾಟನೆಗೊಳ್ಳಲಿದೆ. ಸೆಲೆಬ್ರಿಟಿ ಯಾರನ್ನು ಕರೆಸಬೇಕು ಎಂಬುದನ್ನು ಸಮಿತಿಯೇ ತೀರ್ಮಾನಿಸಲಿದೆ. ಈ ಉತ್ಸವಕ್ಕೆ ರಾಯಭಾರಿ ಯಾರು ಎನ್ನುವುದನ್ನೂ ಸಮಿತಿಯೇ ತೀರ್ಮಾನಿಸುತ್ತದೆ. ಸುಮಾರು ಒಂದು ಲಕ್ಷ ಮಂದಿ ಭಾಗವಹಿಸುವ ನಿರೀಕ್ಷೆ ಇದೆ ಎಂದರು.

ಮೈಸೂರಿನಲ್ಲಿ ಚಿತ್ರನಗರಿ: ಮೈಸೂರಿನಲ್ಲಿ ಚಿತ್ರನಗರಿ ನಿರ್ಮಿಸಲು ಸರ್ಕಾರ ಈಗಾಗಲೇ 110 ಎಕರೆ ವಿಸ್ತೀರ್ಣದ ಜಮೀನನ್ನು ಮಂಜೂರು ಮಾಡಿದ್ದು, ಪಿಪಿಪಿ ಮಾದರಿಯಲ್ಲಿ ಚಿತ್ರ ನಗರಿಯನ್ನು ನಿರ್ಮಾಣದ ಯೋಜನೆ ಅನುಷ್ಠಾನಗೊಳಿಸಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಈ ಬಾರಿಯ ಚಲನಚಿತ್ರೋತ್ಸವದಲ್ಲಿ ಚಲನಚಿತ್ರ ವೀಕ್ಷಿಸುವಿರೇ ಎಂಬ ಪ್ರಶ್ನೆಗೆ, ‘ಸಿನಿಮಾ ನೋಡುವುದನ್ನೇ ಬಿಟ್ಟಿದ್ದೀನಿ. ಒಳ್ಳೆಯ ಸಿನಿಮಾ ಬಂದರೆ ನೋಡುತ್ತೇನೆ. ಯಾವುದಾದರೂ ಒಳ್ಳೆ ಸಿನಿಮಾ ಬಂದಿದೆಯಾ’ ಎಂದು ಕೇಳಿದರು.

ದರ್ಗಾ ಆವರಣದಲ್ಲಿ ಟೈಲ್ಸ್ ಅಳವಡಿಕೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ನಗರದ ಕೋಟೆ ಬಡಾವಣೆಯಲ್ಲಿನ ಹಜರತ್ ಸೈಯದ್ ಮೌಲಾನಾ ರೋಂ ಶಾಖಾದ್ರಿ ದರ್ಗಾ ಆವರಣದಲ್ಲಿ ಟೈಲ್ಸ್ ಅಳವಡಿಕೆ ಕಾಮಗಾರಿ ನಡೆಸುತ್ತಿದ್ದು, ಇದಕ್ಕೆ ಬಿಜೆಪಿ ಕಾರ್ಯಕರ್ತರು ವಿರೋಧ ವ್ಯಕ್ತಪಡಿಸಿದರು.

ಸೋಮವಾರ ದರ್ಗಾ ಬಳಿ ಜಮಾಯಿಸಿದ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು, ಮುತ್ತಿಗೆ ಹಾಕಲು ಯತ್ನಿಸಿದರು.

ವಿವಾದಿತ ಜಾಗ ಆಗಿರುವುದರಿಂದ ಕಾಮಗಾರಿ ನಿರ್ವಹಿಸಬಾರದು ಎಂದು ಆಗ್ರಹಿಸಿದರು. ಈ ವೇಳೆ ಪೊಲೀಸರು ಎಲ್ಲರನ್ನು ತಡೆದರು. ನಗರಸಭೆ ಬಿಜೆಪಿ ಸದಸ್ಯರು ಸೇರಿ ಹಲವರು ಕೆಲಕಾಲ ಕೋಟೆ ಆಂಜನೇಯಸ್ವಾಮಿ ದೇವಾಲಯದ ಎದುರು ಕುಳಿತು ಪ್ರತಿಭಟನೆ ನಡೆಸಿದರು.



ಚಿಕ್ಕಮಗಳೂರಿನ ಕೋಟೆ ಬಡಾವಣೆಯಲ್ಲಿ ಜಮಾಯಿಸಿದ್ದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ತಡೆದರು

ನಗರಸಭೆ ಅಧ್ಯಕ್ಷೆ ಸುಜಾತಾ ಶಿವಕುಮಾರ್, ಸದಸ್ಯರಾದ ಕವಿತಾ ಶೇಖರ್, ಮಧುಕುಮಾರ್ ರಾಜ್ ಅರಸ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ದರ್ಗಾ ಸುತ್ತಮುತ್ತ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದಾರೆ.

‘ಹಿಂದಿನಿಂದಲೂ ಅಲ್ಲಿ ಗೋರಿಗಳಿದ್ದು, ಟೈಲ್ಸ್ ಹಾಕಲು ಹೋದಾಗ ಆಕ್ಷೇಪ ವ್ಯಕ್ತವಾಗಿದೆ. 1924–25ನೇ ಸಾಲಿನಿಂದ ನಗರಸಭೆಯಲ್ಲಿ ಇರುವ ದಾಖಲೆಗಳನ್ನು ಪರಿಶೀಲಿಸಲಾಗಿದೆ. ರಿಜಿಸ್ಟರ್‌ನಲ್ಲಿ ಮಸೀದಿ, ಗೋರಿಗಳು ಎಂದೇ ಬರುತ್ತಿದೆ. 2017ರಲ್ಲಿ ನಗರಸಭೆಯಿಂದ ಇ–ಸ್ವತ್ತು ಕೂಡ ಪಡೆದಿದ್ದಾರೆ’ ಎಂದು ಜಿಲ್ಲಾಧಿಕಾರಿ ಮೀನಾ ನಾಗರಾಜ್ ಸ್ಪಷ್ಟಪಡಿಸಿದರು.

‘ಹೊಸದಾಗಿ ಕಟ್ಟಡ ಕಟ್ಟಬೇಕಾದರೆ ಅನುಮತಿ ಪಡೆಯಬೇಕಾಗುತ್ತದೆ. ಆದರೆ, ನೆಲಕ್ಕೆ ಟೈಲ್ಸ್ ಅಳವಡಿಕೆಗೆ ಯಾವುದೇ ಅನುಮತಿ ಬೇಕಾಗುವುದಿಲ್ಲ ಎಂದು ನಗರಾಭಿವೃದ್ಧಿ ಪ್ರಾಧಿಕಾರ ಕೂಡ ಸ್ಪಷ್ಟಪಡಿಸಿದೆ. ಯಾವ ನ್ಯಾಯಾಲಯದಲ್ಲೂ ತಡೆಯಾಜ್ಞೆ ಕೂಡ ಇಲ್ಲ. ಆದ್ದರಿಂದ ಕಾನೂನು ಸುವ್ಯವಸ್ಥೆ ಉಲ್ಲಂಘನೆಯಾಗದಂತೆ ಪೊಲೀಸ್ ಇಲಾಖೆ ಕ್ರಮ ಕೈಗೊಂಡಿದೆ’ ಎಂದು ಹೇಳಿದರು.

ಅರಣ್ಯ ಅಪರಾಧ: ಪ್ರಕರಣ ನಿರ್ವಹಣೆ ಸುಲಭ

ಎಫ್‌ಐಆರ್‌ಗೆ ‘ಗರುಡಾಕ್ಷಿ’ ತಂತ್ರಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಮತ್ತು ವನ್ಯಜೀವಿ ಅಪರಾಧಗಳಿಗೆ ಸಂಬಂಧಿಸಿದಂತೆ ಆನ್‌ಲೈನ್ ಮೂಲಕವೇ ಎಫ್‌ಐಆರ್ ದಾಖಲಿಸಲು ‘ಗರುಡಾಕ್ಷಿ’ ಹೆಸರಿನಲ್ಲಿ ಹೊಸ ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ.



ಈಶ್ವರ್ ಖಂಡ್ರೆ

ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣಾ ಕಾನೂನುಗಳ ಅಡಿಯಲ್ಲಿ ಅರಣ್ಯ ಅಪರಾಧ ಪ್ರಕರಣಗಳನ್ನು ನಿರ್ವಹಿಸಲು ಮತ್ತು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡಲು ಈ ತಂತ್ರಾಂಶವು ಸಹಕಾರಿಯಾಗಲಿದೆ.

ರಾಜ್ಯ ಪೊಲೀಸ್ ಇಲಾಖೆಯಲ್ಲಿರುವಂತೆ ಅರಣ್ಯ ಇಲಾಖೆಯಲ್ಲಿ ಸಹ ಪ್ರಥಮ ವರ್ತಮಾನ ವರದಿಯನ್ನು (ಎಫ್‌ಐಆರ್) ಆನ್‌ಲೈನ್‌ನಲ್ಲಿ ಡಿಜಿಟಲ್ ಸ್ವರೂಪಕ್ಕೆ ಪರಿವರ್ತಿಸುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದರು. ಅರಣ್ಯ ಇಲಾಖೆ ವೈಲ್ಡ್ ಲೈಫ್ ಟ್ರಸ್ಟ್ ಇಂಡಿಯಾ ಸಹಯೋಗದೊಂದಿಗೆ, ಗರುಡಾಕ್ಷಿ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಅರಣ್ಯ ಇಲಾಖೆ ಪ್ರಕಟಣೆ ತಿಳಿಸಿದೆ.

ಪ್ರಾಯೋಗಿಕವಾಗಿ ಐದು ವಿಭಾಗದಲ್ಲಿ ಜಾರಿ: ಗರುಡಾಕ್ಷಿ ತಂತ್ರಾಂಶವನ್ನು ಪ್ರಾಯೋಗಿಕವಾಗಿ ಬೆಂಗಳೂರು ನಗರ ವಿಭಾಗ, ಬೆಂಗಳೂರು ಅರಣ್ಯ ಸಂಚಾರಿ ದಳ ವಿಭಾಗ, ಭದ್ರಾವತಿ ವಿಭಾಗ, ಶಿರಸಿ ವಿಭಾಗ ಮತ್ತು ಮಲೆಮಹದೇಶ್ವರ ವನ್ಯಜೀವಿ ವಿಭಾಗಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗುತ್ತದೆ. ನಂತರ ಇದನ್ನು ಹಂತ– ಹಂತವಾಗಿ ಎಲ್ಲ ವಿಭಾಗಗಳಿಗೂ ವಿಸ್ತರಿಸಲಾಗುವುದು.

ಗರುಡಾಕ್ಷಿ ಆನ್ ಲೈನ್ ಎಫ್‌ಐಆರ್ ವ್ಯವಸ್ಥೆ ಅರಣ್ಯ ಮತ್ತು ವನ್ಯಜೀವಿ ಅಪರಾಧಗಳ ನಿರ್ವಹಣೆಯಲ್ಲಿ ಅತ್ಯಂತ ಮಹತ್ವದ ಮೈಲಿಗಲ್ಲಾಗಿದ್ದು, ಪಾರದರ್ಶಕ, ಸುವ್ಯವಸ್ಥಿತ, ಪರಿಹಾರವಾಗಿ ಅರಣ್ಯ ಅಪರಾಧ ತಡೆಯಲು ಇಲಾಖೆಗೆ ಬಲ ತುಂಬಲಿದೆ. ಅರಣ್ಯ ಸಚಿವ ಈಶ್ವರ ಖಂಡ್ರೆ ಮಂಗಳವಾರ ಇದಕ್ಕೆ ಚಾಲನೆ ನೀಡಲಿದ್ದಾರೆ.

‘ಸಂಭಾಜಿ ಪ್ರತಿಮೆ: ಅಧಿಕೃತ ಲೋಕಾರ್ಪಣೆ’

ಬೆಳಗಾವಿ: ‘ಇಲ್ಲಿನ ಅನಗೋಳದಲ್ಲಿ ಭಾನುವಾರ ನಡೆದ ಧರ್ಮವೀರ ಸಂಭಾಜಿ ಮಹಾರಾಜರ ಪ್ರತಿಮೆ ಅನಾವರಣ ಕಾರ್ಯಕ್ರಮ ಅನಧಿಕೃತ. ಅದರಲ್ಲಿ ಶಿಷ್ಟಾಚಾರ ಪಾಲನೆ ಮಾಡಿಲ್ಲ. ಜಿಲ್ಲಾಡಳಿತದಿಂದ ಶಿಷ್ಟಾಚಾರದ ಅನುಸಾರ ಲೋಕಾರ್ಪಣೆ ಮಾಡಲಾಗುವುದು’ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದರು.

ಅನಗೋಳದ ಮುಖಂಡರ ಜೊತೆ ಸೋಮವಾರ ಚರ್ಚಿಸಿದ ಅವರು, ‘ಪ್ರತಿಮೆ ಅನಾವರಣ ಕುರಿತು ಮಹಾನಗರ ಪಾಲಿಕೆಯಲ್ಲಿ ಠರಾವ್ ಪಾಸ್ ಆಗಬೇಕು. ಬಳಿಕ ಪೊಲೀಸ್ ಆಯುಕ್ತರಿಂದ ಪರಿಶೀಲನೆ ನಡೆಸಿ, ನಿರಾಕ್ಷೇಪಣಾ ವರದಿ ಪಡೆಯಬೇಕು. ಬಳಿಕ ಲೋಕಾರ್ಪಣೆಯ ದಿನಾಂಕ ಪ್ರಕಟಿಸಲಾಗುವುದು’ ಎಂದರು.

ಜೆಟಿಒ: ಪರಿಷ್ಕೃತ ಮೆರಿಟ್ ಪಟ್ಟಿ ಪ್ರಕಟಕ್ಕೆ ‘ಸುಪ್ರೀಂ’ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: 2021ರಲ್ಲಿ ಪ್ರಕಟಿಸಿದ್ದ ಕಿರಿಯ ತರಬೇತಿ ಅಧಿಕಾರಿಗಳ (ಜೆಟಿಒ) ಆಯ್ಕೆ ಪಟ್ಟಿ ಪರಿಷ್ಕರಿಸಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ನಿರ್ದೇಶನ ನೀಡಿದ್ದ ಹೈಕೋರ್ಟ್ ಆದೇಶಕ್ಕೆ ನೀಡಿದ್ದ ತಡೆಯಾಜ್ಞೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ತೆರವುಗೊಳಿಸಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಪ್ರಸನ್ನ ಬಿ.ವರಾಳೆ ಅವರ ಪೀಠವು ಪರಿಷ್ಕೃತ ಮೆರಿಟ್ ಪಟ್ಟಿಯನ್ನು ಪ್ರಕಟಿಸಲು ಮತ್ತು ಪರಿಷ್ಕೃತ ಮೆರಿಟ್ ಪಟ್ಟಿಯ ಪ್ರಕಾರ ನೇಮಕಾತಿಗಳನ್ನು ಮಾಡಲು ರಾಜ್ಯ ಸರ್ಕಾರ ಮತ್ತು ಕೆಪಿಎಸ್‌ಸಿಗೆ ಅನುಮತಿ ನೀಡಿದೆ. ರಾಜ್ಯದಲ್ಲಿ ಆಡಳಿತದ ಸುಗಮ ಕಾರ್ಯ ನಿರ್ವಹಣೆಗೆ ಅನುಕೂಲವಾಗುವಂತೆ ನೇಮಕಾತಿಗಳನ್ನು ಮುಂದುವರಿಸಲು ಅವಕಾಶ ನೀಡುವಂತೆ ರಾಜ್ಯ ಸರ್ಕಾರ ಮನವಿ ಮಾಡಿತ್ತು. ಎಲ್ಲ ನೇಮಕಾತಿಗಳು ರಿಟ್ ಅರ್ಜಿಗಳ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತವೆ ಎಂದು ಪೀಠ ಸ್ಪಷ್ಟಪಡಿಸಿದೆ.

ಚೇತನ್ ಬೋಗರ್ ಮತ್ತು ಹಿರಿಯ ವಕೀಲ ಸಂಜಯ್ ಎಂ.ನುಲಿ ಅವರ ನೇತೃತ್ವದಲ್ಲಿ 44 ಮಂದಿ 2024ರ ಮಾ.20 ಮತ್ತು ಜೂನ್ 21ರ ಹೈಕೋರ್ಟ್ ಆದೇಶದ ಸಿಂಧುತ್ವವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ಜುಲೈ 2ರಂದು ತಡೆ ನೀಡಿತ್ತು.

2018ರಲ್ಲಿ ಹೊರಡಿಸಲಾದ ನೇಮಕಾತಿ ಅಧಿಸೂಚನೆ ಅನ್ವಯ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಾಗಿತ್ತು. ಪ್ರಕ್ರಿಯೆಗಳು ಪೂರ್ಣಗೊಂಡ ನಂತರ 2021ರ ಜುಲೈ 23ರಂದು ಕೆಪಿಎಸ್‌ಸಿ 1,367 ಅಭ್ಯರ್ಥಿಗಳನ್ನು ಒಳಗೊಂಡ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿತ್ತು. 2021ರ ಜನವರಿ 20ರಿಂದ 2022ರ ಮೇ 25ರ ಒಳಗಾಗಿ 945 ಅಭ್ಯರ್ಥಿಗಳನ್ನು ಒಳಗೊಂಡ ಅಂತಿಮ ಪಟ್ಟಿ ಬಿಡುಗಡೆ ಮಾಡಿತ್ತು. 2022ರ ಸೆಪ್ಟೆಂಬರ್ 9ರಿಂದ 2022ರ ನವೆಂಬರ್ 17ರವರೆಗೆ 399 ಮಂದಿಗೆ ನೇಮಕಾತಿ ಪತ್ರ ನೀಡಲಾಗಿದೆ. ಇನ್ನೂ 546 ಮಂದಿ ನೇಮಕಾತಿ ಪತ್ರಕ್ಕೆ ಕಾಯುತ್ತಿದ್ದಾರೆ.



ರೈತರ ಪ್ರತಿಭಟನೆ...

ತೊಗರಿ ಬೆಳೆ ಕ್ವಿಂಟಲ್‌ಗೆ ₹ 12 ಸಾವಿರ ಇದ್ದ ದರವು ₹7,550ಕ್ಕೆ ಕುಸಿದಿದ್ದನ್ನು ಖಂಡಿಸಿ ಅಖಂಡ ಕರ್ನಾಟಕ ರೈತ ಸಂಘ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆಯ ಪದಾಧಿಕಾರಿಗಳು ಹಾಗೂ ರೈತರು ವಿಜಯಪುರ ಜಿಲ್ಲಾಧಿಕಾರಿ ಕಚೇರಿ ಎದುರು ಸೋಮವಾರ ತೊಗರಿಯನ್ನು ನೆಲಕ್ಕೆ ಸುರಿದು ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಆರು ನಕ್ಸಲರು ಮುಖ್ಯವಾಹಿನಿಗೆ ನಾಳೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಆರು ನಕ್ಸಲರು ಮುಖ್ಯವಾಹಿನಿಗೆ ಬರುವ ದಿನಾಂಕ ಬಹುತೇಕ ಅಂತಿಮವಾಗಿದ್ದು, ಬುಧವಾರ ಈ ಪ್ರಕ್ರಿಯೆಗಳು ನಡೆಯುವ ಸಾಧ್ಯತೆ ಇದೆ.

ಮುಂಡಗಾರು ಲತಾ, ಸುಂದರಿ ಕುತ್ಲೂರು, ವನಜಾಕ್ಷಿ ಬಾಳೆಹೊಳೆ, ಮಾರೆಪ್ಪ ಅರೋಲಿ, ಕೆ.ವಸಂತ, ಟಿ.ಎನ್.ಜೀಶ್ ಮುಖ್ಯವಾಹಿನಿಗೆ ಬರಲು ಒಪ್ಪಿದ್ದು, ಸರ್ಕಾರ ಕೂಡ ಸಮ್ಮತಿ ಸೂಚಿಸಿದೆ. ಬೇಕಿರುವ ತಯಾರಿಗಳನ್ನು ಪೊಲೀಸ್ ಇಲಾಖೆ ಮಾಡಿಕೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಗುಪ್ತಚರ ಇಲಾಖೆ ಅಧಿಕಾರಿಗಳ ಜತೆ ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಸಮಿತಿ, ಶಾಂತಿಗಾಗಿ ನಾಗರಿಕ ವೇದಿಕೆ ಸದಸ್ಯರು ಮೇಲಿಂದ ಮೇಲೆ ನಡೆಸಿರುವ ಸಭೆಯಲ್ಲಿ ಪೂರ್ವ ತಯಾರಿಗಳು ಅಂತಿಮಗೊಂಡಿವೆ. ಚಿಕ್ಕಮಗಳೂರಿನ ಜಿಲ್ಲಾಧಿಕಾರಿ ಕಚೇರಿಗೆ ಆರು ಜನ ಬರಲಿದ್ದು, ಅಲ್ಲಿ ಎಲ್ಲಾ ಪ್ರಕ್ರಿಯೆಗಳು ನಡೆಯಲಿವೆ ಎಂದು ಮೂಲಗಳು ಖಚಿತಪಡಿಸಿವೆ.

ಈ ತಂಡದಿಂದ ಬೇರ್ಪಟ್ಟಿರುವ ಜಾನ್ ಅಲಿಯಾಸ್ ಜಯಣ್ಣ ಮಾತ್ರ ಸಂಪರ್ಕಕ್ಕೆ ಸಿಕ್ಕಿಲ್ಲ ಎನ್ನಲಾಗಿದೆ. ಅವರೂ ಮುಖ್ಯವಾಹಿನಿಗೆ ಬಂದರೆ ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳು ನಕ್ಸಲ್ ಮುಕ್ತವಾಗಲಿವೆ ಎನ್ನಲಾಗಿದೆ.

ಸಿ.ಎಂ. ಕರೆ: ರಾಜ್ಯದ ನಕ್ಸಲರು ಶಸ್ತ್ರಾಸ್ತ್ರ ತೊರೆದು ಮುಖ್ಯವಾಹಿನಿಗೆ ಬರಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾರದ ಹಿಂದೆ (ಡಿ.30) ಕರೆ ಕೊಟ್ಟಿದ್ದರು. ನಕ್ಸಲರು ಮುಖ್ಯವಾಹಿನಿಗೆ ಬರಲು ಮಾತುಕತೆಗೆ ಮುಂದಾದರೆ ಕಾನೂನಿನ ಚೌಕಟ್ಟಿನಲ್ಲಿ ಸ್ವಾಗತಿಸಲಾಗುವುದು. ಸಹಾನುಭೂತಿಯಿಂದ ನಡೆಸಿಕೊಳ್ಳಲಾಗುವುದು. ಸರ್ಕಾರ ಈಗಾಗಲೇ ರೂಪಿಸಿರುವ ನೀತಿಯನ್ನು ಇನ್ನಷ್ಟು ಸರಳಗೊಳಿಸಿ ಜಾರಿ ಮಾಡಲಾಗುವುದು ಎಂದು ತಿಳಿಸಿದ್ದರು.

ಸಿಂಘಾನಿಯಾ ಕುಟುಂಬದ ಅರ್ಜಿ ವಿಚಾರಣೆ ನಡೆಸಿದ ಪೀಠ

‘ಅತುಲ್ ಆತ್ಮಹತ್ಯೆ: ಆರೋಪ ಸಮರ್ಥನೀಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ನೆಲಸಿದ್ದ ಉತ್ತರ ಪ್ರದೇಶದ ಟೆಕಿ ಅತುಲ್ ಸುಭಾಷ್ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ದಾಖಲಿಸಲಾಗಿರುವ ದೂರು ಸಮರ್ಥನೀಯವಾಗಿಯೇ ಇದೆ’ ಎಂದು ಹೈಕೋರ್ಟ್ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿದೆ.

‘ನಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು’ ಎಂದು ಕೋರಿ ಆರೋಪಿಗಳಾದ ನಿಖಿತಾ ಸಿಂಘಾನಿಯಾ, ನಿಶಾ ಸಿಂಘಾನಿಯಾ, ಅನುರಾಗ್ ಸಿಂಘಾನಿಯಾ ಮತ್ತು ಸುಶೀಲ್ ಕುಮಾರ್ ಸಿಂಘಾನಿಯಾ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಅರ್ಜಿದಾರರ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ಪ್ರಕರಣ ದಾಖಲಿಸಲು ಯಾವುದೇ ಅಂಶಗಳಿಲ್ಲ. ಆರೋಪಿಗಳ ಬಂಧನಕ್ಕೆ ಪೊಲೀಸರು ಸೂಕ್ತ ಆಧಾರಗಳನ್ನು ನೀಡಿಲ್ಲ. ಈಗಾಗಲೇ ವಿಚಾರಣಾ ನ್ಯಾಯಾಲಯ ಪ್ರಕರಣದ ಮೂವರು ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿದೆ. ಹೀಗಾಗಿ, ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿದರು.



ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಎಫ್‌ಐಆರ್ ಓದಿದರೆ ಆತ್ಮಹತ್ಯೆಗೆ ಪ್ರಚೋದನೆ ನೀಡಿರುವ ಎಲ್ಲಾ ಅಂಶಗಳು ಸ್ಪಷ್ಟವಾಗಿ ಗೋಚರವಾಗುತ್ತವೆ. ನನ್ನ ಪ್ರಕಾರ ಎಫ್‌ಐಆರ್‌ನಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ಸಂಪೂರ್ಣ ವಿವರಗಳನ್ನು ವಿವರಿಸಲಾಗಿದೆ. ಎಫ್‌ಐಆರ್‌ನಲ್ಲಿ ಇದಕ್ಕಿಂತ ಇನ್ನೂ ಹೆಚ್ಚಿನದಾಗಿ ಏನು ತಾನೆ ಕೊಡಲಾಗುತ್ತದೆ’ ಎಂದು ಎಂದು ಅರ್ಜಿದಾರರ ಪರ ವಕೀಲರನ್ನು ಪ್ರಶ್ನಿಸಿತು.

ಅಂತೆಯೇ, ಪ್ರಾಸಿಕ್ಯೂಷನ್ ಪರ ವಕೀಲರನ್ನು, ‘ತನಿಖೆ ನಡೆಯುತ್ತಿದೆಯೇ? ಯಾವೆಲ್ಲಾ ದಾಖಲೆಗಳನ್ನು ಸಂಗ್ರಹಿಸಲಾಗಿದೆ? ಡೆತ್ ನೋಟ್, ಆತ್ಮಹತ್ಯೆ ವಿಡಿಯೊ ಸಂಗ್ರಹಿಸಲಾಗಿದೆಯೇ’ ಎಂದು ಪ್ರಶ್ನಿಸಿತು.

ಇದಕ್ಕೆ ಸರ್ಕಾರದ ಪರ ವಕೀಲರು, ‘ತನಿಖೆ ಪ್ರಗತಿಯಲ್ಲಿದೆ ಎಂದರು. ಇದಕ್ಕೆ ನ್ಯಾಯಪೀಠ, ‘ತನಿಖೆಯ ಸಂದರ್ಭದಲ್ಲಿ ಸಂಗ್ರಹಿಸಿರುವ ದಾಖಲೆಗಳನ್ನು ಮತ್ತು ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆಯನ್ನು ಸಲ್ಲಿಸಿ’ ಎಂದು ನಿರ್ದೇಶಿಸಿ, ವಿಚಾರಣೆಯನ್ನು ಎರಡು ವಾರ ಮುಂದೂಡಿತು.

ಪ್ರಕರಣವೇನು?: ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದ 34 ವರ್ಷದ ಅತುಲ್ 2024ರ ಡಿಸೆಂಬರ್‌ನಲ್ಲಿ ಸುದೀರ್ಘವಾದ ಮರಣ ಪತ್ರ ಹಾಗೂ ವಿಡಿಯೊ ದಾಖಲಿಸಿ, ‘ಪತ್ನಿ ನಿಖಿತಾ ಮತ್ತು ಆಕೆಯ ಕುಟುಂಬಸ್ಥರು ನನ್ನ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಿ ಕಿರುಕುಳ ನೀಡುತ್ತಿದ್ದಾರೆ’ ಎಂದು ಆರೋಪಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ಈ ಸಂಬಂಧ ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 108 ಮತ್ತು 3 (5)ರ ಅಡಿಯಲ್ಲಿ ಮಾರತ್‌ಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಅಂತೆಯೇ, ನಗರದ 29ನೇ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಈ ಪ್ರಕರಣ ನ್ಯಾಯಿಕ ವಿಚಾರಣೆಗೆ ಗುರಿಯಾಗಿದೆ.

ಎಚ್‌ಎಂಪಿವಿ: ಭಯ ಬೇಡ

ಒಂದನೇ ಪುಟದಿಂದ...

ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಇದು ಅಪಾಯಕಾರಿ ವೈರಸ್ ಅಲ್ಲ. ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ. ರೋಗ ನಿರೋಧಕ ಶಕ್ತಿ ಕಡಿಮೆ ಇರುವವರು, ಮಕ್ಕಳು, ವೃದ್ಧರು ಮತ್ತು ನ್ಯುಮೋನಿಯಾದಿಂದ ಬಳಲುತ್ತಿರುವವರು ಹೆಚ್ಚು ಎಚ್ಚರಿಕೆ ವಹಿಸಬೇಕು’ ಎಂದು ವಿವರಿಸಿದರು.

ಕಠಿಣ ಕ್ರಮವಿಲ್ಲ: ‘ಇಲ್ಲಿಯವರೆಗೂ ದೇಶದ ಎಲ್ಲೂ ಗಂಭೀರ ಪ್ರಕರಣಗಳು ವರದಿಯಾಗಿಲ್ಲ. ಹೀಗಾಗಿ, ಪರೀಕ್ಷೆ, ಮಾಸ್ಕ್ ಧರಿಸುವುದು ಸೇರಿದಂತೆ ಯಾವುದೇ ಕಠಿಣ ಕ್ರಮವನ್ನು ಜಾರಿಗೊಳಿಸುವುದಿಲ್ಲ. ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರದಿಂದಲೂ ಸೂಚನೆಗಳು ಬಂದಿಲ್ಲ’ ಎಂದು ಸಚಿವ ದಿನೇಶ್ ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಸದ್ಯ, ರಾಜ್ಯದಲ್ಲಿ ಆಗುತ್ತಿರುವ ವಿದ್ಯಮಾನಗಳನ್ನು ಕೇಂದ್ರ ಸರ್ಕಾರಕ್ಕೆ ತಿಳಿಸುತ್ತಿದ್ದೇವೆ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಸೂಚನೆಗಳನ್ನು ಅನುಸರಿಸುತ್ತೇವೆ. ರಾಜ್ಯದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಲಾಗಿದೆ’ ಎಂದರು.

ಚೆನ್ನೈ, ಅಹಮದಾಬಾದ್‌ನಲ್ಲೂ ಪತ್ತೆ

ಒಂದನೇ ಪುಟದಿಂದ...

‘ಮಗುವನ್ನು ಪ್ರತ್ಯೇಕವಾಗಿರಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಆರಂಭದಲ್ಲಿ ವೆಂಟಿಲೇಟರ್‌ನಲ್ಲಿ ಇರಿಸಲಾಗಿದ್ದ ಮಗುವಿನ ಆರೋಗ್ಯ ಈಗ ಸ್ಥಿರವಾಗಿದೆ’ ಎಂದಿದ್ದಾರೆ.

ಚೆನ್ನೈನಲ್ಲಿ ಇಬ್ಬರು ಮಕ್ಕಳಲ್ಲಿ ಎಚ್‌ಎಂಪಿವಿ ಪತ್ತೆಯಾಗಿದ್ದು, ನಗರದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಎಚ್‌ಎಂಪಿವಿ ಪತ್ತೆ ಮತ್ತು ಅದರ ಹರಡುವಿಕೆಯನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಚರ್ಚಿಸಲು ರಾಜ್ಯ ಆರೋಗ್ಯ ಇಲಾಖೆಯ ಅಧಿಕಾರಿಗಳು ಸೋಮವಾರ ಸಭೆ ನಡೆಸಿದರು.



ಎಚ್‌ಎಂಪಿವಿ ಹರಡುವುದು ವ್ಯಾಪಕವಾಗುತ್ತಿದೆ ಎನ್ನುವ ವರದಿಗಳು ಬಂದ ಕಾರಣ ಪರಿಸ್ಥಿತಿಯ ಮೇಲೆ ತೀವ್ರ ನಿಗಾ ಇರಿಸಿರುವುದಾಗಿ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು (ಐಸಿಎಂಆರ್) ಹೇಳಿತ್ತು.

ವೈರಾಣು ಆತಂಕ ಬೇಡ: ಸಚಿವ ನಡ್ಡಾ

ನವದೆಹಲಿ (ಪಿಟಿಐ): ಎಚ್‌ಎಂಪಿವಿ ಹೊಸ ವೈರಾಣು ಅಲ್ಲ, ದೇಶದಲ್ಲಿ ಉಸಿರಾಟದ ಸಮಸ್ಯೆ ಸೃಷ್ಟಿಸುವ ರೋಗಕಾರಕಗಳ ಹರಡುವಿಕೆ ಏರಿಕೆ ಕಂಡಿಲ್ಲ ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಹೇಳಿದ್ದಾರೆ.



ಜೆ.ಪಿ.ನಡ್ಡಾ

ಎಚ್‌ಎಂಪಿವಿ ವಿಚಾರವಾಗಿ ಕೇಂದ್ರ ಸರ್ಕಾರವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದೆ, ಚಿಂತೆಗೆ ಒಳಗಾಗಬೇಕಾದ ಸ್ಥಿತಿ ಇಲ್ಲ ಎಂದು ಅವರು ತಿಳಿಸಿದ್ದಾರೆ.

ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್), ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರ (ಎನ್‌ಸಿಡಿಸಿ) ಚೀನಾ ಹಾಗೂ ಇತರ ನೆರೆಯ ದೇಶಗಳಲ್ಲಿನ ಪರಿಸ್ಥಿತಿ ಮೇಲೆ ಸೂಕ್ಷ್ಮ ನಿಗಾ ಇರಿಸಿವೆ ಎಂದು ಕೂಡ ವಿಡಿಯೊ ಸಂದೇಶದಲ್ಲಿ ನಡ್ಡಾ ಹೇಳಿದ್ದಾರೆ.

ತಮಿಳುನಾಡು: ರಾಷ್ಟ್ರಗೀತೆ, ಸಂವಿಧಾನಕ್ಕೆ ಅವಮಾನ ಆಗಿದೆ– ರವಿ • ರಾಜ್ಯಪಾಲರ ನಡೆ ಖಂಡಿಸಿದ ಡಿಎಂಕೆ

ಭಾಷಣ ಮಾಡದೆ ರಾಜ್ಯಪಾಲರ ನಿರ್ಗಮನ

ಚೆನ್ನೈ (ಪಿಟಿಐ): ತಮಿಳುನಾಡಿನ ರಾಜ್ಯಪಾಲ ಆರ್.ಎನ್. ರವಿ ಅವರು ವಿಧಾನಸಭೆಯಲ್ಲಿ ಭಾಷಣ ಮಾಡದೆ ನಿರ್ಗಮಿಸಿದ ಪ್ರಸಂಗ ಸೋಮವಾರ ನಡೆದಿದೆ.

ಪ್ರಸಕ್ತ ಸಾಲಿನ ವಿಧಾನಸಭೆ ಅಧಿವೇಶನದ ಮೊದಲ ದಿನ ರಾಜ್ಯಪಾಲರು ತಮ್ಮ ಸಾಂಪ್ರದಾಯಿಕ ಭಾಷಣ ಮಾಡಬೇಕಿತ್ತು. ಅದರೆ, ವಿಧಾನಸಭೆಯಲ್ಲಿ ಸಂವಿಧಾನ ಮತ್ತು ರಾಷ್ಟ್ರಗೀತೆಗೆ ಅಪಮಾನ ಮಾಡಲಾಗಿದೆ ಎಂದು ಆರೋಪಿಸಿ ಅವರು ಸದನದಿಂದ ಹೊರನಡೆದರು.

ಇದಕ್ಕೂ ಮುನ್ನ ಮುಖ್ಯ ವಿರೋಧ ಪಕ್ಷವಾದ ಎಐಎಡಿಎಂಕೆಯ ಶಾಸಕರು ಸ್ಪೀಕರ್ ಪೀಠದ ಮುಂದೆ ಬಂದು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಅಣ್ಣಾ ವಿಶ್ವವಿದ್ಯಾಲಯದ ವಿದ್ಯಾರ್ಥಿನಿ ಮೇಲಿನ ಲೈಂಗಿಕ ದೌರ್ಜನ್ಯವನ್ನು ವಿರೋಧಿಸಿ ಪ್ರತಿಭಟಿಸಿದರು. ಬಳಿಕ ಸ್ಪೀಕರ್ ಎಂ. ಅಪ್ಪಾವು ಅವರ ನಿರ್ದೇಶನದ ಮೇರೆಗೆ ಮಾರ್ಷಲ್‌ಗಳು ಎಐಎಡಿಎಂಕೆ ಸದಸ್ಯರನ್ನು ಸದನದಿಂದ ಹೊರಕ್ಕೆ ಕರೆದುಕೊಂಡು ಹೋದರು.

ಇದೇ ವೇಳೆ, ರಾಜ್ಯಪಾಲರ ವಿರುದ್ಧ ಕಾಂಗ್ರೆಸ್ ಶಾಸಕರು ಘೋಷಣೆಗಳನ್ನು ಕೂಗಿದರು ಮತ್ತು ಕಪ್ಪು ಪಟ್ಟಿ ಧರಿಸಿ ವಿರೋಧ ವ್ಯಕ್ತಪಡಿಸಿದರು. ಆಗ ಸದನದಲ್ಲಿ ಗದ್ದಲ ಉಂಟಾಯಿತು. ಅಣ್ಣಾ ವಿ.ವಿ ವಿದ್ಯಾರ್ಥಿನಿ ಮೇಲಿನ ಲೈಂಗಿಕ ದೌರ್ಜನ್ಯ ಖಂಡಿಸಿ ಬಿಜೆಪಿ ಮತ್ತು ಪಿಎಂಕೆ ಪಕ್ಷಗಳ ಶಾಸಕರು ಸಭಾತ್ಯಾಗ ನಡೆಸಿದರು.


ಅಣ್ಣಾ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿನಿ ಮೇಲಿನ ಲೈಂಗಿಕ ದೌರ್ಜನ್ಯ ಖಂಡಿಸಿ ಎಐಎಡಿಎಂಕೆ ನಾಯಕ ಎಡಪ್ಪಾಡಿ ಕೆ.ಪಳನಿಸ್ವಾಮಿ ನೇತೃತ್ವದಲ್ಲಿ ಪಕ್ಷದ ಶಾಸಕರು ತಮಿಳುನಾಡಿನ ವಿಧಾನಸಭೆಯಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು — ಪಿಟಿಐ ಚಿತ್ರ


ಆರ್.ಎನ್.ರವಿ

‘ಸಂವಿಧಾನ ಮತ್ತು ರಾಷ್ಟ್ರಗೀತೆಗೆ ತಮಿಳುನಾಡಿನ ವಿಧಾನಸಭೆಯಲ್ಲಿ ಇನ್ನೊಮ್ಮೆ ಅವಮಾನ ಆಗಿದೆ’ ಎಂದು ಆರೋಪಿಸಿ ರಾಜಭವನ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ.

‘ರಾಷ್ಟ್ರಗೀತೆಗೆ ಗೌರವ ಕೊಡಬೇಕು ಎಂಬುದು ನಮ್ಮ ಸಂವಿಧಾನದಲ್ಲಿ ಪ್ರಸ್ತಾಪಿಸಿರುವ ಮೊದಲ ಮೂಲಭೂತ ಕರ್ತವ್ಯ. ಎಲ್ಲ ರಾಜ್ಯಗಳ ಶಾಸನಸಭೆಗಳಲ್ಲಿ ರಾಜ್ಯಪಾಲರ ಭಾಷಣದ ಆರಂಭ ಮತ್ತು ಅಂತ್ಯದಲ್ಲಿ ರಾಷ್ಟ್ರಗೀತೆ ಹಾಡಲಾಗುತ್ತದೆ. ಆದರೆ, ತಮಿಳುನಾಡಿನ ವಿಧಾನಸಭೆಯಲ್ಲಿ ರಾಜ್ಯಪಾಲರು ಬಂದಾಗ ‘ತಮಿಳು ತಾಯಿ ವಾಜ್ತು’ (ರಾಜ್ಯಗೀತೆ) ಅನ್ನು ಮಾತ್ರ ಹಾಡಲಾಯಿತು’ ಎಂದು ರಾಜಭವನ ತಿಳಿಸಿದೆ.

> ವಿಧಾನಸಭೆಗಳಲ್ಲಿ ರಾಷ್ಟ್ರಗೀತೆ ಹಾಡುವ ಕುರಿತು ಸಂವಿಧಾನದಲ್ಲಿ ಏನನ್ನೂ ಹೇಳಲಾಗಿಲ್ಲ. ರಾಜ್ಯಗಳು ಈ ವಿಷಯದಲ್ಲಿ ಸ್ವತಂತ್ರವಾಗಿವೆ
>
> **ಪಿ.ಡಿ.ಟಿ.ಆಚಾರಿ,** ಮಾಜಿ ಪ್ರಧಾನ ಕಾರ್ಯದರ್ಶಿ, ಲೋಕಸಭೆ

‘ರಾಷ್ಟ್ರಗೀತೆ ಪ್ರಸ್ತುತ ಪಡಿಸುವ ಸಾಂವಿಧಾನಿಕ ಕರ್ತವ್ಯದ ಕುರಿತು ಮುಖ್ಯಮಂತ್ರಿ, ಸಭಾ ನಾಯಕರು ಮತ್ತು ಸ್ಪೀಕರ್ ಅವರಿಗೆ ರಾಜ್ಯಪಾಲರು ಗೌರವಯುತವಾಗಿ ಮನವಿ ಮಾಡಿದರು. ಆದರೆ ಅವರು ನಿರಾಕರಿಸಿದರು. ಇದರಿಂದ ತೀವ್ರ ಬೇಸರಗೊಂಡ ರಾಜ್ಯಪಾಲರು ಸದನದಿಂದ ನಿರ್ಗಮಿಸಿದರು’ ಎಂದು ಪೋಸ್ಟ್‌ನಲ್ಲಿ ವಿವರಿಸಲಾಗಿದೆ.

‘ರಾಜ್ಯಪಾಲರಿಂದ ಪುನರಾವರ್ತನೆ’: ‘ಕಳೆದ ವರ್ಷ ಸದನದಲ್ಲಿ ಭಾಷಣವನ್ನು ಪೂರ್ಣವಾಗಿ ಓದದ ರಾಜ್ಯಪಾಲರು ಈ ಬಾರಿಯೂ ಅದೇ ರೀತಿ ಪುನರಾವರ್ತನೆ ಮಾಡಿದ್ದಾರೆ’ ಎಂದು ಸದನದ ನಾಯಕ, ಹಿರಿಯ ಸಚಿವ ದುರೈಮುರುಗನ್ ಪ್ರತಿಕ್ರಿಯಿಸಿದರು.

‘ರಾಷ್ಟ್ರಗೀತೆಗೆ ಸಂಬಂಧಿಸಿದಂತೆ ರಾಜ್ಯಪಾಲರು ಸ್ಪೀಕರ್ ಅವರಿಗೆ ಕಳೆದ ವರ್ಷ ಪತ್ರ ಬರೆದಿದ್ದರು. ರಾಜ್ಯಪಾಲರ ಭಾಷಣಕ್ಕೂ ಮುನ್ನ ರಾಜ್ಯಗೀತೆ ಮತ್ತು ಭಾಷಣದ ಬಳಿಕ ರಾಷ್ಟ್ರಗೀತೆ ಹಾಡುವ ಪದ್ಧತಿಯನ್ನು ಅನುಸರಿಸಲಾಗುತ್ತಿದೆ ಎಂಬುದನ್ನು ಆಗಲೇ ಸ್ಪಷ್ಟಪಡಿಸಲಾಗಿತ್ತು’ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ‘ಇದು ಗೊತ್ತಿದ್ದರೂ ರಾಜ್ಯಪಾಲರು ಮತ್ತೊಮ್ಮೆ ಅದೇ ವಿಷಯವನ್ನು ಪ್ರಸ್ತಾಪಿಸಿ, ಭಾಷಣ ಮಾಡದೇ ಹೊರ ನಡೆದಿದ್ದಾರೆ. ಹಾಗಾದರೆ ಅವರ ನಿಜವಾದ ಉದ್ದೇಶ ಏನಾಗಿತ್ತು’ ಎಂದು ಪ್ರಶ್ನಿಸಿದರು.

ಬಾಲಿಶ ನಡೆ: ಮುಖ್ಯಮಂತ್ರಿ ಸ್ಟಾಲಿನ್ ಟೀಕೆ


ಎಂ.ಕೆ.ಸ್ಟಾಲಿನ್

ವಿಧಾನಸಭೆಯಲ್ಲಿ ತಮ್ಮ ಸಾಂಪ್ರದಾಯಿಕ ಭಾಷಣ ಮಾಡದೆ ರಾಜ್ಯಪಾಲ ಆರ್.ಎನ್. ರವಿ ಅವರು ನಿರ್ಗಮಿಸಿರುವುದು ಬಾಲಿಶವಾಗಿದೆ. ಅವರು ರಾಜ್ಯದ ಜನರು, ಸರ್ಕಾರ ಮತ್ತು ವಿಧಾನಸಭೆಯನ್ನು ನಿರಂತರವಾಗಿ ಹೀಗೆ ಅವಮಾನಿಸಿಕೊಂಡು ಬಂದಿದ್ದಾರೆ ಎಂದು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಆರೋಪಿಸಿದ್ದಾರೆ.

‘ಸಾಂವಿಧಾನಿಕ ಕರ್ತವ್ಯಗಳನ್ನು ನಿರ್ವಹಿಸಲು ಮನಸ್ಸಿಲ್ಲದ ರವಿ ಅವರು ಇನ್ನೂ ಏಕೆ ರಾಜ್ಯಪಾಲ ಹುದ್ದೆಗೆ ಅಂಟಿಕೊಂಡಿದ್ದಾರೆ’ ಎಂದು ಅವರು ‘ಎಕ್ಸ್’ನಲ್ಲಿ ಪ್ರಶ್ನೆ ಮಾಡಿದ್ದಾರೆ. ‘ರಾಜ್ಯಪಾಲರು ವಿಧಾನಸಭೆಯಲ್ಲಿ ಸರ್ಕಾರದ ಭಾಷಣವನ್ನು ಓದುವುದು ಪ್ರಜಾಸತ್ತಾತ್ಮಕ ಸಂಪ್ರದಾಯ. ಆದರೆ, ರವಿ ಅವರನ್ನು ಅದನ್ನು ಉಲ್ಲಂಘಿಸುವುದನ್ನು ಅಭ್ಯಾಸ ಮಾಡಿಕೊಂಡಿದ್ದಾರೆ’ ಎಂದು ಸ್ಟಾಲಿನ್ ಆರೋಪ ಮಾಡಿದ್ದಾರೆ.

ಪ್ರತಿಭಟನೆಗೆ ಕರೆ: ರಾಜ್ಯಪಾಲರ ನಡೆಯನ್ನು ಖಂಡಿಸಿ ಮಂಗಳವಾರ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲು ಡಿಎಂಕೆ ಕರೆ ನೀಡಿದೆ.

ರಾಜ್ಯಪಾಲರ ಭಾಷಣ ಓದಿದ ಸ್ಪೀಕರ್

ರಾಜ್ಯಪಾಲರು ಸದನದಿಂದ ನಿರ್ಗಮಿಸಿದ ಬಳಿಕ ಅವರ ಭಾಷಣದ ತಮಿಳು ಪ್ರತಿಯನ್ನು ಸ್ಪೀಕರ್ ಅಪ್ಪಾವು ಓದಿದರು. ‘ಹೀಗೆ ಮಾಡಿದರೆ ಅದು ಸ್ಪೀಕರ್ ಭಾಷಣವಾಗುತ್ತದೆಯೇ ಹೊರತು ರಾಜ್ಯಪಾಲರ ಭಾಷಣ ಆಗುವುದಿಲ್ಲ. ಈ ರೀತಿ ಆದದ್ದು ಇತಿಹಾಸದಲ್ಲಿಯೇ ಮೊದಲು’ ಎಂದು ಎಐಎಡಿಎಂಕೆ ನಾಯಕ ಎಡಪ್ಪಾಡಿ ಕೆ. ಪಳನಿಸ್ವಾಮಿ ಟೀಕಿಸಿದರು.

‘ನಾಗರಿಕ ಪರಮಾಣು ಸಹಕಾರ ವೃದ್ಧಿಗೆ ಕ್ರಮ’

ನವದೆಹಲಿ (ಪಿಟಿಐ): ಭಾರತ ಮತ್ತು ಅಮೆರಿಕದ ಪ್ರಮುಖ ಕಂಪನಿಗಳ ನಡುವೆ ನಾಗರಿಕ ಪರಮಾಣು ಸಹಕಾರವನ್ನು ದೀರ್ಘಕಾಲದಿಂದ ತಡೆಯುತ್ತಿದ್ದ ನಿಯಮಗಳನ್ನು ತೆರವುಗೊಳಿಸಲು ಅಮೆರಿಕ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ (ಎನ್‌ಎಸ್‌ಎ) ಜೇಕ್ ಸುಲ್ಲಿವಾನ್ ಸೋಮವಾರ ಹೇಳಿದರು.

ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಮತ್ತು ಭಾರತದ ಎನ್‌ಎಸ್‌ಎ ಅಜಿತ್ ಡೋಭಾಲ್ ಅವರ ಜತೆ ಪ್ರತ್ಯೇಕ ಮಾತುಕತೆ ನಡೆಸಿದ ಬಳಿಕ ಅವರು ಈ ಮಹತ್ವದ ಘೋಷಣೆ ಮಾಡಿದರು.

ಭಾರತ– ಅಮೆರಿಕ ನಡುವೆ ನಾಗರಿಕ ಪರಮಾಣು ಕ್ಷೇತ್ರದಲ್ಲಿ ಸಹಕರಿಸುವ ಕುರಿತ ಮಹತ್ವಾಕಾಂಕ್ಷಿ ಯೋಜನೆ ಕುರಿತು 2005ರಲ್ಲಿ ಆಗಿನ ಪ್ರಧಾನಿ ಮನಮೋಹನ ಸಿಂಗ್ ಮತ್ತು ಅಮೆರಿಕದ ಆಗಿನ ಅಧ್ಯಕ್ಷ ಜಾರ್ಜ್ ಡಬ್ಲ್ಯು ಬುಷ್ ಅವರ ಜತೆ ಚರ್ಚೆಯಾಗಿತ್ತು. ಬಳಿಕ ಉಭಯ ದೇಶಗಳ ನಡುವೆ ನಾಗರಿಕ ಪರಮಾಣು ಒಪ್ಪಂದಕ್ಕೆ 2008ರಲ್ಲಿ ಅಂತಿಮ ಮುದ್ರೆ ಬಿದ್ದಿತ್ತು.

ಆದರೆ ಇಲ್ಲಿಯವರೆಗೂ ನಾಗರಿಕ ಪರಮಾಣು ಕ್ಷೇತ್ರದಲ್ಲಿ ಮಹತ್ವದ ಪ್ರಗತಿ ಕಂಡು ಬಂದಿಲ್ಲ. ಈ ಪಾಲುದಾರಿಕೆಯನ್ನು ಗಟ್ಟಿಗೊಳಿಸಲು ಬೈಡನ್ ನೇತೃತ್ವದ ಆಡಳಿತ ನಿರ್ಧರಿಸಿದೆ. ಈ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಅಂತಿಮಗೊಳಿಸಲಾಗುತ್ತಿದ್ದು, ಶೀಘ್ರದಲ್ಲಿಯೇ ಔಪಚಾರಿಕ ದಾಖಲೆಗಳು ಲಭ್ಯವಾಗಲಿವೆ ಎಂದು ಅವರು ತಿಳಿಸಿದರು.


ಜೇಕ್ ಸುಲ್ಲಿವಾನ್ ಅವರು ಸೋಮವಾರ ಎಸ್.ಜೈಶಂಕರ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು — ಪಿಟಿಐ ಚಿತ್ರ

ಇದರಿಂದ ಉಭಯ ದೇಶಗಳ ನಡುವಿನ ಕಾರ್ಯತಂತ್ರದ ಪಾಲುದಾರಿಕೆ ಮತ್ತು ಶಾಂತಿಯುತ ಪರಮಾಣ ಸಹಕಾರ ವಿಶ್ವಾಸದೊಂದಿಗೆ ಮುಂದುವರಿಯಲಿದೆ. ಇದು ಎರಡೂ ದೇಶಗಳ ಪ್ರಗತಿಗೆ ಸಹಕಾರಿಯಾಗಲಿದೆ ಎಂದರು.

ಬಾಹ್ಯಾಕಾಶ ಕ್ಷೇತ್ರದ ಕಡತಕ್ಕೂ ಸಹಿ

ಎರಡೂ ದೇಶಗಳ ನಡುವಿನ ವಾಣಿಜ್ಯ ಮತ್ತು ನಾಗರಿಕ ಬಾಹ್ಯಾಕಾಶ ಪಾಲುದಾರಿಕೆಯ ಮಹತ್ವದ ಕಡತಗಳಿಗೂ ಬೈಡನ್ ಅವರು ಸಹಿ ಹಾಕಲಿದ್ದಾರೆ ಎಂದು ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಸುಲ್ಲಿವಾನ್ ಮಾಹಿತಿ ನೀಡಿದರು. ಇದು ಕ್ಷಿಪಣಿ ತಂತ್ರಜ್ಞಾನ ಕ್ಷೇತ್ರದಲ್ಲಿ ಸಹಕಾರವನ್ನು ವೃದ್ಧಿಸಲು ನೆರವಾಗಲಿದೆ ಎಂದು ಹೇಳಿದರು.

ಚಿಪ್ ತಯಾರಿಕೆ, ಶುದ್ಧ ಇಂಧನ ಮತ್ತು ಇತರ ಅತ್ಯಾಧುನಿಕ ತಂತ್ರಜ್ಞಾನ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಚೀನಾದ ‘ಪರಭಕ್ಷಕ ಕೈಗಾರಿಕಾ ತಂತ್ರ’ಗಳನ್ನು ಸುಲ್ಲಿವಾನ್ ಇದೇ ವೇಳೆ ಟೀಕಿಸಿದರು. ಈ ಕಾರಣದಿಂದಲೇ ಅಮೆರಿಕದ ಹಲವು ಕಂಪನಿಗಳು ಚಿನಾದಿಂದ ಹೊರಬಂದಿದ್ದು, ಭಾರತದಲ್ಲಿ ತನ್ನ ಚಟುವಟಿಕೆ ವಿಸ್ತರಿಸುತ್ತಿವೆ ಎಂದರು.

ಇದಕ್ಕೆ, ಭಾರತದಲ್ಲಿ ‘ಆಪಲ್’ ಕಂಪನಿಯ ಹೂಡಿಕೆಯೇ ಸ್ಪಷ್ಟ ನಿದರ್ಶನ. ಕೆಲ ವರ್ಷಗಳಲ್ಲಿ ವಿಶ್ವದ ಎಲ್ಲ ಐಫೋನ್‌ಗಳಲ್ಲಿ 1/4ಕ್ಕಿಂತಲೂ ಹೆಚ್ಚು ಭಾಗ ಭಾರತದಲ್ಲಿಯೇ ತಯಾರಾಗುತ್ತದೆ ಎಂದು ವಿವರಿಸಿದರು.

ಮತದಾರರ ಪಟ್ಟಿಗೆ ಸೇರ್ಪಡೆ: ಏಕಾಏಕಿ ಹೆಚ್ಚಳ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿಯಲ್ಲಿ ಮತದಾರರ ಪಟ್ಟಿಗೆ ಹೊಸದಾಗಿ ಹೆಸರು ಸೇರ್ಪಡೆಗೊಳಿಸುವವರ ಸಂಖ್ಯೆ ಏಕಾಏಕಿ ಏರಿಕೆಯಾಗಿದ್ದು, ಎಎಪಿ ಸರ್ಕಾರದ ‘ಮಹಿಳಾ ಸಮ್ಮಾನ್ ಯೋಜನೆ’ ಇದಕ್ಕೆ ಕಾರಣ ಎಂದು ಮೂಲಗಳು ತಿಳಿಸಿವೆ.

ಪಕ್ಷವು ಮತ್ತೆ ಅಧಿಕಾರಕ್ಕೇರಿದರೆ ದೆಹಲಿಯ ನೋಂದಾಯಿತ ಮಹಿಳಾ ಮತದಾರರಿಗೆ ಮಾಸಿಕ ₹2,100 ನೆರವು ನೀಡುವುದಾಗಿ ಎಎಪಿ ಘೋಷಿಸಿದೆ. ದೆಹಲಿ ವಿಧಾನಸಭೆಗೆ ಮುಂದಿನ ತಿಂಗಳು ಚುನಾವಣೆ ನಡೆಯಲಿದೆ.

ಮತದಾರರ ಪಟ್ಟಿ ಪರಿಷ್ಕರಣೆ ಅಭಿಯಾನದ ಅವಧಿಯಲ್ಲಿ 3 ಲಕ್ಷಕ್ಕೂ ಹೆಚ್ಚು ಮತದಾರರನ್ನು ಮತದಾರರ ಪಟ್ಟಿಗೆ ಸೇರಿಸಲಾಗಿದೆ. ಹೊಸ ಮತದಾರರ ನೋಂದಣಿಗೆ ಡಿಸೆಂಬರ್ 16, 2024ರಿಂದ ಜನವರಿ 6, 2025ರವರೆಗೆ 5.1 ಲಕ್ಷ ಅರ್ಜಿಗಳನ್ನು ಸ್ವೀಕರಿಸಲಾಗಿದೆ ಎಂದು ದೆಹಲಿ ಮುಖ್ಯ ಚುನಾವಣಾ ಅಧಿಕಾರಿ (ಸಿಇಒ) ತಿಳಿಸಿದ್ದಾರೆ.

ಆಯೋಗದ ಮಾರ್ಗಸೂಚಿಗಳಿಗೆ ಅನುಸಾರವಾಗಿ ಪ್ರತಿಯೊಂದು ಅರ್ಜಿಯನ್ನೂ ಕೂಲಂಕಷವಾಗಿ ಪರಿಶೀಲಿಸುವಂತೆ ದೆಹಲಿ ಸಿಇಒ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಬಿಧೂಡಿ ಹೇಳಿಕೆ: ಕಣ್ಣೀರಿಟ್ಟ ಸಿ.ಎಂ ಆತಿಶಿ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಬಿಜೆಪಿ ಮುಖಂಡ ರಮೇಶ್ ಬಿಧೂಡಿ ಅವರು ತಮ್ಮ ವಿರುದ್ಧ ನೀಡಿದ ಹೇಳಿಕೆಗೆ ಸಂಬಂಧಿಸಿದಂತೆ ಸೋಮವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುವಾಗ ದೆಹಲಿ ಮುಖ್ಯಮಂತ್ರಿ ಆತಿಶಿ ಅವರು ಕಣ್ಣೀರಿಟ್ಟರು.

ಕಾಲ್ಕಾಜಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರಮೇಶ್ ಬಿಧೂಡಿ ಅವರು, ದೆಹಲಿ ಮುಖ್ಯಮಂತ್ರಿ ಆತಿಶಿ ತಮ್ಮ ‘ತಂದೆಯನ್ನೇ ಬದಲಾಯಿಸಿದ್ದಾರೆ’ ಎಂದು ಹೇಳಿಕೆ ನೀಡಿದ್ದರು.

ಬಿಧೂಡಿ ಹೇಳಿಕೆಗೆ ಪ್ರತಿಕ್ರಿಯಿಸಿದ ಆತಿಶಿ, ‘ಶಿಕ್ಷಕರಾಗಿದ್ದ ನನ್ನ ತಂದೆ ವೃತ್ತಿಜೀವನದುದ್ದಕ್ಕೂ ಬಡ ಮತ್ತು ಕೆಳ ಮಧ್ಯಮ ವರ್ಗದ ಕುಟುಂಬಗಳ ಹೆಚ್ಚಿನ ಸಂಖ್ಯೆಯ ಮಕ್ಕಳಿಗೆ ಕಲಿಸಿದ್ದಾರೆ. ಈಗ ಅವರಿಗೆ 80 ವರ್ಷವಾಗಿದ್ದು, ಇನ್ನೊಬ್ಬರ ನೆರವಿಲ್ಲದೆ ಅತ್ತಿತ್ತ ಓಡಾಡಲು ಸಾಧ್ಯವಿಲ್ಲ. ಈಗ ಚುನಾವಣೆ ಸಮಯದಲ್ಲಿ ಮತಗಳಿಕೆಗಾಗಿ ನೀವು ಇಷ್ಟೊಂದು ಕೀಳುಮಟ್ಟಕ್ಕೆ ಇಳಿಯುತ್ತೀರಾ? ವಯಸ್ಸಾದ ವ್ಯಕ್ತಿಯನ್ನು ಈ ರೀತಿ ನಿಂದಿಸುತ್ತೀರಾ?’ ಎನ್ನುತ್ತಾ ಕಣ್ಣೀರಿಟ್ಟರು.

‘ರಾಜಕೀಯವು ಈ ಮಟ್ಟಕ್ಕೆ ಇಳಿಯುತ್ತದೆ ಎಂದು ನಾನು ಎಂದಿಗೂ ಯೋಚಿಸಿರಲಿಲ್ಲ. ಬಿಧೂಡಿ ಅವರು ದಕ್ಷಿಣ ದೆಹಲಿ ಕ್ಷೇತ್ರದಿಂದ 10 ವರ್ಷ ಸಂಸದರಾಗಿದ್ದರು. ನನ್ನ ತಂದೆಯನ್ನು ನಿಂದಿಸಿ ಮತ ಕೇಳುವ ಬದಲು, ಕಾಲ್ಕಾಜಿಯ (ದಕ್ಷಿಣ ದೆಹಲಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುತ್ತದೆ) ಅಭಿವೃದ್ಧಿಗೆ ಏನು ಮಾಡಿದ್ದಾರೆ ಎಂಬುದನ್ನು ಅವರು ಜನರಿಗೆ ತಿಳಿಸಬೇಕು’ ಎಂದು ಹೇಳಿದರು.


ಕಣ್ಣೀರಿಟ್ಟ ಆತಿಶಿ — ಪಿಟಿಐ ಚಿತ್ರ

ಕೇಜ್ರಿವಾಲ್ ‘ಅಕ್ರಮ’ ಬಯಲು -ಬಿಜೆಪಿ: ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಈ ಹಿಂದೆ ವಾಸವಿದ್ದ ಅಧಿಕೃತ ನಿವಾಸ ‘ಶೀಶ್ ಮಹಲ್’ಗೆ ಸಂಬಂಧಿಸಿ ಸಿಎಜಿ ವರದಿಯು 139 ಪ್ರಶ್ನೆಗಳನ್ನು ಎತ್ತಿದೆ ಮತ್ತು ಅವರ ‘ಅಕ್ರಮ’ಗಳನ್ನು ಬಯಲುಗೊಳಿಸಿದೆ ಎಂದು ಬಿಜೆಪಿ ಹೇಳಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ದೆಹಲಿ ಘಟಕದ ಅಧ್ಯಕ್ಷ ವೀರೇಂದ್ರ ಸಚ್‌ದೇವ್, ‘ಶೀಶ್ ಮಹಲ್ ನವೀಕರಣದ ಹೆಸರಿನಲ್ಲಿ ಭಾರಿ ಅವ್ಯವಹಾರ ನಡೆದಿದೆ. 2022ರವರೆಗೆ ನಿವಾಸಕ್ಕಾಗಿ ₹33.86 ಕೋಟಿ ವೆಚ್ಚ ಮಾಡಲಾಗಿದೆ ಎಂದು ಸಿಎಜಿ ವರದಿ ಹೇಳಿದೆ. 2023 ಮತ್ತು 2024ರಲ್ಲಿ ಮಾಡಿರುವ ವೆಚ್ಚ ಇನ್ನೂ ಬಹಿರಂಗವಾಗಿಲ್ಲ. ನಮಗೆ ಲಭಿಸಿದ ಮಾಹಿತಿ ಪ್ರಕಾರ ಪೀಠೋಪಕರಣ ಸೇರಿದಂತೆ ಎಲ್ಲ ವಸ್ತುಗಳನ್ನೂ ಲೆಕ್ಕ ಹಾಕಿದರೆ ಶೀಶ್ ಮಹಲ್‌ಗೆ ₹ 75 ಕೋಟಿಯಿಂದ ₹80 ಕೋಟಿ ವೆಚ್ಚ ಮಾಡಲಾಗಿದೆ’ ಎಂದು ಆರೋಪಿಸಿದರು.

ಮಹಿಳೆಯರಿಗೆ ₹2,500: ‘ಕೈ’ ಗ್ಯಾರಂಟಿ

ನವದೆಹಲಿ: ದೆಹಲಿಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಕರ್ನಾಟಕದ ‘ಗೃಹಲಕ್ಷ್ಮಿ’ ಮಾದರಿಯಲ್ಲಿ ‘ಪ್ಯಾರಿ ದೀದಿ ಯೋಜನೆ’ ಮೂಲಕ ದೆಹಲಿ ಮಹಿಳೆಯರಿಗೆ ಪ್ರತಿ ತಿಂಗಳು ₹2500 ನೀಡುವ ಗ್ಯಾರಂಟಿ ಭರವಸೆಯನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೋಮವಾರ ಪ್ರಕಟಿಸಿದರು.

ದೆಹಲಿ ಪ್ರದೇಶ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಸೋಮವಾರ ನಡೆದ ಮಾಧ್ಯಮಗೋಷ್ಠಿಯಲ್ಲಿ ಶಿವಕುಮಾರ್ ಅವರು ದೆಹಲಿ ಕಾಂಗ್ರೆಸ್‌ನ ಚುನಾವಣೆ ಪ್ರಣಾಳಿಕೆಯ ಭಾಗವಾಗಿ ಮೊದಲ ಗ್ಯಾರಂಟಿ ಭರವಸೆಯನ್ನು ಪ್ರಕಟಿಸಿದರು.

ಇದೇ ವೇಳೆ ಕರ್ನಾಟಕ ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳಿಂದ ಫಲಾನುಭವಿಗಳ ಕುಟುಂಬಗಳಲ್ಲಿ ಆಗಿರುವ ಬದಲಾವಣೆ ಹಾಗೂ ನೆರವಿನ ಕುರಿತ ವಿಡಿಯೊಗಳನ್ನು ಪ್ರಸಾರ ಮಾಡಲಾಯಿತು.



ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಕಾಂಗ್ರೆಸ್ ದೆಹಲಿ ಘಟಕದ ಅಧ್ಯಕ್ಷ ದೇವೇಂದ್ರ ಯಾದವ್ ಅವರು ‘ಪ್ಯಾರಿ ದೀದಿ ಯೋಜನೆ’ಯನ್ನು ಪ್ರಕಟಿಸಿದರು — ಪಿಟಿಐ ಚಿತ್ರ

‘ನಾವು ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದಾಗ ಪ್ರಧಾನಿ ಮೋದಿ ಅವರು ಕರ್ನಾಟಕ ಸರ್ಕಾರ ದಿವಾಳಿಯಾಗಲಿದೆ ಎಂದು ಲೇವಡಿ ಮಾಡಿದ್ದರು. ಮಹಾರಾಷ್ಟ್ರದಲ್ಲೂ ನಮ್ಮ ಯೋಜನೆ ವಿರುದ್ಧ ಅಪಪ್ರಚಾರ ಮಾಡಿದ್ದರು. ನಂತರ ಎಲ್ಲ ರಾಜ್ಯಗಳ ಚುನಾವಣೆಯಲ್ಲೂ ಅವರೇ ನಮ್ಮ ಗ್ಯಾರಂಟಿ ಯೋಜನೆಗಳನ್ನು ನಕಲು ಮಾಡಿ ಘೋಷಣೆ ಮಾಡಿದ್ದಾರೆ’ ಎಂದರು.

ಇನ್ನೂ ನಾಲ್ಕು ಗ್ಯಾರಂಟಿ?: ಪಕ್ಷವು ಇನ್ನೂ ನಾಲ್ಕು ಗ್ಯಾರಂಟಿಗಳನ್ನು ಘೋಷಿಸಲು ಯೋಜಿಸಿದೆ. ನಗರದ ಎಲ್ಲ ನಿವಾಸಿಗಳಿಗೆ ತಲಾ ₹20-25 ಲಕ್ಷ ಆರೋಗ್ಯ ವಿಮಾ ರಕ್ಷಣೆ, 400 ಯುನಿಟ್‌ಗಳ ಉಚಿತ ವಿದ್ಯುತ್, ನಿರುದ್ಯೋಗಿ ಯುವಕರಿಗೆ ಅಪ್ರೆಂಟಿಸ್‌ಶಿಪ್ ತರಬೇತಿ ಕಾರ್ಯಕ್ರಮ, ಅಗತ್ಯ ವಸ್ತುಗಳ ಪಡಿತರ ಕಿಟ್‌ಗಳು– ಈ ಗ್ಯಾರಂಟಿಗಳಾಗಿರಲಿವೆ. ಆರೋಗ್ಯ ವಿಮಾ ಯೋಜನೆಯ ಗ್ಯಾರಂಟಿಯನ್ನು ಬುಧವಾರ ಪ್ರಕಟಿಸುವ ಸಂಭವ ಇದೆ.

ಸಂಕ್ಷಿಪ್ತ ಸುದ್ದಿ

ಕಾರಿನಲ್ಲೇ ಲಿಖಿತ ಉತ್ತರ ನೀಡಿದ ಕೆಟಿಆರ್

ಹೈದರಾಬಾದ್ (ಪಿಟಿಐ): ‘ಫಾರ್ಮುಲಾ ಇ’ ರೇಸ್ ಪ್ರಕರಣ ಸಂಬಂಧ ತನಿಖೆಗೆ ಹಾಜರಾಗುವುದಕ್ಕೆ ತಮ್ಮ ವಕೀಲರೊಂದಿಗೆ ಬಂದಿದ್ದ ಬಿಆರ್‌ಎಸ್‌ನ ಕಾರ್ಯಾಧ್ಯಕ್ಷ ಕೆ.ಟಿ. ರಾಮ್ ರಾವ್ ಅವರನ್ನು ಭ್ರಷ್ಟಾಚಾರ ತಡೆ ಘಟಕದ ಕಚೇರಿಯೊಳಗೆ ಹೋಗುವುದಕ್ಕೆ ಪೊಲೀಸರು ತಡೆವೊಡ್ಡಿದ ನಾಟಕೀಯ ಬೆಳವಣಿಗೆ ಸೋಮವಾರ ನಡೆಯಿತು.

ವಕೀಲರನ್ನು ಕಚೇರಿಯೊಳಗೆ ಬಿಟ್ಟುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡದ ಕಾರಣ ಕೆಟಿಆರ್ ಅವರು ಕಚೇರಿಯ ಆವರಣದಲ್ಲಿ ಕಾರಿನಲ್ಲಿಯೇ ಕೂತು ತಮ್ಮ ಲಿಖಿತ ಹೇಳಿಕೆಯನ್ನು ಅಧಿಕಾರಿಗಳಿಗೆ ನೀಡಿದರು.

ಅಸ್ಸಾಂ: ಗಣಿಯಲ್ಲಿ ನೀರು; ಕಾರ್ಮಿಕರು ಅತಂತ್ರ

ಗುವಾಹಟಿ (ಪಿಟಿಐ): ಅಸ್ಸಾಂನ ದಿಮಾ ಹಸಾವೊ ಜಿಲ್ಲೆಯ ಕಲ್ಲಿದ್ದಲು ಗಣಿಯೊಳಗೆ ಸೋಮವಾರ ದಿಢೀರ್ ನೀರು ಚಿಮ್ಮಿದ ಪರಿಣಾಮ ಪ್ರವಾಹ ಸ್ಥಿತಿ ನಿರ್ಮಾಣವಾಗಿದೆ. ಗಣಿಯೊಳಗೆ 15 ಕಾರ್ಮಿಕರು ಸಿಲುಕಿರುವ ಸಾಧ್ಯತೆ ಇದೆ.

ಈ ಸಂಖ್ಯೆಯನ್ನು ಅಧಿಕಾರಿಗಳು ದೃಢಪಡಿಸಿಲ್ಲ. ‘ರಕ್ಷಣಾ ಕಾರ್ಯಾಚರಣೆಗಾಗಿ ಸೇನೆಯ ನೆರವು ಕೇಳಲಾಗಿದೆ. ರಾಜ್ಯ ಮತ್ತು ರಾಷ್ಟ್ರೀಯ ವಿಪತ್ತು ನಿರ್ವಹಣೆ ಪಡೆಗಳು ಘಟನಾ ಸ್ಥಳದತ್ತ ಧಾವಿಸುತ್ತಿವೆ’ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹೇಳಿದ್ದಾರೆ.

ಅನಿರೀಕ್ಷಿತವಾಗಿ ಏಕಾಏಕಿ ಪ್ರವಾಹ ಸ್ಥಿತಿ ನಿರ್ಮಾಣವಾಯಿತು, ಕಾರ್ಮಿಕರು ಹೊರಬರದಂತೆ ಆಯಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

ನಕಲಿ ವಾರಂಟ್ ನೀಡಿ ಹಣ ಸುಲಿಗೆ

ಒಂದನೇ ಪುಟದಿಂದ...

ಪ್ರಾಧಿಕಾರದ ಅಧ್ಯಕ್ಷರಿಗೂ ಕರೆ ಮಾಡಿದ್ದ ವಂಚಕ: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರಿಗೆ ವ್ಯಕ್ತಿಯೊಬ್ಬ ಕರೆ ಮಾಡಿ, ‘ನಿಮ್ಮ ಗೆಳೆಯ ಡಿ.ಎಸ್.ಚೌಗಲೆ ಅವರು ಒಂದಷ್ಟು ಮನೆ ಸಾಮಗ್ರಿ ಕಳುಹಿಸಿದ್ದಾರೆ. ಅದರ ಒಟ್ಟು ಬೆಲೆ ₹95 ಸಾವಿರ. ಅದರ ಸಾಗಣಿಕೆ ವೆಚ್ಚ ₹20 ಸಾವಿರ ನೀಡಬೇಕು. ಮನೆಯ ವಿಳಾಸ ಕೊಡಿ’ ಎಂದು ಹೇಳಿದ್ದಾನೆ. ಅದಕ್ಕೆ ಒಪ್ಪಿದ ಬಿಳಿಮಲೆ ಅವರು ಆರ್.ಟಿ.ನಗರ ಪೊಲೀಸ್ ಠಾಣೆ ವಿಳಾಸ ನೀಡಿದ್ದರು.



‘ನನಗೆ ಪರಿಚಯದ ವ್ಯಕ್ತಿಯ ಹೆಸರು ಹೇಳಿ ಹಣ ದೋಚಲು ಯತ್ನಿಸಿದ. ವಂಚಕರ ಬಗ್ಗೆ ಅರಿವು ಇದ್ದ ಕಾರಣ ಪೊಲೀಸ್ ಠಾಣೆಯ ವಿಳಾಸ ನೀಡಿದೆ. ಆತ ಸಿಆರ್‌ಪಿಎಫ್ ಪೊಲೀಸ್‌ಗೆ ವಂಚನೆ ಮಾಡುತ್ತಿದ್ದೀಯಾ ಎಂದು ಕೂಗಾಡಿ, ಕರೆ ಸ್ಥಗಿತಗೊಳಿಸಿದ. ಈ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದೇನೆ’ ಎಂದು ಪುರುಷೋತ್ತಮ ಬಿಳಿಮಲೆ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮಕ್ಕಳ ನೀಲಿ ಚಿತ್ರ ವೀಕ್ಷಣೆ ಮಾಡಿರುವುದರಿಂದ ನಿಮ್ಮ ವಿರುದ್ಧ ದೆಹಲಿಯಲ್ಲಿ ಪ್ರಕರಣ ದಾಖಲಾಗಿದೆ. ನೀವು ಜೆಎನ್‌ಯು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಆಗಿರುವುದರಿಂದ ₹50 ಸಾವಿರ ನೀಡಿದರೆ ಪಾರು ಮಾಡುತ್ತೇನೆ’ ಎಂಬ ಇ-ಮೇಲ್ ಬಂದಿತ್ತು. ವಂಚಕರು ಈ ರೀತಿಯ ಮೇಲ್ ಕಳುಹಿಸಿ ಹಣ ಸುಲಿಗೆ ಮಾಡಲು ಮುಂದಾಗಿದ್ದರು’ ಎಂದು ಬಿಳಿಮಲೆ ಹೇಳಿದರು.

‘ಅಧಿಕಾರಿಗಳ ಸೋಗಿನಲ್ಲಿ ಮನೆಗೆ ಬಂದು ವಾರಂಟ್ ನೀಡಿ ಹಣ ಸುಲಿಗೆ ಮಾಡಲು ಯತ್ನಿಸಿದರೆ ಸಮೀಪದ ಪೊಲೀಸ್ ಠಾಣೆಗೆ ದೂರು ನೀಡಬೇಕು. ಪಾರ್ಸೆಲ್ ಹೆಸರಿನಲ್ಲಿ ಕರೆಗಳು ಬಂದರೆ ರಾಷ್ಟ್ರೀಯ ಸೈಬರ್ ಕ್ರೈಂ ಸಹಾಯವಾಣಿಗೆ (1930) ಕರೆ ಮಾಡಿ ದೂರು ನೀಡಬಹುದು ಅಥವಾ ಸಮೀಪದ ಪೊಲೀಸ್ ಠಾಣೆಗೆ ತೆರಳಿ ಆ ನಂಬರ್‌ನ ನೈಜತೆ ಪರೀಕ್ಷಿಸಿಕೊಳ್ಳಬಹುದು’ ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ತಿಳಿಸಿದ್ದಾರೆ.

ಯೂನಿಯನ್ ಕಾರ್ಬೈಡ್ ಕಾರ್ಖಾನೆಯ ತ್ಯಾಜ್ಯ ವಿಲೇವಾರಿಗೆ ಕಾಲಾವಕಾಶ

ಭೋಪಾಲ್ (ಪಿಟಿಐ): ಯೂನಿಯನ್ ಕಾರ್ಬೈಡ್ ಕಾರ್ಖಾನೆಯ ತ್ಯಾಜ್ಯ ವಿಲೇವಾರಿಗೆ ಮಧ್ಯಪ್ರದೇಶ ಹೈಕೋರ್ಟ್ ಸೋಮವಾರ 6 ವಾರ ಕಾಲಾವಕಾಶ ನೀಡಿದೆ.

ಸುರಕ್ಷತಾ ಮಾರ್ಗಸೂಚಿಗಳ ಪ್ರಕಾರವೇ ತ್ಯಾಜ್ಯ ವಿಲೇವಾರಿ ನಡೆಸುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿರುವ ಹೈಕೋರ್ಟ್, ಈ ವಿಷಯದಲ್ಲಿ ತಪ್ಪು ಮಾಹಿತಿ ನೀಡದಂತೆ ಮಾಧ್ಯಮಗಳಿಗೆ ನಿರ್ದೇಶನ ನೀಡಿದೆ.

ಭೋಪಾಲ್‌ನಲ್ಲಿನ ಇದೀಗ ನಿಷ್ಕ್ರಿಯಗೊಂಡಿರುವ ಯೂನಿಯನ್ ಕಾರ್ಬೈಡ್ ಕಾರ್ಖಾನೆಯಿಂದ ಸುರಕ್ಷಿತವಾಗಿ ಮುಚ್ಚಲ್ಪಟ್ಟ 12 ಕಂಟೇನರ್‌ಗಳಲ್ಲಿ ತ್ಯಾಜ್ಯವನ್ನು ವಿಲೇವಾರಿಗಾಗಿ 250 ಕಿ.ಮೀ. ದೂರದ ಧಾರ್ ಜಿಲ್ಲೆಯ ಪೀಥಂಪುರಕ್ಕೆ ಜ. 2ರಂದು ತರಲಾಗಿತ್ತು.

ಮುಖ್ಯ ನ್ಯಾಯಮೂರ್ತಿ ಎಸ್.ಕೆ. ಕೈಟ್ ಮತ್ತು ನ್ಯಾಯಮೂರ್ತಿ ವಿವೇಕ್ ಜೈನ್ ಅವರಿದ್ದ ವಿಭಾಗೀಯ ಪೀಠವು ತ್ಯಾಜ್ಯ ವಿಲೇವಾರಿಗೂ ಮುನ್ನ ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಜೊತೆಗೆ ಅವರ ಮನಸ್ಸಿನಲ್ಲಿರುವ ಭಯವನ್ನು ಹೋಗಲಾಡಿಸಲು ರಾಜ್ಯ ಸರ್ಕಾರಕ್ಕೆ ಸಮಯ ನೀಡಿತು.

ನಕ್ಸಲರ ದಾಳಿ: 9 ಮಂದಿ ಹುತಾತ್ಮ


ಸ್ಫೋಟದ ಪರಿಣಾಮ ರಸ್ತೆಯಲ್ಲಿ 10 ಅಡಿ ಆಳವಾದ ಗುಂಡಿ ಬಿದ್ದಿದೆ —ಪಿಟಿಐ ಚಿತ್ರ

ಒಂದನೇ ಪುಟದಿಂದ...

‘ಕಾರ್ಯಾಚರಣೆಯಲ್ಲಿ ಐವರು ನಕ್ಸಲರು ಮೃತಪಟ್ಟಿದ್ದರು. ಜೊತೆಗೆ ಒಬ್ಬರು ಹೆಡ್ ಕಾನ್‌ಸ್ಟೆಬಲ್ ಹುತಾತ್ಮರಾಗಿದ್ದರು. ಸ್ಫೋಟ ಘಟನೆ ಸಂಬಂಧ ನಕ್ಸಲರಿಗಾಗಿ ಶೋಧ ಕಾರ್ಯ ಆರಂಭಿಸಲಾಗಿದೆ’ ಎಂದು ಐಜಿಪಿ ಸುಂದರ್‌ರಾಜ್ ಪಿ. ಮಾಹಿತಿ ನೀಡಿದರು.

2023ರ ಏಪ್ರಿಲ್ 26ರಂದು ದಂತೇವಾಡಾ ಜಿಲ್ಲೆಯಲ್ಲಿ ನಕ್ಸಲರು ನಡೆಸಿದ ದಾಳಿಯಲ್ಲಿ 10 ಮಂದಿ ಭದ್ರತಾ ಪಡೆ ಸಿಬ್ಬಂದಿ ಹುತಾತ್ಮರಾಗಿದ್ದರು.

ಮಾಜಿ ನಕ್ಸಲರ ತಂಡ: ಜಿಲ್ಲಾ ಮೀಸಲು ಪಡೆಯಲ್ಲಿ ರಾಜ್ಯ ಪೊಲೀಸರನ್ನು ಹೆಚ್ಚಿನ ಸಂಖ್ಯೆಯಲ್ಲಿ ನೇಮಕ ಮಾಡಿಕೊಳ್ಳಲಾಗುತ್ತದೆ. ಇವರ ಜೊತೆಯಲ್ಲಿ ಸ್ಥಳೀಯ ಬುಡಕಟ್ಟು ಜನರನ್ನೂ ಮತ್ತು ನಕ್ಸಲ್ ಚುಟುವಟಿಕೆಗಳಿಂದ ಹೊರ ಬಂದು ಶರಣಾಗತಿ ಪಡೆದ ಮಾಜಿ ನಕ್ಸಲರನ್ನೂ ಪಡೆಗೆ ಸೇರಿಸಿಕೊಳ್ಳಲಾಗುತ್ತದೆ.

ನಾಲ್ಕು ವರ್ಷದಲ್ಲಿ 23,566 ಪ್ರಕರಣ ದಾಖಲು

ಒಂದನೇ ಪುಟದಿಂದ...

‘ಮಾನವ ಹಕ್ಕುಗಳನ್ನು ರಕ್ಷಣೆ ಮಾಡುವ ಉದ್ದೇಶದಿಂದ ರಾಜ್ಯದ 18 ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಿದ್ದು, ಪೊಲೀಸ್ ಠಾಣೆ, ಬಸ್ ನಿಲ್ದಾಣ, ಜಿಲ್ಲಾ ಕಾರಾಗೃಹಗಳು, ಜಿಲ್ಲಾ ಆಸ್ಪತ್ರೆಗಳು, ವಸತಿನಿಲಯಗಳಿಗೆ ಅನಿರೀಕ್ಷಿತ ಭೇಟಿ ನೀಡಲಾಗುತ್ತಿದೆ. ಅಲ್ಲಿರುವ ಅವ್ಯವಸ್ಥೆಯನ್ನು ಸರಿಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗುತ್ತಿದೆ. ಜಿಲ್ಲಾ ಕೇಂದ್ರಗಳಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸಿ, ಅಲ್ಲಿಯೇ ಇತ್ಯರ್ಥಗೊಳಿಸಲಾಗುತ್ತಿದೆ. ಈ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಕೆಲಸವೂ ನಡೆಯುತ್ತಿದೆ’ ಎಂದು ಆಯೋಗದ ಹಂಗಾಮಿ ಅಧ್ಯಕ್ಷ ಟಿ. ಶಾಮ್ ಭಟ್ ತಿಳಿಸಿದರು.

‘2023ರ ನವೆಂಬರ್‌ನಿಂದ 2024ರ ನವೆಂಬರ್ ಅವಧಿಯಲ್ಲಿ ಆಯೋಗದಲ್ಲಿ ನೋಂದಣಿಯಾಗಿದ್ದ 10,209 ಪ್ರಕರಣಗಳಲ್ಲಿ 7,182 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ’ ಎಂದರು.

‘ಈ ಎಲ್ಲ ಪ್ರಕರಣಗಳನ್ನು ಆಯೋಗದ ಪೂರ್ಣ ಮತ್ತು ಏಕಸದಸ್ಯ ಪೀಠಗಳಲ್ಲಿ ವಿಚಾರಣೆ ನಡೆಸಿ ಇತ್ಯರ್ಥಗೊಳಿಸಲಾಗಿದೆ. ಆಯೋಗವು ರಾಜ್ಯದ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿ, ಪ್ರಕರಣಗಳ ತುರ್ತು ಇತ್ಯರ್ಥಕ್ಕಾಗಿ ಆಯಾ ಜಿಲ್ಲಾಧಿಕಾರಿ, ಎಸ್‌ಪಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳ ಸಮ್ಮುಖದಲ್ಲಿ ವಿಚಾರಣೆ ನಡೆಸುವ ನೂತನ ಪ್ರಯೋಗಕ್ಕೆ ಚಾಲನೆ ನೀಡಿದೆ’ ಎಂದು ವಿವರಿಸಿದರು.

ಡಲ್ಲೇವಾಲ್ ರಕ್ತದೊತ್ತಡ ತೀವ್ರ ಕುಸಿತ: ವೈದ್ಯರ ಕಳವಳ

ನವದೆಹಲಿ/ಚಂಡೀಗಢ (ಪಿಟಿಐ): ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಉಪವಾಸ ಕೈಗೊಂಡಿರುವ ರೈತ ಮುಖಂಡ ಜಗಜೀತ್ ಸಿಂಗ್ ಡಲ್ಲೇವಾಲ್ ಅವರನ್ನು ಸೋಮವಾರ ಭೇಟಿ ಮಾಡಿದ ಸುಪ್ರೀಂ ಕೋರ್ಟ್ ನೇಮಿಸಿರುವ ಉನ್ನತಾಧಿಕಾರ ಸಮಿತಿಯು, ವೈದ್ಯಕೀಯ ನೆರವು ಪಡೆಯುವಂತೆ ಅವರನ್ನು ಒತ್ತಾಯಿಸಿತು.

ಸಮಿತಿಯ ಅಧ್ಯಕ್ಷ, ನ್ಯಾಯಮೂರ್ತಿ ನವಾಬ್ ಸಿಂಗ್ ಅವರು ಸೋಮವಾರ ಮಧ್ಯಾಹ್ನ 3.30ರ ಸುಮಾರಿಗೆ ಖಾನೌರಿಯಲ್ಲಿ ಪ್ರತಿಭಟನೆ ನಡೆಯುತ್ತಿರುವ ಸ್ಥಳದಲ್ಲಿ ಡಲ್ಲೇವಾಲ್ ಅವರನ್ನು ಭೇಟಿ ಮಾಡಿದರು.

‘ಡಲ್ಲೇವಾಲ್ ಅವರ ಆರೋಗ್ಯ ಹದಗೆಡುತ್ತಿದೆ. ಅವರ ರಕ್ತದೊತ್ತಡವು 80/56ಕ್ಕೆ ಕುಸಿದಿದೆ. ಅವರ ಪರಿಸ್ಥಿತಿ ಕಂಡು ನಮಗೆ ಚಿಂತೆ ಮೂಡಿದೆ. ಅವರಿಗೆ ವೈದ್ಯಕೀಯ ನೆರವು ಒದಗಿಸಲು ನಮ್ಮಿಂದ ಆಗದು’ ಎಂದು ವೈದ್ಯ ಅವತಾರ್ ಸಿಂಗ್ ಹೇಳಿದ್ದಾರೆ.

ಇದಕ್ಕೂ ಮೊದಲು, ಭೇಟಿ ನಡೆಯಲಿದೆ ಎಂಬ ವಿಷಯವನ್ನು ಪಂಜಾಬ್ ಸರ್ಕಾರವು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಎನ್. ಕೋಟೀಶ್ವರ ಸಿಂಗ್ ಅವರು ಇರುವ ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠಕ್ಕೆ ತಿಳಿಸಿತು. ‘ಒಳ್ಳೆಯದಾಗುತ್ತದೆ ಎಂದು ಆಶಿಸೋಣ’ ಎಂದು ಹೇಳಿದ ಪೀಠವು ವಿಚಾರಣೆಯನ್ನು ಜನವರಿ 10ಕ್ಕೆ ಮುಂದೂಡಿದೆ.

ಸೋಮವಾರದ ಭೇಟಿ ಸಂದರ್ಭದಲ್ಲಿ ಏನಾಯಿತು ಎಂಬ ಬಗ್ಗೆ ಕಿರು ಟಿಪ್ಪಣಿಯೊಂದನ್ನು ಸಮಿತಿಯು ಸಲ್ಲಿಸಲಿದೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು.

ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಖಾತರಿ ಸೇರಿದಂತೆ ರೈತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಡಲ್ಲೇವಾಲ್ ಅವರು ನ.26ರಿಂದ ಅನಿರ್ದಿಷ್ಟಾವಧಿ ಉಪವಾಸ ನಡೆಸುತ್ತಿದ್ದಾರೆ.


40 ದಿನಗಳಿಂದ ಉಪವಾಸ ಕೈಗೊಂಡಿರುವ ರೈತ ಮುಖಂಡ ಡಲ್ಲೇವಾಲ್ ಅವರನ್ನು ಖಾನೌರಿ ಗಡಿಯಲ್ಲಿ ವೇದಿಕೆಯ ಮೇಲೆ ತರಲಾಯಿತು — ಪಿಟಿಐ ಚಿತ್ರ

‘ಕೃಷಿಯೇ ಮೊದಲು ಎಂದರು’

ಡಲ್ಲೇವಾಲ್ ಅವರನ್ನು ಭೇಟಿ ಮಾಡಿದ ನಂತರ ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡಿದ ನವಾಬ್ ಸಿಂಗ್, ‘ಅವರು ಆರೋಗ್ಯವಾಗಿ ಇರಬೇಕು ಎಂದು ನಾವು ದೇವರಲ್ಲಿ ಪ್ರಾರ್ಥಿಸುತ್ತೇವೆ... ನಾನು ಇಲ್ಲಿಗೆ ಇಂದು ಬಂದಿರುವುದು ಪ್ರತಿಭಟನೆಯನ್ನು ಕೊನೆಗೊಳಿಸಬೇಕು ಎನ್ನಲು ಅಲ್ಲ. ಡಲ್ಲೇವಾಲ್ ಅವರಲ್ಲಿ ತಮ್ಮ ಆರೋಗ್ಯ ಚೆನ್ನಾಗಿರಬೇಕು ಎನ್ನಲು ಬಂದಿದ್ದೇನೆ. ತಮಗೆ ಬೇಕೆಂದಾಗ ನಾವು ಇಲ್ಲಿರುತ್ತೇವೆ ಎಂದು ಅವರಿಗೆ ತಿಳಿಸಿದ್ದೇವೆ’ ಎಂದರು.

ತಮ್ಮ ಪಾಲಿಗೆ ಕೃಷಿ ಮೊದಲು, ಆರೋಗ್ಯ ನಂತರ ಎಂಬುದನ್ನು ಡಲ್ಲೇವಾಲ್ ಅವರು ಸಮಿತಿಗೆ ತಿಳಿಸಿದ್ದಾರೆ ಎಂದು ನವಾಬ್ ಸಿಂಗ್ ಹೇಳಿದರು.

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣ

ದರ್ಶನ್ ಜಾಮೀನು ಆದೇಶ: ‘ಸುಪ್ರಿಂ’ಗೆ ಮೇಲ್ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಮತ್ತು ಇತರೆ ಆರೋಪಿಗಳಿಗೆ ‘ನಿಯಮಿತ’ (ರೆಗ್ಯುಲರ್) ಜಾಮೀನು ಮಂಜೂರು ಮಾಡಿರುವ ಆದೇಶಗಳನ್ನು ಪ್ರಶ್ನಿಸಿ ನಗರ ಪೊಲೀಸರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ.

ದರ್ಶನ್, ಪವಿತ್ರಗೌಡ, ಲಕ್ಷ್ಮಣ್, ಪ್ರದೂಶ್, ನಾಗರಾಜು, ಅನುಕುಮಾರ್ ಹಾಗೂ ಜಗದೀಶ್ ಅವರಿಗೆ ಹೈಕೋರ್ಟ್ ನಿಯಮಿತ ಜಾಮೀನು ಮಂಜೂರು ಮಾಡಿತ್ತು. ಉಳಿದ ಹತ್ತು ಮಂದಿ ಆರೋಪಿಗಳಿಗೆ ವಿಚಾರಣಾ ನ್ಯಾಯಾಲಯ ಜಾಮೀನು ಮಂಜೂರು ಮಾಡಿತ್ತು. ಈ ನಿಯಮಿತ ಜಾಮೀನು ಆದೇಶಗಳನ್ನು ಪ್ರಶ್ನಿಸಿ ಹಿರಿಯ ವಕೀಲ ಅನಿಲ್ ನಿಶಾನಿ ಅವರು ಅರ್ಜಿ ಸಲ್ಲಿಸಿದ್ದಾರೆ. ವಿಚಾರಣೆ ದಿನಾಂಕ ಇನ್ನೂ ನಿಗದಿಯಾಗಿಲ್ಲ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಾಸಿಕ್ಯೂಷನ್ ಪರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಂಡಿಸಲು ಹಿರಿಯ ವಕೀಲ ಸಿದ್ದಾರ್ಥ್ ಲೂಥ್ರಾ ಅವರನ್ನು ನೇಮಿಸಲಾಗಿದೆ. ಅನಿಲ್ ಸಿ. ನಿಶಾನಿ ಹಾಗೂ ಹೈಕೋರ್ಟ್‌ನ ಪಬ್ಲಿಕ್ ಪ್ರಾಸಿಕ್ಯೂಟರ್ ಅವರಿಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆಯ ಜವಾಬ್ದಾರಿ ನೀಡಿ ಆದೇಶ ಹೊರಡಿಸಲಾಗಿತ್ತು.


ದರ್ಶನ್


ಪವಿತ್ರಾಗೌಡ

ಡಿ.13ರಂದು ಹೈಕೋರ್ಟ್ ಏಕಸದಸ್ಯ ಪೀಠ ದರ್ಶನ್, ಪವಿತ್ರಗೌಡ ಸೇರಿದಂತೆ ಏಳು ಆರೋಪಿಗಳಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು. ಈ ಜಾಮೀನು ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಅನುಮತಿ ಕೋರಿ ನಗರ ಪೊಲೀಸರು, ಗೃಹ ಇಲಾಖೆಗೆ ಪತ್ರ ಬರೆದಿದ್ದರು.



ಮೂರು ದಿನಗಳ ಹಿಂದೆಯಷ್ಟೇ ಗೃಹ ಇಲಾಖೆ ಅನುಮತಿ ನೀಡಿತ್ತು. ದಾಖಲೆ ಹಾಗೂ ಆರೋಪಪಟ್ಟಿಯಲ್ಲಿರುವ ಅಂಶಗಳನ್ನು ಅನುವಾದ ಮಾಡುವ ಕಾರ್ಯ ವಿಳಂಬವಾದ ಕಾರಣ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಅರ್ಜಿ ಸಲ್ಲಿಸುವ ಕಾರ್ಯ ತಡವಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಹೈಕೋರ್ಟ್ ಜಾಮೀನು ನೀಡಿದ ಬಳಿಕ ನಟ ದರ್ಶನ್ ಅವರು ಬೆಂಗಳೂರಿನಿಂದ ಮೈಸೂರಿಗೆ ತೆರಳಿ, ತಮ್ಮ ಫಾರ್ಮ್ ಹೌಸ್‌ನಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಕೋರ್ಟ್ ನೀಡಿದ್ದ ಗಡುವು ಜನವರಿ 5ಕ್ಕೆ ಅಂತ್ಯಗೊಂಡಿದೆ.

‘ಭೂ ಸ್ವಾಧೀನ ಪ್ರಶ್ನಿಸುವ ಹಕ್ಕು ಮೊಟಕು ಸಲ್ಲ’

ಬೆಂಗಳೂರು: ‘ಭೂ ಸ್ವಾಧೀನ ಅಧಿಸೂಚನೆಗಳಿಗೆ ಸಂಬಂಧಿಸಿದಂತೆ ದೇಶದ ನಾಗರಿಕರು ಸಲ್ಲಿಸುವ ಆಕ್ಷೇಪಣೆಯ ಹಕ್ಕನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, ಪ್ರಕರಣವೊಂದರಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ವಶಪಡಿಸಿಕೊಂಡಿದ್ದ ಜಮೀನನ್ನು ಅರ್ಜಿದಾರರಿಗೆ ವಾಪಸು ನೀಡುವಂತೆ ನಿರ್ದೇಶಿಸಿದೆ.

ಈ ಸಂಬಂಧ ಮಂಗಳೂರಿನ ಕಂಕನಾಡಿ ಗೋರಿಗುಡ್ಡದ ಎಸ್.ಎನ್.ಡಿ ಸಂಪತ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ ಆದೇಶ ನೀಡಿದೆ.


‘ಈ ಪ್ರಕರಣದಲ್ಲಿ ಜಮೀನುಗಳ ಮಾಲೀಕರ ಹೆಸರಿನ ದಾಖಲೆಗಳನ್ನು ಪರಿಶೀಲಿಸದೆ ರಾಷ್ಟ್ರೀಯ ಹೆದ್ದಾರಿ ಕಾಯ್ದೆ–1956ರ ಕಾಯ್ದೆಯ ಕಲಂ 3 (ಎ) ಮತ್ತು 3 (ಡಿ) ಅಡಿಯಲ್ಲಿ ಅಧಿಸೂಚನೆಗಳನ್ನು ಹೊರಡಿಸಲಾಗಿದೆ ಎಂಬುದು ಸ್ಪಷ್ಟವಾಗಿದೆ. ಹೀಗಾಗಿ, ಕಲಂ 3(ಎ) ಮತ್ತು 3(ಡಿ) ಅಡಿಯಲ್ಲಿ ಹೊರಡಿಸಲಾದ ಅಧಿಸೂಚನೆಗಳು ಅರ್ಜಿದಾರರ ಭೂಮಿಗೆ ಅನ್ವಯಿಸುವುದಿಲ್ಲ ಮತ್ತು ಅವರು ಹೇಳಿದ ಭೂಮಿಯನ್ನು ಬಳಸಲು ಸ್ವತಂತ್ರರು’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

‘ಒಂದು ವೇಳೆ ಎನ್‌ಎಚ್‌ಎಐ ವಶಪಡಿಸಿಕೊಂಡಿರುವ ಜಮೀನನ್ನು ಬಳಕೆ ಮಾಡಿಕೊಳ್ಳುವ ದಿಸೆಯಲ್ಲಿ ಕಟ್ಟಡ ನಿರ್ಮಿಸಿದ್ದರೆ ಅದನ್ನು ತೆಗೆದು ಹಾಕಿ ಅರ್ಜಿದಾರರಿಗೆ ಮುಕ್ತಗೊಳಿಸಬೇಕು’ ಎಂದು ನ್ಯಾಯಪೀಠ ಘೋಷಿಸಿದೆ.

ಮಂಗಳೂರು ಸಮೀಪದ ಕಂಕನಾಡಿ ಬಿ. ಹಳ್ಳಿಯ ಗೋರಿಗುಡ್ಡದಲ್ಲಿರುವ ಜಮೀನಿನ ಕೆಲವು ಭಾಗಗಳನ್ನು ಎನ್‌ಎಚ್‌ಎಐ ಸ್ವಾಧೀನಪಡಿಸಿಕೊಂಡಿದ್ದನ್ನು ಪ್ರಶ್ನಿಸಿ ಅರ್ಜಿದಾರರು 2016ರಲ್ಲಿ ಹೈಕೋರ್ಟ್ ಮೆಟ್ಟಿಲೇರಿದ್ದರು.

‘ರಾಷ್ಟ್ರೀಯ ಹೆದ್ದಾರಿ ಕಾಯ್ದೆಯ ಕಲಂ 3(ಎ) ಅಡಿಯಲ್ಲಿ ಎನ್‌ಎಚ್‌ಎಐ ಹೊರಡಿಸಿದ ಪ್ರಾಥಮಿಕ ಅಧಿಸೂಚನೆಯಲ್ಲಿ ಆಸ್ತಿಯ ವಿವರಗಳನ್ನು ಪ್ರಕಟಿಸಲಾಗಿಲ್ಲ. ಅವರಿಗೆ ನೋಟಿಸ್ ನೀಡಿಲ್ಲ ಅಥವಾ ವಿಚಾರಣೆಯ ಅವಕಾಶವನ್ನೂ ಒದಗಿಸಿಲ್ಲ’ ಎಂದು ಅವರು ಆಕ್ಷೇಪಿಸಿದ್ದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,004
ಇಂದಿನ ಅಂತ್ಯ	23,616
▼	388
ದಿನದ ಕನಿಷ್ಠ	23,551

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹515
12 ಕ್ಕೆ	₹70
ಮೈಸೂರು	
100ಕ್ಕೆ	₹518

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹270-644
ದ್ವಿತಳಿ (ಬಿ.ವಿ)	₹311-740

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹186
ಆರ್‌ಎಸ್‌ಎಸ್-5	₹180
ಗುಡ್ ಲಾಟ್	₹174

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹9000-13800
ದಾವಣಗೆರೆ	₹10700-10700
ತಿಪಟೂರು	₹14000-14750
ತುರುವೇಕೆರೆ	₹14000-14200

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1440 (1460)
ಸೋಯಾ (ರಿಫೈನ್ಡ್)	₹1255 (1260)
ಸೂರ್ಯಕಾಂತಿ (ರಿಫೈನ್ಡ್)	₹1355 (1370)
ಪಾಮೋಲಿನ್	₹1345 (1365)

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹2800-3600
ಮಧ್ಯಮ	₹2000-2800
ಸಣ್ಣ	₹1000-2000

ಸೇವಾ ವಲಯ ಪ್ರಗತಿ ಏರಿಕೆ

ಬೆಂಗಳೂರು (ರಾಯಿಟರ್ಸ್): ದೇಶದ ಸೇವಾ ವಲಯದ ಬೆಳವಣಿಗೆ ಡಿಸೆಂಬರ್ ತಿಂಗಳಲ್ಲಿ ನಾಲ್ಕು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ವರದಿ ಸೋಮವಾರ ತಿಳಿಸಿದೆ.

ನವೆಂಬರ್ ತಿಂಗಳಲ್ಲಿ ಸೂಚ್ಯಂಕವು 58.4 ದಾಖಲಾಗಿತ್ತು. ಇದು ಡಿಸೆಂಬರ್‌ನಲ್ಲಿ 59.3ಕ್ಕೆ ಏರಿಕೆ ಆಗಿದೆ. ನಿರಂತರ ಬೇಡಿಕೆಯಿಂದ ನೇಮಕಾತಿ ಪ್ರಮಾಣ ಹೆಚ್ಚಳವಾಗಿದೆ. ಹಣದುಬ್ಬರದ ಒತ್ತಡ ಇಳಿಕೆಯಾಗಿದೆ. ಇದರಿಂದ ಸೂಚ್ಯಂಕವು ಏರಿಕೆಯಾಗಿದೆ ಎಂದು ತಿಳಿಸಿದೆ. ಆಗಸ್ಟ್‌ನಲ್ಲಿ ಸೂಚ್ಯಂಕವು 60.9 ದಾಖಲಾಗಿತ್ತು.

ವಲಯದ ಚಟುವಟಿಕೆಯು ಮೂರು ವರ್ಷಗಳಿಗೂ ಹೆಚ್ಚು ಕಾಲ ವಿಸ್ತರಣೆಯ ಹಾದಿಯಲ್ಲಿದೆ. ಸೂಚ್ಯಂಕವು 50ಕ್ಕಿಂತ ಮೇಲಿದ್ದರೆ ಬೆಳವಣಿಗೆಯು ಸಕಾರಾತ್ಮಕವಾಗಿದೆ ಎಂದು ಅರ್ಥೈಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ಬೆಳವಣಿಗೆಯು ಕುಂಠಿತವಾಗಿದೆ ಎಂದರ್ಥ.

'ಹೆಚ್ಚಿದ ಬೇಡಿಕೆ ಮತ್ತು ವಿಸ್ತರಿಸಿದ ಚಟುವಟಿಕೆಗಳು ವಹಿವಾಟಿನ ವಿಶ್ವಾಸವನ್ನು ಹೆಚ್ಚಿಸಿದೆ. ವ್ಯಾಪಾರದ ಆಶಾವಾದವು ಸದೃಢವಾಗಿ ಉಳಿದಿದೆ' ಎಂದು ಎಚ್‌ಎಸ್‌ಬಿಸಿಯ ಅರ್ಥಶಾಸ್ತ್ರಜ್ಞ ಇನೆಸ್ ಲ್ಯಾಮ್ ಹೇಳಿದ್ದಾರೆ. ಹೆಚ್ಚುತ್ತಿರುವ ವ್ಯಾಪಾರವು, ನೇಮಕಾತಿ ಹೆಚ್ಚಳಕ್ಕೆ ಕಾರಣ ವಾಯಿತು. ಆದಾಗ್ಯೂ, ವೇತನ ಮತ್ತು ಕಚ್ಚಾವಸ್ತುಗಳಿಗೆ ಹೆಚ್ಚು ಪಾವತಿಸಿದ ಕಾರಣ ಬೆಲೆ ಹೆಚ್ಚಳವಾಯಿತು. ಸೇವಾ ಪೂರೈಕೆದಾರರು ತಮ್ಮ ಗ್ರಾಹಕರಿಗೆ ಕೆಲವು ಹೆಚ್ಚುವರಿ ವೆಚ್ಚಗಳನ್ನು ವರ್ಗಾಯಿಸಿದರು ಎಂದು ವರದಿ ತಿಳಿಸಿದೆ.

ಗಣಿನಾಡಿನ ಉತ್ಪನ್ನದತ್ತ ಸಗಟು ವ್ಯಾಪಾರಸ್ಥರ ಚಿತ್ತ • 500 ಘಟಕಗಳಲ್ಲಿ ನಿತ್ಯ 2 ಲಕ್ಷ ಉಡುಪು ಸಿದ್ಧ

ಬಾಂಗ್ಲಾ ಬಿಕ್ಕಟ್ಟು: ಬಳ್ಳಾರಿ ಜೀನ್ಸ್‌ಗೆ ಬೇಡಿಕೆ

• ಹರಿಶಂಕರ್ ಆರ್.

ಬಳ್ಳಾರಿ: ರಾಜಕೀಯ ಅಸ್ಥಿರತೆ, ನಿರಂತರ ಪ್ರತಿಭಟನೆ, ಅಲ್ಪಸಂಖ್ಯಾತರ ಮೇಲೆ ದಾಳಿ ಬಾಂಗ್ಲಾದೇಶದಲ್ಲಿ ಮುಂದುವರಿದಿದ್ದು, ಗಾರ್ಮೆಂಟ್ಸ್ ಉದ್ಯಮದ ಮೇಲೆ ಪರಿಣಾಮ ಬೀರಿದೆ. ಸಿದ್ಧ ಉಡುಪು, ಜೀನ್ಸ್ ಸೇರಿ ಇತರ ಉತ್ಪನ್ನಗಳನ್ನು ಅಲ್ಲಿಂದ ಆಮದು ಮಾಡಿಕೊಳ್ಳುವ ರಾಜ್ಯದ ವ್ಯಾಪಾರಸ್ಥರು ಹಿಂಜರಿಯುತ್ತಿದ್ದಾರೆ.

ಈ ಎಲ್ಲಾ ಬೆಳವಣಿಗೆಗಳಿಗೆ ಪೂರಕವಾಗಿ ಬಳ್ಳಾರಿಯ ಜೀನ್ಸ್‌ಗೆ ಬೇಡಿಕೆ ಹೆಚ್ಚಿದೆ. ಜೀನ್ಸ್ ಉದ್ಯಮದಲ್ಲಿ ಹೊಸ ನಿರೀಕ್ಷೆಗಳು ಮೂಡಿವೆ. ಬಾಂಗ್ಲಾದೇಶದಿಂದ ಕಡಿಮೆ ದರಕ್ಕೆ ಜೀನ್ಸ್ ಬಟ್ಟೆಗಳನ್ನು ತರಿಸಿಕೊಳ್ಳುತ್ತಿದ್ದ ಬೆಂಗಳೂರಿನ ಸಗಟು ಮಾರಾಟಗಾರರು ಈಗ ಬಳ್ಳಾರಿ ಜೀನ್ಸ್‌ನತ್ತ ಮುಖ ಮಾಡಿದ್ದಾರೆ.

'ಸಿದ್ಧ ಉಡುಪುಗಳ ರಫ್ತುದಾರ ದೇಶಗಳ ಪೈಕಿ ಬಾಂಗ್ಲಾದೇಶ ಜಗತ್ತಿನಲ್ಲೇ ಎರಡನೇ ಸ್ಥಾನದಲ್ಲಿದೆ. ಅಲ್ಲಿನ ಜೀನ್ಸ್‌ಗೆ ಜಗತ್ತಿನೆಲ್ಲೆಡೆ ಬೇಡಿಕೆ ಇದೆ. ಆದರೆ, ಅಲ್ಲಿನ ರಾಜಕೀಯ ಅಸ್ಥಿರತೆಯು ಅಲ್ಲಿನ ಜೀನ್ಸ್ ಉದ್ಯಮದ ಬೆಳವಣಿಗೆಗೆ ಹಿನ್ನಡೆ ಉಂಟು ಮಾಡಿದೆ. ಹೀಗಾಗಿ ಬಳ್ಳಾರಿ ಜೀನ್ಸ್‌ಗೆ ಬೇಡಿಕೆ ಕುದುರಿದೆ' ಎಂದು ಸಗಟು ಮಾರಾಟಗಾರರೊಬ್ಬರು ತಿಳಿಸಿದರು.



ನಗರದ ಜೀನ್ಸ್ ಹೋಲ್ ಸೇಲ್ ಮಳಿಗೆಯೊಂದರಲ್ಲಿ ಮಹಿಳೆಯೊಬ್ಬರಿಂದ ಪ್ಯಾಂಟ್‌ಗಳ ಪ್ಯಾಕಿಂಗ್ ಕಾರ್ಯ

> ಜೀನ್ಸ್‌ಗೆ ಒಮ್ಮೆಲೇ ಬೇಡಿಕೆ ಹೆಚ್ಚಾದಲ್ಲಿ, ಅಷ್ಟನ್ನು ಪೂರೈಸುವ ಮೂಲಸೌಲಭ್ಯ ಇಲ್ಲಿಲ್ಲ. ಸರ್ಕಾರವು ಬೇಗ ಜೀನ್ಸ್ ಪಾರ್ಕ್ ಆರಂಭಿಸಿದರೆ, ಎಲ್ಲರಿಗೂ ಅನುಕೂಲವಾಗುತ್ತದೆ
>
> **ವೇಣುಗೋಪಾಲ,** ಅಧ್ಯಕ್ಷ, ಜೀನ್ಸ್ ಡೈಯಿಂಗ್ ಕಾರ್ಖಾನೆ ಮಾಲೀಕರ ಸಂಘ

> ಬಳ್ಳಾರಿ ಹೊರವಲಯದ ಮುಂಡ್ರಿಗಿ ಬಳಿ ಜೀನ್ಸ್ ಪಾರ್ಕ್ ಸ್ಥಾಪಿಸುವ ಪ್ರಕ್ರಿಯೆ ನಡೆದಿದೆ. ಜವಳಿ ಇಲಾಖೆಯಿಂದ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವ ಹೋಗಿದ್ದು, ಅನುಮೋದನೆ ಸಿಗುವ ನಿರೀಕ್ಷೆ ಇದೆ
>
> **ಮಹಾಂತೇಶ ಕಂಚಿಮಠ,** ಉಪನಿರ್ದೇಶಕ, ಜವಳಿ ಇಲಾಖೆ

'ಬಾಂಗ್ಲಾದೇಶ ಮತ್ತು ಬಳ್ಳಾರಿಯ ಜೀನ್ಸ್ ಗುಣಮಟ್ಟ ಬಹುತೇಕ ಹೋಲುತ್ತವೆ. ಬಾಂಗ್ಲಾದೇಶದಲ್ಲಿ ಸಮಸ್ಯೆ ಉಂಟಾಗಿರುವ ಕಾರಣ ಸಗಟು ಮಾರಾಟಗಾರರು ಬಳ್ಳಾರಿ ಜೀನ್ಸ್‌ನತ್ತ ಆಸಕ್ತಿ ತೋರಿದ್ದಾರೆ. ಇತ್ತೀಚಿನ ಮೂರು ತಿಂಗಳಲ್ಲಿ ಶೇ 30ರಷ್ಟು ವ್ಯಾಪಾರ ವೃದ್ಧಿಸಿದೆ' ಎಂದು 'ಪೋಲಾಕ್ಸ್ ಜೀನ್ಸ್'ನ ಮಾಲೀಕ ಮಲ್ಲಿಕಾರ್ಜುನ ಹೇಳಿದರು.

'ಬಾಂಗ್ಲಾದೇಶದಲ್ಲಿ ತ್ವೇಷಮಯ ಪರಿಸ್ಥಿತಿ ಮುಂದುವರಿದರೆ, ಅಲ್ಲಿನ ಗಾರ್ಮೆಂಟ್ಸ್ ಉದ್ಯಮಕ್ಕೆ ಪೆಟ್ಟು ಬೀಳಲಿದೆ. ಇದರಿಂದ ನಮ್ಮ ದೇಶ ಮತ್ತು ರಾಜ್ಯದ ವಹಿವಾಟಿನಲ್ಲಿ ಪ್ರಗತಿ ನಿರೀಕ್ಷಿಸಬಹುದು' ಎಂದು ಜೀನ್ಸ್ ಡೈಯಿಂಗ್ (ಜೀನ್ಸ್ ಉತ್ಪನ್ನ ತೊಳೆಯುವ, ಬಣ್ಣ ಹಾಕುವ) ಕಾರ್ಖಾನೆ ಮಾಲೀಕರ ಸಂಘದ ಅಧ್ಯಕ್ಷ ವೇಣುಗೋಪಾಲ್ 'ಪ್ರಜಾವಾಣಿ'ಗೆ ತಿಳಿಸಿದರು.

ಬಳ್ಳಾರಿಯಲ್ಲಿ ಜೀನ್ಸ್ ಬಟ್ಟೆಗಳ ತಯಾರಿಕೆಯ 500 ಘಟಕಗಳಿವೆ. ನಿತ್ಯ 2 ಲಕ್ಷ ಜೀನ್ಸ್ ಉತ್ಪನ್ನಗಳು ತಯಾರಾಗುತ್ತವೆ. 30ಕ್ಕೂ ಹೆಚ್ಚು ಡೈಯಿಂಗ್ ಘಟಕಗಳು ಬಳ್ಳಾರಿ ಹೊರ ವಲಯದ ಮುಂಡ್ರಿಗಿಯಲ್ಲಿವೆ.

ಬಾಹ್ಯಾಕಾಶ ವಲಯ: ಹೂಡಿಕೆ ಶೇ 55ರಷ್ಟು ಇಳಿಕೆ

ಬೆಂಗಳೂರು (ರಾಯಿಟರ್ಸ್): ದೇಶದ ಬಾಹ್ಯಾಕಾಶ ಕ್ಷೇತ್ರದಲ್ಲಿನ ಹೂಡಿಕೆಯು 2024ರಲ್ಲಿ ಶೇ 55ರಷ್ಟು ಕುಸಿತವಾಗಿದೆ.

2023ರಲ್ಲಿ ಈ ಕ್ಷೇತ್ರದಲ್ಲಿ ₹1,117 ಕೋಟಿ ಹೂಡಿಕೆ ಆಗಿತ್ತು. 2024ರಲ್ಲಿ ₹507 ಕೋಟಿ ಯಷ್ಟೇ ಆಗಿದೆ ಎಂದು ಟ್ರಾಕ್ಸನ್ ಕಂಪನಿ ವರದಿ ಸೋಮವಾರ ತಿಳಿಸಿದೆ. ಈ ಕಂಪನಿ ಜಾಗತಿಕವಾಗಿ ನವೋದ್ಯಮಗಳಲ್ಲಿ ಹಣ ಹೂಡಿಕೆ ಮಾಡುವವರಿಗೆ ನೆರವು ನೀಡುತ್ತದೆ.ಕಳೆದ ಐದು ವರ್ಷದಲ್ಲಿ ಜಾಗತಿಕವಾಗಿ ಬಾಹ್ಯಾಕಾಶ ವಲಯದಲ್ಲಿ ಹೂಡಿಕೆ ಪ್ರಮಾಣ ಶೇ 20ರಷ್ಟು ಕಡಿಮೆಯಾಗಿದೆ. ಈ ವಲಯದ ಕಂಪನಿಗಳು ₹2.40 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸಿವೆ. ಆದರೆ, ಇದೇ ಅವಧಿಯಲ್ಲಿ ದೇಶದ ಕಂಪನಿಗಳು ₹3,037 ಕೋಟಿ ಸಂಗ್ರಹಿಸಿವೆ ಎಂದು ತಿಳಿಸಿದೆ.

'ಇಪಿಎಫ್‌ಒ ಪಿಂಚಣಿ: ₹5 ಸಾವಿರಕ್ಕೆ ಹೆಚ್ಚಿಸಿ'

ನವದೆಹಲಿ (ಪಿಟಿಐ): ಇಪಿಎಫ್‌ಒ ಪಿಂಚಣಿಯನ್ನು ಪ್ರತಿ ತಿಂಗಳಿಗೆ ಕನಿಷ್ಠ ₹5 ಸಾವಿರಕ್ಕೆ ಹೆಚ್ಚಿಸಬೇಕು. 8ನೇ ವೇತನ ಆಯೋಗ ಕೂಡಲೇ ರಚಿಸಬೇಕು ಎಂದು ಕೇಂದ್ರ ಸರ್ಕಾರವನ್ನು ಕಾರ್ಮಿಕ ಒಕ್ಕೂಟಗಳು ಒತ್ತಾಯಿಸಿವೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ಸೋಮವಾರ ಬಜೆಟ್‌ಪೂರ್ವ ಸಮಾಲೋಚನೆ ಸಭೆ ಆಯೋಜಿಸಲಾಗಿತ್ತು.

ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಕಲ್ಪಿಸಬೇಕು, ಸರ್ಕಾರಿ ನೌಕರರಿಗೆ ಹಳೆ ಪಿಂಚಣಿ ಯೋಜನೆಯನ್ನು (ಒಪಿಎಸ್) ಮರುಸ್ಥಾಪಿಸಬೇಕು. ಮುಂಬರುವ 2025–26ರ ಬಜೆಟ್‌ನಲ್ಲಿ ಆದಾಯ ತೆರಿಗೆ ವಿನಾಯಿತಿ ಮಿತಿಯನ್ನು ವಾರ್ಷಿಕ ₹10 ಲಕ್ಷಕ್ಕೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 2025–26ರ ಸಾಲಿನ ಬಜೆಟ್ ಅನ್ನು ಫೆಬ್ರುವರಿ 1ರಂದು ಸಂಸತ್ತಿನಲ್ಲಿ ಮಂಡಿಸಲಿದ್ದಾರೆ.



ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ಸೋಮವಾರ ಬಜೆಟ್‌ಪೂರ್ವ ಸಮಾಲೋಚನೆ ಸಭೆ ಆಯೋಜಿಸಲಾಗಿತ್ತು —ಪಿಟಿಐ ಚಿತ್ರ

ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಟಿಯುಸಿಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎಸ್.ಪಿ.ತಿವಾರಿ, ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣವನ್ನು ನಿಲ್ಲಿಸಬೇಕು. ಅತಿ ಶ್ರೀಮಂತರ ಮೇಲೆ ಹೆಚ್ಚುವರಿಯಾಗಿ ಶೇ 2ರಷ್ಟು ಹೆಚ್ಚು ತೆರಿಗೆ ವಿಧಿಸಬೇಕು. ಆ ನಿಧಿಯನ್ನು ಅಸಂಘಟಿತ ವಲಯದ ಕಾರ್ಮಿಕರ ಸಾಮಾಜಿಕ ಭದ್ರತೆಗೆ ಬಳಸಬೇಕು. ಈ ಸವಲತ್ತನ್ನು ಕೃಷಿ ಕಾರ್ಮಿಕರಿಗೂ ವಿಸ್ತರಿಸಬೇಕು ಮತ್ತು ಅವರಿಗೆ ಕನಿಷ್ಠ ವೇತನವನ್ನು ಸಹ ನಿಗದಿಪಡಿಸಬೇಕು ಎಂದು ಒತ್ತಾಯಿಸಿದರು.

'ಪ್ರಸ್ತುತ ಇಪಿಎಸ್–95ರ ಅಡಿ ಮಾಸಿಕ ಕನಿಷ್ಠ ₹1 ಸಾವಿರ ಪಿಂಚಣಿ ನೀಡಲಾಗುತ್ತಿದೆ. ಇದನ್ನು ₹5 ಸಾವಿರಕ್ಕೆ ಹೆಚ್ಚಿಸಬೇಕು' ಎಂದು ಭಾರತೀಯ ಮಜ್ದೂರ್ ಸಂಘದ ಸಂಘಟನಾ ಕಾರ್ಯದರ್ಶಿ (ಉತ್ತರ ವಲಯ) ಪವನ್ ಕುಮಾರ್ ಹೇಳಿದರು.

ಸೋಲಾಪುರ ಉಷ್ಣವಿದ್ಯುತ್ ಸ್ಥಾವರ: ಕಲ್ಲಿದ್ದಲು ಜತೆ ಬಿದಿರು

ಪುಣೆ (ಪಿಟಿಐ): ಮಹಾರಾಷ್ಟ್ರದ ಸೋಲಾಪುರದ ಉಷ್ಣವಿದ್ಯುತ್ ಸ್ಥಾವರದಲ್ಲಿ ಕಲ್ಲಿದ್ದಲು ಜತೆಗೆ ಬಿದಿರು ಬಳಸುವ ಮೂಲಕ ಶುದ್ಧ ಇಂಧನ ಉತ್ಪಾದನೆಗೆ ರಾಷ್ಟ್ರೀಯ ಉಷ್ಣವಿದ್ಯುತ್ ನಿಗಮ (ಎನ್‌ಟಿಪಿಸಿ) ನಿರ್ಧರಿಸಿದೆ.

ವಿದ್ಯುತ್ ಉತ್ಪಾದಿಸಲು ಬಿದಿರನ್ನು ಜೈವಿಕವಾಗಿ ಬಳಸುವ ದೇಶದ ಮೊದಲ ಉಷ್ಣ ವಿದ್ಯುತ್ ಉತ್ಪಾದನಾ ಯೋಜನೆ ಇದಾಗಲಿದೆ ಎಂದು ಮಹಾರಾಷ್ಟ್ರದ ಪರಿಸರ ಮತ್ತು ಸುಸ್ಥಿರ ಅಭಿವೃದ್ಧಿ ಕುರಿತ ಮುಖ್ಯಮಂತ್ರಿ ಕಾರ್ಯಪಡೆಯ ಕಾರ್ಯನಿರ್ವಾಹಕ ಅಧ್ಯಕ್ಷ ಪಾಶಾ ಪಟೇಲ್ ಸೋಮವಾರ ತಿಳಿಸಿದರು.

1,320 ಮೆಗಾವಾಟ್ ವಿದ್ಯುತ್ ಉತ್ಪಾಧನಾ ಸಾಮರ್ಥ್ಯ ಹೊಂದಿರುವ ಸೋಲಾಪುರದ ಸೂಪರ್ ಥರ್ಮಲ್ ಪವರ್ ಸ್ಟೇಷನ್‌ನಲ್ಲಿ ದೇಶದ ಮೊದಲ ಜೈವಿಕ ಆಧರಿತ (ಬಿದಿರು) ಉಷ್ಣ ವಿದ್ಯುತ್ ಯೋಜನೆ ಕೈಗೆತ್ತಿಕೊಳ್ಳುವಂತೆ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಇತ್ತೀಚೆಗೆ ಎನ್‌ಟಿಪಿಸಿ ಅಧ್ಯಕ್ಷರಿಗೆ ಪ್ರಸ್ತಾವ ಕಳುಹಿಸಿದ್ದರು. ಅದರ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ. 'ಇಂಧನ ಉತ್ಪಾದನೆಗೆ ಅಗತ್ಯವಿರುವ ಬಿದಿರನ್ನು ಸೋಲಾಪುರ ಮತ್ತು ಅಕ್ಕ ಪಕ್ಕದ ಪ್ರದೇಶಗಳ ರೈತರಿಂದ ಖರೀದಿಸಲಾಗುವುದು' ಎಂದು ಪಾಶಾ ಪಟೇಲ್ ಪ್ರತಿಕ್ರಿಯಿಸಿದರು.

ಸೆನ್ಸೆಕ್ಸ್ 1,258 ಅಂಶ ಕುಸಿತ



ಮುಂಬೈ (ಪಿಟಿಐ): ವಿದೇಶಿ ಬಂಡವಾಳದ ಹೊರಹರಿವಿನ ಹೆಚ್ಚಳ ದಿಂದ ದೇಶದ ಷೇರು ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಶೇ 1.6ರಷ್ಟು ಇಳಿಕೆಯಾಗಿದೆ.

ರೂಪಾಯಿ ಮೌಲ್ಯ ಇಳಿಕೆ, ಏಷ್ಯನ್ ಮಾರುಕಟ್ಟೆಗಳು ನಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿದ್ದು, ಹ್ಯೂಮನ್ ಮೆಟಾನ್ಯುಮೊ ವೈರಸ್ (ಎಚ್‌ಎಂಪಿವಿ) ಸೋಂಕಿನ ಆತಂಕವು ಷೇರು ಸೂಚ್ಯಂಕಗಳ ಇಳಿಕೆಗೆ ಕಾರಣವಾಯಿತು.

ಷೇರು ಸೂಚ್ಯಂಕಗಳ ಇಳಿಕೆಯಿಂದ ಹೂಡಿಕೆದಾರರ ಸಂಪತ್ತು ಒಂದೇ ದಿನ ₹10.98 ಲಕ್ಷ ಕೋಟಿ ಕರಗಿದೆ. ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯ ₹438 ಲಕ್ಷ ಕೋಟಿಗೆ ಇಳಿದಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,258 ಅಂಶ (ಶೇ 1.59) ಇಳಿಕೆಯಾಗಿ, 77,964ಕ್ಕೆ ವಹಿವಾಟು ಅಂತ್ಯಗೊಂಡಿತು. ರಾಷ್ಟ್ರೀಯ ಷೇರು ಪೇಟೆ ಸೂಚ್ಯಂಕ ನಿಫ್ಟಿ 388 ಅಂಶ (ಶೇ 1.62) ಕುಸಿದು 23,616ಕ್ಕೆ ಕೊನೆಗೊಂಡಿತು.

ಟಾಟಾ ಸ್ಟೀಲ್, ಎನ್‌ಟಿಪಿಸಿ, ಕೋಟಕ್ ಮಹೀಂದ್ರ ಬ್ಯಾಂಕ್, ಇಂಡಸ್‌ಇಂಡ್ ಬ್ಯಾಂಕ್, ಪವರ್‌ಗ್ರಿಡ್, ಜೊಮಾಟೊ, ಅದಾನಿ ಪೋರ್ಟ್ಸ್, ಏಷ್ಯನ್ ಪೇಂಟ್ಸ್, ಮಹೀಂದ್ರ ಆ್ಯಂಡ್ ಮಹೀಂದ್ರ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಟೈಟನ್ ಮತ್ತು ಸನ್ ಫಾರ್ಮಾದ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಶುಕ್ರವಾರದ ವಹಿವಾಟಿನಲ್ಲಿ ₹4,227 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಏಷ್ಯನ್ ಮಾರುಕಟ್ಟೆಯಲ್ಲಿ ಸೋಲ್ ಸಕಾರಾತ್ಮಕ ವಹಿವಾಟು ನಡೆಸಿದ್ದರೆ, ಟೋಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ಮಾರುಕಟ್ಟೆಗಳು ನಕಾರಾತ್ಮಕ ವಹಿವಾಟಿನಲ್ಲಿ ಅಂತ್ಯ ಕಂಡಿವೆ.

ರೂಪಾಯಿ ಮೌಲ್ಯ ಏರಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 11 ಪೈಸೆ ಏರಿಕೆ ಆಗಿದೆ. ಪ್ರತೀ ಡಾಲರ್ ಮೌಲ್ಯ 85.68 ಆಗಿದೆ.

ಮುಂಬೈ ಧಾರಣೆ (ಶೇಂಗಾ)

06-01-2025

ಜಾವಾ 70/80(ಹೊಸ)	10500-10600
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ(ಹೊಸ)	8700-8800
ದಪ್ಪ ಗುಜರಾತ್(ಹೊಸ)	9500-9600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1450 (1470)
ಒಂದು ವಾರದ ಡೆಲಿವರಿ	1445 (1465)
ಪಾಮ್ ವಾರದ ಡೆಲಿವರಿ	1343 (1363)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1275)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹**76,750** (76,600)

ಬೆಳ್ಳಿ ಕೆ.ಜಿ ₹**89,000** (86,900)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಹೊಸಚಾಲಿ	27089-30099	ಸಿದ್ದಾಪುರ	
ಕೋಕ	20000-27500	ಸಾಗರ		ಬಿಳಿಗೋಟು	24109-27709
ಹೊಸತು	30000-34500	ಬಿಳಿಗೋಟು	11099-25929	ಚಾಲಿ	321099-37609
ಚಿತ್ರದುರ್ಗ		ಚಾಲಿ	18699-34009	ಕೋಕ	21399-25699
ಅಪಿ	49100-49500	ಕೋಕ	9099-25309	ಹೊಸಚಾಲಿ	21559-28569
ಬೆಟ್ಟೆ	28500-28900	ಕೆಂಪುಗೋಟು	14821-31699	ಕೆಂಪುಗೋಟು	21109-21819
ಕೆಂಪುಗೋಟು	23500-23900	ರಾಶಿ	34899-50989	ರಾಶಿ	41389-47799
ರಾಶಿ	48600-49000	ಸಿಪ್ಪೆಗೋಟು	7001-17331	ತಟ್ಟಿಬೆಟ್ಟೆ	27119-38989
ಕುಮಟ		ಶಿವಮೊಗ್ಗ		ಶಿರಸಿ	
ಚಾಲಿ	34029-37529	ಬೆಟ್ಟೆ	47499-53009	ಬೆಟ್ಟೆ	29019-38189
ಚಿಪ್ಪು	16699-26699	ಗೊರಬಲು	18009-29009	ಬಿಳಿಗೋಟು	20009-29819
ಕೋಕ	6089-22699	ರಾಶಿ	31001-51500	ಚಾಲಿ	34058-39881
ಫ್ಯಾಕ್ಟರಿ	3569-21569	ಸರಕು	55599-79470	ರಾಶಿ	41209-45318
ಹಳೆಚಾಲಿ	36899-39399				

ಬೆಳ್ಳಿ ಆಭರಣಕ್ಕೂ ಹಾಲ್‌ಮಾರ್ಕ್ ಪರಿಶೀಲನೆಗೆ ಜೋಶಿ ಸೂಚನೆ



ಪ್ರಲ್ಹಾದ ಜೋಶಿ

ನವದೆಹಲಿ (ಪಿಟಿಐ): ಬೆಳ್ಳಿ ಮತ್ತು ಬೆಳ್ಳಿಯ ಆಭರಣಗಳ ಮೇಲೆ ಹಾಲ್‌ಮಾರ್ಕಿಂಗ್ ಅನ್ನು ನಮೂದಿಸುವುದನ್ನು ಕಡ್ಡಾಯಗೊಳಿಸುವುದಕ್ಕೆ ಸಂಬಂಧಿಸಿ ಭಾರತೀಯ ಪ್ರಮಾಣೀಕರಣ ಸಂಸ್ಥೆಯು (ಬಿಐಎಸ್) ಪರಿಶೀಲನೆ ನಡೆಸಬೇಕು ಎಂದು ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಸೋಮವಾರ ಹೇಳಿದ್ದಾರೆ.

78ನೇ ಬಿಐಎಸ್ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಳ್ಳಿಯ ಮೇಲೆ ಹಾಲ್‌ಮಾರ್ಕ್ ನಮೂದಿಸುವಂತೆ ಗ್ರಾಹಕರಿಂದ ಬೇಡಿಕೆ ಇದೆ ಎಂದರು.

ಈ ದಿಸೆಯಲ್ಲಿ ಈಗಾಗಲೇ ಕೆಲಸ ಆರಂಭವಾಗಿದ್ದು, ಸಂಬಂಧಪಟ್ಟವರ ಜೊತೆ ಸಮಾಲೋಚನೆ ಮತ್ತು ಬಿಐಎಸ್‌ನಿಂದ ಕಾರ್ಯಸಾಧ್ಯತೆಯ ಮೌಲ್ಯಮಾಪನವನ್ನು ಪೂರ್ಣಗೊಳಿಸಿದ ಬಳಿಕ ಸರ್ಕಾರವು ನಿರ್ಧಾರ ತೆಗೆದುಕೊಳ್ಳಲಿದೆ ಎಂದು ತಿಳಿಸಿದರು.

'ಮುಂದಿನ 3 ರಿಂದ 6 ತಿಂಗಳಲ್ಲಿ ಬೆಳ್ಳಿಯ ಮೇಲೆ ಹಾಲ್‌ಮಾರ್ಕ್ ಜಾರಿಗೆ ತರಲು ಸಿದ್ಧತೆ ನಡೆಸಲಾಗಿದೆ. ಈ ಕುರಿತು ಸಂಬಂಧಪಟ್ಟವರ ಜೊತೆ ಚರ್ಚೆ ನಡೆಯುತ್ತಿದೆ' ಎಂದು ಬಿಐಎಸ್ ಮಹಾನಿರ್ದೇಶಕ ಪ್ರಮೋದ್ ಕುಮಾರ್ ತಿವಾರಿ ಹೇಳಿದ್ದಾರೆ.

ಸಕ್ಕರೆ ಎಂಎಸ್‌ಪಿ ಹೆಚ್ಚಳ ನಿರ್ಧಾರ ಶೀಘ್ರ

'ಕೇಂದ್ರ ಸರ್ಕಾರವು ಸಕ್ಕರೆ ಮೇಲಿನ ಕನಿಷ್ಠ ಮಾರಾಟ ದರವನ್ನು (ಎಂಎಸ್‌ಪಿ) ಹೆಚ್ಚಿಸುವುದರ ಕುರಿತು ಶೀಘ್ರವೇ ನಿರ್ಧಾರ ಕೈಗೊಳ್ಳಲಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

2019ರಲ್ಲಿ ಪ್ರತಿ ಕೆ.ಜಿಗೆ ಮಾರಾಟ ದರವನ್ನು ₹31ಕ್ಕೆ ಹೆಚ್ಚಿಸಲಾಗಿತ್ತು. ಅಂದಿನಿಂದ ಇಲ್ಲಿಯವರೆಗೂ ದರ ಏರಿಕೆ ಮಾಡಿಲ್ಲ. ಸಕ್ಕರೆ ಉತ್ಪಾದನಾ ವೆಚ್ಚವು ಏರಿಕೆಯಾಗುತ್ತಿದೆ. ಇದರಿಂದ ಕಾರ್ಖಾನೆಗಳ ನಿರ್ವಹಣೆಗೆ ತೊಂದರೆಯಾಗುತ್ತಿದೆ. ಹಾಗಾಗಿ, ಪ್ರತಿ ಕೆ.ಜಿಗೆ ₹42 ಎಂಎಸ್‌ಪಿ ಏರಿಕೆ ಮಾಡಬೇಕು ಎಂದು ಭಾರತೀಯ ಸಕ್ಕರೆ ಮತ್ತು ಜೈವಿಕ ಇಂಧನ ತಯಾರಕರ ಸಂಘ (ಐಎಸ್‌ಎಂಎ) ಮತ್ತು ಸಹಕಾರಿ ಸಕ್ಕರೆ ಕಾರ್ಖಾನೆಗಳ ರಾಷ್ಟ್ರೀಯ ಒಕ್ಕೂಟ (ಎನ್‌ಎಫ್‌ಸಿಎಸ್‌ಎಫ್) ಈಗಾಗಲೇ ಒತ್ತಾಯಿಸಿವೆ.

'ವಾರ್ಷಿಕ 300 ದಶಲಕ್ಷ ಟನ್ ಉಕ್ಕು ಉತ್ಪಾದನೆ ಗುರಿ'

ಪ್ರಜಾವಾಣಿ ವಾರ್ತೆ



ಕುಮಾರಸ್ವಾಮಿ

ನವದೆಹಲಿ: 2030ರ ವೇಳೆಗೆ ಭಾರತವು ವಾರ್ಷಿಕ 300 ದಶಲಕ್ಷ ಟನ್ ಉಕ್ಕು ಉತ್ಪಾದನೆ ಮಾಡುವ ಗುರಿ ಮುಟ್ಟುವ ದೃಷ್ಟಿಯಿಂದ ಮತ್ತೊಂದು ಸುತ್ತಿನ 'ಉತ್ಪಾದನೆ ಆಧರಿತ ಉತ್ತೇಜನ ಸೌಲಭ್ಯ (ಪಿಎಲ್‌ಐ) ಯೋಜನೆಗೆ ಕೇಂದ್ರ ಉಕ್ಕು ಸಚಿವ ಎಚ್‌.ಡಿ.ಕುಮಾರಸ್ವಾಮಿ ಸೋಮವಾರ ಇಲ್ಲಿ ಚಾಲನೆ ನೀಡಿದರು.

ಉಕ್ಕುಆಮದುಪ್ರಮಾಣಕ್ಕೆಅಂಕೆಹಾಕುವ, ದೇಶೀಯವಾಗಿ ಹೆಚ್ಚು ಪ್ರಮಾಣದಲ್ಲಿ ಉಕ್ಕು ಉತ್ಪಾದಿಸುವ ಗುರಿಯೊಂದಿಗೆ ಈ ಸೌಲಭ್ಯ ನೀಡಲಾಗುತ್ತಿದೆ ಎಂದು ಕುಮಾರಸ್ವಾಮಿ ಹೇಳಿದರು.

ಪಿಎಲ್‌ಐ 1.1 ಪೋರ್ಟಲ್ ಈಗಿನಿಂದಲೇ ನೋಂದಣಿಗೆ ತೆರೆದು ಕೊಂಡಿದೆ. ಜನವರಿ 31ರವರೆಗೂ ಉಕ್ಕು ಉದ್ಯಮಿಗಳು ನೋಂದಾಯಿಸಿ ಕೊಳ್ಳಲು ಅವಕಾಶವಿದೆ ಎಂದು ಸಚಿವರು ಮಾಹಿತಿ ನೀಡಿದರು.

ಈ ಯೋಜನೆಯು ಮೊದಲ ಹಂತದಲ್ಲಿ ಮಹತ್ವದ ಯಶಸ್ಸು ಸಾಧಿಸಿದೆ. ₹27,106 ಕೋಟಿ ಹೂಡಿಕೆಯ ಜತೆಗೆ 14,760 ನೇರ ಉದ್ಯೋಗ ಅವಕಾಶ ಹಾಗೂ 7.90 ದಶಲಕ್ಷ ಟನ್‌ಗಳಷ್ಟು ಹೆಚ್ಚುವರಿ ವಿಶೇಷ ಉಕ್ಕಿನ ಉತ್ಪಾದನಾ ಸಾಮರ್ಥ್ಯವನ್ನು ತೋರಿಸಿದೆ. 2024ರ ಅಕ್ಟೋಬರ್ ಹೊತ್ತಿಗೆ ₹17,581 ಕೋಟಿಗಳಷ್ಟು ಹೂಡಿಕೆ ಆಗಿದೆ. ಪರಿಣಾಮವಾಗಿ 8,660 ಉದ್ಯೋಗಗಳು ಸೃಷ್ಟಿಯಾಗಿವೆ ಎಂದು ಮಾಹಿತಿ ನೀಡಿದರು.

ಜಗತ್ತಿನ ಎರಡನೇ ಅತಿದೊಡ್ಡ ಉಕ್ಕು ಉತ್ಪಾದಕ ಮತ್ತು ಗ್ರಾಹಕ ದೇಶವಾಗಿರುವ ಭಾರತವು 2022ರಿಂದ ದೇಶೀಯ ಉಕ್ಕಿನ ಬಳಕೆಯಲ್ಲಿ ಶೇ 12ಕ್ಕಿಂತ ಹೆಚ್ಚು ವಾರ್ಷಿಕ ಬೆಳವಣಿಗೆಯನ್ನು ಕಂಡಿದೆ. ಇದು ಬಲವಾದ ಆರ್ಥಿಕ ಮೂಲಭೂತ ಮತ್ತು ಮೂಲಸೌಕರ್ಯ ಮೇಲಿನ ಹೂಡಿಕೆಗಳಿಂದ ಸಾಧ್ಯವಾಗಿದೆ ಎಂದರು.

ಅಮೆಜಾನ್, ಫ್ಲಿಪ್‌ಕಾರ್ಟ್ ಅರ್ಜಿ ಕರ್ನಾಟಕ ಹೈಕೋರ್ಟ್‌ಗೆ ವರ್ಗಾವಣೆ

ನವದೆಹಲಿ (ಪಿಟಿಐ): ನಿಯಮ ಉಲ್ಲಂಘನೆ ಆರೋಪದ ಅಡಿಯಲ್ಲಿ ತಮ್ಮ ವಿರುದ್ಧ ತನಿಖೆಗೆ ಆದೇಶಿಸಿರುವ ಭಾರತೀಯ ಸ್ಪರ್ಧಾ ಆಯೋಗದ (ಸಿಸಿಐ) ಆದೇಶ ಪ್ರಶ್ನಿಸಿ ಇ–ವಾಣಿಜ್ಯ ಕ್ಷೇತ್ರದ ದೈತ್ಯ ಕಂಪನಿಗಳಾದ ಅಮೆಜಾನ್ ಮತ್ತು ಫ್ಲಿಪ್‌ಕಾರ್ಟ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್, ಕರ್ನಾಟಕ ಹೈಕೋರ್ಟ್‌ಗೆ ವರ್ಗಾಯಿಸಿದೆ.

ವರ್ಗಾವಣೆಗೊಂಡಿರುವ ಅರ್ಜಿಗಳಿಗೆ ಸಂಬಂಧಿಸಿದ ವಾದ ಮಂಡನೆ ಪೂರ್ಣಗೊಂಡಿಲ್ಲ ಎಂದಾದರೆ, ಪ್ರಕರಣಗಳ ವಿಚಾರಣೆ ನಡೆಸುತ್ತಿರುವ ನ್ಯಾಯಮೂರ್ತಿಯು ವಾದ ಮಂಡನೆ ಪೂರ್ಣಗೊಳಿಸಲು ಸಮಯ ನೀಡಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಭಾರತದ ಮೇಲೆ ಅಣೆಕಟ್ಟೆಯು ದುಷ್ಪರಿಣಾಮ ಬೀರದು: ಚೀನಾ

ಬೀಜಿಂಗ್ (ಪಿಟಿಐ): ವೈಜ್ಞಾನಿಕ ಪರಿಶೀಲನೆ ನಂತರವೇ ಭಾರತ–ಚೀನಾ ಗಡಿ ಸಮೀಪ ಟಿಬೆಟ್‌ನಲ್ಲಿ ಬ್ರಹ್ಮಪುತ್ರನದಿಗೆ ಅಡ್ಡಲಾಗಿ ಜಗತ್ತಿನ ಅತಿದೊಡ್ಡ ಅಣೆಕಟ್ಟೆ ನಿರ್ಮಾಣ ಮಾಡಲು ಮುಂದಾಗಿದ್ದೇವೆ. ಪ್ರಸ್ತಾವಿತ ಯೋಜನೆಯು ಭಾರತ ಮತ್ತು ಬಾಂಗ್ಲಾದೇಶದ ಮೇಲೆ ಯಾವುದೇ ದುಷ್ಪರಿಣಾಮ ಬೀರುವುದಿಲ್ಲ ಎಂದು ಚೀನಾ ಸೋಮವಾರ ಒತ್ತಿ ಹೇಳಿದೆ.

ಯೋಜನೆಯಿಂದ ನದಿಯು ಹರಿಯುವ ದೇಶಗಳ ಪರಿಸರ ಅಥವಾ ಜಲಸಂಪನ್ಮೂಲದ ಮೇಲೆ ಯಾವುದೇ ದುಷ್ಪರಿಣಾಮ ಬೀರುವುದಿಲ್ಲ ಎಂದು ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ಗೌ ಜಿಯಾಕುನ್ ಅವರು ಮಾಧ್ಯಮಗಳಿಗೆ ತಿಳಿಸಿದರು.

ಭಾರತದ ಕಳವಳದ ಕುರಿತು ಪತ್ರಕರ್ತರು ಕೇಳಿದ ಪ್ರಶ್ನೆಗೆ, ಯೋಜನೆಯು ಪ್ರವಾಹದ ತಡೆಗೆ ಪೂರಕವಾಗಿದೆ. ಹೀಗಾಗಿ ವಿಪತ್ತನ್ನು ತಡೆಯಬಹುದು ಅಥವಾ ತಗ್ಗಿಸಬಹುದಾಗಿದೆ ಎಂದು ಹೇಳಿದರು.

ಚೀನಾವು ಯರ್ಲಿಂಗ್ ಝಂಗ್ಬೊ (ಭಾರತದಲ್ಲಿ ಬ್ರಹ್ಮಪುತ್ರ) ನದಿಯ ಕೆಳಭಾಗದಲ್ಲಿ ಅಂದರೆ ನದಿಯು ಭಾರತದ ಅರುಣಾಚಲ ಪ್ರದೇಶವನ್ನು ಪ್ರವೇಶಿಸುವ ಮುನ್ನ ದೊಡ್ಡದಾಗಿ ಯು–ಟರ್ನ್ ಪಡೆಯುವ ಹಿಮಾಲಯದ ಆಳವಾದ ಕಮರಿ ಪ್ರದೇಶದಲ್ಲಿ ಅಣೆಕಟ್ಟು ನಿರ್ಮಿಸಲು ಮುಂದಾಗಿದೆ. ಅಂದಾಜು 137 ಬಿಲಿಯನ್ ಡಾಲರ್ (₹11.67 ಲಕ್ಷ ಕೋಟಿ) ವೆಚ್ಚದಲ್ಲಿ ನಿರ್ಮಾಣಕ್ಕೆ ಯೋಜನೆ ರೂಪಿಸಿದೆ.

ಹಸೀನಾ ಬಂಧನಕ್ಕೆ ಮತ್ತೆ ವಾರಂಟ್ ಜಾರಿ



ಢಾಕಾ(ಪಿಟಿಐ): ವಿವಿಧ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ನೂರಾರು ಜನರನ್ನು ಅಕ್ರಮವಾಗಿ ಬಂಧನದಲ್ಲಿ ಇರಿಸಿದ ಪ್ರಕರಣಕ್ಕೆ ಸಂಬಂಧಿಸಿ ಮಾಜಿ ಪ್ರಧಾನಿ ಶೇಕ್ ಹಸೀನಾ ಮತ್ತು ಇತರ 11 ಮಂದಿಯ ವಿರುದ್ಧ ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿಯು (ಐಸಿಟಿ) ಎರಡನೇ ಬಾರಿಗೆ ಬಂಧನ ವಾರಂಟ್ ಜಾರಿ ಮಾಡಿದೆ.

11 ಮಂದಿಯಲ್ಲಿ ಸೇನೆಯ ಮಾಜಿ ಜನರಲ್‌ಗಳು, ಮಾಜಿ ಪೊಲೀಸ್ ಮುಖ್ಯಸ್ಥರೂ ಸೇರಿದ್ದಾರೆ. 'ಫೆ.12ಕ್ಕೆ ಮುಂದಿನ ವಿಚಾರಣೆ ನಡೆಯಲಿದ್ದು, ಹಸೀನಾ ಸೇರಿದಂತೆ 11 ಮಂದಿಯನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರು ಪಡಿಸಬೇಕು ಎಂದು ಮಂಡಳಿ ಸೂಚಿಸಿದೆ' ಎಂದು ಮುಖ್ಯ ಪ್ರಾಸಿಕ್ಯೂಟರ್ ಮೊಹಮ್ಮದ್ ತಾಜುಲ್ ಇಸ್ಲಾಂ ಮಾಹಿತಿ ನೀಡಿದರು.

'ದೇಶದಲ್ಲಿ 15 ವರ್ಷ ಭಯದ ವಾತಾವರಣ ಇತ್ತು. ಭಯೋತ್ಪಾದನಾ ವಿರೋಧಿ ಮತ್ತು ಅಂತರರಾಷ್ಟ್ರೀಯ ಸಂಚಿನ ಅಪರಾಧ ಘಟಕ, ಗುಪ್ತಚರ ಪಡೆ ಸೇರಿದಂತೆ ಹಲವು ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ನೂರಾರು ಜನರನ್ನು ಅಕ್ರಮವಾಗಿ ಬಂಧಿಸಲಾಗಿದೆ. ಇವರಲ್ಲಿ ಹಲವರು ವಾಪಸು ಬರಲೇ ಇಲ್ಲ' ಎಂದರು.

ಭಾರತದ ಜೊತೆ ತೀರಾ ಹಳಸಿದ ಸಂಬಂಧ

ರಾಜೀನಾಮೆ ಘೋಷಿಸಿದ ಕೆನಡಾ ಪ್ರಧಾನಿ



ಜಸ್ಟಿನ್ ಟ್ರುಡೊ

ಒಟ್ಟಾವ (ಎಎಫ್‌ಪಿ): ಕೆನಡಾ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವುದಾಗಿ ಜಸ್ಟಿನ್ ಟ್ರುಡೊ ಅವರು ಸೋಮವಾರ ಪ್ರಕಟಿಸಿದರು. ಆಡಳಿತಾರೂಢ ಲಿಬರಲ್ ಪಕ್ಷವು ಹೊಸ ನಾಯಕನನ್ನು ಆಯ್ಕೆ ಮಾಡಿದ ತಕ್ಷಣ ತಾವು ಪ್ರಧಾನಿ ಹುದ್ದೆಯಿಂದ ನಿರ್ಗಮಿಸುವುದಾಗಿ ಅವರು ಹೇಳಿದರು.

ತಮ್ಮ ಜನಪ್ರಿಯತೆ ನಿರಂತರವಾಗಿ ಕುಸಿಯುತ್ತಿರುವುದು ಹಾಗೂ ಪಕ್ಷದಲ್ಲಿ ಆಂತರಿಕ ಭಿನ್ನಾಭಿಪ್ರಾಯ ಸೃಷ್ಟಿಯಾಗಿರುವ ನಡುವೆ ಟ್ರುಡೊ ಈ ತೀರ್ಮಾನ ಪ್ರಕಟಿಸಿದ್ದಾರೆ.

'ಪಕ್ಷವು ಮುಂದಿನ ನಾಯಕನನ್ನು ಆಯ್ಕೆ ಮಾಡಿದ ನಂತರ, ಪಕ್ಷದ ನಾಯಕ ಹಾಗೂ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಲು ನಾನು ಉದ್ದೇಶಿಸಿದ್ದೇನೆ' ಎಂದು 2015ರಿಂದಲೂ ಅಧಿಕಾರದಲ್ಲಿರುವ ಟ್ರುಡೊ ಅವರು ಪತ್ರಕರ್ತರ ಬಳಿ ಹೇಳಿದರು. ಟ್ರುಡೊ ಅವರು ಹಂಗಾಮಿ ಪ್ರಧಾನಿಯಾಗಿ ಇನ್ನೂ ಎಷ್ಟು ದಿನ ಅಧಿಕಾರದಲ್ಲಿ ಇರಲಿದ್ದಾರೆ ಎಂಬುದು ಸ್ಪಷ್ಟವಾಗಿಲ್ಲ.

ಅಂದರೆ, ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುವ ಸಂದರ್ಭದಲ್ಲಿ ಟ್ರುಡೊ ಅವರೇ ಕೆನಡಾ ಪ್ರಧಾನಿಯಾಗಿ ಇರುತ್ತಾರೆ. ಟ್ರಂಪ್ ಅವರು ಆರಂಭಿಸಬಹುದಾದ ವಾಣಿಜ್ಯ ಸಮರಕ್ಕೆ ಆರಂಭಿಕ ಪ್ರತಿಕ್ರಿಯೆ ನೀಡುವ ಹೊಣೆಯು ಟ್ರುಡೊ ಅವರ ಮೇಲೆ ಇರುತ್ತದೆ.

ಈ ವರ್ಷ ಕೆನಡಾದಲ್ಲಿ ನಡೆಯಲಿರುವ ಚುನಾವಣೆಯ ಸಂದರ್ಭದಲ್ಲಿ ಲಿಬರಲ್ ಪಕ್ಷವನ್ನು ಮುನ್ನಡೆಸಲು ತಾವು ಅತ್ಯುತ್ತಮ ನಾಯಕ ಅಲ್ಲ ಎಂದು ಟ್ರುಡೊ ಹೇಳಿದ್ದಾರೆ.

ಹಳಸಿದ ಸಂಬಂಧ: ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತದ ಏಜೆಂಟರ ಪಾತ್ರವಿದೆ ಎಂದು ಟ್ರುಡೊ ಆರೋಪಿಸಿದ ನಂತರದಲ್ಲಿ ಭಾರತ ಮತ್ತು ಕೆನಡಾ ಸಂಬಂಧವು ತೀರಾ ಹಳಸಿತು. ಎರಡೂ ದೇಶಗಳು ತಮ್ಮ ರಾಯಭಾರಿಗಳನ್ನು ಹಿಂದಕ್ಕೆ ಕರೆಸಿಕೊಂಡಿದ್ದವು.

'ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತದ ಏಜೆಂಟ್‌ಗಳ ಪಾತ್ರ ಇದೆ' ಎಂದು ಆರೋಪಿಸಿದ್ದ ಟ್ರುಡೊ ಅವರು ನಂತರದಲ್ಲಿ 'ಈ ಆರೋಪ ಮಾಡಿದಾಗ ನನ್ನಲ್ಲಿ ಯಾವುದೇ ಬಲವಾದ ಸಾಕ್ಷಿ ಪುರಾವೆಗಳು ಇರಲಿಲ್ಲ' ಎಂದು ಹೇಳಿದ್ದರು. 'ಗುಪ್ತಚರ ಮಾಹಿತಿ ಮಾತ್ರ ಇತ್ತು' ಎಂದು ಅವರು ಹೇಳಿದ್ದರು.

ಟ್ರುಡೊ ಜನಪ್ರಿಯತೆ ಕುಸಿತ

ಟ್ರುಡೊ ಅವರ ಜನಪ್ರಿಯತೆ ಕುಸಿಯುತ್ತಿರುವುದರ ನಡುವೆಯೇ ರಾಜೀನಾಮೆ ನಿರ್ಧಾರ ಹೊರಬಿದ್ದಿದೆ. ಕೆನಡಾದಲ್ಲಿ ಅಕ್ಟೋಬರ್ ಕೊನೆಯಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲಿದೆ.

ಮುಂಬರುವ ಚುನಾವಣೆಯಲ್ಲಿ ಲಿಬರಲ್ ಪಾರ್ಟಿ ಹೀನಾಯ ಸೋಲು ಅನುಭವಿಸಲಿದ್ದು, ಕನ್ಸರ್ವೇಟಿವ್ ಪಾರ್ಟಿ ಅಧಿಕಾರಕ್ಕೇರಲಿದೆ ಎಂದು ಹಲವು ಸಮೀಕ್ಷೆಗಳು ತಿಳಿಸಿವೆ. ಟ್ರುಡೊ ನಾಯಕತ್ವಕ್ಕೆ 'ಅಸಮ್ಮತಿ' ಸೂಚಿಸುವವರ ಪ್ರಮಾಣ ಕಳೆದ ತಿಂಗಳ 24ರ ವೇಳೆ ಶೇ 68ರಷ್ಟಿತ್ತು ಎಂದು ಚುನಾವಣಾ ವಿಶ್ಲೇಷಕ ಆ್ಯಂಗಸ್ ರೀಡ್ ಹೇಳಿದ್ದರು.

ಟ್ರುಡೊ, ಕಳೆದ ಕೆಲ ತಿಂಗಳುಗಳಿಂದ ಸ್ವಪಕ್ಷೀಯರಿಂದಲೇ ವಿರೋಧ ಎದುರಿಸುತ್ತಿದ್ದಾರೆ. ಲಿಬರಲ್ ಪಕ್ಷದ ಸಂಸದರೇ ಅವರ ರಾಜೀನಾಮೆಗೆ ಒತ್ತಾಯಿಸಿದ್ದರು. ಉಪ ಪ್ರಧಾನಿ ಕ್ರಿಸ್ಟಿಯಾ ಫ್ರೀಲ್ಯಾಂಡ್ ಅವರು ಡಿ.16ರಂದು ರಾಜೀನಾಮೆ ನೀಡಿದ್ದರು. ಇದರಿಂದ ಟ್ರುಡೊ ಅವರಿಗೆ ಹಿನ್ನಡೆಯಾಗಿತ್ತು.

ಬಾರ್ಡರ್–ಗಾವಸ್ಕರ್ ಟ್ರೋಫಿ: ಭಾರತದ ಬ್ಯಾಟಿಂಗ್ ವೈಫಲ್ಯದಿಂದ ಬೌಲರ್‌ಗಳ ಮೇಲೆ ಒತ್ತಡ

ಬ್ಯಾಟರ್‌ಗಳ ಸೊರಗಿದ ಪ್ರದರ್ಶನ

• ಮಧು ಜವಳಿ

ಸಿಡ್ನಿ: ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಅಂತಿಮ ಪಂದ್ಯದ ಮೂರನೇ ದಿನ ಜಸ್‌ಪ್ರೀತ್ ಬೂಮ್ರಾ ಫಿಟ್ ಆಗಿದ್ದಿದ್ದರೆ ಏನಾಗಿರುತಿತ್ತು? ಪಂದ್ಯದ ನಿರ್ಣಾಯಕ ದಿನವೇ ವಿಶ್ವದ ಶ್ರೇಷ್ಠ ವೇಗದ ಬೌಲರ್ ಅಲಭ್ಯರಾಗಿ ಭಾರತ ತಂಡದ ದಾಳಿ ಗಣನೀಯವಾಗಿ ದುರ್ಬಲವಾಯಿತು. ಆಸ್ಟ್ರೇಲಿಯಾ 162 ರನ್‌ಗಳ ಗುರಿಯನ್ನು ಆರಾಮವಾಗಿ ತಲುಪಿ ಆರು ವಿಕೆಟ್‌ಗಳಿಂದ ಜಯಗಳಿಸಿತು.

ಬೂಮ್ರಾ ಬೌಲಿಂಗ್ ಮಾಡಿದ್ದಿದ್ದರೆ ಪಂದ್ಯದ ಸ್ಥಿತಿ ಬದಲಾಗುವ ಸಾಧ್ಯತೆ ಹೆಚ್ಚಿತ್ತು. ಸಿಡ್ನಿ ಟೆಸ್ಟ್‌ನಲ್ಲಿ ಗೆದ್ದರೆ ಸರಣಿ ಸಮಬಲವಾಗಿ, ತಂಡದ ಸೋಲಿನ ಪರಾಮರ್ಶೆಯ ಕಡೆ ಈಗಿನಷ್ಟು ಗಮನ ಹರಿಯುತ್ತಿರಲಿಲ್ಲ. ತಂಡದ ಅನುಭವಿಗಳ ಕಳಪೆ ಫಾರ್ಮ್‌ಗಿಂತ ಬೂಮ್ರಾ ಅವರು ಸಾಧಿಸಿದ ಪ್ರಾಬಲ್ಯ ಇನ್ನೂ ಹೆಚ್ಚು ಮಹತ್ವ ಪಡೆಯುತಿತ್ತು. ಹೊರದೇಶಗಳಲ್ಲಿ ತಂಡದ ಯುವ ಆಟಗಾರರು ನಿರ್ವಹಣೆ ಕಡೆ ಹೆಚ್ಚು ಒತ್ತು ಇರುತ್ತಿರಲಿಲ್ಲ. ಭಾರತ ತಂಡದ ಆಟ ಸರಣಿಯ ಅಂತರ (3–1) ಹೇಳುವಷ್ಟು ಕಳಪೆಯಾಗಿರಲಿಲ್ಲ. ಆದರೆ ಹೆಡ್ ಕೋಚ್ ಗೌತಮ್ ಗಂಭೀರ್ ಅವರ ಮಾತುಗಳೂ ಇಲ್ಲಿ ಮುಖ್ಯವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಅವರು ಅದನ್ನು ಹೇಳುತ್ತ ಬಂದಿದ್ದಾರೆ. 'ಕ್ರೀಡೆಯಲ್ಲಿ ಅಂತಿಮವಾಗಿ ಫಲಿತಾಂಶಗಳೇ ಮುಖ್ಯವಾಗುತ್ತದೆ. ಅದರ ಅನುಪಸ್ಥಿತಿಯಲ್ಲಿ ಕಠಿಣ ಪ್ರಶ್ನೆಗಳು ಎದುರಾಗುತ್ತವೆ. ಉತ್ತರದಾಯಿತ್ವಕ್ಕೆ ಆಗ್ರಹ ಕೇಳಿಬರುತ್ತದೆ' ಎಂದಿದ್ದರು.

ಸರಣಿಯಲ್ಲಿ ಭಾರತದ ಪತನಕ್ಕೆ ಮುಖ್ಯ ಕಾರಣ ಬ್ಯಾಟಿಂಗ್‌ನಲ್ಲಿ ಅಸ್ಥಿರ ಪ್ರದರ್ಶನ ಮತ್ತು ಪ್ರಶ್ನಾರ್ಹ ತಂತ್ರಗಾರಿಕೆಗಳು. ಮೊದಲ ಸಲ ಆಸ್ಟ್ರೇಲಿಯಾ ಪ್ರವಾಸದಲ್ಲಿದ್ದ ಯಶಸ್ವಿ ಜೈಸ್ವಾಲ್, ಮೇಲಿನ ಕ್ರಮಾಂಕದಲ್ಲಿ ಕೆ.ಎಲ್.ರಾಹುಲ್, ನಿತೀಶ್ ರೆಡ್ಡಿ ಅವರನ್ನು ಹೊರತುಪಡಿಸಿದರೆ, ಉಳಿದ ಬ್ಯಾಟರ್‌ಗಳು ಸ್ಥಿರಪ್ರದರ್ಶನಕ್ಕೆ ಪರದಾಡಿದರು. ಅವರ ಈ ಅಸ್ಥಿರ ಆಟದಿಂದ ಬೌಲರ್‌ಗಳ ಮೇಲೆ ಹೆಚ್ಚು ಒತ್ತಡ ಉಂಟಾಯಿತು; ವಿಶೇಷವಾಗಿ ಮೊದಲ ಇನಿಂಗ್ಸ್ ವೇಳೆ.

ಪರ್ತ್‌ನ ಎರಡನೇ ಇನಿಂಗ್ಸ್‌ನಲ್ಲಿ ಶತಕ ಗಳಿಸಿದ್ದು ಬಿಟ್ಟರೆ ನಂತರ ವಿರಾಟ್ ಕೊಹ್ಲಿ ಅವರ ಕಾಣಿಕೆ ಅತ್ಯಲ್ಪ. ಬ್ಯಾಟಿಂಗ್‌ನಲ್ಲಿ ರೋಹಿತ್ ಶರ್ಮಾ ಸಹ ಒಂದಿಷ್ಟೂ ಪರಿಣಾಮ ಬೀರಲಿಲ್ಲ. ಅವರ ಬ್ಯಾಟಿಂಗ್ ಕ್ರಮಾಂಕ ಒಮ್ಮೆ ಬದಲಾದರೂ ಏನೂ ಪ್ರಯೋಜನವಾಗಲಿಲ್ಲ. ಅಂತಿಮ ಟೆಸ್ಟ್‌ನಲ್ಲಿ ರಿಷಭ್ ಪಂತ್ ಅಮೋಘ ಆಟವಾಡಿದರೂ, ಅದು ತಡವಾಗಿ ಬಂತು. ಉಳಿದ ಪಂದ್ಯಗಳಲ್ಲಿ ಅವರ ಆಟ ಅಂಥ ವ್ಯತ್ಯಾಸವನ್ನೇನೂ ಮಾಡಲಿಲ್ಲ.

ಶುಭಮನ್ ಗಿಲ್, ತವರಿನಲ್ಲಿ ಮತ್ತು ವೆಸ್ಟ್ ಇಂಡೀಸ್‌ನಲ್ಲಿ ಪ್ರಭಾವಶಾಲಿ ಎನಿಸಿದ್ದರು. ಆದರೆ ದಕ್ಷಿಣ ಆಫ್ರಿಕಾ, ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ನೆಲದಲ್ಲಿ ಅವರ ಪರದಾಟ ಮುಂದುವರಿಯಿತು. ಅವರು ಲಯಕ್ಕೆ ಬರುವಂತೆ ಕಾಣುವಾಗಲೇ ವಿಕೆಟ್ ನೀಡುತ್ತಿದ್ದರು. ಇದು ತಾಂತ್ರಿಕ ಮತ್ತು ಮಾನಸಿಕ ಸವಾಲಿನ ವಿಷಯ.

2020ರಲ್ಲಿ ಪದಾರ್ಪಣೆ ಮಾಡಿದ ನಂತರ ತವರಿನಂದಾಚೆಗೆ ಗಿಲ್ ಅವರ ನಿರಾಶಾದಾಯಕ ಆಟ ಅಂಕಿಅಂಶಗಳಿಂದಲೂ ವ್ಯಕ್ತವಾಗುತ್ತದೆ. ಏಷ್ಯಾ ಮತ್ತು ವೆಸ್ಟ್ ಇಂಡೀಸ್ ಹೊರಗಡೆ ಅವರು 21 ಇನಿಂಗ್ಸ್‌ಗಳಿಂದ ಕೇವಲ 514 ರನ್ ಗಳಿಸಿದ್ದಾರೆ. ಗಮನಾರ್ಹ ಎಂದರೆ ಇದರಲ್ಲಿ 259 ರನ್‌ಗಳನ್ನು ಮೊದಲ ಆರು ಇನಿಂಗ್ಸ್‌ಗಳಲ್ಲಿ (2020–21) ಆಸ್ಟ್ರೇಲಿಯಾ ವಿರುದ್ಧದ ಸರಣಿಯಲ್ಲಿ ಗಳಿಸಿದ್ದರು. ಬ್ರಿಸ್ಬೇನ್‌ನಲ್ಲಿ ಗಳಿಸಿದ ವೀರೋಚಿತ 91 ರನ್ ಬಿಟ್ಟರೆ, ನಂತರ ದಕ್ಷಿಣ ಆಫ್ರಿಕಾ, ಇಂಗ್ಲೆಂಡ್ ಆಸ್ಟ್ರೇಲಿಯಾ ವಿರುದ್ಧ 15 ಇನಿಂಗ್ಸ್‌ಗಳಲ್ಲಿ ಅವರ ಅತ್ಯಧಿಕ ಮೊತ್ತ ಬರೇ 36.

ಭಾರತದ ಬ್ಯಾಟಿಂಗ್ ದೌರ್ಬಲ್ಯದ ಬಗ್ಗೆ ಗಂಭೀರ್ ಅವರಿಗೆ ತಡೆದುಕೊಳ್ಳಲಾಗಲಿಲ್ಲ. ವಿಶೇಷವಾಗಿ ಮೊದಲ ಇನಿಂಗ್ಸ್‌ಗಳಲ್ಲಿ ಭಾರತ ಉತ್ತಮ ಮೊತ್ತ ಪೇರಿಸಲಿಲ್ಲ. ಹೀಗಾಗಿ ಬೌಲರ್‌ಗಳಿಗೆ ಬೆವರಿಳಿಸುವಂಥ ಪರಿಸ್ಥಿತಿ ಎದುರಾಯಿತು. ಇದು ಬರೇ ಆಸ್ಟ್ರೇಲಿಯಾ ವಿರುದ್ಧ ಮಾತ್ರವಲ್ಲ, ತವರಿನಲ್ಲಿ ನ್ಯೂಜಿಲೆಂಡ್ ವಿರುದ್ಧವೂ ಇದೇ ಕಥೆ.

'ಅಗ್ರ ಎಂಟರಲ್ಲಿ ನಿತೀಶ್ ಮತ್ತು ಯಶಸ್ವಿ ಬಿಟ್ಟರೆ ಉಳಿದವರಿಗೆ ಇಲ್ಲಿ (ಆಸ್ಟ್ರೇಲಿಯಾದಲ್ಲಿ) ಆಡಿದ ಅನುಭವವಿತ್ತು' ಎಂದು ಗಂಭೀರ್ ಹೇಳಿದ್ದಾರೆ. 'ಯುವ ಆಟಗಾರರಷ್ಟೇ ಹೊಣೆಯಲ್ಲ, ಸಾಕಷ್ಟು ಅನುಭವಿಗಳೂ ತಂಡದಲ್ಲಿದ್ದರು. ಪಿಚ್‌ಗಳು ಕೆಲಮಟ್ಟಿಗೆ ಈ ಸ್ಥಿತಿಗೆ ಕಾರಣವಾಗಿರಬಹುದು. ಆದರೆ ಇದು ಆಸ್ಟ್ರೇಲಿಯಾ ವಿರುದ್ಧ ಮಾತ್ರ ಅಲ್ಲ. ತವರಿನಲ್ಲಿ (ನ್ಯೂಜಿಲೆಂಡ್ ವಿರುದ್ಧ) ನಮಗೆ ಇದೇ ರೀತಿಯಾಯಿತು' ಎನ್ನುತ್ತಾರೆ ಕೋಚ್.

ತಮ್ಮ ಕಾಲದಲ್ಲಿ ದಿಟ್ಟ ಆಟಕ್ಕೆ ಹೆಸರಾಗಿದ್ದ ಗಂಭೀರ್ ಸಂಯಮದ ಮೂಲಕ ತಮ್ಮ ಬ್ಯಾಟಿಂಗ್ ನಲ್ಲಿದ್ದ ತಾಂತ್ರಿಕ ಲೋಪಗಳನ್ನು ತಿದ್ದಿಕೊಂಡವರು.

'ಎಲ್ಲವೂ ಮನೋಧರ್ಮವನ್ನು ಅವಲಂಬಿಸಿದೆ. ಕಠಿಣ ಪರಿಸ್ಥಿತಿಗಳಲ್ಲಿ ಹೇಗೆ ಆಡುತ್ತೇವೆ ಎನ್ನುವುದರ ಮೇಲೆ ಎಲ್ಲವೂ ಅವಲಂಬಿತವಾಗಿರುತ್ತದೆ. ಟೆಸ್ಟ್ ಕ್ರಿಕೆಟ್ ಎಂದರೆ ಒಂದೊಂದು ಅವಧಿಯನ್ನು ಕಳೆಯುವ, ಕೆಲವು ಬಾರಿ ಒಂದೊಂದು ಸ್ಪೆಲ್‌ಗಳನ್ನು ಆಡಿ ಮುಗಿಸುವುದಾಗಿರುತ್ತದೆ. ಹೀಗಾಗಿ ನಾವು ಗಮನಹರಿಸಬೇಕಾದ ಮುಖ್ಯ ವಿಷಯವೆಂದರೆ ಮೊದಲ 20, 30 ಮತ್ತು 40 ರನ್‌ಗಳನ್ನು ಶತಕವನ್ನಾಗಿ ಪರಿವರ್ತಿಸುವುದು ಹೇಗೆ ಎನ್ನುವುದರ ಕಡೆ ಗಮನಹರಿಸುವುದು. ಅದು ಶತಕ ಮಾತ್ರವಲ್ಲ, ಭರ್ಜರಿ ಶತಕವಾಗಬೇಕು. ನಂತರ ನಮ್ಮ ಬೌಲರ್‌ಗಳಿಗೆ ಬಿಟ್ಟುಕೊಡಬೇಕು. ಮೊದಲ ಇನಿಂಗ್ಸ್‌ನಲ್ಲಿ ನಾವು ದೊಡ್ಡ ಮೊತ್ತ ಗಳಿಸದಿದ್ದರೆ ಬೌಲಿಂಗ್ ವಿಭಾಗವು ಸದಾ ಒತ್ತಡದಲ್ಲೇ ಇರಬೇಕಾಗುತ್ತದೆ' ಎಂದು ಗಂಭೀರ್ ಆತ್ಮಾವಲೋಕನದ ಮಾತುಗಳನ್ನಾಡಿದರು.

ಭಾರತ ಈ ಸರಣಿಯ ಟೆಸ್ಟ್ ಪಂದ್ಯಗಳಲ್ಲಿ ಮೂರು ಬಾರಿ ಮೊದಲ ಇನಿಂಗ್ಸ್‌ನಲ್ಲಿ 200ಕ್ಕಿಂತ ಕಡಿಮೆ ಮೊತ್ತಕ್ಕೆ ಆಲೌಟ್ ಆಗಿತ್ತು.


ರೋಹಿತ್ ಶರ್ಮಾ


ಕೆ.ಎಲ್‌.ರಾಹುಲ್


ಶುಭಮನ್ ಗಿಲ್

'ಗೆಲುವಿಗೆ ನೆರವಾದ ಬೂಮ್ರಾ ಅಲಭ್ಯತೆ'


ಉಸ್ಮಾನ್ ಖ್ವಾಜಾ

ಸಿಡ್ನಿ (ಪಿಟಿಐ): 'ವೇಗದ ಬೌಲರ್‌ಗಳಿಗೆ ಸ್ನೇಹಿಯಾಗಿದ್ದ ಸಿಡ್ನಿ ಪಿಚ್‌ನಲ್ಲಿ ಅಂತಿಮ ಟೆಸ್ಟ್‌ನ ಮೂರನೇ ದಿನ ಅಗ್ರ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ಬೌಲಿಂಗ್‌ಗೆ ಇಳಿಯದಿದ್ದುದು ತಮ್ಮ ತಂಡದ ವಿಜಯದಲ್ಲಿ ಪ್ರಮುಖ ಪಾತ್ರ ವಹಿಸಿತು' ಎಂದು ಆಸ್ಟ್ರೇಲಿಯಾದ ಬ್ಯಾಟರ್‌ಗಳಾದ ಉಸ್ಮಾನ್ ಖ್ವಾಜಾ ಮತ್ತು ಟ್ರಾವಿಸ್ ಹೆಡ್ ಒಪ್ಪಿಕೊಂಡಿದ್ದಾರೆ.

ಬೆನ್ನಿನ ಕೆಳಭಾಗದ ನೋವಿನಿಂದಾಗಿ ಬೂಮ್ರಾ ಐದನೇ ಕ್ರಿಕೆಟ್ ಟೆಸ್ಟ್‌ನ ಮೂರನೇ ದಿನ ಬೌಲಿಂಗ್ ಮಾಡಿರಲಿಲ್ಲ.

ಈ ಸರಣಿಯಲ್ಲಿ ಬೂಮ್ರಾ ಬೌಲಿಂಗ್‌ನಲ್ಲಿ ಖ್ವಾಜಾ ಆರು ಬಾರಿ ಔಟ್ ಆಗಿದ್ದರು. 'ಪ್ರತಿ ಬಾರಿ ನಾನು ಹೊಸ ಚೆಂಡಿನಲ್ಲಿ ಈ ವ್ಯಕ್ತಿಯನ್ನು ನಿಭಾಯಿಸಬೇಕಾಗುತಿತ್ತು. ಅದು ತುಂಬಾ ಕಠಿಣ ಕೆಲಸ' ಎಂದು ಖ್ವಾಜಾ ಹೇಳಿದರು.

ಬೂಮ್ರಾಗೆ ವಿಶ್ರಾಂತಿ ಸಾಧ್ಯತೆ

ಫೆ.19ರಿಂದ ಇಂಗ್ಲೆಂಡ್ ವಿರುದ್ಧ ಟಿ20, ಏಕದಿನ ಸರಣಿ

ಸಿಡ್ನಿ (ಪಿಟಿಐ): ಬೆನ್ನುನೋವಿಗೆ ಒಳಗಾಗಿರುವ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರಿಗೆ ಇಂಗ್ಲೆಂಡ್ ವಿರುದ್ಧ ಇದೇ ತಿಂಗಳ 22 ರಿಂದ ನಡೆಯುವ ಸೀಮಿತ ಓವರುಗಳ ಕ್ರಿಕೆಟ್ ಸರಣಿಯ ಬಹುತೇಕ ಪಂದ್ಯಗಳಿಗೆ ವಿಶ್ರಾಂತಿ ನೀಡುವ ನಿರೀಕ್ಷೆಯಿದೆ. ಫೆ. 19ರಂದು ಆರಂಭವಾಗುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರಕ್ಕೆ ಬರುವ ಸಾಧ್ಯತೆಯಿದೆ.

ಇಂಗ್ಲೆಂಡ್ ತಂಡದ ಭಾರತ ಪ್ರವಾಸವು ಜನವರಿ 22 ರಂದು ಆರಂಭವಾಗಲಿದೆ. ಪ್ರವಾಸಿ ತಂಡವು ಐದು ಟಿ20 ಮತ್ತು ಮೂರು ಏಕದಿನ ಪಂದ್ಯಗಳನ್ನು ಆಡಲಿದೆ.

30 ವರ್ಷ ವಯಸ್ಸಿನ ಬೂಮ್ರಾ ಬಾರ್ಡರ್– ಗಾವಸ್ಕರ್ ಟ್ರೋಫಿ ಸರಣಿಯಲ್ಲಿ 150ಕ್ಕೂ ಅಧಿಕ ಓವರುಗಳನ್ನು ಮಾಡಿದ್ದರು. 32 ವಿಕೆಟ್‌ಗಳನ್ನು ಪಡೆದು ಸರಣಿಯಲ್ಲಿ ಯಶಸ್ವಿ ಬೌಲರ್ ಎನಿಸಿದ್ದರು. ಹೆಚ್ಚಿನ ಕಾರ್ಯದೊತ್ತಡ ಅವರ ಬೆನ್ನು ನೋವಿಗೆ ಕಾರಣವಾಗಿರುವ ಸಾಧ್ಯತೆಯಿದೆ.


ಜಸ್‌ಪ್ರೀತ್ ಬೂಮ್ರಾ –ಎಎಫ್‌ಪಿ ಚಿತ್ರ

ಭಾರತ ತಂಡದ ಯಶಸ್ಸಿನಲ್ಲಿ ಅವರ ಪಾತ್ರ ಪ್ರಮುಖವಾಗಿರುವ ಕಾರಣ ಅವರನ್ನು ಐಸಿಸಿ ಚಾಂಪಿಯನ್ಸ್ ಟ್ರೋಫಿ ವೇಳೆಗೆ ಸಜ್ಜುಗೊಳಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ವೈದ್ಯಕೀಯ ತಂಡ ಪ್ರಯತ್ನಿಸಲಿದೆ.

ಬೂಮ್ರಾ ಅವರ ಬೆನ್ನುನೋವಿನ ತೀವ್ರತೆ ಇನ್ನೂ ತಿಳಿದುಬಂದಿಲ್ಲ. ಇದು ಗ್ರೇಡ್ 1 ವಿಭಾಗದಲ್ಲಿದ್ದರೆ ಆಟಕ್ಕೆ ಮರಳುವ ಮೊದಲು ಅವರಿಗೆ ಕನಿಷ್ಠ ಮೂರು ವಾರಗಳ ಪುನಶ್ಚೇತನ ಶಿಬಿರ ಅಗತ್ಯವಿರುತ್ತದೆ.

ಭಾರತ, ಚಾಂಪಿಯನ್ಸ್ ಟ್ರೋಫಿಯ ಮೊದಲ ಪಂದ್ಯವನ್ನು ಫೆಬ್ರುವರಿ 20ರಂದು ದುಬೈನಲ್ಲಿ ಆಡಲಿದೆ.

ಅವರನೋವಿನ ವ್ಯಾಪ್ತಿ ಗ್ರೇಡ್2 ವಿಭಾಗದಲ್ಲಿದ್ದರೆ, ಚಿಕಿತ್ಸೆಯ ಅವಧಿ ಆರು ವಾರಗಳದ್ದಾಗಿರುತ್ತದೆ. ಗ್ರೇಡ್ 3 ಅಥವಾ ತೀವ್ರತರದ್ದಾಗಿದ್ದಲ್ಲಿ ಕಡೇಪಕ್ಷ ಮೂರು ತಿಂಗಳ ಪುನಶ್ಚೇತನ ಶಿಬಿರ ಅಗತ್ಯವಿರುತ್ತದೆ.

ನೋವಿನ ತೀವ್ರತೆಯ ಪ್ರಮಾಣ ಅಳೆದ ನಂತರ ಅವರು ಇಂಗ್ಲೆಂಡ್ ಸರಣಿಗೆ ಲಭ್ಯರಿರುವರೇ, ಇಲ್ಲವೇ ಎಂಬುದು ತಿಳಿದುಬರಲಿದೆ. ಕಡೇಪಕ್ಷ ತವರು ಅಹ್ಮದಾಬಾದಿನಲ್ಲಿ ಫೆ 12ರಂದು ನಡೆಯುವ ಕೊನೆಯ ಪಂದ್ಯದಲ್ಲಿ ಅವರು ಫಿಟ್ನೆಸ್ ತಿಳಿದುಕೊಳ್ಳುವ ಉದ್ದೇಶದಿಂದ ಆಡಬಹುದು ಎನ್ನಲಾಗುತ್ತಿದೆ.

ಸೂಪರ್‌ಸ್ಟಾರ್ ಸಂಸ್ಕೃತಿ: ಟೀಕೆ

ನವದೆಹಲಿ (ಪಿಟಿಐ): 'ಭಾರತ ತಂಡದಲ್ಲಿ ಸೂಪರ್ ಸ್ಟಾರ್ ಸಂಸ್ಕೃತಿಯನ್ನು ಕೊನೆಗೊಳಿಸಬೇಕು. ಮುಂದಿನ ಸರಣಿಗಳಿಗೆ ಆಟಗಾರರನ್ನು ಆಯ್ಕೆಮಾಡುವಾಗ ಪ್ರತಿಷ್ಠೆಗಿಂತ ಪ್ರದರ್ಶನವೇ ಮಾನದಂಡವಾಗಿಬೇಕು' ಎಂದು ಭಾರತ ತಂಡದ ಮಾಜಿ ಸ್ಪಿನ್ನರ್ ಹರಭಜನ್ ಸಿಂಗ್ ಅವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯನ್ನು ಒತ್ತಾಯಿಸಿದ್ದಾರೆ.

'ತಂಡದಲ್ಲಿ ಸೂಪರ್‌ಸ್ಟಾರ್ ಸಂಸ್ಕೃತಿ ಬೆಳೆದಿದೆ. ನಮಗೆ ಸೂಪರ್‌ಸ್ಟಾರ್‌ಗಳ ಅಗತ್ಯವಿಲ್ಲ. ಉತ್ತಮ ಪ್ರದರ್ಶನ ನೀಡುವವರ ಅಗತ್ಯವಿದೆ. ಅಂಥ ಆಟಗಾರರಿಂದಷ್ಟೇ ತಂಡ ಮುನ್ನಡೆಯಬಲ್ಲದು. ಸೂಪರ್‌ಸ್ಟಾರ್ ಆಗಲು ಬಯಸುವ ಆಟಗಾರ ತವರಿನಲ್ಲಿದ್ದು ಕ್ರಿಕೆಟ್ ಆಡಬೇಕು' ಎಂದು ಹರಭಜನ್ ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ತಿವಿದಿದ್ದಾರೆ.

'ಇಂಗ್ಲೆಂಡ್ ಪ್ರವಾಸ ಮುಂದಿದೆ. ಅಲ್ಲೇನಾಗುತ್ತದೆ? ಯಾರು ಆಯ್ಕೆಯಾಗುತ್ತಾರೆ? ಯಾರು ಹೋಗುವುದಿಲ್ಲ ಎಂಬ ಮಾತುಗಳು ಕೇಳಿಬರುತ್ತಿವೆ. ಉತ್ತಮ ಆಟ ತೋರಿದವರು ಹೋಗಬೇಕು. ಆಟಗಾರರ ಖ್ಯಾತಿಯನ್ನೇ ನೋಡಿ ಆಯ್ಕೆ ಮಾಡುವ ಪರಿಪಾಠ ಸಲ್ಲ' ಎಂದು ಹರಭಜನ್ ಸಿಂಗ್ ಹೇಳಿದರು.

ದ್ವಿಸ್ತರ ಮಾದರಿ ಟೆಸ್ಟ್ ಸರಣಿ: ಚರ್ಚೆಗೆ ಮುಂದಾದ ಐಸಿಸಿ

ಸಿಡ್ನಿ /ನವದೆಹಲಿ (ಪಿಟಿಐ): ದ್ವಿಸ್ತರ (ಟು ಟೈರ್) ಮಾದರಿ ಟೆಸ್ಟ್ ಸರಣಿಗಳನ್ನು ಆಯೋಜಿಸುವ ಕುರಿತು ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಯು ಭಾರತ, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್‌ನ ಕ್ರಿಕೆಟ್ ಮಂಡಳಿಗಳ ಜೊತೆ ಚರ್ಚೆ ನಡೆಸಲು ಮುಂದಾಗಿದೆ.

ಈ ಮೂರು ದೇಶಗಳ ನಡುವೆ ಮತ್ತಷ್ಟು ಟೆಸ್ಟ್ ಸರಣಿಗಳನ್ನು ಆಯೋಜಿಸುವುದು ದ್ವಿಸ್ತರ ಮಾದರಿಯ ಉದ್ದೇಶವಾಗಿದೆ.

ಐಸಿಸಿಯ ನೂತನ ಅಧ್ಯಕ್ಷ ಜಯ್ ಶಾ ಅವರು ಕ್ರಿಕೆಟ್ ಆಸ್ಟ್ರೇಲಿಯಾದ ಅಧ್ಯಕ್ಷ ಮೈಕ್ ಬೈರ್ಡ್, ಇಂಗ್ಲೆಂಡ್ ಕ್ರಿಕೆಟ್ ಮಂಡಳಿ ಅಧ್ಯಕ್ಷ ರಿಚರ್ಡ್ ಥಾಮ್ಸನ್ ಜೊತೆ ಸರಣಿಯ ಸಾಧಕ–ಬಾಧಕಗಳ ಕುರಿತು ಇದೇ ತಿಂಗಳು ಚರ್ಚೆ ನಡೆಸಲಿದ್ದಾರೆ ಎಂದು 'ದಿ ಏಜ್' ಪತ್ರಿಕೆ ವರದಿ ಮಾಡಿದೆ.

ದ್ವಿಸ್ತರ ಸರಣಿ ಸೇರಿದಂತೆ ಯಾವುದೇ ಯೋಜನೆಯು, 2027ರವರೆಗೆ ಈಗಾಗಲೇ ನಿಗದಿಯಾಗಿರುವ ಸರಣಿಗಳ ನಂತರವೇ ಕಾರ್ಯರೂಪಕ್ಕೆ ಬರಲಿದೆ ಎಂದು ಪತ್ರಿಕೆಯು ಮೂಲಗಳನ್ನು ಉಲ್ಲೇಖಿಸಿ ವರದಿ ಮಾಡಿದೆ.

ಸದ್ಯ ಬಿಸಿಸಿಐ ಜನವರಿ 12ರಂದು ಮುಂಬೈನಲ್ಲಿ ನಡೆಯಲಿರುವ ವಿಶೇಷ ಸಾಮಾನ್ಯ ಸಭೆಗೆ (ಎಸ್‌ಜಿಎಂ) ಸಜ್ಜಾಗುತ್ತಿದೆ. ಅಲ್ಲಿ ದೇವಜಿತ್ ಸೈಕಿಯಾ ಅವರು ಪೂರ್ಣಾವಧಿ ಕಾರ್ಯದರ್ಶಿ ಹುದ್ದೆಗೇರುವ ನಿರೀಕ್ಷೆಯಿದೆ. ಶಾ ಅವರು ಐಸಿಸಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ದೇವಜಿತ್ ಹಂಗಾಮಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದರು.

2016ರಲ್ಲಿ ಮೊದಲ ಬಾರಿಗೆ ದ್ವಿಸ್ತರ ಟೆಸ್ಟ್ ಸರಣಿ ಕುರಿತಂತೆ ಐಸಿಸಿ ಅಂಗಳದಲ್ಲಿ ಚರ್ಚೆ ನಡೆದಿತ್ತು ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆದಾಯ ಕಡಿಮೆಯಾಗುವ ಆತಂಕದ ಹಿನ್ನೆಲೆಯಲ್ಲಿ ದ್ವಿಸ್ತರ ಮಾದರಿಯ ಸರಣಿಗೆ ಬಿಸಿಸಿಐ, ಜಿಂಬಾಬ್ವೆ, ಬಾಂಗ್ಲಾದೇಶದ ಕ್ರಿಕೆಟ್ ಮಂಡಳಿಗಳು ವಿರೋಧಿಸಿದ್ದವು. ಅಗ್ರ ತಂಡಗಳ ಜೊತೆ ಆಡುವ ಅವಕಾಶವನ್ನು ಸಣ್ಣ ರಾಷ್ಟ್ರಗಳ ತಂಡಗಳು ಕಳೆದುಕೊಳ್ಳಲಿವೆ ಎಂದೂ ದೂರಿದ್ದವು.

ಸಂಕ್ಷಿಪ್ತ ಸುದ್ದಿ

ಮಲೇಷ್ಯಾ ಓಪನ್ ಇಂದಿನಿಂದ

ಕೌಲಾಲಂಪುರ (ಪಿಟಿಐ): ಭಾರತದ ಡಬಲ್ಸ್ ಆಟಗಾರರಾದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಮಂಗಳವಾರ ಇಲ್ಲಿ ಆರಂಭವಾಗಲಿರುವ ಮಲೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದ್ದಾರೆ.

ಕಳೆದ ಆವೃತ್ತಿಯಲ್ಲಿ ಫೈನಲ್‌ನಲ್ಲಿ ಎಡವಿ, ರನ್ನರ್ಸ್ ಅಪ್ ಆಗಿದ್ದ ಭಾರತದ ಜೋಡಿಯು ಈ ಬಾರಿ ಮತ್ತೆ ಕಣಕ್ಕೆ ಇಳಿಯಲು ಸಜ್ಜಾಗಿದೆ. ಕಳೆದ ವರ್ಷ ಇನ್ನೂ ಮೂರು ಟೂರ್ನಿಗಳಲ್ಲಿ ಸಾತ್ವಿಕ್–ಚಿರಾಗ್ ಫೈನಲ್ ತಲುಪಿದ್ದು, ಎರಡರಲ್ಲಿ ಪ್ರಶಸ್ತಿ ಗೆದ್ದಿದ್ದರು.

ಒಟ್ಟು ₹12.46 ಕೋಟಿ ಬಹುಮಾನ ಮೊತ್ತವನ್ನು ಹೊಂದಿರುವ ಈ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್, ಎಚ್.ಎಸ್. ಪ್ರಣಯ್, ಪ್ರಿಯಾಂಶು ರಾಜಾವತ್ ಅವರು ಸ್ಪರ್ಧಿಸಲಿದ್ದಾರೆ.

ಕಳೆದ ತಿಂಗಳು ನಡೆದ ಸೈಯದ್ ಮೋದಿ ಇಂಟರ್‌ನ್ಯಾಷನಲ್ ಸೂಪರ್ 300 ಟೂರ್ನಿಯಲ್ಲಿ ಪ್ರಶಸ್ತಿ ಮತ್ತು ಕಿಂಗ್ ಕಪ್ ಇಂಟರ್‌ನ್ಯಾಷನಲ್‌ನಲ್ಲಿ ಮೂರನೇ ಸ್ಥಾನ ಪಡೆದಿರುವ 23 ವರ್ಷ ವಯಸ್ಸಿನ ಸೇನ್, ಇಲ್ಲಿಯೂ ಯಶಸ್ಸಿನ ಓಟವನ್ನು ಮುಂದುವರಿಸುವ ಛಲದಲ್ಲಿದ್ದಾರೆ.

ಈಚೆಗೆ ಮದುವೆಯಾದ ಭಾರತದ ತಾರೆ ಪಿ.ವಿ. ಸಿಂಧು ಟೂರ್ನಿಯಿಂದ ದೂರ ಉಳಿದಿದ್ದಾರೆ.

ದಕ್ಷಿಣ ಆಫ್ರಿಕಾಕ್ಕೆ ಮಣಿದ ಪಾಕಿಸ್ತಾನ

ಕೇಪ್‌ಟೌನ್ (ಎಪಿ): ದಕ್ಷಿಣ ಆಫ್ರಿಕಾ ತಂಡ ನ್ಯೂಲ್ಯಾಂಡ್ಸ್‌ನಲ್ಲಿ ನಡೆದ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದ ನಾಲ್ಕನೇ ದಿನವಾದ ಸೋಮವಾರ ಪಾಕಿಸ್ತಾನ ತಂಡವನ್ನು 10 ವಿಕೆಟ್‌ಗಳಿಂದ ಸೋಲಿಸಿತು. ಇದು ದಕ್ಷಿಣ ಆಫ್ರಿಕಾಕ್ಕೆ ಸತತ ಏಳನೇ ಟೆಸ್ಟ್ ಗೆಲುವು.

ದಕ್ಷಿಣ ಆಫ್ರಿಕಾ 2–0 ಯಿಂದ ಸರಣಿ ತನ್ನದಾಗಿಸಿಕೊಂಡಿತು. ಫಾಲೊ ಆನ್‌ಗೆ ಒಳಗಾಗಿ ಮೂರನೇ ದಿನದಾಟದ ಕೊನೆಗೆ ಎರಡನೇ ಇನಿಂಗ್ಸ್‌ನಲ್ಲಿ 1 ವಿಕೆಟ್‌ಗೆ 215 ರನ್ ಗಳಿಸಿ ಹೋರಾಟ ತೋರಿದ್ದ ಪಾಕ್ ನಾಲ್ಕನೇ ದಿನ 478 ರನ್‌ಗಳಿಗೆ ಆಲೌಟ್ ಆಯಿತು. ಗೆಲುವಿಗೆ 58 ರನ್ ಗಳಿಸಬೇಕಾಗಿದ್ದ ಆತಿಥೇಯರು ಕೇವಲ 7.1 ಓವರುಗಳಲ್ಲಿ ವಿಕೆಟ್ ನಷ್ಟವಿಲ್ಲದೇ 61 ರನ್ ಬಾರಿಸಿ ಸಂಭ್ರಮಿಸಿದರು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 615 ಮತ್ತು ವಿಕೆಟ್ ನಷ್ಟವಿಲ್ಲದೇ 61 (ಡೇವಿಡ್ ಬೆಡ್ಡಿಂಗಂ ಔಟಾಗದೇ 47); ಪಾಕಿಸ್ತಾನ: 194 ಮತ್ತು 478 (ಶಾನ್ ಮಸೂದ್ 145, ಬಾಬರ್ ಆಜಂ 81, ಸಲ್ಮಾನ್ ಆಘಾ 48, ಆಮೀರ್ ಜಮಾಲ್ 34; ಕಗಿಸೊ ರಬಾಡ 115ಕ್ಕೆ3, ಕೇಶವ ಮಹಾರಾಜ್ 137ಕ್ಕೆ3). ಪಂದ್ಯದ ಆಟಗಾರ: ರಿಯಾನ್ ರಿಕೆಲ್ಟನ್ (259 ರನ್), **ಸರಣಿಯ ಆಟಗಾರ: ಮಾರ್ಕೊ ಯಾನ್ಸನ್ (80 ರನ್ ಮತ್ತು 10 ವಿಕೆಟ್).**



ಶ್ರವಣದೋಷವುಳ್ಳವರ 25ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನ ಜೂನಿಯರ್ ವಿಭಾಗದ ಮೂರನೇ ಸುತ್ತಿನ ಪಂದ್ಯದಲ್ಲಿ ಪುದುಚೇರಿಯ ಎ. ರೋಷನ್ ಹಾಗೂ ಕರ್ನಾಟಕದ ಎಸ್‌. ಅನುಭವ್ ಸೆಣಸಿದರು– ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

ಚೆಸ್: ಮಹೇಂದ್ರಗೆ ಮುನ್ನಡೆ

ಪ್ರಜಾವಾಣಿ ವಾರ್ತೆ

ಮೈಸೂರು: ಛತ್ತೀಸಗಢದ ಆಟಗಾರ ಮಹೇಂದ್ರ ಪಾಲ್ ಇಲ್ಲಿನ ನಿತ್ಯಾನಂದ ಕಲ್ಯಾಣ ಮಂಟಪದಲ್ಲಿ ನಡೆದಿರುವ ಶ್ರವಣದೋಷವುಳ್ಳವರ 25ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನ ಮುಕ್ತ ವಿಭಾಗದಲ್ಲಿ ಮೂರನೇ ಸುತ್ತಿನ ಅಂತ್ಯಕ್ಕೆ 3 ಅಂಕದೊಂದಿಗೆ ಅಗ್ರಸ್ಥಾನದಲ್ಲಿ ಮುನ್ನಡೆದಿದ್ದಾರೆ. ಅಷ್ಟೇ ಅಂಕ ಗಳಿಸಿರುವ ಕರ್ನಾಟಕದ ಆಟಗಾರ್ತಿ ಕೆ. ಯಶಸ್ವಿ ಮೂರನೇ ಸ್ಥಾನದಲ್ಲಿದ್ದಾರೆ.

ಚಾಂಪಿಯನ್‌ಷಿಪ್‌ನ ಎರಡನೇ ದಿನವಾದ ಸೋಮವಾರ ಮೂರನೇ ಸುತ್ತಿನ ಹಣಾಹಣಿಯಲ್ಲಿ ಮಹೇಂದ್ರ ಗುಜರಾತಿನ ಸರ್ವೇಶ್ ರೋಷನ್ ಜೈನ್ ರನ್ನು ಮಣಿಸಿದರು. ಬಿಹಾರದ ಶಿವಂ ಪ್ರಭಾಕರ್ ಕರ್ನಾಟಕದ ಎನ್.ಎಂ. ಅಂಬಿಕಾ ವಿರುದ್ಧ ಗೆಲುವು ಸಾಧಿಸಿ ಎರಡನೇ ಸ್ಥಾನಕ್ಕೆ ಏರಿದರು. ಮತ್ತೊಂದು ಪಂದ್ಯದಲ್ಲಿ ಯಶಸ್ವಿ ಜಾರ್ಖಂಡ್‌ನ ಸಂದೀಪ್‌ಕುಮಾರ್ ಎದುರು ಜಯ ಗಳಿಸಿದರು.

ಒಟ್ಟು 13 ಆಟಗಾರರು ತಲಾ ಮೂರು ಅಂಕ ಗಳಿಸಿದರು.

ರೋಷನ್‌ಗೆ ಮುನ್ನಡೆ: ಜೂನಿಯರ್ (18 ವರ್ಷದ ಒಳಗಿ ನವರು) ವಿಭಾಗದಲ್ಲಿ ಮೂರನೇ ಸುತ್ತಿನ ಅಂತ್ಯಕ್ಕೆ ಪುದುಚೇರಿಯ ಎ. ರೋಷನ್ 3 ಅಂಕದೊಂದಿಗೆ ಮುನ್ನಡೆ ಕಾಯ್ದುಕೊಂಡಿದ್ದಾರೆ. ಪಶ್ಚಿಮ ಬಂಗಾಳದ ಅಂಕಿತ್ ಗಂಗೂಲಿ ಹಾಗೂ ಮಧ್ಯಪ್ರದೇಶದ ಐಶ್ವರ್ಯಾ ರಾಜೇಂದ್ರ ಅಷ್ಟೇ ಅಂಕಗಳೊಂದಿಗೆ ನಂತರದ ಸ್ಥಾನದಲ್ಲಿದ್ದಾರೆ.

ಕರ್ನಾಟಕದ ಸಂಜಯ್ ಹಾಗೂ ವೈ.ಎಸ್. ಶ್ರೇಯಾ ಸಹ ತಾವು ಆಡಿರುವ ಮೂರು ಪಂದ್ಯದಲ್ಲಿ ಗೆಲುವು ಸಾಧಿಸುವ ಮೂಲಕ 3 ಅಂಕ ಸಂಪಾದಿಸಿದ್ದು, ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನದಲ್ಲಿ ಮುನ್ನಡೆದಿದ್ದಾರೆ.

ಎಎಫ್‌ಐ ಅಧ್ಯಕ್ಷರಾಗಿ ಸಾಗೂ



ಚಂಡೀಗಢ (ಪಿಟಿಐ): ಏಷ್ಯನ್ ಗೇಮ್ಸ್ ಸ್ವರ್ಣ ವಿಜೇತ ಶಾಟ್‌ಪಟ್ ಥ್ರೋ ಪಟು ಬಹಾದೂರ್ ಸಿಂಗ್ ಸಾಗೂ ಅವರು ಭಾರತ ಅಥ್ಲೆಟಿಕ್ ಫೆಡರೇಷನ್ (ಎಎಫ್‌ಐ) ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಲಿದ್ದಾರೆ. ಮಂಗಳವಾರ ಫೆಡರೇಷನ್‌ನ ಸರ್ವಸದಸ್ಯರ ಸಭೆ ನಿಗದಿಯಾಗಿದೆ.

ದೀರ್ಘಾವಧಿಗೆ ಅಧ್ಯಕ್ಷರಾಗಿದ್ದ ಅದಿಲ್ ಸುಮರಿವಾಲಾ ಅವರ ಸ್ಥಾನವನ್ನು ಬಹಾದೂರ್ ತುಂಬಲಿದ್ದಾರೆ. 2002ರ ಬೂಸಾನ್ ಏಷ್ಯನ್ ಕ್ರೀಡೆಗಳಲ್ಲಿ ಸ್ವರ್ಣ ಪದಕ ಗೆದ್ದಿದ್ದ ಸಾಗೂ ಸಿಡ್ನಿ (2000) ಮತ್ತು ಅಥೆನ್ಸ್ (2004) ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿದ್ದರು. 51 ವರ್ಷ ವಯಸ್ಸಿನ ಸಾಗೂ ಅವರು ಅಥ್ಲೆಟಿಕ್ ಕಮಿಷನ್‌ನ ಪ್ರತಿನಿಧಿಯಾಗಿ ನಿರ್ಗಮಿತ ಕಾರ್ಯಕಾರಿ ಸಮಿತಿಯಲ್ಲಿ ದ್ದರು. ಪದ್ಮಶ್ರೀ ಪುರಸ್ಕೃತರೂ ಆಗಿದ್ದಾರೆ.

ಅವರು ಸೀನಿಯರ್ ಆಯ್ಕೆ ಸಮಿತಿ ಸದಸ್ಯರೂ ಆಗಿದ್ದಾರೆ. ಹಾಲಿ ಹಿರಿಯ ಉಪಾಧ್ಯಕ್ಷೆ ಅಂಜು ಬಾಬಿ ಜಾರ್ಜ್ ಅವರು ಅಧ್ಯಕ್ಷ ಸ್ಥಾನದ ರೇಸ್‌ನಿಂದ ಹಿಂದೆಸರಿದ ಬಳಿಕ ಸಾಗೂ ಅವರೊಬ್ಬರೇ ಕಣದಲ್ಲಿ ಉಳಿದಿದ್ದಾರೆ. ಅಂಜು ಬಾಬಿ ಅವರು ಎರಡನೇ ಅವಧಿಗೆ ಹಿರಿಯ ಉಪಾಧ್ಯಕ್ಷೆಆಗಿ ಮುಂದುವರಿಯಲಿದ್ದಾರೆ.

ಕೊಕ್ಕೊ: ಒಡಿಶಾ ಸರ್ಕಾರ ಪ್ರಾಯೋಜಕತ್ವ

ಭುವನೇಶ್ವರ (ಪಿಟಿಐ): ಒಡಿಶಾ ಸರ್ಕಾರವು ರಾಷ್ಟ್ರೀಯ ಕೊಕ್ಕೊ ತಂಡಗಳಿಗೆ ಮೂರು ವರ್ಷಗಳ ಪ್ರಾಯೋಜಕತ್ವವನ್ನು ಘೋಷಿಸಿದೆ. ದೇಶದಲ್ಲಿ ಸ್ಥಳೀಯ ಕ್ರೀಡೆಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ.

2025ರ ಜನವರಿಯಿಂದ 2027ರ ಡಿಸೆಂಬರ್‌ವರೆಗೆ ಸರ್ಕಾರವು ವಾರ್ಷಿಕ ತಲಾ ₹5 ಕೋಟಿಯನ್ನು ಪ್ರಾಯೋಜಕತ್ವಕ್ಕಾಗಿ ವಿನಿಯೋಗಿಸಲಿದೆ ಎಂದು ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ತಿಳಿಸಿದ್ದಾರೆ.

ಒಡಿಶಾ ಸರ್ಕಾರದ ಪ್ರಾಯೋಜಕತ್ವವನ್ನು ಭಾರತ ಕೊಕ್ಕೊ ಫೆಡರೇಷನ್‌ನ ಅಧ್ಯಕ್ಷ ಸುಧಾಂಶು ಮಿತ್ತಲ್ ಸ್ವಾಗತಿಸಿದ್ದಾರೆ.

ಚೊಚ್ಚಲ ಕೊಕ್ಕೊ ವಿಶ್ವಕಪ್ ಭಾರತದ ಆತಿಥ್ಯದಲ್ಲಿ ಇದೇ 13ರಿಂದ 19ರವರೆಗೆ ನವದೆಹಲಿಯಲ್ಲಿ ನಡೆಯಲಿದ್ದು, ಈ ನಿಟ್ಟಿನಲ್ಲಿ ಸಿದ್ಧತೆಗಳು ಭರದಿಂದ ಸಾಗಿದೆ.

ವಿಜಯ್ ಹಜಾರೆ ಟ್ರೋಫಿ: ಕರ್ನಾಟಕ ತಂಡಕ್ಕೆ ಪ್ರಸಿದ್ಧ ಕೃಷ್ಣ

ಬೆಂಗಳೂರು: ಬಾರ್ಡರ್– ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಕೊನೆಯ ಪಂದ್ಯದಲ್ಲಿ ಆರು ವಿಕೆಟ್ ಪಡೆದು ಮಿಂಚಿದ್ದ ಪ್ರಸಿದ್ಧ ಕೃಷ್ಣ ಅವರು ವಿಜಯ್ ಹಜಾರೆ ಟ್ರೋಫಿ ಟೂರ್ನಿಯ ನಾಕೌಟ್ ಪಂದ್ಯಗಳಿಗಾಗಿ ಕರ್ನಾಟಕ ತಂಡವನ್ನು ಸೇರಿಕೊಳ್ಳಲಿದ್ದಾರೆ.

ವಡೋದರದಲ್ಲಿ ಇದೇ 11ರಂದು ನಡೆಯುವ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡವು ಬರೋಡಾ ತಂಡವನ್ನು ಎದುರಿಸಲಿದೆ.

16 ಸದಸ್ಯರ ತಂಡವನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಸೋಮವಾರ ಪ್ರಕಟಿಸಿದೆ. ಪ್ರಸಿದ್ಧ ಅವರೊಂದಿಗೆ ದೇವದತ್ತ ಪಡಿಕ್ಕಲ್ ಮತ್ತು ಯಶೋವರ್ಧನ್ ಪರಂತಾಪ್ ತಂಡಕ್ಕೆ ವಾಪಸಾಗಲಿದ್ದಾರೆ.

ತಂಡ ಹೀಗಿದೆ: ಮಯಂಕ್ ಅಗರವಾಲ್ (ನಾಯಕ), ಶ್ರೇಯಸ್ ಗೋಪಾಲ್ (ಉಪನಾಯಕ), ದೇವದತ್ತ ಪಡಿಕ್ಕಲ್, ನಿಕಿನ್ ಜೋಸ್, ಅನೀಶ್ ಕೆ.ವಿ, ಸ್ಮರಣ್ ಆರ್, ಕೆ.ಎಲ್. ಶ್ರೀಜಿತ್ (ವಿಕೆಟ್ ಕೀಪರ್), ಅಭಿನವ್ ಮನೋಹರ್, ಹಾರ್ದಿಕ್ ರಾಜ್, ಪ್ರಸಿದ್ಧ ಕೃಷ್ಣ, ಕೌಶಿಕ್ ವಿ, ವಿದ್ಯಾಧರ ಪಾಟೀಲ, ಅಭಿಲಾಷ್ ಶೆಟ್ಟಿ, ಪ್ರವೀಣ್ ದುಬೆ, ಲವನೀತ್ ಸಿಸೋಡಿಯಾ (ವಿಕೆಟ್ ಕೀಪರ್), ಯಶೋವರ್ಧನ್ ಪರಂತಾಪ್.

ರಿಷಿ ಧವನ್ ನಿವೃತ್ತಿ ಘೋಷಣೆ



ನವದೆಹಲಿ (ಪಿಟಿಐ): ಭಾರತದ ಮಾಜಿ ಆಲ್‌ರೌಂಡರ್ ರಿಷಿ ಧವನ್ ಅವರು ದೇಶೀಯ ಸೀಮಿತ ಓವರ್‌ಗಳ ಕ್ರಿಕೆಟ್‌ಗೆ ಸೋಮವಾರ ನಿವೃತ್ತಿ ಘೋಷಿಸಿದ್ದಾರೆ.

2016ರಲ್ಲಿ ಭಾರತ ತಂಡಕ್ಕಾಗಿ ಮೂರು ಏಕದಿನ ಮತ್ತು ಒಂದು ಟಿ20 ಪಂದ್ಯವನ್ನು ಆಡಿದ್ದ ರಿಷಿ, ಹಿಮಾಚಲ ಪ್ರದೇಶ ತಂಡವು ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ನಾಕೌಟ್ ಹಂತ ಪ್ರವೇಶಿಸಲು ವಿಫಲವಾದ ನಂತರ ಈ ನಿರ್ಧಾರವನ್ನು ತೆಗೆದುಕೊಂಡರು.

ಆದಾಗ್ಯೂ, ಇದೇ23ರಿಂದ ಪ್ರಾರಂಭವಾಗುವ ರಣಜಿ ಟ್ರೋಫಿ ಋತುವಿನ ಉಳಿದ ಪಂದ್ಯಗಳಿಗೆ 34 ವರ್ಷ ವಯಸ್ಸಿನ ರಿಷಿ ಹಿಮಾಚಲ ಪ್ರದೇಶ ತಂಡದ ಆಯ್ಕೆಗಾಗಿ ಲಭ್ಯವಿರುತ್ತಾರೆ.

ಪ್ರಥಮ ದರ್ಜೆಯ 134 ಪಂದ್ಯಗಳನ್ನು ಆಡಿರುವ ಅವರು, 2906 ರನ್ ಮತ್ತು 186 ವಿಕೆಟ್‌ಗಳನ್ನು ಪಡೆದಿದ್ದಾರೆ.

ಇದೇ 10ರಿಂದ ಐರ್ಲೆಂಡ್ ವಿರುದ್ಧ ಏಕದಿನ ಸರಣಿ

ಭಾರತ ತಂಡಕ್ಕೆ ಮಂಧಾನ ನಾಯಕಿ

ನವದೆಹಲಿ (ಪಿಟಿಐ): ಅನುಭವಿ ಆರಂಭ ಆಟಗಾರ್ತಿ ಸ್ಮೃತಿ ಮಂಧಾನ ಅವರನ್ನು ಐರ್ಲೆಂಡ್ ವಿರುದ್ಧ ಶುಕ್ರವಾರ ಆರಂಭವಾಗುವ ಮೂರು ಪಂದ್ಯಗಳ ಏಕದಿನ ಸರಣಿಗೆ ಭಾರತ ತಂಡದ ನಾಯಕಿಯನ್ನಾಗಿ ನೇಮಕ ಮಾಡಲಾಗಿದೆ. ತಂಡದ ಪೂರ್ಣಾವಧಿ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರಿಗೆ ವಿಶ್ರಾಂತಿ ನೀಡಲಾಗಿದೆ.

ಕೌರ್ ಜೊತೆ ವೇಗದ ಬೌಲರ್ ರೇಣುಕಾ ಸಿಂಗ್ ಠಾಕೂರ್ ಅವರಿಗೂ ವಿಶ್ರಾಂತಿ ನೀಡಲಾಗಿದೆ. ಜನವರಿ 10, 12 ಮತ್ತು 15ರಂದು ಈ ಮೂರು ಪಂದ್ಯಗಳನ್ನು ಆಡಲಾಗುವುದು. ಮೂರೂ ಪಂದ್ಯಗಳು ರಾಜಕೋಟ್‌ನಲ್ಲೇ ನಡೆಯಲಿವೆ.

ವೆಸ್ಟ್ ಇಂಡೀಸ್ ವಿರುದ್ಧ ತವರಿನಲ್ಲಿ ನಡೆದ ಸರಣಿಯ ವೇಳೆ ಹರ್ಮನ್‌ಪ್ರೀತ್ ಕೌರ್ ಮೊಣಕಾಲಿಗೆ ಗಾಯವಾಗಿದ್ದು, ಅವರು ಕೊನೆಯ ಎರಡು ಟಿ20 ಪಂದ್ಯಗಳನ್ನು ಕಳೆದುಕೊಂಡಿದ್ದರು. ಆದರೆ 35 ವರ್ಷ ವಯಸ್ಸಿನ ಆಟಗಾರ್ತಿ ಮೂರು ಪಂದ್ಯಗಳ ಏಕದಿನ ಸರಣಿ ವೇಳೆ ತಂಡಕ್ಕೆ ಮರಳಿದ್ದರು.


ಸ್ಮೃತಿ ಮಂಧಾನ

ರೇಣುಕಾ ಸಿಂಗ್, ವೆಸ್ಟ್ ಇಂಡೀಸ್ ವಿರುದ್ಧ ಏಕದಿನ ಪಂದ್ಯಗಳ ಸರಣಿಯಲ್ಲಿ 10 ವಿಕೆಟ್‌ಗಳನ್ನು ಪಡೆದು ಸರಣಿಯ ಆಟಗಾರ್ತಿ ಗೌರವಕ್ಕೆ ಪಾತ್ರರಾಗಿದ್ದರು. ಕಾರ್ಯದೊತ್ತಡ ನಿರ್ವಹಣೆಯ ಭಾಗವಾಗಿ ವಿಶ್ರಾಂತಿ ನೀಡಲಾಗಿದೆ.

ವೆಸ್ಟ್ ಇಂಡೀಸ್ ತಂಡದ ವಿರುದ್ಧ ಕಳೆದ ತಿಂಗಳು 2–1 ರಿಂದ ಗೆಲ್ಲುವ ಮೂಲಕ ಐದು ವರ್ಷಗಳಲ್ಲೇ ಮೊದಲ ಬಾರಿಗೆ ಭಾರತ ತಂಡ ತವರಿನಲ್ಲಿ ಟಿ20 ಸರಣಿ ವಶಕ್ಕೆ ಪಡೆದ ಹುರುಪಿನಲ್ಲಿದೆ. ನಂತರ ಅದೇ ತಂಡದ ವಿರುದ್ಧ ಏಕದಿನ ಸರಣಿಯನ್ನು 3–0 ಯಿಂದ ಗೆದ್ದುಕೊಂಡಿತ್ತು.

28 ವರ್ಷದ ಮಂಧಾನ ಅಮೋಘ ಲಯದಲ್ಲಿದ್ದು, ಟಿ20 ಸರಣಿಯಲ್ಲಿ ಸತತ ಮೂರು ಅರ್ಧ ಶತಕಗಳನ್ನು ಗಳಿಸಿದ್ದರು. ಏಕದಿನ ಸರಣಿಯಲ್ಲೂ ಎರಡು ಅರ್ಧ ಶತಕ ಬಾರಿಸಿ ಗಮನಸೆಳೆದಿದ್ದರು.

ಭಾರತ ತಂಡ: ಸ್ಮೃತಿ ಮಂಧಾನ (ನಾಯಕಿ), ದೀಪ್ತಿ ಶರ್ಮಾ (ಉಪ ನಾಯಕಿ), ಪ್ರತಿಕಾ ರಾವಲ್, ಹರ್ಲೀನ್ ಡಿಯೋಲ್, ಜೆಮಿಮಾ ರೋಡ್ರಿಗಸ್, ಉಮಾ ಚೆಟ್ರ (ವಿಕೆಟ್ ಕೀಪರ್), ರಿಚಾ ಘೋಷ್ (ವಿಕೆಟ್ ಕೀಪರ್), ತೇಜಲ್ ಹಸಬ್ನಿಸ್, ರಾಘವಿ ಬಿಷ್ಟ್, ಮಿನ್ನು ಮಣಿ, ಪ್ರಿಯಾ ಮಿಶ್ರಾ, ತನುಜಾ ಕನ್ವರ್, ತಿತಾಸ್ ಸಾಧು, ಸೈಮಾ ಠಾಕೂರ್ ಮತ್ತು ಸಯಾಲಿ ಸಾತ್ಘರೆ. ಎಲ್ಲ ಪಂದ್ಯಗಳು ಬೆಳಿಗ್ಗೆ 11 ಗಂಟೆಗೆ ಆರಂಭವಾಗಲಿದೆ.

ಟೆನಿಸ್: ಪ್ರಿ ಕ್ವಾರ್ಟರ್‌ಗೆ ಬಾಲಾಜಿ–ಮಿಗುಯೆಲ್

ಆಕ್ಲೆಂಡ್ (ಪಿಟಿಐ): ಭಾರತದ ಎನ್. ಶ್ರೀರಾಮ್ ಬಾಲಾಜಿ ಮತ್ತು ಮೆಕ್ಸಿಕೊದ ಮಿಗುಯೆಲ್ ಏಂಜೆಲ್ ರೆಯೆಸ್– ವರೆಲಾ ಅವರು ಸೋಮವಾರ ಅಡಿಲೇಡ್ ಇಂಟರ್ ನ್ಯಾಷನಲ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಬಾಲಾಜಿ– ಮಿಗುಯೆಲ್ ಜೋಡಿಯು 4-6, 6-2, 10-7ರಿಂದ ಭಾರತದ ರೋಹನ್ ಬೋಪಣ್ಣ ಮತ್ತು ಕೊಲಂಬಿಯಾದ ನಿಕೋಲಸ್ ಬ್ಯಾರಿಯೆಂಟೋಸ್ ಅವರನ್ನು ಮಣಿಸಿತು.

ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಅವರೊಂದಿಗಿನ ಎರಡು ವರ್ಷಗಳ ಪಾಲುದಾರಿಕೆಯನ್ನು ಕೊನೆಗೊಳಿ ಸಿದ ಬೋಪಣ್ಣ ಹೊಸ ಜೊತೆಗಾರ ನಿಕೋಲಸ್ ಅವರೊಂದಿಗೆ ಸ್ಪರ್ಧಿಸಿದ್ದರು.

ನಗಾಲ್‌ಗೆ ನಿರಾಸೆ: ಭಾರತದ ಸುಮಿತ್ ನಗಾಲ್ ಅವರು ಆಕ್ಲೆಂಡ್ ಎಎಸ್‌ಬಿ ಕ್ಲಾಸಿಕ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು.

ಕ್ವಾಲಿಫೈಯರ್‌ನ ಅಂತಿಮ ಸುತ್ತಿನಲ್ಲಿ ತಮಗಿಂತ ಉನ್ನತ ರ್‍ಯಾಂಕ್‌ನ ಫ್ರಾನ್ಸ್‌ನ ಆ್ಯಡ್ರಿಯನ್ ಮನಾರಿಯೊ ಅವರನ್ನು ಮಣಿಸಿ ಮುಖ್ಯಸುತ್ತು ಪ್ರವೇಶಿಸಿದ್ದ ಅವರು 7-6 (8), 4-6, 2-6ರಿಂದ ಎಂಟನೇ ಶ್ರೇಯಾಂಕದ ಅಲೆಕ್ಸ್ ಮೈಕೆಲ್ಸೆನ್ (ಅಮೆರಿಕ) ಅವರಿಗೆ ಶರಣಾದರು.

ಸೋಹಂ ಮಿಂಚು: ಬಿಎಫ್‌ಸಿಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಹಂ ವಾರ್ಷ್ಣೇಯ ಅವರ ಎರಡು ಗೋಲುಗಳ ನೆರವಿನಿಂದ ಬಿಎಫ್‌ಸಿ ತಂಡ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ 5–2 ಗೋಲುಗಳಿಂದ ಬಿಯುಎಫ್‌ಸಿ ತಂಡವನ್ನುಸೋಲಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಬಿಎಫ್‌ಸಿ ತಂಡದ ಸೋಹಂ (10ನೇ ಮತ್ತು 77ನೇ ನಿಮಿಷ) ಗೋಲು ಹೊಡೆದರು. ಸಾರಂಗ್ ಶ್ರೀನಿವಾಸನ್ ಚಾರಿ (42ನೇ ನಿ), ಸ್ವಸ್ತಿಕ್ ಚಾಂದ್ (7ನೇ ನಿ.), ಲಾಯಿಶ್ರಮ್ ಅಮಿತ್ ಸಿಂಗ್ ತಲಾ ಒಂದೊಂದು ಗೋಲು ಬಾರಿಸಿದರು. ಬಿಯುಎಫ್‌ಸಿ ತಂಡದ ಬೊನಿಸನ್ ನಾಂಗ್‌ಮೈಥೆಮ್ (33ನೇ ನಿ.) ಮತ್ತು ನಿಶಾಂತ್ ಎಸ್. (45 + ನೇ ನಿ.) ಗೋಲುಗಳನ್ನು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಎಫ್‌ಸಿ ಅಗ್ನಿಪುತ್ರ ತಂಡ 2–1 ಗೋಲುಗಳಿಂದ ಎಸ್‌ಯುಎಫ್‌ಸಿ ತಂಡವನ್ನು ಮಣಿಸಿತು. ಅಗ್ನಿಪುತ್ರ ತಂಡದ ರಾಹುಲ್ ಕೆ.ಪಿ. (23ನೇ ನಿ.) ಮತ್ತು ಅಜ್ಫರ್ ನೂರಾನಿ (84ನೇ ನಿ.) ಗೋಲುಗಳನ್ನು ಹೊಡೆದರು. ಎಸ್‌ಯುಎಫ್‌ಸಿ ತಂಡದ ಮೊಹಮ್ಮದ್ ಅಲ್ ತಬ್ ಹುಸೇನ್ (40ನೇ ನಿ.) ಏಕೈಕ ಗೋಲು ಹೊಡೆದರು.

ಬಿ ಡಿವಿಷನ್ ಲೀಗ್ ಪಂದ್ಯ: ಸಾಯಿ ಮೈದಾನದಲ್ಲಿ ನಡೆದ ಬಿ ಡಿವಿಷನ್ ಲೀಗ್ ಪಂದ್ಯದಲ್ಲಿ ಸೌತ್ ಇಂಡಿಯಾ ಮತ್ತು ಅಲ್ ಫತೇಹ ಎಫ್‌ಸಿ ತಂಡಗಳು 2–2ರಿಂದ ಡ್ರಾ ಮಾಡಿಕೊಂಡವು. ಎರಡನೇ ಪಂದ್ಯದಲ್ಲಿ ಸ್ಟ್ರೈಡ್ ಎಫ್‌ಸಿ 5–0ಯಿಂದ ವೆಟರಿಯನ್ಸ್ ಎಫ್‌ಸಿ ವಿರುದ್ಧ 5–0 ಗೋಲುಗಳಿಂದ ಭರ್ಜರಿ ಗೆಲುವು ಸಾಧಿಸಿತು. ಮೂರನೇ ಪಂದ್ಯದಲ್ಲಿ ಟೆಕ್ನಿಕೊ ಎಫ್‌ಎಫ್ ತಂಡ 1–0 ಗೋಲಿನಿಂದ ಎಡಿಇ ಎಫ್‌ಸಿ ವಿರುದ್ಧ ಗೆಲುವು ಸಾಧಿಸಿತು.


ಬಿಎಫ್‌ಸಿ ತಂಡದ ಸೋಹಂ ವಾರ್ಷ್ಣೇಯ (ಎಡ) ಮತ್ತು ಬಿಯುಎಫ್‌ಸಿ ತಂಡದ ಸೋನಮ್ ಲೆಪ್ಚಾ (ಬಲ) ಚೆಂಡಿಗಾಗಿ ಸೆಣಸಾಟ ನಡೆಸಿದ ಕ್ಷಣ
ಪ್ರಜಾವಾಣಿ ಚಿತ್ರ: ಎಸ್‌.ಕೆ.ದಿನೇಶ್

ಮಹಿಳಾ ಕ್ರಿಕೆಟ್: ಕರ್ನಾಟಕಕ್ಕೆ ಮಣಿದ ಛತ್ತೀಸಗಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಲೋನಿ ಪಿ. ಅವರ ಆಲ್‌ರೌಂಡ್ ಆಟದ ನೆರವಿನಿಂದ ಕರ್ನಾಟಕ ತಂಡವು ಸೋಮವಾರ ಬಿಸಿಸಿಐ 23 ವರ್ಷದೊಳಗಿನ ಮಹಿಳೆಯರ ಟಿ20 ಟ್ರೋಫಿ ಕ್ರಿಕೆಟ್ ಟೂರ್ನಿಯ ರೋಚಕ ಪಂದ್ಯದಲ್ಲಿ ಛತ್ತೀಸಗಢ ತಂಡವನ್ನು 2 ವಿಕೆಟ್ ಗಳಿಂದ ಮಣಿಸಿತು.

ಕಟಕ್‌ನ ಎಂಜಿಎಂ ಸ್ಕೂಲ್ ಆಫ್ ಸ್ಪೋರ್ಟ್ಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಛತ್ತೀಸಗಢ ತಂಡವು ಐಶ್ವರ್ಯಾ ಸಿಂಗ್ (ಔಟಾಗದೇ 50;54ಎ) ಅವರ ಅರ್ಧಶತಕದ ಬಲದಿಂದ 20 ಓವರ್‌ಗಳಲ್ಲಿ 4 ವಿಕೆಟ್‌ಗೆ 116 ರನ್ ಗಳಿಸಿತು. ಸಲೋನಿ ಎರಡು ವಿಕೆಟ್ ಪಡೆದರು.

ಗುರಿಯನ್ನು ಬೆನ್ನತ್ತಿದ ಕರ್ನಾಟಕ ನಾಲ್ಕು ಎಸೆತಗಳು ಬಾಕಿ ಇರುವಂತೆ 8 ವಿಕೆಟ್‌ಗೆ 117 ರನ್ ಗಳಿಸಿ ಜಯ ಸಾಧಿಸಿತು.

ಸಲೋನಿ ಪಿ. ಔಟಾ ಗದೇ 24 ರನ್ ಗಳಿಸಿದರು. ಛತ್ತೀಸಗಢದ ಸಾಕ್ಷಿ ಶುಕ್ಲಾ ಮತ್ತು ಶಿವಾನಿ ಯಾದವ್ ಕ್ರಮವಾಗಿ ನಾಲ್ಕು ಮತ್ತು ಮೂರು ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್: ಛತ್ತೀಸಗಢ: 20 ಓವರ್‌ಗಳಲ್ಲಿ 4 ವಿಕೆಟ್‌ಗೆ 116 (ಐಶ್ವರ್ಯಾ ಸಿಂಗ್ ಔಟಾಗದೇ 50, ಮಿಥಾಲಿ ಶರ್ಮಾ ಔಟಾಗದೇ 24; ಸಲೋನಿ 20ಕ್ಕೆ 2). ಕರ್ನಾಟಕ: 19.2 ಓವರ್‌ಗಳಲ್ಲಿ 8 ವಿಕೆಟ್‌ಗೆ 117 (ಪ್ರೇರಣಾ ಜಿ.ಆರ್. 21, ರೋಶನಿ ಕಿರಣ್ 21, ಸಲೋನಿ ಪಿ. ಔಟಾಗದೇ 24, ಪೂಜಾ ಕುಮಾರ್ ಔಟಾಗದೇ 19) **ಫಲಿತಾಂಶ: ಕರ್ನಾಟಕಕ್ಕೆ 2 ವಿಕೆಟ್‌ಗಳ ಜಯ**